duplicate

ಶಿವಾನುಭವ ಗ್ರಂಥಮಾಲಾ ನಂ॥

BL-C-187

# ಹರಿಹರನ ರಗಳೆಗಳು

ಸಂಪಾದಕರು

ರಾ॥ ಸಾ॥ ಫ.ಗು.ಹಳಕಟ್ಟಿ

ಬಿ.ಎ.ಎಲ್.ಎಲ್.ಬಿ.

ವಿಜಾಪುರ

1935

863
3696

S. V. ಹಂಚಿ ಇವರಿಂದ ಕಾಣಿಕೆ

# ಪೀಠಿಕೆ.

ಈಗಿನ ಗ್ರಂಥದಲ್ಲಿ ಪ್ರಭುದೇವ, ರೇವಣಸಿದ್ಧ, ಶಂಕರದಾಸಿಮಯ್ಯ ಮತ್ತು ಆದಯ್ಯ ಇವರ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳನ್ನು ಮಹಾಕವಿಯಾದ ಹರಿಹರನು ರಚಿಸಿದನೆಂದು ಪ್ರತೀತಿ ಇದೆ. ಈ ನಾಲ್ವರು ಮಹಾನುಭಾವರು ವೀರಶೈವ ಸಮಾಜದ ಆರಂಭಕಾಲದಲ್ಲಿ ಧರ್ಮೋನ್ನತಿಯ ಸಲುವಾಗಿ ಮಹತ್ತರ ಕಾರ್ಯಗಳನ್ನು ಮಾಡಿದವರಾದ್ದರಿಂದ ಅವರ ರಗಳೆಗಳನ್ನು ನಾವು ಈಗ ಪ್ರಸಿದ್ಧಿಸಿರುವೆವು. ಹರಿಹರನು ವೀರಶೈವ ಕವಿಗಳಲ್ಲಿ ಬಹಳ ಹಿಂದಿನವನು. ಆದ್ದರಿಂದ ಅವನು ಇವರ ವಿಷಯವಾಗಿ ಬರೆದ ಸಂಗತಿಗಳಿಗೆ ನಾವು ಹೆಚ್ಚಿಗೆ ಮಹತ್ವ ಕೊಡುವದು ಅವಶ್ಯವಾಗಿದೆ.

ಈ ರಗಳೆಗಳನ್ನು ನಾವು ತುಮಕೂರು ಜಿಲ್ಲೆಯಲ್ಲಿರುವ ದಂಡಿನ ಶಿವರದಲ್ಲಿರುವ ಶಿ। ಮೂ. ಕಲ್ಲಯ್ಯನವರಲ್ಲಿ ದೊರೆತ ಪ್ರತಿ ಮತ್ತು ಶಿ। ಮೂ. ಶಿವಮೂರ್ತಿ ಶಾಸ್ತ್ರಿಗಳು ಹುಲುಕುಂಟೆಮಠ ಕೀರ್ತನಕೇಸರಿ ಮು. ತುಮಕೂರು ಇವರು ದೊರಕಿಸಿದ ಪ್ರತಿ ಹೀಗೆ ಈ ಎರಡು ಪ್ರತಿಗಳ ಸಹಾಯದಿಂದ ಪ್ರಕಟಿಸಲಾಗಿದೆ. ಈ ಪ್ರಕಾರ ಈ ಕಾರ್ಯದಲ್ಲಿ ಈ ಉಭಯ ಮಹನೀಯರು ಸಹಾಯ ಮಾಡಿದ್ದಕ್ಕೆ ನಾವು ಅವರ ಆಭಾರಿಯಾಗಿದ್ದೇವೆ. ಪ್ರಭುದೇವರ ರಗಳೆಯನ್ನು ಸಿದ್ಧಪಡಿಸಲು ಶಿ। ಮೂ। ಬುದ್ದಯ್ಯಸ್ವಾಮಿ ಪುರಾಣಿಕಮಠ ಮು. ಧಾರವಾಡ ಇವರು ಓರಿಯಂಟಲ್ ಲೈಬ್ರರಿಯಲ್ಲಿಯ ಪ್ರತಿಯ ನಕಲನ್ನು ತರಿಸಿದ್ದು ಅದನ್ನು ನಮ್ಮ ಕಡೆಗೆ ಕಳಿಸಿದ್ದಕ್ಕೆ ನಾವು ಅವರ ಆಭಾರಿಯಾಗಿದ್ದೇವೆ.

**ಫ. ಗು. ಹಳಕಟ್ಟಿ.**
ಸಂಪಾದಕ.

# ಅನುಕ್ರಮಣಿಕೆ.

ಪುಟ.


| | | |
|---|---|---|
| ೧. | ಪ್ರಭುದೇವರ ರಗಳೆ. | ೧—೧೬ |
| ೨. | ರೇವಣಸಿದ್ಧೇಶ್ವರ ರಗಳೆ. | ೧೭—೪೩ |
| ೩. | ಶಂಕರ ದಾಸಿಮಯ್ಯನ ರಗಳೆ. | ೪೪—೭೦ |
| ೪. | ಆದಯ್ಯನ ರಗಳೆ. | ೭೧—೯೫ |



863
3696

863 / 3696

ಗುರುವಿಂಗೆ ದೂರುವೆಂ ತಾನಾದುದಕ್ಕೊಂದು
ಕರೆವುತಿರ್ದಜ್ಜಗನ್ಮಯು ರೂಪನಂ ನಿಂದು
ಕೈಯೆತ್ತಿ ಕಣ್ಣೀರ ಹೊನಲಿನಿಂ ನೆನೆವುತ್ತೆ
ಸುಯ್ಯೊಡನೆ ಶೋಕ ರವಮುಂಬರವನಡರುತ್ತೆ
ಇರೆ ಕರದಳೆನ್ನೈಯ್ಯ ಎನ್ನ ರೇಪಣಸಿದ್ಧ
ಕರುಣಿ ಎಂಬರಲಯ್ಯ ನಿನ್ನನಚಲಿತ ಸಿದ್ಧ
ನಿನಗೊಪ್ಪಿಸದೆ ಸುರಗಿಗೊಪ್ಪಿಸಿದ ತೆರನಾಯ್ತು
ನಿನಗೆ ಹೆಸರಾದ ಹಸುಳೆಗೆ ಸುರಗಿಗೆರೆಯಾಯ್ತು
ಎನ್ನ ಕಣ್ಗಳ ಸಿರಿಯೆ ನಿನ್ನ ಪದಮಂ ತೋರ
ಎನ್ನ ಪುಣ್ಯದ ಪುರುಳೆ ನಿನ್ನಂಘ್ರಿಯಂ ತೋರ
ಎಂಬ ರವವಡರ್ದು ವಾರಣಾಸಿಯಂ ತೀವಿತ್ತು
ಇಂಬಿನಿಂ ಘನ ಸಿದ್ಧಪತಿಯ ಕಿವಿದಾಗಿತ್ತು

ಕಿವಿದಾಗಲನುಕಂಪದಿಂದೆ ನೆರೆ ಬೆಚ್ಚುತಂ
ಶಿವಶಿವ ಮಹಾದೇವನೇನೆಂಬೆನದ್ಭುತಂ
ಬಂದು ಮಂಗಳವಾಡದೊಳಗಿಳಿಪಿದಂತಿರ್ದು
ಇಂದುಮುಖಿ ಮಾಯಿದೇವಿಯು ಮುಂದೆ ನಿಂದಿರ್ದು

ಇರೆ ಕಂಡು ಕಂಡು ಮತ್ತಂತಳಲ್ಗಳು ಪುಟ್ಟೆ
ಹರಮೂರ್ತಿ ಯೆನಿಪ ಸಿದ್ಧನ ಪಾದದೊಳಗೊಟ್ಟೆ
ಅಳಲುತಂ ತಂದೆ ರೇವಣದೇವಿಯಂ ಕಂಡು
ಅಳವಳಿಯುಲೆಳೆದೊಯ್ದು ಸುರಗಿಗಿಕ್ಕಲ್ಕೊಂಡು
ಎಂತು ಮಾಡುವೆನೆನುತ್ತಿರ್ಪಳಂ ಸಂತೈಸಿ
ಸಂತತಂ ಮಾಯಿದೇವಿಯನಲ್ಲಿ ಬೋಳೈಸಿ
ನಿನ್ನ ಮಗಳೊಬ್ಬಳೇಕೆಲ್ಲರಂ ಬಿಡಿಸುವೆಂ
ಎನ್ನ ಪರಿಯಂ ನೋಡು ನೋಡು ಪೊಸತೆನಿಸುವೆಂ

ಎಂದು ಬಿಜ್ಜಳನ ಸಭೆಗೈತಂದನಾ ಸಿದ್ಧ
ಇಂದುಧರ ನಿಜಯೋಗಿ ನಿಂದನನುಪಮ ಸಿದ್ಧ
ನಿಲೆ ಕಂಡು ಬಿಜ್ಜಳಂ ಶಿವಸಿದ್ಧನೆಂದರಿದು
ಚರಿತದಿಂದಿದಿರೇಳ್ದು ಚರಣದೊಳ್ ಬೀಳ್ದೊಸೆದು

ಘದ್ರಾಸನದೊಳಿರಿಸಿ ಚರಣ ತಳವುಂ ತೊಳೆದು
ಸದ್ಭ್ರಾಪಿನಿಂದ ಪಾದೋದಕವುಮುಂ ತಳೆದು
ಕೈ ಮುಗಿದು ನಿಂದಿರ್ದು ದೇವ ಬೆಸನಾವುದೆನೆ
ನೈಮೆಯಿಂ ನುಡಿದನಾ ಸಿದ್ಧನಿದು ತಪ್ಪು ಎನೆ
ಏಕೆ ಮರುಳಾದೆ ಕಪ್ಪರನ ನುಡಿಗೆಲೆ ಭೂಪ
ಲೋಕದೊಳು ಕನ್ನಿಕೆಯರಂ ಕೊಲ್ವುದತಿ ಪಾಪ
ಆವನುಂ ತಡೆಯಬರ್ಪುದೆ ಸುರಿಗಿಯುಜ್ವಳಂ
ಸ್ತ್ರೀ ವಧೆಯುಮಪಕೀರ್ತಿಯುಂ ಸಾರ್ವುದಗ್ಗಳಂ
ಬಿಡು ಬಿಡೆಂದಾ ಕುಮಾರಿಯರೆಲ್ಲರಂ ಬಿಡಿಸಿ

ನಡೆ ನಿನಗೆ ಸುರಿಗಿದೋರುವೆನೆಂದೊಡಂಬಡಿಸಿ
ಪೊರಮಟ್ಟನಪ್ರತಿಮಸಿದ್ಧನಾ ಪುರದಿಂದೆ
ನೆರೆ ಪೊಗಳುತಿರೆ ಭುವನ ಜನವೆಲ್ಲ ಮುದದಿಂದೆ
ಹಿಂದೆ ಬಿಜ್ಜಳ ನೃಪಂ ಮುಂದೆ ರೇವಣಸಿದ್ಧ
ನಂದು ಬರುತಿರ್ದ ನಿರವಯದ ನಿರ್ಮಳ ಸಿದ್ಧ
ಒಡನೆ ಗಜ ತುರಗ ಪದಾತಿಬಲವೆಯ್ದೆ ಬರೆ
ಪೊಡೆವ ನಿಸ್ಸಾಳ ರವವಂಬರವನಡರುತಿರೆ
ನಡೆತರುತ್ತಂ ಮಾಸನೂರ ಮುಂದಂ ನಿಂದು
ಪೊಡವಿ ಭಾಪೆನುತಮಿರೆ ಗಜದಿಂದಲಿಳಿತಂದು
ಒಂದೊಂದು ಹರಿಗೋಲರೊಬ್ಬೊಬ್ಬರೇರುತುಂ
ಅಂದು ರೇವಣಸಿದ್ಧನುಂ ನೃಪತಿ ಏರುತುಂ
ನದಿಯಲ್ಲಿ ಸುರಿಗಿ ಇರ್ದಲ್ಲಿಗೇ ನಡೆತಂದು
ಆದಿರದಳುಕದೆ ಸಿದ್ಧನಾನಂದದಿಂ ನಿಂದು
ಆಲಗಿನಾಯುಧದೊಳಗೆ ಕೈಯ್ಯಿಕ್ಕಿ ಬರಸೆಳೆಯು
ಉಲಿದು ಹಲುಮೊರೆದು ಗರ್ಜಿಸುತ ಲಗು ಮಿಗೆ ಪೊಳೆಯೆ
ಕಂಡಾ ನೃಪತಿ ನೋಡು ನೋಡೆಂದು ತೋರುತಿರೆ
ಕಂಡು ಪಿಡಿಯಲ್ಕೆಂದು ನೃಪತಿ ಕೈ ನೀಡುತಿರೆ
ಐದು ಹೆಡೆಗಳನು ಹಾವಾಗಿ ಸಲೆ ಭುಸ್ಸೆನಲು
ನೈದೆಗೆದು ವಿಷದ ಶಿಖಿ ತಾಗೆ ಮಿಗೆ ಜುಮ್ಮೆನಲು
ಬಿಜ್ಜಳಂ ಹರಿಗೋಲ ಮೇಲೆ ನೆರೆ ಹಮ್ಮೈಸಿ

ಸಜ್ಜನಂ ಸಿದ್ಧರೇವಣನಲ್ಲಿ ಸಂತೈಸಿ
ಏಳುತಲಗಂ ಕಂಡು ಬಿಡು ದೇವ ಬಿಡು ದೇವ
ಆಳವುಳ್ಳಲ್ಲಿರಿಸು ಬೇಗವಿರಿಸೆಲೋ ದೇವ
ಎನೆ ನಗುತ ಸಿದ್ಧನಾ ಪುರಿಗಿಯಂ ಮತ್ತಿರಿಸಿ
ಜಿನದದಿಂ ಬಿಜ್ಜಳಂ ಬೆರಸಿ ತಡೆಗವತರಿಸಿ
ಗಜಮಸ್ತಕವನೇರಿ ನಗರಿಗಭಿಮುಖನಾಗಿ
ಭಜಿಯಿಸುವ ಪುರಜನದ ಪರಕೆಗಾನತನಾಗಿ
ಬಂದು ಬಿಜ್ಜಳನರಮನೆಯನೊಪ್ಪದಿಂ ಪೊಕ್ಕು
ನಿಂದು ರೇವಣಸಿದ್ಧ ತಂದೆಗೆ ಮನಂ ಮಿಕ್ಕು
ತನ್ನ ಮಗಳಂ ವಿಭವದಿಂದೆ ಮದುವೆಯ ಮಾಡಿ
ಉನ್ನತವೆನಿಪ್ಪ ರೇವಣಸಿದ್ಧನೋಳ್ಕೂಡಿ
ಆನೆಯಂ ಕುದುರೆಯಂ ಬಳುವಳಿಯನೊಲಿದೀಯೆ
ನಾನಾ ಪದಾತಿಯಂ ಸುಖಮುಖದೊಳೊಲಿದೀಯೆ
ಸಿದ್ಧ ಕುಲಶೇಖರಂ ಸಂಪದದೊಳೊಪ್ಪಿದಂ
ಸಿದ್ಧ ರೇವಣ ತಂದೆ ಜಗವರಿಯಲೊಪ್ಪಿದಂ

ತೃತಿಯ ಸ್ಥಲ ಸಂಪೂರ್ಣಂ.

## ಚತುರ್ಥಸ್ಥಲ

863/3696

→※*※←

**ವೃತ್ತ**:— ನಿರುಪಮ ಸಿದ್ಧನ ಪ್ರತಿಮ ಸಿದ್ಧನ ಚಿಂತಿತ ಸಿದ್ಧನುತ್ತಮಾ। ಶರಣ ಶರೀರ ಸಿದ್ಧನತಿ ಕಾರಣಿಕ ಸಿದ್ಧನ ಶೇಷಮಂ ಸಮು। ದ್ಧರಸುವ ಸಿದ್ಧನಾತ್ಮ ನಿಜ ಸಿದ್ಧನ ಮಾನಸರಾಸರ್ಕೈ ಕವಿ ಸ್ತರಕರ ಸಿದ್ಧ ನೊಪ್ಪಿದ ನಿಳಾತಳದೊಳ್ಗಲಿ ಸಿದ್ಧರೇವಣಂ॥

**ಗದ್ಯ**:— ಇಂತಪ್ಪ ಕಂತುಹರರೂಪಂ ಶಿವಲಿಂಗಸಿಸ್ತಂ ಮಂಗಳವಾಡದೊಳ್ ಕೆಲವು ದಿನಂ ರಾಜ್ಯ ಸುಖದೊಳಿರ್ದು ಸಿದ್ಧಕುಲಕಮಲ ಕಮನೀಯ ಭಾಸ್ಕರನೆನಿಪ ರೇವಣಸಿದ್ಧಂ ಪುರಮಂ ಪೊರಮಟ್ಟು ಬಿಜ್ಜಳಂಗೆ ಬೀಳ್ಕೊಟ್ಟು ದಕ್ಷಿಣಾಭಿಮುಖನಾಗಿ ಕರಿಘಟೆಗಳುರವಣಿಸೆ ತುರಗಚಯಂ ಒತ್ತರಿಸೆ ಪದಾತಿಬಲಂ ಪಡಿಸಲಿಸೆ ನಿಸ್ಸಾಳಧನಿಯುಣ್ಮೆ ಕಹಳಾರವಂ ಪೊಣ್ಮೆ ಪಲವಸೆಡೆಗೈದು ಸಕಲಜನಕ್ಕೆ ಸುಖಮನೀವುತಂ ನಡೆತಂದು ಮನಂಮಿಕ್ಕ ಚೋಳದೇಶಮಂ ಪೊಕ್ಕು ರಾಜೇಂದ್ರ ಚೋಳನಂ ಕಾಣಿಸಿಕೊಂಡು ಕರುಣಮನಿತ್ತು ಘನವಿಸ್ತರಮಪ್ಪ ನಿಳಯದ ಸಿಂಹ ವಿಷ್ಟರಕ್ಕೆ ಬಿಜಯಂಗೈದು ಚೋಳನ ಕುಮಾರಿಯ ವಿವಾಹ ಮಾಗೆ ಚೋಳಮಹಾರಾಜನಿಂ ಪೊಡಮಡಿಸಿಕೊಳುತ್ತಂ ಶಿವಭಕ್ತರಿಂ ವಂದಿಸಿಕೊಳುತ್ತಂ ಆ ದೇಶದ ಪಲವು ಶಿವಪುರಂಗಳಂ ನೋಡುತ್ತಂ ತಿರುಗಿ ಪೊರಮಟ್ಟು ಚೋಳಂ ಕೊಟ್ಟ ಬಳುವಳಿಯ ಚತುರಂಗ ಬಲ ವೆರಸಿ ತಿರಿಗಿ ಚೇರ ಮಲೆಯಾಳ ಗೌಳ ಗುಜ್ಜರ ನೇಪಾಳ ಮೊದಲಾದ ದೇಶಂಗಳಂ ಪೊಕ್ಕಲ್ಲಲ್ಲಿಯ ರಾಜಪುತ್ರಿಯರಂ ಪರಿಣಯಮಾಗಿ ಮನಃಪೂರ್ವಕದಿಂ ಸ್ವೀಕರಿಸಿ ತಟಾಕಂಗಳಂ ಕಟ್ಟಿಸುತ್ತಂ ಶಿವ ಪುರಂಗಳಂ ಮಾಡಿಸುತ್ತಂ ಛತ್ರಂಗಳಂ ನಿರ್ಮಿಸುತ್ತಂ ಕುರುಡರ್ಗೆ ಕಣ್ಗಳಂ ಹೆಳವರ್ಗೆ ಕಾಲ್ಗಳಂ ಬಂಜೆಯರ್ಗೆ ಮಕ್ಕಳಂ ಕೆಟ್ಟರಸು ಮಕ್ಕಳ್ಗೆ ರಾಜ್ಯಮಂ ಕಂಡ ಕಂಡ ಬಡವರ್ಗೆ ಸಂಪದಂಗಳಂ ನೀವು ತ್ತಿಂತಿವು ಮೊದಲಾದ ಪುಣ್ಯ ಲೀಲೆಗಳನಲಂಕರಿಸುತ್ತೆ ಜಗದ್ಧಿತಾರ್ಥ ಮೂರ್ತಿ ಮಂಗಳವಾಡಕ್ಕೆ ಮರಳಿ ಬರ್ಪಾಗಳ್

ಸಿದ್ಧಸಮುಯಚಕೋರ ಚಂದ್ರಿಕಾಯಮಾನನೆಂಬ ಸಿದ್ಧಕುಲಚಾತಕ ಸುಧಾವರ್ಷನೆಂಬ ಪರಸಮಯ ಕುಮುದ ಕಮಲ ಸಖನೆಂಬ ಸಾಮರ್ಥ್ಯ

ಸಾಗರನೆಂಬ ಶಿವಭಕ್ತಿವನವಸಂತನೆಂಬ ಶಿವಪೂಜಾರಾಜನೆಂಬ ಶಿವಯೋಗಿಲಲಾಮನೆಂಬ ತನ್ನ ಬಿರುದಿನ ಕಹಳಾರವಂ ದಿಕ್ತಟಮಂ ಧೀಂಕಿಡೆ ಸರ್ವ ಸಂಭ್ರಮದೊಳ್ ಬರ್ಪಾಗಳ್ ಮಂಗಳವಾಡದೊಳ್ ಗುಡಿಗಟ್ಟಿ ಸಕಲಪರಿಜನ ಸಹಿತಂ ಬಿಜ್ಜಳರಾಯನಿದಿರ್ಗೊಂಡು ಮೆಯ್ಯಿಕ್ಕಿ ಕಾಣಿಕೆಯನಿತ್ತು ಕೆಯ್ಮುಗಿದು ನಿಂದಿರ ಪರಿಸುತ್ತಂ ವಿಭೂತಿಯಂ ಕರುಣಿಸಿ ಕೊಟ್ಟರಮನೆಗೆ ಬಿಜಯಂಗೈದು ಸಿಂಹಾಸನಾರೂಢನಾಗಿ ಬಹಿರ್ಭಾವದ ಮಾಯಾ ಸುಖದುಃಖದ ಸಂಭ್ರಮಂ ಶರೀರಕ್ಕಾಗುತ್ತಮಿರೆ ನೋಡುತ್ತಂ ನಿರ್ಲೇಪನಾಗಿ ಸಾಕ್ಷಿಯಾಗಿ ಪರಮಗುರು ನಗುತ್ತನೇಕ ಕಾಲದೊಳುರುಗ ಲೋಕದೋಳ್ ನರಲೋಕದೋಳ್ ಸುರಲೋಕದೋಳ್ ಸುಖದೊಳಿರ್ಪ ಜಗಚ್ಚರಿತನಪ್ಪ ಸಿದ್ಧರೇವಣದೇವಂ ನೋಡಿದುದೆ ಜಗತ್ಪಾವನಂ ಮುಟ್ಟಿದುದೆ ಪರುಷಂ ಮೆಟ್ಟಿದುದೆ ದಿವ್ಯಕ್ಷೇತ್ರಂ ನಡೆದುದೆ ಪುಣ್ಯಮಾರ್ಗಂ ನುಡಿದುದೆ ಪರಮತತ್ವಂ ಇರ್ದುದೇ ದೇವಸಭೆ ಸಾರ್ದುದೇ ಸುರತರುವೆನಿಪ್ಪ ನಿರ್ಮಳ ಕೀರ್ತಿಯಂ ಪಡೆದು ಶಿವಪ್ರತಾಪಸಿದ್ಧನನವರತಂ ಧರ್ಮತತ್ಪರಂ ಸಂತೋಷದೊಳಿರ್ದೊಂದುದಿನಂ

ಸುಕೃತ ಲೀಲಾಲೋಲಹೃದಯಂ ಮಂಗಳವಾಡದ ಪೊರಪೊಳಲ ನಂದವನಮಂ ನಿರೀಕ್ಷಿಸುತ್ತೆ ಬರುತ್ತೊಂದು ನಿರುಪಮವಹ ತಟಾಕಸ್ಥಲಮಂ ಕಂಡಿಲ್ಲಿ ಸಕಲ ಪ್ರಾಣಿಗಳ್ಗೆ ಹಿತಕರಮಪ್ಪ ತಟಾಕಮಂ ನಿರ್ಮಿಸಲ್ವೇಳ್ಕುಮೆಂದಪ್ರತಿಮ ಧರ್ಮ ಮೂರ್ತಿ ನೆನೆದು ನೋಡಿ ತನ್ನ ಕೆಲಬಲದೊಳಿರ್ದ ಕಲ್ಗಳಂ ಮುಟ್ಟಿ ಹೊನ್ನರಾಶಿಯಾಗೆ ಪುರಜನಮಂ ಬರಿಸಿ ಕನಕಮನಿತ್ತು ತಟಾಕ ಪ್ರಾರಂಭ ಕರ್ತೃತ್ವಂ ತಮ್ಮದಪ್ಪ ಕಾರಣದಿಂ ವಾರಣ ಚರ್ಮ ವಸನತನುಜಂ ರೇವಣಸಿದ್ಧಂ ಭೂಮಿಯಂ ಶೋಧಿಸಿ ಧರ್ಮವಂ ಬಿತ್ತುವಂತೆ ಗುದ್ದಲಿಯಂ ಪಿಡಿವಗೆಯಲ್ತೊಡಗಲ್ಪಿಂಡಿರೆಲ್ಲಂ ಮಣ್ಯದ ಸಿವುಡಂ ಪೊತ್ತು ಪಾಪಮಂ ಪೊರಸೂಸುವಂತೆ ಮಣ್ಣ ಸೂಸುವ ಪಥದೋಳ್ ವಾಸಿಗೆ ಗಾಸಿಯಪ್ಪ ಚೋಳನ ಕುಮಾರಿ ಸೌಕುಮಾರ್ಯ್ಯಮಂ ನಟಿಯಿಸುತ್ತೊಲ್ಲದೆ ಮೂರು ತಿಂಗಳ ಗರ್ಭದ ನೀರೆ ನಿಂದು ದೇವದೇವ ಚೋಳರಾಜೇಂದ್ರನ ಬಸಿರೋಳ್ಪಂದು ದಿವ್ಯ ಜ್ಞಾನಿಯಪ್ಪ ನಿಮ್ಮಡಿಗಳ್ಗರಸಿಯಾಗಿಯುಮಿಂತಪ್ಪ ನಿರೋಧಕ್ಕೆ ಪಕ್ಕಾಗಲಾರೆನೆಂಬ ನುಡಿಗೇಳ್ದು ನಸುನಗುತಯ್ಯೋ ಹಿಂದೆ ಮಾಡಿದ ಪುಣ್ಯವಿಂದಿನ ಸುಕುಮಾರತೆಯನಿತ್ತುದಿಂದಿನ ಪುಣ್ಯವೇನಂ ಮಾಡದು ನೀನಾರಾದೊಡೆಮ್ಮೊಡವೆಯನೆಮಗೆ ಕೊಟ್ಟು ಪೋಗೆಂದು

ನುಡಿಯೆ ಕೂಡಲುಂ ಬಿಡಲುಂ ಅರಿಯದಿರ್ಪ ಮುಗ್ಧೆಯಂ ಕಂಡು ಕರುಣಿಸಿ ಸಾಮರ್ಥ್ಯ ಸುಲಭಂ ಸಕಳ ಜೀವಂಗಳುತ್ಪತ್ತ್ಯ ಕರ್ತನಪ್ಪ ರೇವಣಸಿದ್ಧಂ ತನ್ನ ಕರತಳದಿಂದಾ ಲಲನೆಯ ಪುಣ್ಯೋದರಮನೊಯ್ಯನೆ ತಡವೆ ಪುಣ್ಯಾದುರುಳಿ ಬೀಳ್ವಂತೆ ಬಾಲಕಂ ಗರ್ಭದಿಂ ಭೋಂಕನೆ ಬೀಳೆ ಮುಂತಣಿಸಿ ತೆಗೆದು ಶಂಕರನಂ ನೆನೆದು ಸಾರಹೃದಯಂ ಮಾರಾರಿಯಣುಗನೇರಿಯ ಮೇಲಣ ನಿವಾಸಸ್ಥಲದೊಳಾದರದಿಂದಿರಿಸಿ ಭಸಿತಮಂ ಕಾಪಿಟ್ಟು ಶಿವಧ್ಯಾನದಿಂ ಮುಸುಂಕಿಟ್ಟು ಜ್ಞಾನನಿಧಾನಮಂ ಚಿತ್ತಭೂಮಿಯೊಳ್ ಬೈಚಿಡುವಂತೆ ಬೈಚಿಟ್ಟು ಕಾಯಗರ್ಭದಿಂ ನೂರ್ಮಡಿ ರಕ್ಷೆಯಾಗಿರೆ ರೇವಣಸಿದ್ಧಂ ಚೋಳ ಪುತ್ರಿಯಂ ದಕ್ಷಿಣ ದೇಶಕ್ಕೆ ಕಳುಪಿ

ಜ್ಞಾನನಿಧಿ ಮಹಿಮಾಂಬುರಾಶಿ ಧರ್ಮಧ್ವಜಂ ದಯಾ ಮೇರು ಸತ್ಯಭೂಷಣನನುನಯದಿಂದಾರನೆಯ ಮಾಸಕ್ಕೆ ತಟಾಕಂ ಪೂರ್ಣಮಾಗೆ ತತ್ತಟಾಕ ವೇಳಾಗ್ರದೊಳಿರಿಸಿದ ಬಾಲಗರ್ಭಕ್ಕೆ ನವಮಾಸಂ ತೀವಿತೆಂಬುದನರಿದು ರೇವಣಸಿದ್ಧಂ ಪುತ್ರೋತ್ಸಾಹಕ್ಕನುಕೂಲಮೆನಿಪ ಮೃದುಮೃದಂಗ ಮಂಗಳ ಕಲಶ ದರ್ಪಣಾರತಿ ಸುವಾಸಿನಿ ಜನಂ ಬೆರಸಿ ಪಟ್ಟಣದಿಂ ಪೊರಮಟ್ಟು ಬಂದು ಕೆರೆಯ ಏರಿಯ ಮೇಲೆ ಮುನ್ನಿರಿಸಿದ ಮುಚ್ಚಳಂದಿಗೆಯೆ ಭಕ್ತಿ ಭೂಮಿ ಜ್ಞಾನರಸದಿಂ ತೊಯ್ದು ಬೀಗಿ ಬೆಳೆದ ಶಿವಕಳಾಬೀಜದಿಂ ನಳನಳಿಸಿ ಬೆಳದ ಶಿವಜ್ಞಾನಾಂಕುರದಂತೆ ತೊಳತೊಳಪ ಬಾಲಕನಂ ಕೈಯಲಿಡೆಗೊಟ್ಟು ಭೂಮಿದೇವಿಯಕೈರ್ಯ್ಯೊಳೀಸಿಕೊಂಬಂತೆ ತೆಗೆದುಕೊಂಡು ಕೃಪೆಯಿಂ ನೋಡಿ ಮೋಹದಿಂ ಮುಂಡಾಡಿ ಮೂರ್ಧ್ನಿಘ್ರಾಣಮಂ ಮಾಡಿ ತಾಯಗರ್ಭದಿಂ ಬರ್ಪನೋವನರಿಯದೆ ದುಃಖಮಂ ನೀಗಿ ಪುಟ್ಟಿದನಾಗಿ ರುದ್ರಮುನಿದೇವನೆಂಬ ನಾಮಕರಣಮಂ ಮಾಡಿ ಪುರಕ್ಕೈತಂದು ತಮ್ಮರಸಿಯೋರ್ವಳ್ಪುಣ್ಯವನಿತೆಯ ಕೆಯ್ಯೊಳ್ಕುಡೆ ಬಾಲಚಂದ್ರನಂ ಗಗನಾಂಗನೆ ಸಲಹುವಂತೆ ತರುಣ ತರಣಿಯಂ ಪೂರ್ವದಿಶಾಂಗನೆ ಬೆಳೆಯಿಸುವಂತೆ ಸಾಗಿಸುತ್ತಿರಲೆಂಟನೆಯ ವರುಷದೊಳ್ ಮಗನಂ ನೋಡಿ ಮಿಗೆ ಸಂತಸಂ ಬಟ್ಟು ಶೈವೋಪದೇಶಮಂ ತಾನೆ ಕರುಣಿಸಿ ಕೃಪೆಯಿಂ ನಿರೀಕ್ಷಿಸಿ ರುದ್ರಮುನಿದೇವರ್ಗೆ ಪರಮ ಸ್ವರೂಪ ಜ್ಞಾನಬೋಧೆಯಂ ಬೆಸಸುತ್ತಂ ಶಿವಯೋಗ ಸಂಪನ್ನನೆನಿಪ ರೇವಣಸಿದ್ಧ ಮಂಗಳವಾಡದೊಳಿರ್ದನಂತುಮಲ್ಲದೆಯುಂ.

**ಚತುರ್ಥಸ್ಥಲ ಸಂಪೂರ್ಣಂ.**

## ಪಂಚಮಸ್ಥಲ.

**ವೃತ್ತ**:— ನಯದಿಂದಂಪ್ರಿಯದಿಂದೆ ರುದ್ರಮುನಿದೇವಂಗಳ್ಕರಿಂ ಶೈವದೀ-
ಕ್ಷೆಯನಿತ್ತಾನತವೃಂದ ಮೋಕ್ಷದನನೂನೈಶ್ವರ್ಯ ಸಂಯುಕ್ತನ-।
ದ್ವಯಸಿದ್ಧಂ ಶಿವಭಾವಸಿದ್ಧನವನೀಶಂ ಪೂಜ್ಯಸಿದ್ಧಂ ನಿರಾ-।
ಶ್ರಯಸಿದ್ಧಂ ವಿಭುಸಿದ್ಧ ರೇವಣ ಶಿವಂ ಸಂದಿರ್ದನಾಸ್ಥಾನದೊಳ್ ॥

### ರಗಳೆ

ಅಂತಿರ್ದು ಮತ್ತೆ ದಿಗ್ದೇಶಾಂತರಕ್ಕೆಂದು
ಸಂತಸದಿ ಪೊರಮಟ್ಟನತುಳ ಬಲಯುತನಂದು
ಕರಿತುರಗ ಕಾಲಾಳು ರಥ ನಿಕರ ಒಡನೆ ಬರೆ
ಧರೆ ನಡುಗೆ ನಿಸ್ಸಾಳ ರವ ಉಣ್ಮಿ ಪೊಣ್ಮುತಿರೆ
ನಡೆತಂದನಂಗಂ ಕಳಿಂಗದೇಶಂಗಳೊಳ್
ನಡೆ ತಂದು ಗೌಳ ಮಾಳವ ಮಳೆಯ ದೇಶದೊಳ್
ಸಕಲ ದೇಶಂಗಳೊಳ್ಸುಖದಂತೆ ಸುಳಿವುತುಂ
ಸುಕರವೆನೆ ಭೂಜನಕೆ ಸಖನಂತೆ ಸುಳಿವುತುಂ
ಶಶಿಯಂತೆ ಸಿರಿಯಂತೆ ಸುಧೆಯಂತೆ ಸುಳಿವುತುಂ
ಎಸೆವ ಸುರಧೇನು ಸುರ ಕುಜದಂತೆ ಸುಳಿವುತುಂ
ವರ ಸುಕೃತದಂತೆ ಸತ್ಯದ ತೆರದಿ ಸುಳಿವುತುಂ
ಉರು ಶಾಂತಿಯಂತೆ ನಿತ್ಯದ ತೆರದಿ ಸುಳಿವುತುಂ
ಧರೆಯೊಳಗನಂತ ದೃಷ್ಟಾಂತಮುಂ ತೋರುತುಂ
ಹರುಷದಿಂ ಪಲವು ಸಾಮರ್ಥ್ಯಮುಂ ಬೀರುತುಂ
ಬರುತಿರ್ದನತ್ತಲಾ ಸಿದ್ಧರೇವಣತಂದೆ

ಧರಣಿಯೊಳಗಿತ್ತಲೊರ್ಬಂ ಶರಣನೊಲವಿಂದೆ
ಎಸೆವ ಹಾವಿನಹಾಳೆನಿಪ್ಪಗ್ರಹಾರದೊಳ್
ಪೆಸರೆಸೆವ ಕಲ್ಲೈಯ್ಯನೆಂದೆನಿಪ ನಾಮದೊಳ್
ಆ ಊರ ಕಲಿದೇವರಲ್ಲಿ ಸಲೆ ಮೆಚ್ಚಾಗಿ
ಭಾವದಿಂದರ್ಚಿಸುತ್ತಿರ್ಪನುನ್ನತವಾಗಿ

ಇರ್ದು ಪರಮಸ್ನೇಹವಂಕುರಿಸುತಿರ್ಪುತಂ
ಸಾರ್ದು ಶಿವಚರಣದೊಳ್ ಪಲ್ಲವಿಸುತಿರ್ಪುತಂ
ಶ್ರೀಗುರು ಪದಂಗಳಂ ಬಯಸಿರ್ಪ ಸಮಯದೊಳ್
ನಾಗಭೂಷಣನ ಮೆಲ್ಲಡಿಯರಿವ ಸಮಯದೊಳ್
ಈ ಬಂದನತಿಬಳಂ ಸಿದ್ಧರೇವಣನೆಂಬ
ಈ ಬಂದನಮ್ಮಮ್ಮ ಸಿದ್ಧಕುಲಪತಿ ಯೆಂಬ
ಕಹಳೆಗಳ ಧ್ವನಿ ಬಂದು ಕಲ್ಲಯ್ಯನೋಳ್ಪುಗಲು
ಬಹು ವಿಧದ ಪುಳುಕ ತತಿ ತನ್ನ ಮನದೊಳ್ನಿಲಲು
ಮಾಯೆಯುಂ ಪಿಂಗಿ ಶಿವಪದಕೆ ಧೀಂಕಿಡುವಂತೆ
ಆಯತಿಕೆಯಿಂದೆ ಭವಚಲವನುತ್ತರಿಪಂತೆ
ಗಳಗಳನೆ ಪರಿತಂದು ರೇವಣಸಿದ್ಧನಂಘ್ರಿಯಂ
ತೊಳತೊಳಪ ಸದ್ಗತಿಯ ತೋರುತಿರ್ಪಂಘ್ರಿಯಂ
ಬಿಗಿದಪ್ಪಿಯಾನಂದ ಜಲದಿಂದೆ ತೊಳೆವುತಿರೆ
ತೆಗೆದಪ್ಪಿ ಪುಳಕಂಗಳಿಂ ಪೊದೆಯಿಸುತ್ತಮಿರೆ
ಏಳೈಯ್ಯ ಕಲಿದೇವ ನಿನಗೆ ಲೇಸಕ್ಕುಮೆನೆ
ಏಳೈಯ್ಯ ನಿನ್ನಯ ಮನೋರಥವನೀವೆನೆನೆ
ಏಳ್ದು ಕೈಮುಗಿದಿರ್ದ ಕಲ್ಲಯ್ಯನಂ ಕಂಡು
ತಾಳ್ದು ಕಾರುಣ್ಯಮಂ ಭಕ್ತಿಗೆ ಮನಂಗೊಂಡು
ರುದ್ರಮುನಿದೇವನಿಂ ಕರುಣಮಂ ಮಾಡಿಸುತೆ
ರುದ್ರನಣುಗಂ ಶೈವದೀಕ್ಷೆಯಂ ನೀಡಿಸುತೆ
ಕಲ್ಲಯ್ಯನಂ ತತ್ಪರಕ್ಕೆ ಕರುಣಿಸಿ ಕಳುಪಿ
ಎಲ್ಲ ತೆರದಿಂದೆ ಭವಬಂಧನಂಗಳ ನಿಳಿಪಿ

ತನ್ನ ಮನದೊಳ್ಸಿದ್ಧರೇವಣಂ ನಡೆ ನೋಡಿ
ಪನ್ನಗಾಭರಣನಿತ್ತಾಜ್ಞೆ ನೆರೆ ಕೈಗೂಡಿ
ಆರಿತೇಳುನೂರರಿಯದೇಳ್ನೂರು ವತ್ಸರಂ
ನೆರೆ ಸಂದುದಿನ್ನಿಳೆಯೊಳಿರಲಾಗದೀಶ್ವರಂ
ಕೊಟ್ಟುದಾಯ್ತೆಂದಲ್ಲಿ ಚಿಂತಿಸುತೆ ಬರವರಲ್
ನಿಷ್ಠೆಯಿಂ ಸಿದ್ಧರೇವಣತಂದೆ ನಡೆತರಲ್

ಸಂದ ಸೊನ್ನಲಿಗೆಯಿಂದೊಲಿದು ಚಾಮಲದೇವಿ
ಮುಂದೆ ಪ್ರೈಯ್ಯಕ್ಷಿತಂ ಬಂದು ಗುರುಪದಭಾವಿ
ತನ್ನ ಗುರುವಂ ಕಂಡು ಚನ್ನಗುರುವಂ ಕಂಡು
ಉನ್ನತ ಶಿವಜ್ಞಾನಕಲ್ಪತರುವಂ ಕಂಡು
ಕೃತಕೃತ್ಯೆಯಾಗುತಂ ಕೈಮುಗಿದು ನಿಂದಿರಲು
ಅತಿಶಯಜ್ಞಾನಿ ಸಿದ್ಧನ ಮುಂದೆ ನಿಂದಿರಲು
ಕಂಡು ಕರುಣಾವನಾಕೆಗೀವುತ್ತೆ ಓವುತ್ತೆ
ಅಂಡಲೆವ ಮಾಯೆಯುಂ ನೋವುತ್ತೆ ಕಾವುತ್ತೆ
ಆನೆಯಿಂದಿಳಿವುತಂ ಸಿದ್ಧರೇವಣತಂದೆ
ಸೇನೆಯಂ ಪೊರಗೆ ನಿಲಪೇಳುತ್ತೆ ತಾ ಮುಂದೆ
ಹೊನ್ನ ಹಾವುಗೆಗಳಂ ಪುಟ್ಟಲಮ್ಮದೆ ಕಳೆದು
ತನ್ನ ಮನದೊಳಗೆ ಭಯಭಕ್ತಿರಸಮಂ ತಳೆದು
ಚರಣದಿಂ ನಡೆಯೆ ಚಾಮಲದೇವಿ ಕಾಣುತುಂ
ಧರಣಿಗಿದು ಪೊಸತೆನುತೆ ಕೌತುಕಮನಾಳುತುಂ
ದೇವ ಏನೆಂಬ ಪರಿ ಕರುಣಿಸುವುದಿದನೆಮಗೆ
ದೇವ ದಿವ್ಯಾಂಘ್ರಿಯಿಂ ನಡೆವುದದ್ಭುತವೆನಗೆ
ಎನೆ ಕೇಳು ಮಗಳೆ ಶಿವಲಿಂಗವಾದಪುದಿಲ್ಲಿ
ಘನಮಹಿಮೆಯುಳ್ಳ ಶಿವಭೋಗವಾದಪುದಿಲ್ಲಿ
ಇಲ್ಲಿ ಮೊರಡಿಯ ಮುದ್ದುಗೌಡನರ್ಧಾಂಗಿಯೊಳು
ಸಲ್ಲಲಿತೆ ಸುಗ್ಗವ್ವೆ ಎಂಬ ಕಾರಣಿಕೆಯೊಳು
ಕಾರಣಿಕ ಸಿದ್ಧನುದಯಿಸುವನೊಬ್ಬಂ ಕೇಳ
ಮಾರಾರಿಯಂ ಬಯಸಿ ಭಾವಿಸುವ ವಿಭು ಕೇಳ
ಆತನಂ ನಾವೆಂದು ಬೆಸಕೈದು ಬದುಕುವುದು
ಆತನ ಯಶೋವಲ್ಲಿ ಮೂಜಗಕೆ ಪಬ್ಬುವುದು
ಎಂದೊಲಿದು ನಡೆತಂದು ಮುದ್ದುಗೌಡನ ಮನೆಗೆ
ನಿಂದು ಭಿಕ್ಷೆಯನಾಂತು ಕೈಕೊಂಡು ಕೃಪೆ ಬೆಳಗೆ
ಸುಗ್ಗಗೌಡಿಯ ಮರೆವ ಪುಣ್ಯೋದರಮನಲ್ಲಿ
ಅಗ್ಗಿಸುತ್ತಂ ಮುಟ್ಟಿ ಭಸಿತಮಂ ಇಡುತಲ್ಲಿ
ಸೇನೆಯಂ ರುದ್ರಮುನಿದೇವರಂ ನೋಡುತುಂ
ಮಾನಿ ಚಾಮಲದೇವಿಗಾಗಳಪ್ಪೈಸುತುಂ

ನೆಗೆದನಾಕಾಶಕ್ಕೆ · ಶಶಿಬಿಂಬದಂದದಿಂ
ನೆಗೆದನಂಬರತಳಕೆ ಶಾಂತರವಿಯಂದದಿಂ
ನೆಗೆದಷ್ಟ ಷಷ್ಟಿ ಘನತರ ಪೊಕ್ಕು
ಸೊಗಯಿಸುವ ಶಿವಲಿಂಗ ಮೂರ್ತಿಗೆ ಮನಂ ಮಿಕ್ಕು
ಸರ್ವ ಶಿವಲಿಂಗಮಂ ಬಿಳ್ಕೊಡುತ್ತಂ ಬಂದು
ಸರ್ವ ಶಿವಭಕ್ತರ್ಗೆ ಸುಖಮನೀವುತೆ ಬಂದು
ಗಗನದಿಂ ನಡೆತಂದನಾ ಕೊಲ್ಲಿಪಾಕಕ್ಕೆ
ಬಗೆವರಘಮಂ ಕೆಡಿಪ ಪುಣ್ಯ ಸುಸ್ಥಾನಕ್ಕೆ

ಬಂದು ಶಿವಪುರದ ಶಿವನಿಳಯದೊಳಗಂ ಪೊಕ್ಕು
ಇಂದುಧರನಂ ನೋಡಿ ಪುಳಕದಿಂ ಕೈಮಿಕ್ಕು
ನೆನೆವರ ನಿಧಾನವೆನಿಸುವ ಸೋಮನಾಥನಂ
ಅನುಪಮ ವಿಳಾಸಜಳನಿಧಿ ಸೋಮನಾಥನಂ
ಶರಣ ಸಂಕುಳ ಕಲ್ಪತರು ಸೋಮನಾಥನಂ
ಪರಮ ಶಿವಭಕ್ತ ಕುಲಗುರು ಸೋಮನಾಥನಂ
ಹೊಗಳುತ್ತೆ ಹೊಂಗುತ್ತೆ ಬಂದು ಹತ್ತಿರೆ ಸಾರ್ದು
ಸೊಗಯಿಸುವ ಶಿವಲಿಂಗ ಮೂರ್ತಿಗೆ ಮನಂ ಸಾರ್ದು
ಹುಟ್ಟಿಸಿದ ತಾಯಿತಂದೆ ಬಟ್ಟೆಗೊಡುವುದು ದೇವ
ದಿಟ್ಟಿಮಾರರ ನಿಧಿಯೆ ಬಟ್ಟೆಗೊಡುವುದು ದೇವ
ಶರಣರ ಮನೋರಥವೆ ತೆರಹುಗುಡುವುದು ದೇವ
ಕರುಣಿಸಿದ ತೆರದಿ ಧರೆಯೊಸ್ಸಂದೆನೆಲೆ ದೇವ

ಎನೆ ಸೋಮನಾಥನೊಯ್ಯನೆ ತೆರಮನಾದರಿಸಿ
ಮನವಾರೆ ಶರಣಂಗೆ ಕರುಣಮಂ ಬಿತ್ತರಿಸಿ
ಪುವ್ವಿನೋಳ್ಪರಿಮಳಂ ಬೀಜದೊಳಗಂಕುರಂ
ಪಿವಿ ಪಲ್ಲವ ಒಪ್ಪವಂಕುರದೊಳೊತ್ತರಂ
ಅಂಕುರಂ ಬೀಜದೊಳ್ಪುಗುವಂದದಿಂ ಪೊಕ್ಕು
ಶಂಕರನ ನಿಜಲಿಂಗದೊಳಗೆ ಭಾವಂ ಮಿಕ್ಕು
ಒಳ್ಪಿತೆನೆ ತನ್ನನಾ ಲಿಂಗದೊಳಗೋವಿದಂ
ಕೊಲ್ಲಿಪಾಕಿಯ ಸೋಮನಾಥನೊಳ್ತೀವಿದಂ
ಶಿವಲಿಂಗದೊಳಗೆ ಪೊಕ್ಕಂ ಸಿದ್ಧರೇವಣಂ

ಶಿವನ ಸದ್ಭಕ್ತಿ ಪರ್ವಿದ ಸುಖದ ಕಾರಣಂ
ಆಗಳೆರಗಿದವು ಪುಷ್ಪಾವಳಿಗಳಂತಲ್ಲಿ
ಮೇಗೆ ಮೊಳಗಿದವು ದುಂದುಭಿವೃಂದವಲ್ಲಲ್ಲಿ
ನೆಗೆದುದು ವಿಮಾನವಾ ಪುರಜನಂ ಬೆರಗಾಗೆ
ಗಗನದೋಳ್ಪೋಗುತ್ತಮಿರ್ದುದುನ್ನತವಾಗೆ
ಪೋಗಿ ನಂದೀಶ್ವರನ ಬಾಗಿಲೊಳಗಂ ನಿಂದು
ನಾಗಭೂಷಣನ ಕೈಲಾಸದೊಳ್ಪುಗುತಂದು
ಸಿದ್ಧರೇವಣನಲ್ಲಿ ದೇವಂಗೆ ವೈಯಿಕ್ಕಿ
ಉದ್ಧರಿಸುತೀಶ್ವರಂ ಶಿರದೊಳಗೆ ಕೈಯಿಕ್ಕಿ
ಪುಳಕಿಸುವ ಭಕ್ತನಂ ಕಂಡು ಕರುಣಾಕರಂ
ಅಳವಲ್ಲದಳ್ಕರಿಂ ನೋಡಿ ಶಶಿಶೇಖರಂ
ಮುನ್ನಿನಂದದೊಳೆ ಗಣಪದವಿಯುಂ ಸಲಿಸುತ್ತ
ಉನ್ನತಿಯ ರೇಣುಕನೆನಿಪ್ಪ ನಾಮುವನಿತ್ತು
ಆವನುಂ ಪೊಗಳ್ವುದಧಿಕತರನೊಪ್ಪಿದಂ
ದೇವ ದೇವರದೇವ ದೇವ ಪತಿಯೊಪ್ಪಿದಂ
ಸಕಳ ಚಲ್ವಿಂಗೆ ಚಲ್ವಾದ ಗುರುವೊಪ್ಪಿದಂ
ಸಕಳ ಬಲ್ಪಿಂಗೆ ಬಲ್ಪಾದ ಶಿವನೊಪ್ಪಿದಂ
ಸಕಲ ಲೇಸಿಂಗೆ ಲೇಸಾದ ಹರನೊಪ್ಪಿದಂ
ಸಕಲ ಗುರುಗಳ್ಗೆ ಗುರುವಾದಭವನೊಪ್ಪಿದಂ
ಪಂಪಾಪುರಾಂಬೋಧಿ ಪೂರ್ಣೇಂದುವೊಪ್ಪಿದಂ
ಪಂಪಾಪುರಾಧಿಪ ವಿರೂಪಾಕ್ಷನೊಪ್ಪಿದಂ

**ಕಂದ**॥ ಅಣಿಯುರದಿಂ ನಿಜಭಕ್ತಿಯ
ಗುಣವಂ ತಾನೆನ್ನೊಳೀಗೆ ಶಾಂತಂ ಸರ್ವಂ॥
ತ್ರಿಣಯುನ ನೊಲವಿಂದಂ ರೇ- ।
ವಣಸಿದ್ಧನ ಕಂದನೆಂದು ಹಂಪೆಯದೇವ

**ಪಂಚಪುಸ್ಥಲ ಸಂಪೂರ್ಣ**

# ಶಂಕರದಾಸಿಮಯ್ಯನ ರಗಳೆ.

**ವೃತ್ತ**:— ಅಪ್ರತಿಮ ಪ್ರಭುವಜಾಂಡಕ ಪ್ರಭು ಸರ್ವದೇವರಾ
ಜಪ್ರಭು ನಿರ್ಮಲಪ್ರಭು ನಿರಾವರಣ ಪ್ರಭು ಕೇಳು ಭಾಳನೇ ।
ತ್ರಪ್ರಭುಹಂಪೆಯಾಪ್ತ ನೊಲವಿಂ ಮಿಗೆ ಶಂಕರದಾಸಿಮಯ್ಯನಂ ।
ವಿಪ್ರಕುಲಾರ್ಕನಂ ಪೊರೆದನಾನತ ಜಂಗಮ ಮಂಗಳಾಸ್ಪದಂ ॥

## ರಗಳೆ.

ಶ್ರೀಮೇದಿನೀತಳದೊಳೊಪ್ಪುಗು ನಿರಂತರಂ
ಪ್ರೇಮದಿಂ ಕಂದಶಿಲೆ ಎಂಬ ನಾಮದ ಪುರಂ
ಅಲ್ಲಿರ್ಪನೋರ್ವ ವಿಪ್ರಂ ಸದಾಚಾರದಿಂ
ಸಲ್ಲಲಿತ ಶೈವಧರ್ಮದ ಮಾರ್ಗನಿಯತದಿಂ
ಗೋವಿಂದದೇವನೆಂಬುದು ತನಗೆ ಪೆಸರಾಗೆ
ಭಾವಿಸುವಡುಮ್ಮವ್ವೆ ಎಂಬ ಸತಿ ತನಗಾಗೆ
ಸಂತ ಸುಖದಿಂದಿರ್ದು ವೈರಾಗ್ಯವೆಡೆಗೊಂಡು
ಚಿಂತಿಸಿದನಲ್ಲಿ ನೆರೆ ಸಂಸಾರವಂ ಕಂಡು
ನಾರಣಾಸಿಗೆ ಪೋಪೆನೆಂದು ಮನದೊಳ್ನೆನೆದು
ಸಾರವತ್ಯಂತ ಸುಖವನೆ ಪಡೆವೆನೆಂದೊಸೆದು
ಭರದಿಂ ಪ್ರಯಾಣೋಚಿತ ಪ್ರಕರಧರನಾಗಿ
ನೆರೆ ಪುಣ್ಯಪಥದತ್ತ ವಿಪ್ರನು ಕ್ರಮವಾಗಿ
ನಡೆತಂದು ತನ್ಮಾರ್ಗ ಗಾವುದದೊಳಿಪ್ಪಿರ್ಪ
ಜಡೆಯ ಶಂಕರದೇವರೊಲ್ದಲ್ಲಿ ನೆಲಸಿರ್ಪ
ನವಿಲೆಯೊಪ್ಪದಪಿಂ ಪರಸ್ನಾನಮಂ ಮಾಡಿ
ಶಿವನಿಳಯಮಂ ಪೊಕ್ಕು ನಲವಿಂದೆ ಮಿಗೆ ನೋಡಿ
ರಂಗಮಂಟಪದೊಳಗೆ ಬಂದು ಕುಳ್ಳಿರ್ದಿರಲು
ಗಂಗಾಧರಂಗೆ ಪೊಡಮಟ್ಟು ಕುಳ್ಳಿರ್ದಿರಲು

ಶಿವನ ಮಜ್ಜನಕೆ ತರ್ಪಗ್ಗಣಿಯ ಸಂಭ್ರಮಂ
ನವ ಪರಿಮಳಂಬೆತ್ತ ಕುಸುಮ ಕುಲವಿಭ್ರಮಂ
ಮಜ್ಜನಕ್ಕೈರೆವ ಶಿವಭಕ್ತ ಸಂದೋಹದಿಂ
ಸಜ್ಜನ ಸ್ಥಾನದೊಳು ನಡೆಸುವತಿನೇಹದಿಂ
ಪನ್ನೀರ ಚಂದನದ ಪರಮ ಸೌರಭ್ಯದಿಂ
ಪನ್ನಗಾಧರಗೆಸೆವ ಪೂಜೆಯಾನಂದದಿಂ
ಅಗಿಲು ಗುಗ್ಗುಳ ಚಂದನದ ಪರಿಮಳಂಗಳಿಂ
ಮಿಗೆ ತೊಳಗಿ ಥಳಥಳಿಸಿ ಬೆಳಗುವಾರತಿಗಳಿಂ
ಪರಮನಾರೋಗಣೆಯ ವಿಭವ ವಿಸ್ತಾರದಿಂ
ಪರಿಪರಿಯಲೆಸೆವ ಶೈವಾಗಮ ವಿಚಾರದಿಂ
ಸೊಗಸು ಮೆರೆಯಲು ಪುರಾಣ ಪ್ರಸಂಗಂಗಳಿಂ
ಬಗೆ ಮಿಗಿಲ್ಕೇಳಿಸುವ ಗೀತವಾದ್ಯಂಗಳಿಂ
ಇಂತೆಸೆವ ಪರಮನುತ್ಸಾಹ ಸಂಕುಲವಲ್ಲಿ
ಕಂತುಮದವೈರಿಯ ನಿರಂತ ಸಂಪದವಲ್ಲಿ
ತನ್ನಯ ಮನಕ್ಕೆ ಸುಖಮಂ ಕೊಡುತ್ತಿರಲಂದು

ಇನ್ನೇಕೆ ವಾರಣಾಸಿಯ ಪಯಣವೆನಗೆಂದು
ಇಲ್ಲಿರ್ಪನಿಲ್ಲಿರ್ಪ ನಿನ್ನಗಲೆ ನಿನ್ನಗಲೆ
ಒಲ್ಲೆನಿನ್ನೆಲ್ಲಿಗಂ ಪೋಗೆ ನಾನಿಂತು ಸಲೆ
ಎಂದು ತನ್ನೂರ್ಗೆ ಭರದಿಂ ಮರಳಿ ನಡೆತಂದು
ಸಂದಣಿಪ ಮೋಹದಿಂ ನಿಚ್ಚನಿಚ್ಚಂ ಬಂದು
ಜಡೆಯ ಶಂಕರದೇವರಂ ದರುಶನಂ ಮಾಡಿ
ಎಡೆಗೊಂಡ ಭಕ್ತಿಯಿಂ ಕಿವಿವಿಡಿದು ಕುಣಿದಾಡಿ
ಮಿಗೆ ನೆಚ್ಚಿ ಮೈವೆಚ್ಚಿ ಕೈದ್ಯು ಬೆರಳಂ ಕಚ್ಚಿ
ಬಗೆ ತಿಳಿದು ಬಲ್ಸಳಿದು ಮೊಣ್ಮುತ್ತ ಕಣ್ಮುಚ್ಚಿ
ಭಕ್ತಿ ಸುಖಮಂ ತನ್ನ ಮನದಣಿಯಲನುಭವಿಸಿ
ಯುಕ್ತಿ ಪೊರ್ದದ ನೇಹದೊಳಗೆ ಎಚ್ಚರು ಸೂಸಿ
ವ್ಯೆಯಿಕ್ಕಿ ಪೊಡಮುಟ್ಟು ಕಾರುಣ್ಯಮಂ ತೋರಿ
ಕೈಯ್ಯೆತ್ತಿ ಕೈಯ್ಯೆತ್ತಿ ನಡೆದು ಲಜ್ಜೆಯ ಬೀರಿ

ಎನಗೆ ವಾರಣಾಸಿಯುಮರ ನದಿಯುಂ ನೀನೆ
ಎನಗೆ ದಿವ್ಯ ಕ್ಷೇತ್ರವುಂ ನೇತ್ರವುಂ ನೀನೆ
ಎನಗೆ ನಿತ್ಯಾವಾಸಮುಂ ದೇಶಮುಂ ನೀನೆ
ಎನಗೆ ಪುಣ್ಯ ಪ್ರಕರಮುಂ ಸಕಲವುಂ ನೀನೆ
ಎನಗೆ ನಿರ್ಮಳ ಕರಣಮುಂ ಹರಣಮುಂ ನೀನೆ
ಎನಗೆ ನಿಶ್ಚಳ ಸೌಖ್ಯಮುಂ ಭೋಗಮುಂ ನೀನೆ
ಎನಗೆ ನಿರ್ಮಳ ಜ್ಞಾನವುಂ ಮೌನವುಂ ನೀನೆ
ಎನಗೆ ಪರಮ ಜ್ಞಾನ ಮಂತ್ರತಂತ್ರಂ ನೀನೆ
ಎನಗೆ ನಿತ್ಯಾನಂದ ಕರ್ತನೆನಿಪಂ ನೀನೆ
ಎನಗೆ ನಿಶ್ಚಲ ನಿತ್ಯವುಂ ಸತ್ಯವುಂ ನೀನೆ
ಎಂದು ನುತಿಗೈದು ನೂತನ ಸುಖಮನೊಳಕೊಂಡು
ಇಂದುಧರನಲ್ಲಿ ಭಕ್ತಿಯ ಭರವನೆಡೆಗೊಂಡು
ಇಂತನುದಿನಂ ತನ್ನ ಪುರದಿಂದ ನಡೆತಂದು
ಸಂತತಂ ಶಿವನ ಸದ್ಭಕ್ತಿಯ ಮನಂದಂದು
ಪಗಲೆನ್ನದಿರುಳೆನ್ನದೂಲವಿಂ ನಿರಂತರಂ
ಮಿಗೆ ಗಾಳಿ ಮಳೆ ಶೀತ ವಾತಪದೊಳಂ ಕರಂ
ಬಂದು ಬಂದಭವನಂ ನಿಚ್ಚ ಓಲೈಸುತಿರೆ
ಇಂದುಧರನಂ ಮರೆಯದನುದಿನಂ ನೆನೆಯುತಿರೆ

ಜಡೆಯ ಶಂಕರದೇವನಲ್ಲಿ ಕರುಣಿಸಿ ನೋಡಿ
ಪೊಡವಿಗೀ ಭಕ್ತನಂ ಮೆರೆವೆನೆಂದನು ಮಾಡಿ
ಒಂದು ದಿವಸಂ ಕನಸಿನೊಳಗೆ ದಯೆಯಿಂ ಬಂದು
ಇಂದುಕಳೆ ಜಡೆ ಪುಲಿದೊವಲ್ಭಸಿತದಿಂ ನಿಂದು
ಎಲೆ ಮಗನೆ ಚಳಿಮಳೆಯೊಳೆಡೆಯಾಡಲೇಕೈಯ್ಯ
ನಲಿವು ಮಿಗೆಯೊಲವಿಂದ ನಮ್ಮೂರ್ಗೆ ಬಾರೈಯ್ಯ
ಬಂದೊಡುಪದೇಶವಂ ಮಾಡಿ ಕರುಣಿಪೆನೆಂದು
ಇಂದುಧರನೊಲ್ದು ಬೆಸಸಲ್ಕೆ ಕರುಣದೊಳಂದು
ಎಚ್ಚತ್ತು ಮೆಲ್ಲನಂತಂತು ಪುಳಕದೊಳಾಳ್ದು
ಬೆಚ್ಚರಂ ಶಿವನ ಮುಕ್ತಿಯನಕ್ಕರಿಂ ತಾಳ್ದು
ಕನಸಿನೊಳಗೊಗೆದ ಸುಖ ಮನಸಿನೊಳಗಂಕುರಿಸಿ

ಕನಸು ಮನಸೆಂಬ ವಿವರಣೆ ಮನಕ್ಕರಿದೆನಿಸಿ
ಮೆಲ್ಲಮೆಲ್ಲನೆ ತಿಳಿಪಿನಿಂದ ಮನದೊಳಗರಿದು
ಸಲ್ಲೀಲೆಯಿಂ ಶಿವಂ ಕರುಣಿಸಿದನೆಂದರಿದು
ಎನ್ನೊಡೆಯನೊಲವಿಂ ಬರಲೆಂದು ಬೆಸಸಿದಂ
ಎನ್ನಾಳ್ದನತಿ ಕರುಣದಿಂದ ಕೃಪೆ ಮಾಡಿದಂ

ಎಂದಲ್ಲಿ ಸತಿವೆರಸಿ ಪೊರಮಟ್ಟು ನಡೆಗೊಂಡು
ಬಂದ ಮಯ್ಯೂರಪುರದೊಳಗೆ ಚಿತ್ತಂಗೊಂಡು
ಜಡೆಯುಶಂಕರದೇವರಂ ಕಂಡು ಪೊಡಮಟ್ಟು
ಕಡು ನೇಹಮಂ ತನ್ನ ಮನದ ಮೊನೆಯೊಳಗಿಟ್ಟು
ನವಿಲೆಯೊಳು ಶಿವಪಾದಸಂಗಸುಖದಿಂದಮಿರೆ
ಕವಲರಿಯ.ದಚ್ಚ ಶಿವಸುಖದ ಭರದಿಂದ ಬರೆ

ಒಂದು ದಿವಸಂ ನೇಮಮಂ ಮಾಡುತಿರಲಂದು
ಇಂದುಧರನಿಂತೆಂದನೊಲ್ದು ಕರುಣದೊಳಂದು
ನಾಳೆಯುಪದೇಶಮಂ ಮಾಡಿದಪೆನೆಲೆ ಮಗನೆ
ನಾಳೆ ನೆರೆ ಶುದ್ಧಾಂಗನಾಗಿರ್ಪುದೆಲೆ ಮಗನೆ
ಎಂದು ಕರುಣಿಸಿದೆಯೆಂದೀ ಪರಿಯೊಳಂದೊಲ್ದೆ
ಒಂದು ಪರಿಯಿಂದೊಲ್ದೆ ನಿನ್ನಿಷ್ಠೆಯಿಂದೊಲ್ದೆ
ಅಭವ ಕರುಣಿಸಿದಕ್ಕೆ ಕೃಪೆಗೆಯ್ವುದೆಲೆ ದೇವ
ವಿಭುವೆ ಬಿನ್ನೈಸಿದಂ ಸಲಿಸವೇಳ್ಪುದು ದೇವ
ದೇವ ಕರುಣಿಸಿತಕ್ಕೆ ನೊಸಲ ಕಣ್ಣಂ ಕೊಟ್ಟು
ದೇವ ಕರತಳವನೆನ್ನುತ್ತಮಾಂಗದೊಳಿಟ್ಟು
ಅಪ್ರತಿಮ ಗುರುವೆ ಸುರತರುವೆ ಕರುಣಿಪುದೆನಗೆ
ಸುಪ್ರಸಿದ್ಧ ಪ್ರಭುವೆ ವಿಭುವೆ ಕರುಣಿಪುದೆನಗೆ
ಅಕಲಂಕ ಶಶಿಕಲಾಕಿರಣ ಕರುಣಿಪುದೆನಗೆ
ಸಕಲ ದೇವಾಭರಣ ನಿಕರ ಕರುಣಿಪುದೆನಗೆ
ಮೃಡ ಭೀಮ ಫಾಳಾಕ್ಷ ಭರ್ಗ ಕರುಣಿಪುದೆನಗೆ
ಜಡೆಯ ಶಂಕರದೇವ ಗುರುವೆ ಕರುಣಿಪುದೆನಗೆ
ಎನೆ ಕೇಳ್ದು ಶಶಿಧರಂ ಕರುಣಿಸಿದೆನೆಂದೆನಲು

ಮನವಾರೆ ನೊಸಲಕಣ್ಣೆತ್ತಿ ನಾನೆಂದೆನಲು
ಕೇಳುತಂ ಪುಟವೇರುತಂ ಕೊರ್ಬಿ ಪೆರ್ಚುತಂ
ಬಾಳುತಂ ಬಲ್ಪೇರುತಂ ನಚ್ಚಿ ಪೆರ್ಚುತಂ
ಬೀಗುತಂ ಬಿಕ್ಕುತಂ ತೇಗುತಂ ತೂಗುತಂ
ರಾಗದಿಮ್ಮಡಿಸಿ ನಲಿದೊಗ್ಗುತಂ ಹಿಗ್ಗುತಂ

ನಡೆತಂದು ಮರುದಿವಸದುದಯ ಸಮಯದೊಳೇಳ್ದು
ಕಡುಗೂರ್ತು ನಿರ್ಮಲಸ್ನಾನ ಸುಖಮಂ ತಾಳ್ದು
ಭಸಿತಮಂ ತೀವಿಟ್ಟು ಧವಳ ವಸ್ತ್ರಮನುಟ್ಟು
ಎಸೆವ ರುದ್ರಾಕ್ಷ ಮಾಲೆಗಳನಳವಡೆ ತೊಟ್ಟು
ಸುಲಿಪಲ್ಲ ಬೆಳಗು ಬೆಳ್ದಿಂಗಳಂ ಬೀರುತಿರೆ
ಸಲೆಗೊಂಡ ದೇಹರುಚಿ ಸುರುಚಿರವ ಸೂಸುತಿರೆ
ನಡೆದು ಬಂದಾ ಶಿವಾಲಯದ ಶಿವಮಂಟಪದಿ
ಜಡೆಯ ಶಂಕರ ದೇವರಿರ್ಪ ಗರ್ಭಗೃಹದಿ
ನಿಂದು ಕುಳ್ಳಿರ್ದು ಕಡು ನಿಷ್ಠೆಯಿಂ ಕೈಮುಗಿದು
ಸಂದಣಿಸಿ ಮೆಯ್ಯೊಳಗೆ ಪುಳಕಂಗಳಂ ನೆಗೆದು
ಲಿಂಗದಿಂ ನಡೆತಂದನಾ ಜಡೆಯ ಶಂಕರಂ
ಅಂಗರುಚಿ ಕಣ್ಗೆ ಸವಿಯಂ ಕರೆಯಲೀಶ್ವರಂ
ಪಿಂಗಳ ಜಟಾಭಾರ ಗಂಗೆ ಮಧ್ಯದೊಳೆಸೆಯೆ
ತುಂಗ ತಟದಲ್ಲಿ ಮರಿದಿಂಗಳೊಪ್ಪಂ ಬಡೆಯೆ
ಭಾಳಾಕ್ಷ ಫಣಿ ಕುಂಡಲಂ ಪಂಚವದನದಿಂ
ನೀಲಗಳ ಮೀರೈದು ಭುಜವಜಕಪಾಲದಿಂ
ಕರಿಚರ್ಮವಹಿಕಟಕ ಡಮರುಗ ತ್ರಿಶೂಲದಿಂ
ಸುರ ಶಿರೋಮಾಲೆ ಪುಲಿದೊವಲೊಪ್ಪೆ ರಾಗದಿಂ

ಶಂಕರಂ ಬಂದು ಶರಣನನಕ್ಕರಿಂ ನೋಡಿ
ಬಿಂಕದಿಂ ಸ್ನೇಹರಸದೊಳಗೆ ಪೊಕ್ಕೋಲಾಡಿ
ಮೇಲೆ ದುಂದುಭಿ ಮೊಳಗೆ ಪೂಮಳೆಗಳುಂ ಸೂಸೆ
ಭೂಲಲನೆ ಗುಡಿಗಟ್ಟೆ ದೇವಗಣತತಿ ಪರಸೆ

ಸತ್ಯ ಗುರುಃಶಾಂತ ಗುರುಸಕಲ ಲೋಕೈಕಗುರು
ನಿತ್ಯ ಗುರು ನಿಜವ ಗುರು ಉತ್ತಮದ ಪರಮಗುರು
ದುರಿತ ಕುಲವಂ ನಿವಾರಿಸುವತುಳಹಸ್ತವುಂ
ಶರಣ ಸಂತತಿಗಭಯುವೀವ ಘನಹಸ್ತವುಂ
ಉದಯಾರ್ಕರುಚಿಗೆ ಮಿಗೆ ಮೆರೆವ ಕರಕಮಲವುಂ
ಸದಮಲ ಶಶಿಪ್ರಭೆಯುನೀವ ಹಸ್ತಾಗ್ರಮುಂ
ಕುಳ್ಳಿರ್ದ ನಿಜಶರಣನುತ್ತಮಾಂಗದೊಳಿಟ್ಟು
ಬಳ್ಳಿವರಿದಡ್ಡೈಸ ನೇಹವುಂ ಮುಂದಿಟ್ಟು
ತನ್ನವಂ ಭಕ್ತಿಯುಂ ಪಂಚಾಕ್ಷರಿಯುನರುಪಿ
ಉನ್ನತ ಜ್ಞಾನವುಂ ತನ್ನ ಮನದೊಳಗರುಪಿ
ಪರಮನಿಂತುಪದೇಶಮುಮನಳ್ಕರಿಂ ಮಾಡಿ
ಶರಣನಂತಸ್ಥದೊಳು ಸಾಮರ್ಥ್ಯವುಂ ಕೂಡಿ
ಅಸಮನಯುನಂ ಸಕಲ ಕಾರುಣ್ಯಮುಂ ನೀಡಿ
ನೊಸಲೊಳಗೆ ನೊಸಲಿಟ್ಟು ಭರದಿಂದೆ ಮುಂಡಾಡಿ
ನೊಸಲ ಸಂಗಡ ದಿಟ್ಟಿ ಗರ್ಭಿಣಿಯೊಲಾಗುತಿರೆ
ನೊಸಲ ಕಣ್ಣೊಂದು ಕಣ್ಣಂ ಪಡೆದು ಕೊಡುತಮಿರೆ
ನೊಸಲ ಕಣ್ಣಚ್ಚೊತ್ತಿ ನೊಸಲ ಕಣ್ಣಾಗುತಿರೆ
ಪೊಸಯುಕ್ತಿ ಶಿವಭಕ್ತಿ ಭಾವದೋಳ್ನೆಲಸುತಿರೆ
ಕಣ್ಣಕರ್ಪಂ ನೊಸಲಕಣ್ಣೆ ಕಪ್ಪಾಗುತಿರೆ
ಕಣ್ಣಪ್ಪನಿತ್ತ ಕಣ್ಣಲ್ಲಿ ಸರಿಯಾಗುತಿರೆ
ಜ್ಯೋತಿಯಿಂ ಜ್ಯೋತಿಯುಂ ಪೊತ್ತಿಸಿದ ತೆರನಾಗೆ
ಮಾತಿಂಗೆ ಪೆರತಿಲ್ಲ ಭಾವವೆರಡೊಂದಾಗೆ
ಮುಂಡಾಡಿ ಮುಕುರ ಮುಕುರವ ನೋಡಿದಂತಾಗೆ
ಕೊಂಡಾಡಿ ತಾನೆ ತನ್ನಂ ನೋಡಿದಂತಾಗೆ
ಆತ್ಮಾ ವೈ ಪುತ್ರ ನಾಮಾಸಿ ಎಂಬಂತಾಗೆ
ಸ್ವಾತ್ಮಿಸಲ್ನೊಸಲ ಕಣ್ಣಾತನೋಳ್ತಾನಾಗೆ
ದೇವಂಗೆ ಭಕ್ತನೆಣೆ ಭಕ್ತಂಗೆ ದೇವನೆಣೆ
ದೇವಂಗೆ ಭಕ್ತಂಗೆ ಸದ್ಭಕ್ತಿ ತಾನೆ ಹೊಣೆ
ಎಂಬಂತೆಯುಪದೇಶಮುಂ ಪಡೆದು ವಿಸ್ತರಂ

ತ್ರ್ಯಂಬಕನ ಭಾಳದೊಳಗೆಡೆವಿಡಿದು ಮತ್ಸರಂ
ಜ್ಞಾನಾಗ್ನಿ ಕಣ್ತೆರೆದ ತೆರದೊಳಿರ್ದಂ ಕರಂ
ಧ್ಯಾನದೊಳ್ಪುಟ್ಟಿ ಬೆಳೆವುತಿರ್ದನನಂತರಂ

ಆಸಮಾಕ್ಷನಿತ್ತುದಂ ಪಡಿನೋಳ್ಪೆ ನಾನೆಂದು
ಬಿಸಿಗಣ್ಣ ಪಡಿಸಣವನರಿದು ನೋಡುವೆನೆಂದು
ಸಿಡಿಲ ಕಿಡಿಯಂತಿರ್ಪ ಎವೆಯನೊಯ್ಯನೆ ತೆರೆಯೆ
ಘುಡಿಘುಡಿಪ ಘುಳುಘುಳು ಜ್ವಾಲೆ ಭುಗಿಲೆನೆ ನೆಗೆಯೆ
ವಿಷ್ಣುಪ್ರತಿಮೆಯೊಡೆದು ಸಿಡಿದು ಸಿಕ್ಕನೆ ಸೀಳೆ
ವಿಷ್ಣುವಿನ ರೂಪೊಡೆದು ಕೆಡೆದು ಧರಣಿಗೆ ಬೀಳೆ
ಭಾವಿಪೊಡಜ ಪ್ರತಿಮೆ ಬಿರಿದು ಜಗ್ಗನೆ ಜರಿಯೆ
ಮೂವತ್ತುಮೂದೇವರ್ಕೈದೆ ಸುಗಿದುಂ ಬಿರಿಯೆ
ವರ ಸಪ್ತಮಾತೃಕೆಯರುರಿದು ಮಣ್ಣೊಳ್ಕಿರೆಯೆ
ನೆರೆದಷ್ಟ ವಸುಗಳೆಲ್ಲಂ ಫಳಫಳನೆ ಬಿರಿಯೆ
ನೊಸಲೊಳಗೆ ಪುಟ್ಟಿ ಕಡುಗೋಪದಿಂದಂ ಬೆಳೆದು
ಪಸರಿಪ ಪ್ರತಿಮೆಗಳ ಬಾಯ್ಪಣ್ಣೆಯುಂ ತಳೆದು
ಉರವರಿಯೆ ನಡೆಗಲಿತು ಭುಗಿಲೆಂದು ನುಡಿಗಲಿತು
ಪುರ ಉರಿಯೆ ನೋಡಿದನ ಚಾರಿತ್ರಮುಂ ಕಲಿತು
ಸುತ್ತಣ ಪ್ರತಿಮಾದಿಗಳ್ಪೇಳ ಪೆಸರಿಲ್ಲ

ಎತ್ತಲುಂ ನೋಡೆ ಭಾವಿಪೊಡಲ್ಲಿ ರೂಪಿಲ್ಲ
ದಿರಲಲ್ಲಿ ಮಿಕ್ಕು ಪೊರಗಂ ನೋಡಲನುಮಾಡೆ
ಹರನೆಯ್ದೆ ಕಂಡು ಹೋ ಹೋ ಮಗನೆ ನಿನ್ನೋಡೆ
ಪುರ ಉರಿದು ಜರಿದು ಧರೆಯುರಿವುದಿನ್ನೆಲೆ ಮಗನೆ
ನರರೋರ್ವರುಳಿಯದಂತಪ್ಪುದಿನ್ನೆಲೆ ಮಗನೆ
ಬೇಡೈಯ್ಯ ಬೇಡೆಂದು ಘುಡಿಘುಡಿಪ ಭಾಳಕ್ಕೆ
ನೋಡೆ ಶಿವನಂದು ನಂದಿಯ ಮೊಗಪಡವನಿಕ್ಕೆ
ಗವಸಣಿಕೆಗವಿದ ಕಾಲಾಗ್ನಿಯಂದದೊಳಿರ್ದು
ಶಿವನ ಮುಂದಪ್ರತಿಹತ ಪ್ರಭಾವದೊಳಿರ್ದು
ಕೋಪಮುಂ ಮೆಲ್ಲನೊಳಗೊಳಗೆ ಕಾಣಿಸಿಕೊಂಡು
ಆ ಪರಮ ನಿರುಪಮುಂ ಶಾಂತತೆಯನೊಳಕೊಂಡು

ದೇವ ಎನಗೊಂದು ನಾಮವನಿಡುವುದೆಲೆ ತಂದೆ
ಗೋವಿಂದನೆಂಬ ನಾಮಕ್ಕಾರನೆಲೆ ತಂದೆ
ಎನಗೆ ಎನ್ನಯ ಸತಿಗೆಯೊಂದು ಪೆಸರಂ ಕೊಟ್ಟು
ತನಿ ನೇಹದಿಂ ನಿಮ್ಮ ಕರುಣಮಂ ಮುಂದಿಟ್ಟು
ಕರುಣಿಸುವುದೆನೆ ಹರಂ ಮಗನನಪ್ಪುತ್ತಲ್ಲಿ
ಸುರಿವಶ್ರು ಜಲದಿಂದೆ ನೆನೆದು ನೋಡುತ್ತಲ್ಲಿ
ಎನ್ನಂತೆ ಎನ್ನ ಪೆಸರಾಗಿ ಜಗದೋಳ್ಮೆರೆದು
ಉನ್ನತ ವಿಲೋಚನಂ ಸಾಮರ್ಥ್ಯಮುಮನರಿದು
ಧರೆಗೆ ಶಂಕರದಾಸಿಮಯ್ಯನಾಗಿರು ಮಗನೆ
ಶರಣೆ ಶಿವದಾಸಿಯಾಗಿರ್ಕೆ ನಿನಗೆಲೆ ಮಗನೆ
ಎಂದು ಕರುಣಿಸಿಕೊಟ್ಟು ಲಿಂಗದೊಳ್ಪುಗಲಲ್ಲಿ

ಇಂದುಧರನಾಜ್ಞೆಯಂ ಕೈಕೊಂಡು ನಿಲಲಲ್ಲಿ
ಉಗ್ರನಸಮಗ್ರ ಪ್ರತಾಪರೂಪಿನ ತೆರದಿ
ಉಗ್ರಲೋಚನನ ಪುರಹರನ ಕೀರ್ತಿಯ ತೆರದಿ
ಹೊಸಮಸೆ ತ್ರಿಶೂಲಕ್ಕೆ ನೊಸಲಕಣ್ಣೊಗೆದಂತೆ
ಅಸಮನಯನಕ್ಕೆ ಕರ ಚರಣ ಒಲ್ದೊಗೆದಂತೆ
ಸಿಡಿಲ ಸಂಗಡಕೆ ಬರಸಿಡಿಲೊಡಂಬಡುವಂತೆ
ವೃಡನ ಸಾಮರ್ಥ್ಯಕ್ಕೆ ಕಣ್ದೆರವೆಯಾದಂತೆ
ತರಣಿ ಬಿಂಬದ ಹಿಂಡು ನೊಸಲ ಮರೆಪೊಕ್ಕಂತೆ
ಉರಿವಗ್ನಿ ಹಣೆ ನೊಸಲ ಹಸೆ ಏರಿ ನಿಂದಂತೆ
ವಡಬಾಗ್ನಿ ದಾವಾಗ್ನಿ ಸಂಗಡಂಗೊಂಡಂತೆ
ಕಡುಪಿನಿಂ ಕಾಲಾಗ್ನಿ ಹಣೆಗೊಂಡು ನಿಂದಂತೆ
ಮುಗಿಲ ಮರೆಯೊಳ್ಮೇಘಪಾವಕಂ ನಿಂದಂತೆ
ಬಗೆಯೊಳರಿವಿನ ಮರೆಯ ನಿಜದ ಬೆಳಗಿರ್ಪಂತೆ
ಮೆರೆವ ನಂದಿಯ ಮೊಗವಡದ ಮರೆಯ ಕಣ್ಣೊಪ್ಪೆ
ಕರೆಗೊರಲನಾಜ್ಞೆ ಮುಸುಕಿದ ನೊಸಲ ಕಣ್ಣೊಪ್ಪೆ
ಇಂತು ಶಂಕರದಾಸಿಮಯ್ಯನೊಪ್ಪುತ್ತಮಿರೆ
ಸಂತತ ಮಯೂರಪುರದೊಳಗೆ ಒಪ್ಪುತ್ತಮಿರೆ

**ಪ್ರಥಮಸ್ಥಲ ಸಮಾಪ್ತ.**

# ದ್ವಿತೀಯಸ್ಥಲ.

**ವೃತ್ತ**:— ಸದಮಲಸೂರ್ಯನಂತೆ ಬಿಸಿಗಣ್ಣಿನ ಕೋಪದ ಪುಂಜದಂತೆ ಕಾ। ಹೊದವಿದ ತೇಜದಂತೆ ಯೊರೆಯುಚ್ಚಿದ ಶೂಲಿಯ ಖಡ್ಗದಂಡೆ ರೌ। ದ್ರದ ನಿಜರೂಪಿನಂದದಿ ಭಯಂಕರ ಶಂಕರದಾಸಿಮೈಯ್ಯನೊ। ಪ್ಪಿದನತಿ ಭೀಕರಂ ನತಕೃಪಾಕರವೀರ ತಪೋ ದಿವಾಕರಂ॥

**ವಚನ**:— ಇಂತೊಪ್ಪೆ ಜಡೆಯ ಶಂಕರನಂ ಕಂಡು ಭಕ್ತ್ಯಾಪ್ಯತಪಸುಂಡು ಪ್ರತಾಪಮಂ ಕೋಡು ನೊಸಲ ಕಣ್ಣಂ ಪಡೆದು ಪ್ರತಿವ್ಯಾದಿಗಳನೊಡೆದು ಪರಸಮಯದ ಗರ್ವಮಂ ಮುರಿದು ದುರಿತ ಕುಲಮಂ ಜಡಿದು ಭವ ವೃಕ್ಷಮಂ ಕಡಿದು ಪುಣ್ಯಪರಿಪುಳನುಂ ಮುಡಿಪುಸಂದಿಯ ಮೊಗವಾಡವಂ ಪಡೆದು ಉತ್ತುಮಾಂಗದ ಶಿವಲಿಂಗದ ಸೊಬಗಂ ಜಡೆಗಳ ಬೆಡಂಗಂ ಭಾಳಾಂಬಕದ ಭಯಂಕರಂ ಸತ್ಯದ ಸಾರ್ವಭೌಮಂ ಸಾಹಿತ್ಯದ ಭೂಷಣನೆನಿಪ ಶಂಕರದಾಸಿಮಯ್ಯಂ ಶಂಕರಾನುಗ್ರಹನಿಶ್ಯಂಕಂ ಶೈವ ಪ್ರತಾಪತೇಜಃಪ್ರಭಾಕರ ಕಿರಣನಾಗಿ ರಂಗಮಂಟಪದೊಳ್ಬಿಜಯಂಗೆಯ್ದಿರೆ ಮುಪುರಪುರ ಜನಮುಂ ಪರಮಭಕ್ತರುಂ ಹರಕರುಣವಾದುದನರಿದು ಭಾಳಲೋಚನಮಂ ಪಡೆದುದ ಕಂಡು ಪುರದೋಳ್ಮೆರೆಯಿಸಿ ತಮ್ಮ ನಿಳಯಂಗಳ್ಗೆ ಬಿಜಯಂಗೈಸಿ ಧನಧಾನ್ಯಮಂ ದುಕೂಲಮಂ ತಂದಾರಾಧಿಸಲು

ಇವೆಲ್ಲವನೊಲ್ಲೆಂ ಯಾಯಾವರಂ ತಕ್ಕುದ ತಂದು ಜಡೆಯ ಶಂಕರಂಗಿತ್ತು ಪ್ರಸಾದಮಂ ಕೊಂಡು ಸುಖದೊಳಿರ್ಪುದಲ್ಲದೆ ಪರರ ಘರವಂ ಹೊದ್ದುವ ಪಿರಿಯತನಂ ಬೇಡ. ಆರಾಧಿಸಿಕೊಳ್ಳೆಂಬ ಭಾರಕ್ಕಾನಾರೆ ನೆಂದೊಲ್ಲದೆ ಧೈರ್ಯಸಿಧಿ ಮಾಯಾನಿರಹರಣಂ ನಿತ್ಯತೃಪ್ತಂ ಭಕ್ತಿಯುಂ ಬೀರದೆ ಶಿವನೊಲವಂ ತೋರದೆ ಸಂಸಾರಮಂ ನಟಿಯಿಸಲೆಂದೊಂದು ಮನೆಯೊಳ್ಧಾನ್ಯಮಂ ತರಲೆಂದು ನಡೆತಂದು ಧಾನ್ಯವಂ ಬೇಡೆ ಕೇಳ್ದಾ ಮನೆಯವಜೋಳವಿಲ್ಲದೆ ಶಂಕರಗಂಡಂ ಪಿರಿದೈಯ್ಯಾ ಪಿರಿದೆಂದು ನುಡಿಯೆ ಜೋಳದ ಪೆಸರ್ಶಂಕರಗಂಡನ ಪೆಸರೆ ಮುನ್ನರಿಯೆನರಿಯೆಂ ನಿನ್ನೊಲ್ಲೆನೊಲ್ಲೆಂ ಶಂಕರನ ಪೆಸರ್ಗೆ ಶರಣೆಂಬುದಿಂತು ಮಾಡಲಾಗದೆಂದು ಭಯಭಕ್ತಿಭರಿತಂ ಶಿವಲಿಂಗನಿಷ್ಠಂ ಶಂಕರನಾಮ ದಶಾವಸ್ಥಂ

ನಡನಡುಗಿ ಜಡೆಯುಶಂಕರನಲ್ಲಿಗೈತಂದೆಲೆ ದೇವ ದೇವ ಚಂದ್ರಧರ ಸಕಲ ಸಸ್ಯಾಧಿಪತಿಯೆ ಜೋಳದ ಪೆಸರುಂ ನಿನ್ನ ಪೆಸರಾಗಿರ್ದಪುದು ಎನಗ ರಿದೆಂದು ಕೇಳೆ ವಾಳಿಯುವನಲ್ಲದೆ ಜೋಳವಾಳಿಯುವನಲ್ಲಲ್ಲ ದೇವ ಇಂದು ಮೊದಲ್ಗೊಂಡು ಧಾನ್ಯಮಂ ತರ್ಪುದೆನ್ನಿಂದಾಗದೆಲೆ ದೇವ ಎನೆ ಪನ್ನ ಗಾಭರಣಂ ನೀನೊಲ್ದಂತೆನ್ನಂ ಸಲುಹುವುದೆಂದು ಬಿನ್ನೈಸೆ ತನ್ನಣುಗನ ನಿಷ್ಠೆಗೆ ಲೋಕೈಕನಾಥಂ ಸಾಕಾರ ಸುಧಾವರುಷಂ ಹರುಷಪುಳುಕಿತ ನಾಗಿ ಎಲೆ ಮಗನೆ ನಿಶ್ಶಂಕ ಶಂಕರದಾಸಿಮಯ್ಯ ನೀನೊಲ್ಲದೋಗರಂ ನಮಗೇಕೆ ನಿನಗೆ ಸುಖವಾಗಿರ್ಪ ಲೋಕವಿರೋಧವಾಗಿರ್ಪ ಲೋಳಿಸ ರದ ಹಳುಕುಮಂ ಜೀರ್ಣಚೂರ್ಣಮಂ ಗುಂಜಾಸುಬೀಜಮನೊಂದು ಗೂಡಿ ಅರೆದು ಎಮಗಿತ್ತುದಂದಿಂಗೆ ಪ್ರಸಾದಮಂ ಕೈಕೊಂಡು ನಿತ್ಯ ತೃಪ್ತತೆಯುನೊಳಕೊಂಡು ಪ್ರಸಾದ ಪಥ್ಯ ಹೃದಯನಾಗಿ ಸುಖದೊಳಿ ರ್ಪುದೆಂದು ಯೂಯೂವರಕ್ಕೆ ಶಿವಾಲಯದೋಳ್ಪಟ್ಟಿರ್ದ ವಕ್ರಪಾದ ನೆಂಬ ಭೃತ್ಯನಂ ಕರುಣಿಸಿಕೊಡಲೊಡಂ ಶಂಕರದಾಸಯ್ಯ ನೆನೆದ ಬಯಕೆ ಮನವನಿಂಬುಗೊಂಡು ಗುಂಜಾದಿ ತ್ರಯ ವಿಷಕ್ರಿಯಾಯುಕ್ತಂ ಶಂಕರಾ ರ್ಪಿತ ಪ್ರಸಾದ ಜೀವಿಯಾಗಿ ಸುಖತೃಪ್ತಿಯಿಂ ತೇಗಿ ಪರಿಣಾಮದಿಂ ಬೀಗಿ ಜಡೆಯು ಶಂಕರನಿಂ ಶಂಕರದಾಸಂ ನೊಸಲಕಣ್ಣಂ ಪಡೆದನೆಂಬ ಕೀರ್ತಿ ಲೋಕಪ್ರಸಿದ್ಧಮಾಗೆ ತದ್ವಾರ್ತೆಯಂ ಕೇಳ್ದಿತ್ತ ಮುದನೂರೊಳು ಜೇಡರ ದಾಸೈಯ್ಯಂ ರಾಮನಾಥ ಪ್ರಸಾದ ಸಗರ್ವಹೃದಯಂ ಶಿವನಿಂ ತವ ನಿಧಿಯಂ ಪಡೆದೊಂದು ದಿವಸಂ ಶಿವನಂತೆ ಕೊಡುವರುಂ ಎನ್ನಂತೆ ಪಡೆ ವರಿಲ್ಲೆಂಬ ಗರ್ವಂ ತನ್ನ ಮನದೋಳ್ಪೊಳೆಯೆ ಮನಸಿಜಹರನೀತನ ಗರ್ವಮಂ ಕಂಡು ತನ್ನಿಂದಧಿಕನಂ ಕೊಂಡೊಯ್ದು ತೋರ್ಪೆನೆಂದು ಶಿವಂ ಸರ್ವಜ್ಞಂ ನಿಜ ಶರಣ ಪ್ರಣಯ ಕಲಹ ಲೀಲಾಲೋಲಂ ಕನಸಿನೊಳ್ಬಂದೆಲೆ ಮಗನೆ ಶಂಕರದಾಸಯ್ಯ ನೀನೊಂದೆಡೆಯೊಳಿರದೆ ಸಮಸ್ತ ಶಿವಪುರಂಗಳಂ ಪೊಕ್ಕು ದಿವ್ಯ ಸ್ಥಾನವಂ ಕಂಡು ಸದ್ಭಕ್ತರಂ ನೋಡಿ ಸಾಮರ್ಥ್ಯಮಂ ತೋರಿ ಪ್ರತಾಪಮಂ ಬೀರಿ ಮರಳ್ದು ಬರ್ಪು ದೆಂದು ಬೆಸಸಿ ಬಿಜಯಂಗೈಯ್ಯಲೆಚ್ಚತ್ತು ಕವಿತರ್ಪಾಸಂದಾಶ್ರಗಳುಮಂ ಎಳ್ತರ್ಪ ಪುಳುಕಂಗಳುಂ ಎಂತಕ್ಕೆ ಸಂತೈಸಿಕೊಳುತ್ತಂ ಜಡೆಯು ಶಂಕ ರನಂ ಬೀಳ್ಕೊಂಡು ಶಿವದಾಸಿಯಂ ಪಿಂತಿಕ್ಕಿಕೊಂಡು ಗುಂಜಾದಿವಿಷ ತ್ರಯಂ ವಕ್ರಪಾದನ ಶಿರದೊಳಿಟ್ಟು ನವಿಲೆಯಿಂ ಪೊರಮಟ್ಟು ಒಡನೆ

ಬರ್ಪ ಹರಭಕ್ತರಂ ಮರಳಿ ಕಳುಪಿ ದಕ್ಷಾಧ್ಯಕ್ಷಂ ಕ್ಷುದ್ರದೈವ ವಿದ್ರಾ ವಣಂ ಅನುಚಿತ ದೈವತಪನಂ ದರ್ಪಿತದೈವ ಧರಾಧರಪವಿ ದೈನ್ಯ ದೈವಕೃಪಾಮೇರುವೆನಿಪ ಶಂಕರದಾಸೈಯ್ಯಂ ಪಶ್ಚಿಮಾಭಿಮುಖನಾಗಿ ನಡೆ ತರುತಂ

ನೋಡಿದರ್ಗೆ ಶೈವಸಂಪದಮನೀವುತಂ ನುಡಿಸಿದರ್ಗೆ ಧರಣೀಶ್ವ ರತ್ವಮಂ ಕರುಣಿಸುತ್ತುಂ ಮೆಟ್ಟಿದ ಪ್ರಾಣಿಗಳಂ ಸ್ವರ್ಗಕ್ಕೆ ಕಳುಪುತಂ ಮುಟ್ಟಿದರಂ ಮುಕ್ತಿಗೆ ಕಳುಪುತಂ ಕೆಲವೆಡೆಗೈದು ಪಲವೂರ್ಗಳಂ ಕಳೆದು ದಾಸನ ಮನದ ಗರ್ವಮಂ ಬಿಡಿಸಿ ತವನಿಧಿಯಂ ಪೇರ್ಚಿಸಲೆಂದು ಶಿವ ಭಕ್ತಿಭೂಷಣರೆನಿಪ ಪುರಾತನರ ವೃದ್ಧಾಚಾರ ಭಕ್ತಿರಸಂ ಮಡುಗಟ್ಟಿ ದಂತಿರ್ದ ಮುದನೂರ ಪುಗುತಪ್ಪಾಗಳ್ ಮಗಧ ಮಾಳವ ವಂಗ ಬಂಗಾಳ ತೆಲಗು ಗುರ್ಜರ ಮೊದಲಾದ ನಾನಾ ದೇಶಂಗಳ್ಗೆ ಪಿಡಿದು ಪೋಪ ಹಿಂಡುಗೊಟ್ಟಿಗೆಯ ತಂಡಂಗಳಂ ತಲೆಹೊರೆಯ ಜನಂಗಳಂ ಬಂಡಿಗಳೊತ್ತೊತ್ತೆಯುಂ ದಾಸಂಗೀಶನಿತ್ತ ತವನಿಧಿಯ ಸಂಭ್ರಮದ ಸಂದ ಣಿಗೆ ಮನದೊಳ್ಸಂತಸಂ ಬಡುತ್ತಂ ಮುದನೂರಂ ಪೊಕ್ಕು ರಾಮ ನಾಥನಂ ಕಂಡೆರಗಿ ಆ ಶಿವಾಲಯದ ಹತ್ತಿರೆ ಬೀಡಾರಮಂ ಬಿಟ್ಟು ಶಂಕರದಾಸಯ್ಯಂ ಪಥಶ್ರಮಭರನಾಗುತ್ತಲಿರೆ ಇದಂ ಕೇಳ್ದು ಜೇಡರ ದಾಸೈಯ್ಯಂ ಬಂದು ವೈಯ್ಯಿಕ್ಕಿ ಕೆಯ್ಯ ಮುಗಿದು ರವಿ ಹತ್ತಿರೆ ಚಂದ್ರಮಂ ಕುಳ್ಳಿರ್ಪಂತೆ ಕೆಲದೊಳ್ಕುಳ್ಳಿರ್ದು ಶಿವಕಥಾಗೋಷ್ಠಿಯಿಂ ಕಿರಿದು ಪೊಳ್ತಂ ಕಳೆದು ಹರುಷೋದಯರಾಗಿರ್ಪ ಸಮಯದೊಳ್ ಶಿವದಾಸಿಯರು ಎಲೆ ಮಗನೆ ಧಾನ್ಯಕ್ಕೆ ಬಿಜಯಂಗೆಯ್ಯೆಂದು ವಕ್ರಪಾದಂಗೆ ಪೇಳಲಾ ಮಾತಂ ಕೇಳ್ದು ಜೇಡರ ದಾಸೈಯ್ಯಂ ಶಿವಕಾರುಣ್ಯ ಸಗರ್ವಹೃದಯಂ ತವನಿಧಿಯುಂ ಟೆಂಬ ಗರ್ವದಿಂ ಮುಂಗಾಣದೆ ಮೇಲನರಿಯದೆ ಶಿವಭಕ್ತರ್ಪಿರಿಯರ್ಗೆ ಪಿರಿಯರುಂಟೆಂಬುದನರಿಯದೆ ಶೀತಕರಂಗೆ ತಂಪನೀವಂತೆ ಭಾಸ್ಕರಂಗೆ ಬೆಳಗಂ ಕುಡುವಂತೆ ವಹ್ನಿಗೆ ಉಷ್ಣವಂ ಕುಡುವಂತೆ ಕೈಮುಗಿದು ದೇವ ರಾರೋಗಣೆಗೆ ಧಾನ್ಯವಂ ತರಪುಗಲೇಕೆ ಎನ್ನ ಮನೆಯೊಳ್ಸಕುಮಾರ ಧಾನ್ಯಮುಂಟು ಇಲ್ಲಿ ನೀವಿರ್ಪನ್ನೆವರಂ ಧಾನ್ಯಕ್ಕೆ ಪೋಗಲಾಗದು ನಿರೋ ಧಂಬೇಡ ಹತ್ತು ಇಪ್ಪತ್ತು ಸಾವಿರ ನೆಲ್ಲಹೇರಂ ಕಳಿಪುವೆಂ ಅವಂ ಕೈಕೊಳ್ವುದೆಂದು ಸ್ವಾಧೀನತೆ ಮಿಕ್ಕು ಸ್ನೇಹರಸದೊಡನೆ ಸಂಪನ್ನತೆ ಗೂಡಿ ಬಿನ್ನಪಂಗೆಯ್ಯೆ ಶಂಕರಧ್ಯಾನಮನಿತುಬೇಗಂ ಮಾಣ್ದಂಕುರಿಸಿದಾ

ಕ್ಷೇಪದ ಮೇಲೆ ಪಲ್ಲವಿಸಿದ ನಸುಗೋಪಂ ಬೆರಸಿ ಮುಗುಳ್ನಗೆ ಮೊಗದೊಳಲರೆ ನೋಡಿ ನುಡಿದನಕ್ಕಕ್ಕ ಬಡ ಭಕ್ತರ್ಗೆಮಗೆ ನೆಲ್ಲೆಲ್ಲಿರ್ಪುದು ವಿರಂಚಿಯ ವಕ್ತ್ರಮಂ ಚಿವುಂಟಿ ವ್ಯತ್ಯವಿನ ಮನೆಯುಂ ಮುತ್ತಿ ಹರಿಯ ನೊಸಲರುಣ ಜಲಮಂ ಭಿಕ್ಷಾಪಾತ್ರೆಯೊಳ್ತೀವಿ ವಿಷ್ವಕ್ಸೇನನನಿಂದೆತ್ತಿ ತಿರಿದಾಡಿದನ ಮಕ್ಕಳ್ಗೆ ಸಿರಿಯಲ್ಲಿಯದೆಲೆ ದಾಸ ನೀಂ ಕೊಡುವವ ನಾಂ ಕೊಳ್ಳುವನುಂಟುಂಟೆಂದು ನಸು ಕಟಿಕಿಯನಾಡುತ್ತೇಳ್ದು ಬಂದು ಬೀಡಾರದ ಮನೆಯ ಮುಂದೊಪ್ಪುವ ತಿಪ್ಪೆಯನಾತಂ ತೆಗೆಯಿಸಿ ಪೊನ್ನ ಕಡವರಂಗಳಂ ತೋರಿಸಿ ನಿನಗೆ ಬೇಳ್ಪನಿತಂ ಕೊಳ್ಳು ಕೊಳ್ಳೆಲೆ ದಾಸ ಕೊಳ್ಳೆನುತ್ತ ನಿನ್ನ ನಾಲ್ವೆರಲ್ನೆಲ್ಲ ಜಳ್ಳಿಗೆ ತಕ್ಕ ಮುರುಕವಲ್ಲ ತವನಿಧಿಯಂ ಕೊಟ್ಟ ದೇವಂ ತಾನೇ ಕೊಂಡಹಂ ನೀಂ ಪೋಗೆಂದು ಶಂಕರದಾಸ್ಯೆಯ್ಯಂ ಜಡಿದು ನುಡಿಯೆ

ಜೇಡರ ದಾಸಯ್ಯಂಗೆ ಭೀತಿ ಬಲಿದು ಬೆರಗು ರೂಪುಗೊಂಡು ಕೌತುಕಂ ಪುಟ್ಟಿ ಆತಭಯಂ ಜಕ್ಕುಲಿಸಿ ಕಂದಿದ ರವಿಯಂತೆ ಕಳೆಯೊಡೆದ ಚಂದ್ರನಂತೆ ಮರುಳಂತೆ ಮರೆದು ಶೂನ್ಯ ಹೃದಯನಾಗಿ ನಿಂದಿರಲಮ್ಮದೆ ಮೆಲ್ಲಮೆಲ್ಲನೆ ನಿಜನಿಳಯದತ್ತ ಬರುತಿರ್ದ ದಾಸನಂ ಕಂಡಿದೇನಿದೇನೊಳಗೆ ತವನಿಧಿ ಕವಲಾಯಿತ್ತು ಪೊರಗೆ ಭಕ್ತಿರಸಂ ಬರಿದಾಯಿತ್ತು ಮುಖದ ನಯಂ ಹಾರಿತ್ತು ಕಣ್ಣುಗಳ ಕಾಂತಿ ಜಾರಿತ್ತು ಸತ್ಯಶರಣರ ಕೂಡುತ್ತರಂಗೊಟ್ಟರೇಕೆ ಅಲ್ಲದಿದ್ದೊಡಿನಿತಾಗದೆಂದು ನುಡಿಯೆ ದಾಸಂ ಕೇಳ್ದು ಶಿವಭಕ್ತಿಸಂಪನ್ನ ಅಗ್ಗಳದ ದುಗ್ಗಳೆ ನೀನೆಂದಂತೆ ಶಂಕರದಾಸನೊಳ್ಸಲುಗೆಯಂ ಮಾಳ್ಪರೇ ನಮ್ಮ ಭಕ್ತಿ ಎನಿತು ನಾವೇತರವರು ರಾಮನಾಥನಾ ಪೊಳ್ತೀನಂ ಮಾಡಿದಪನೆಂದಾರರಿವರು ಇಂತಿದಲ್ಲಲ್ಲ ನಡೆಯೆಂದು ಸದ್ಭಕ್ತಿಗೂಡಿ ಶಾಂತಿಭೂಷಣೆ ಶಿವೈಕನಿಷ್ಠೆ ಏರಿ ಮೆಲ್ಲಮೆಲ್ಲನಲ್ಲಿಂ ತೊಡಗಿ ಪೈಯಿಕ್ಕುತಂ ಬಂದು ಚಿತ್ತದಭಯಮಂ ಮನದಲಲ್ಲೆಯುಂ ಮುಖದ ಕಾರ್ಪಣ್ಯಮುಂ ದಿಟ್ಟಿಯ ದೈನ್ಯಮುಂ ಬೆರಸಿ ದಾಸಂ ಶಂಕರದಾಸ್ಯೆಯ್ಯಗಳ ಪದತಳದೊಳ್ ಧೊಪ್ಪನೆ ಬೀಳ್ದು ದೇವಾ ಶಿಸುವಿನೊಳ್ಪ್ರೀತಿಯುಂಟೆ ಪಶುವಿನೊಳ್ಬುದ್ಧಿಯುಂಟೆ ಮತಿಹೀನಂಗೆ ಮನ್ನಣೆಯುಂಟೆ ದೀನಂಗೆ ದಾಕ್ಷಿಣ್ಯಮುಂಟೆ ಕ್ಷೀಣಂಗೆ ಜಾಣ್ಮೆಯುಂಟೆ ಭಕ್ತಿ ಇದ್ದೆಡೆಯೊಳ್ಭಯಮುಂಟೆ ಎನ್ನೊಳ್ಗುಣವನರಸುವರೆ ತೊಳ್ತಿನೊಳ್ತಪ್ಪನರಸುವರೆ ಸತಿಯಪರಾಧಮಂ ಪತಿ ನಿರೀಕ್ಷಿಸುವರೆ ಕೃಪಾಸಮುದ್ರ ಕರುಣಿ

ಕರುಣಿಸುವುದೆಂದು ಮತ್ತೆ ಮತ್ತೆ ಸೈಗೆಡೆದು ಬೀಳ್ದ ದುಗ್ಗಳೆಯುಂ ಶಿವ ಭಕ್ತಿಭರಿತಂ ಕಿಂಕುರ್ವಾಣ ಭಕ್ತಿರಸದೊಳಗೆ ನೋಡಿ ದಾಸನ ಮೇಲಣ ಮುನಿಸುಂ ನಿಮಿಷದೊಳ್ಪೋಗೆ ಕರುಣಿಸಿ ಶಿರದ ಮೇಲೆ ಶ್ರೀಹಸ್ತಮ ನಿಟ್ಟು ರಾಮನಾಥಂ ಕೊಟ್ಟಪಾರ ತವನಿಧಿಯುಂ ಒಳಗಣಿಂದ ತೆಗೆ ತರ್ಪೆನೆಂಬ ಭ್ರಮೆಯುಂ ಬಿಟ್ಟು ಇಂದು ಮೊದಲಾಗಿ ಮೇಲಣಿಂದುರ್ಕುತ್ತೆ ಬರಲೆಂದು ವರವಂ ಕೊಟ್ಟು ಅವರೀರ್ವರಂ ಕಳುಪೆ ನಿಜನಿಳಯಕ್ಕೆ ಬಂದುಕ್ಕಿ ನೆಗೆವ ತವನಿಧಿಯುಂ ಕಂಡು ದಾಸದುಗ್ಗಳೆಯರ್ಗೆ ಹರುಷಂ ದಳವೇರಿ ಶಿವಭಕ್ತನೋಳ್ನಂಬುಗೆ ನೂರ್ಮಡಿಸಿ ನಿಜನಿಳಯದೊಳು ಶಿವನಂ ಓಲೈಸುತ್ತಿರಲಿತ್ತ ರುದ್ರಾವತಾರನಪ್ಪ ಶಂಕರದಾಸೈಯ್ಯಂ ಗವ ಸಣಿಗೆಗವಿಸಿದ ಪಾಶುಪತಾಸ್ತ್ರದಂತೆ ಪೊಗವಡದ ಮಹಿಮಂ ಸದಮಳ ನಿಳಯಂ ಮುದನೂರೊಳಿರ್ದನತ್ತಲು

ಜಯಸಿಂಹರಾಯನಿರ್ಪ ಕಲ್ಯಾಣದೊಳುಂ ದರ್ಭೆಯ ನಿರ್ಭಾಗ್ಯರುಂ ವೇದವಾದಿಗಳುಂ ಕೊಂಡೆಯರುಂ ತರ್ಕದ ತಾಮಸರುಂ ಯಜ್ಞದ ಅಜ್ಞಾನಿಗಳುಂ ತಿಲದಾನದ ಕುಲಹೀನರುಂ ಮಹಿಷದಾನದ ಸಾಹಸಿ ಗಳುಂ ; ಕಾಳಾಮುಖದಾನದ ದಾಳಿಕಾರರೆನಿಪ ದಾನಯಾಚಕರೆನಿಪ ನೀಚರುಂ ನೆರೆದು ಬಂದರಸಂಗೆ ಆಶೀರ್ವಾದಮಂ ಕೊಟ್ಟು ಎಲೆ ದೇವ ನವಿಲೆಯೊಳೋರ್ವ ಶಂಕರದಾಸೈಯ್ಯನೆಂಬಾತಂ ನೊಸಲಕಣ್ಣಂ ಪಡೆದು ಪರದೈವ ಪ್ರತಿಮೆಗಳಂ ದಹಿಸುವ ಬಿರುದಿನ ಅತ್ಯಾಸುರಂ ಮಾಡಿ ಕೊಂಡಿರ್ಪನೀಗಳ್ಮುದನೂರೊಳಿರ್ದಪನವನಂ ನಮ್ಮೂರ ತಮ್ಮಡಿಗಳ ಕೂಡೆ ಕರೆಯಿಸಿ ಹಿರಣ್ಯಕಶ್ಯಪಮದಭಂಜನಂ ನಾರಸಿಂಹಂ ಬಾಯ್ದೆರೆ ದಿರ್ದಪ ತನ್ಮೂರ್ತಿಯುಂ ನೊಸಲಕಣ್ಣ ನೋಡಿಸಿ ಭಕ್ತರ ನುಡಿಯ ಪೇರ್ಬಾಸಿಯ ಪುಸಿಕಂಗಳಂ ನೋಡಲಕ್ಕುಮೆನೆ ಅರಸಂ ಕೇಳ್ದಾ ಮಾತಿಂಗೆ ನರಿಯ ಗೀತಕ್ಕೆ ಬಳ್ಳು ತಲೆದೂಗಿದಂತೆ ತಲೆದೂಗುತ್ತಂ ಒಡಂಬಟ್ಟು ತಲೆದೂಗಿ ಸತ್ಯ ಶರಣನಚ್ಚ ಸಾಮರ್ಥ್ಯವನರಿಯದ ಸ್ವಾಮಿದ್ರೋಹಿಗ ಳೆಲ್ಲರ್ನೆರೆದು ಆ ಪಟ್ಟಣದ ತ್ರಿಪುರಾಂತಕ ದೇವರ ಸ್ಥಾನಿಕರಂ ಕರೆಯಿಸಿ ನೀವಿಂದು ಪೋಗಿ ಮುದನೂರೊಳಿರ್ದ ಶಂಕರದಾಸಯ್ಯನಂ ಒಡ ಗೊಂಡು ಬನ್ನಿರೆಂದರಸಂ ಪೇಳೆ ಕೇಳ್ದು ತಮ್ಮಡಿಗಳ್ಮುದನೂರ್ಗೆ ಬಂದು ಸತ್ಯಶರಣನಂ ಕಂಡು ದೇವ ದೇವ ಕಲ್ಯಾಣದ ತ್ರಿಪುರಾಂತಕ ದೇವರೇ

ಮೊದಲಾದ ಮಹಾಸ್ಥಾನಂಗಳಂ ಕಂಡು ಶಿವಭಕ್ತರಂ ನೋಡಲ್ಬಿಜಯಂಗೈವುದೆಂದು ಪೇಳಲೊಡಂಬಟ್ಟು,

ಭಕ್ತಜನವೇಷ್ಟಿತಂ ಶಂಕರದಾಸಯ್ಯಂ ನರಸಿಂಹೋಪಸಂಹಾರಕ್ಕೆ ಪೊರಮಡುವ ಶರಭದೇವನಂತೆ ಪೊರಮಟ್ಟು ನಡೆದುಬಂದು ಕಲ್ಯಾಣಮಂ ಪುಗುತರ್ಪಾಗಳ್ ಜಯಸಿಂಹರಾಯಂ ಹಸ್ತ್ಯಶ್ವರಥಪದಾತಿಗಳಿಂ ಛತ್ರಚಾಮರ ಕಳಶ ಕನ್ನಡಿಗಳಿಂದಿದಿರ್ಗೊಳೆ ಪಟ್ಟಣಮಂ ಪೊಕ್ಕು ಶರಣರ ನಿಳಯದೊಳು ಬಿಜಯಂಗೈದು ಶರಣಕುಲ ಸಂಭಾಷಿತ ಶಿವಪುರಾಣ ಶಿವಕಥಾಮೃತ ರಸವೊಳವಗಾಹಂಗೈದು ವಿಕಸಿತ ಹೃದಯಕಮಲನಾಗುತ್ತೊಂಪೆರಡು ದಿನವಿರಲಲ್ಲಿಗೆ,

ಜಯಸಿಂಹರಾಯಂ ಸ್ವಪ್ರಮಂತ್ರಾಲೋಚನೆಯುಂ ಮಾಡಿ ಪ್ರಧಾನಿಗಳಂ ಕೂಡಿಕೊಂಡು ಬಂದು ಶಂಕರ ದಾಸಯ್ಯಗಳಿಗೆ ಕೈಯ್ಯಂ ಮುಗಿದು ದೇವ ಶಿವದೇವ ಸ್ಥಾನಂಗಳಂ ನೋಡಲ್ಬಿಜಯಂಗೈವುದೆಂದು ತಾನೇಳ್ದು ಕೈಗೊಟ್ಟು ನಡೆತಂದು ಪಲವು ಲಿಂಗಂಗಳಂ ಭರದಿಂ ತೋರುತ್ತಂ ಬರ್ಪಾಗಳ್ಮುಂದೆ ಸುವರ್ಣ ಖಚಿತವಾಗಿ ಕೋಳಿಯ ಗೂಡಿನಂತಿರ್ಪ ವಿಷ್ಣುಗೃಹದೊಳ್ಮಿಂದು ದೇವಕಳಾಸಾನ್ನಿಧ್ಯವಹ ನೃಸಿಂಹ ಪ್ರತಿಮೆಯಂ ನಿಮ್ಮ ನೊಸಲಗಣ್ಣಿಂ ನೋಡಲು ಘನ ಪ್ರತಿಷ್ಠೆಯಾದಪುದು, ನೋಡಿ ಕರುಣಿಸಿಮೆನೆ ಶಂಕರ ದಾಸಯ್ಯಂಗಳರಿದಯ್ಯೋ ಶರಭದೇವರ ಕೆಯ್ಯೊಳ್ನಚ್ಚು ನೂರಾದವನಡಿಗಡಿಗೆ ಕಾಡಲೇಕೆ? ನೋಡಿದ ಪ್ರತಿಮೆಗಳ್ಗಳಿವಕ್ಕು. ನಿಮಗೆ ನಿರೊಧಂಬರ್ಕು. ಬೇಡ ಬೇಡಕಟ ಪ್ರಾಣಿಗಳ ಮನವ ನೋಯಿಸಲೇಕಯ್ಯ ಬೇಡೆಂದು ಸುಮ್ಮನಿರೆ, ಮತ್ತೆ ಮಯ್ಯಿಕ್ಕಿ ನಿಮ್ಮಡಿಗಳ್ನೋಡಿದೊಡಳಿವುಂಟೆ, ಸುಪ್ರತಿಷ್ಠಮಕ್ಕೆಂದಾಕ್ಷೇಪದಿಂ ಪರಿಹಾಸ್ಯವನಾಡೆ, ಆ ಕಟಕಿಯಂ ಕೇಳಲಾರದೆ ಚಿತ್ತದೊಳ್ ಘೂರ್ಮಿಸಿ ಅಹಂಕಾರದೊಳ್ಸಡಗರಿಸಿ ಬುದ್ಧಿಯೊಳ್ಬಲಿದು ಮನದೊಳ್ಮುಳಿದು ಕೋಪದೊಳ್ಮಸುಂಕಿ ಅದ್ಭುತ ರಸದೊಳಂಕುರಿಸಿ ರೌದ್ರದೊಳ್ಪ್ರೌಢಿಸಿ ಭಯಾನಕದೊಳ್ಭಾವಿಸಿ ಗಂಭೀರದೊಳ್ಘುಳಿಘುಳಿಸಿ ವೀರದೊಳ್ಗಜರಿ ವಿಕ್ರಮದೊಳ್ಗರ್ಜಿಸಿ ಬರಸಿಡಿಲ ಗವಸಣಿಕೆದೆಗೆವಂತೆ ಕಡೆಗಾಲದ ಕಿಚ್ಚಿನ ಮುಚ್ಚುಳ್ದೆರೆವಂತೆ ನಂದಿಯ ಮೊಗವಡವನೊಯ್ಯನೊಯ್ಯ ನೋಸರಿಸಲೊಡಂ ಬಿಸಿಗಣ್ಣಿನೊಳಗೆ ಘುಳುಘುಳಿಸಿ ಸುಳಿದು ಧಗಿಲ್ಧಗಿಲೆಂದು ಭೋಂಕನೆ ನೆಗೆದು ಮುಂಗಾಣಿಸಿ ಪರಿದು ನೃಸಿಂಹ ಪ್ರತಿಮೆಯಂ ನೆರೆದುರುಪೆ ನೃಕೇ

ಸರಿಯು ಘುರಿಘುರಿಲನುರಿದು ಬಾಯಿ ಹುರಿಹಂಚಾಗಿ ಕೋರೆದಾಡೆ ನೆರೆ ಬಿರಿದು ನಿಡುನಾಲಿಗೆ ಸೆಕ್ಕನೆ ಸೀಳ್ದು ಬಿಡುಗಣ್ಗಳೊಡೆದು ಹಾರಿ ಮೃಗವದನಂ ಭುಗಿಲೆಂದು ನಖದ ಕೈ ನೆರೆ ಸೀದು ಕರಿಮುರಿಯಾಗಿ ಸರ್ವಾಂಗಂಗಳರಳ್ದು ಫಳಫಳನೆ ಕಳಲ್ದು ಬಿರ್ಚಿ ಬೇರಾಗಿ ಅರಗಿನ ರೂಪನುರಿಯ ಕೊನೆ ಪತ್ತಿದಂತಾಗೆ ಬಾದುಮಯ್ಯನ ಮೆಯ್ಯಂಬರ ಸಿಡಿಲು ಪೊಡೆದಂತಾಗೆ ನೃಸಿಂಹ ಪ್ರತಿಮೆ ಧರೆಯ ಮೇಲುರುಳೆ,

ಜಯಸಿಂಹರಾಯನುಂ ವೈಷ್ಣವರುಂ ವಾದಿಗಳುಂ ಉರಿದು ಮೊಗಹುಗೆಡೆ ಪರಸಮಯಿಗಳ್ಮೊರೆಯಿಟ್ಟು ಹಲ್ಲಂ ಕಿರಿದು ಹುಲ್ಲಂ ಕರ್ಚಿ ದೇವ ರುದ್ರಾವತಾರನೆಂದರಿಯದೆ ಮರೆದು ಮರುಳಾದ ಸರ್ವಾಪರಾಧಿಗಳು ದೇವ ಉಗ್ರಲೋಚನನಮಂ ಮುಸುಂಕು ಮುಚ್ಚುಳಿಕ್ಕೆಂದು ಚರಣದೊಳ್ ಸೈಗೆಡೆದು ಪಟ್ಟಿರ್ದೊರಲ್ದು ಮೇಲನರಿಯದ ಬಾಲಕರ್ಗೆ ಪಿರಿಯರನರಿಯದ ನರಗುರಿಗಳ್ಗೆ ನಿತ್ಯರನರಿಯದನಿತ್ಯರಂ ಕಾವುದೆಂದು ಕಿಂಕುರ್ವಾಣಮಂ ತೋರಿ ಶಂಕರದಾಸಯ್ಯಂ ಕರುಣಿಸಿ ನೋಡಿ ನಂದಿಯ ಮೊಗವಡಮಂ ಮುಸುಂಕಿ ಜಯಸಿಂಹರಾಯಂಗಭಯಮಂ ಕೊಟ್ಟು ನಿಜನಿಳಯಮಂ ಪೊಕ್ಕು ಪುರಹರನ ಪ್ರತಾಪರೂಪಂ ನರಸಿಂಹಪ್ರತಿಮಾವಿಭಾಕರನುಂ ನರಲೋಕ ವೀರಭದ್ರನುಂ ಸತ್ಯನಿಳಯಂ ಶರಣರೊಡಗೂಡಿ ಶಂಕರಾರೋಹಣಮನೋತರಂಗ ಸಮುಲ್ಲಸಿತ ಸಿತಹೃತ್ಕಮಲಂ ಕಲ್ಯಾಣದೊಳಿರೆಯಿರೆ.

## ದ್ವಿತೀಯಸ್ಥಲ ಸಮಾಪ್ತ.

## ತೃತೀಯಸ್ಥಲ.

**ವೃತ್ತ**||-- ಅರಿಯದೆ ಮೋಘವಹ್ನಿಗಿದಿರಾದ ನರಂಗೆ ಹುತಾಶನಾರ್ಚಿಗಂ
ತರಗೆಲೆಯಾಗುತಿರ್ದವೆನಿಸುಂ ಸಲೆ ಶಂಕರದಾಸಿಮಯ್ಯನಂ
ಮೆರೆದ ಮಹೇಶನಂ ನಿಟಿಲ ಲೋಚನನಂ ಶಿವತತ್ವರೂಪನಂ
ಮರೆಯದೆ ಸಿಚ್ಚ ಲೋಲ್ಯೈಸುತೊಪ್ಪಿದನಾ ಜಯಸಿಂಹ ಭೂಭುಜಂ ||

### ರಗಳೆ

ಇಂತು ಜಯಸಿಂಹನೃಪನೋಲ್ಯೈಸುತಿರಲಲ್ಲಿ
ಮುಂತೆ ಶಂಕರದಾಸಿಮಯ್ಯನೊಪ್ಪುತ್ತಲ್ಲಿ
ನೆನೆದನಾ ಜಡೆಯ ಶಂಕರದೇವನಂಘ್ರಿಯುಂ
ನೆನೆವರಭಿಮತವೀವ ಕಾರುಣ್ಯವಾರ್ಧಿಯುಂ
ನೆನೆದು ಪೊರಮಟ್ಟನಾ ಶಿವಭಕ್ತರೊಡನೆ ಬರೆ
ಮನವೊಸೆದು ಜಯಸಿಂಹರಾಯನೋಲ್ಯೈಸಿ ಬರೆ
ಬಂದರಸನಂ ಶರಣ ಸಂದೋಹಮಂ ಕಳಿಪಿ
ಸಂದಣಿಸ ಪರದೈವ ಕುಲದ ಗರ್ವವನಿಳಿಪಿ
ಶಿವದಾಸಿಗಳ್ಪಿಂತೆ ಪಿಂತೆ ನಡೆತರುತಿರಲು
ಶಿವನಿತ್ತ ವಕ್ರಪಾದಂ ಮುಂದೆ ಬರುತಿರಲು

ಶೈವಾಂಬುವಾರ್ಧಿವರ್ಧನ ವಿಮಲಚಂದ್ರಮಂ
ಶೈವ ಕುಲಗಗನ ಧವಳಿಪ ದಿನಪವಿಭ್ರಮಂ
ವೃಷಭೇಂದ್ರ ಮುದ್ರಿತ ಲಲಾಟೇಕ್ಷಣಾಂಕಿತಂ
ದಶದಿಗಂತ ಪ್ರಸಿದ್ಧ ಪ್ರತಾಪಾನ್ವಿತಂ
ಹರಭಕ್ತಿ ಭೂಷಣಂ ಪರಸಮಯ ಭೀಷಣಂ
ನರಹರಿ ಪ್ರತಿಮಾ ಮದ ಪ್ರಖರ ಶೋಷಣಂ
ನಡೆತಂದನಮ್ಮಮ್ಮ ನೆರೆ ಮನದ ನಿಶ್ಚಳಂ
ನಡೆತಂದನೆಲೆಲೆ ಪರಸಮಯ ಕೋಳಾಹಳಂ
ಬರುತಂ ಬಳಲ್ದು ಪೆಂಬೇರಿ ಪೊರಗೆಸೆದಿರ್ಪ
ನರರು ಕೊಂಡಾಡುವಾ ವೈಲಾರನೊಪ್ಪಿರ್ಪ

ಮಾಳಿಗೆಯ ಕೆಲದ ಹಾಸಿನ ಮೇಲೆ ಕುಳ್ಳಿರ್ದು
ಮೈಳುಗನ ನಡೆಪುತಂ ತಾಗುತಂ ಕುಳ್ಳಿರ್ದು
ಸುಟ್ಟುರುಪದಿಂದೆನ್ನನಡಸಿದಂ ಬರ್ದುಕಿದೆಂ
ಮುಟ್ಟಬಾರದ ಮಹಿಮಸಂಪ್ರಿಯಂ ಸೋಂಕಿದೆಂ
ಎಂದಾಗಳಾ ಪ್ರತಿಮೆ ಬರ್ದುಕಿದೆನೆನುತಮಿರೆ
ನಿಂದವರು ಕರುಣಮಂ ಪಾರುತಂ ನಡುಗುತಿರೆ
ಅಂದು ಶಂಕರದಾಸಿಮಯ್ಯನೊಪ್ಪುತ್ತಮಿರೆ
ಮುಂದೆ ನಲವಿಂ ವಕ್ರಪಾದ ಕುಳ್ಳಿರುತಮಿರೆ

ಬಂದಳೋರ್ವಳ್ವನಿತೆ ದಂಡಿಗೆಯ ಪನ್ನಗದ
ಸಂಪಣಿಪ ವೀರಧೀರರ ಸತಿಯರೊತ್ತರದ
ಪೆಂಬೇರ ಪಟ್ಟಣದ ಸೊಬಗಿನಗ್ಗದ ವನಿತೆ
ಇಂಬಿನಿಂ ಮೆರೆವ ಮೈಲಾರದೇವಿ ರಾಗಿಸುತೆ
ಸಂದಣಿಪ ಹರುಷದಿಂದಂದಣಮನಿಳಿತರುತೆ
ಬಂದೊಳಗೆ ಪುಗಲಮ್ಮದಲ್ಲಿ ಪೊರಗೆಯೆ ನಿಲುತೆ
ಮುಂದೆ ಶಂಕರದಾಸಿಮಯ್ಯನಿರುತಿರೆ ಕಂಡು
ಎಂದಳಾ ಸತಿಯವರ್ಗೆ ನೀವಿದಂ ಕೈಕೊಂಡು
ಅಯ್ಯ ಪೂದಂಬುಲವನೇರಿಸಿರೆ ಮೈಲಂಗೆ
ಕಯ್ಯಾರೆ ಮಾಡಿರೇ ವರವೀವ ಮೈಲಂಗೆ
ಎನುತಲ್ಲಿ ವೀಳೆಯಮುಮಂ ಕರ್ಪುರಂಗಳಂ
ಕೊನೆಯರಳ ಮಲ್ಲಿಗೆಯ ಸಂಪಿಗೆಯ ನನೆಗಳಂ
ನೀಡಿದಳ್ ಹರವೇಷವೆಂದರಿಯದಾತಂಗೆ
ನೀಡಿದಳ್ ಹರಗೆ ಶಂಕರದಾಸಿಮಯ್ಯಂಗೆ
ಕೊಡಲೀಸಿಕೊಂಡವಂ ಶಂಕರಂಗರ್ಪಿಸುತೆ
ಮೃಡನ ಪ್ರಸಾದಮಂ ಲೀಲೆಯಿಂ ಕೈಕೊಳುತೆ
ಗಂಧವಂ ಕಕ್ಷ ವಕ್ಷಸ್ಥಳಕೆ ಪೂಸುತಂ
ಬಂಧುರ ಪ್ರಸವಮಂ ಮಕುಟದೊಳ್ಸುತ್ತುತಂ
ವೀಳೆಯಮನಲ್ಲಿ ನಲವಿಂದೆ ಕೈಕೊಳುತಮಿರೆ
ಮೈಳಯಗೆ ಕೊಡದೆ ತಾನೇ ಭೋಗಿಸುತ್ತಮಿರೆ

ಕಂಡದಂ ರಮಣಿ ಮಿಗೆ ಕೋಪಿಸುತೆ ತಾಪಿಸುತೆ
ಕೊಂಡಿರಿಂತಿದನು ಮೈಲಾರಂಗೆ ನೇಮಿಸುತೆ
ಎಲೆಯಯ್ಯ ಪೈಲಂಗೆ ಕೊಡದೆ ನೀಂ ಕೊಂಬರೇ
ಒಲವಿಂದೆ ಪೂದಂಬುಲವನಿಕ್ಕದಿರ್ಪರೇ
ಎಂದು ಮೈಲಾದೇವಿ ನಿಂದಾಗ ಸಖಿಯರುಂ
ನೊಂದು ಮನವಳಿದು ಮೈಲೆಯಗಂಜುತೆಲ್ಲರುಂ
ಸಾರೆ ಮೈಲಯ್ಯನತ್ಯಗ್ರನೆಂದೆನುತಮಿರೆ
ಮೀರಿ ಶಂಕರದಾಸಿಮಯ್ಯನಂ ನುಡಿವುತಿರೆ

ನಸುನಗುತ್ತಲಿರ್ದಾ ಭವಿಗಳಂ ನೆರೆ ನೋಡಿ
ಒಸೆದು ಕಾರುಣ್ಯದಿಂ ಪ್ರತಿಮೆಯುಂ ನೆರೆ ನೋಡಿ
ಪಿಡಿಯೊರ್ಪ ಬಾರೆಲವೊ ತಂಬುಲವನೆನುತಲ್ಲಿ
ಕೊಡಿ ಯೆನುತೆ ನಡುಗಿ ಮೈಯ್ಯಿಕ್ಕುತಂ ಬೀಳ್ದಲ್ಲಿ
ಕೆಯ್ಯೊಡ್ಡಿ ತಂಬುಲವ ಕೊಂಡು ಸವಿದಂ ನಲಿದು
ಮೆಯ್ಯೊಳಗೆ ಪೂಸಿಕೊಂಡಾನಂದದಿಂ ನಲಿದು
ನಿಂದಿರಲ್ಬಂದವರು ಬೆದರಿ ಬೆಬ್ಬಳಿವೋಗಿ
ಮುಂದುಗೆಟ್ಟರಿವುಗೆಟ್ಟತಿಭಯಾನತರಾಗಿ
ಎಡಹುತಂ ತಾಗುತಂ ನಡೆಗೊಂಡು ಪರಿತಂದು
ಕಡುಭೀತಿಯಿಂದೆ ಪುರಜನಕೆ ಪೇಳುತ್ತಂದು
ಏನೆಂದು ಪೇಳ್ವೆವಿದನೀ ಧರೆಗೆ ಪೊಸತಾಯ್ತು.
ಏನೆಂದು ನುಡಿದಪೆವು ಕಣ್ಗೆ ಕೌತುಕವಾಯ್ತು
ನಮ್ಮ ಮೈಲಾರದೇವಂಗೀಗಳಿಂತೋರ್ವ
ತಮ್ಮಡಿ ಬರುತ್ತಿರ್ದನತಿ ಗರ್ವದಿಂದೋರ್ವ
ನಿಂದು ತನ್ನಯ ಬಾಯ ತಂಬುಲವನಿಕ್ಕಿದಂ
ಕುಂದಿತ್ತು ಮೈಲುಗನ ಸಾಮರ್ಥ್ಯ ಸಂಪದಂ
ಮೈಲಾರನೆಲ್ಲರೆಂಜಲ ತಿಂಬ ತೆರನಾಯ್ತು
ಮೈಲಾರನೊಳಗೆ ದೂಷಣೆಯೆಂಬುದಿಂತಾಯ್ತು
ಇನ್ನೇಕೆ ಮೈಲಾರನೊಪ್ಪದಿಂ ಪೂಜಿಪುದು
ಇನ್ನೇಕೆ ಹಾಳಾದ ದೊಳವಿಯು ಪೂಜಿಪುದು

ಎನೆ ಕೇಳ್ದು ಪೆಂಜೇರ ಜನವೆಲ್ಲ ನಡೆತಂದು
ತವುತವುಗೆ ಚೋದ್ಯಮಂ ನೋಡಲೆಂದೈತಂದು
ಆರರೆ ಶಂಕರದಾಸಿಮಯ್ಯನೊಲವಿಂದಂದು
ಇರದೆ ಪೋಗಲ್ವೇಳ್ಕು ಮೆಂದಾಗ ಮನದಂದು
ಅಲ್ಲಿಂದೆ ಪೋಗಲೆಂದಾಗಲುದ್ಯೋಗಿಸುತೆ
ಮೆಲ್ಲನೇಳುತ್ತೆ ಹರನಂ ನೆನೆದು ಸಾಗಿಸುತೆ
ಕೊಡೆವಿಡಿದು ಬಾರೆಂದು ಕರುಣದಿಂ ಬೆಸಸುತಿರೆ
ನಡೆತರುತೆ ವಕ್ರಪಾದಂಗೆ ಬೆಸಸುತ್ತಮಿರೆ
ತನಗೆ ಬೆಸಸಿದರೆಂದು ಮೈಲಾರನೊಲ್ದೇಳ್ದು
ಮನದೊಳಗೆ ಬದ್ದಂಕಿದೆನೆನುತ್ತೆ ಸುಖಮುಂ ತಾಳ್ದು
ನಡೆದು ಶಂಕರದಾಸಿಮಯ್ಯಂಗಳೊಡನೊಡನೆ
ಕಡು ಭಕ್ತ ಮೈಲಾರ ಕೊಡೆವಿಡಿದು ಬರಲೊಡನೆ
ಲೋಕವರ್ಚಿಸುವ ಮೈಲಾರ ಕೊಡೆಯಂ ಪಿಡಿಯೆ
ಆಕಸ್ಮಿತಂ ತಾನೆನುತ್ತೆಲ್ಲರುಂ ನುಡಿಯೆ
ಆ ಪೋದನಾ ಪೋದನಕಟಕಟ ಮೈಲಾರ
ಆ ಪಿಡಿದನಾ ಕೊಡೆಯನಯ್ಯಯ್ಯೊ ಮೈಲಾರ
ಎಂದಲ್ಲಿ ಜನರೆಲ್ಲ ಬಾಯಳಿದು ಬರುತಮಿರೆ
ನೊಂದು ಮೈಗುಂದಿ ಮಿಗೆ ಮರುಗಿ ಮೊರೆಯಿಡುತಮಿರೆ
ಪರ ಸಮಯಿಗಳ್ಕುಸಿಯೆ ಪರ ದೈವವಲ್ಲಾಡೆ
ನೆರೆದ ಜನವೆಲ್ಲವದ್ಭುತದೊಳುಂ ಮುಳುಗಾಡೆ
ನಡೆತಂದನಪ್ರತಿಮನಲ್ಲಿ ಕಿರಿದಂತರಂ
ಕೊಡೆಯು ನೆಳಲೊಳಗೆ ಮೃಡಮೂರ್ತಿ ಬರುತಿರೆ ಕರಂ
ಮೈಲಾರನಂ ಬಿಡುವುದೆಮಗೆ ಶಶಿಶೇಖರಾ
ಮೈಲಾರನಂ ಬಿಡುವುದೆಮಗೆ ಕರುಣಾಕರಾ
ಎಂಬ ಕಿಂಕುರ್ವಾಣದವರುಮಂ ಮನಂಗೊಂಡು
ಬೆಂಬಳಿಯೊಳೈತರ್ಪ ಜನದ ಬರವಂ ಕಂಡು
ತಿರುಗಿ ಮೈಲಾರನಂ ನೋಡಿ ನೀನೇಂ ಬಂದೆ
ಪುರಜನಂ ಮರುಗುತಿರಲೇಕೆ ಮೈಲುಗ ಬಂದೆ
ಕೊಡು ಕೊಡೆಯನಾ ವಕ್ರಪಾದಂಗೆನುತ್ತಮಿರೆ
ಕೊಡಲಾರದಲ್ಲಿ ಮೈಲುಗ ನುಡಿದನೊಪ್ಪುತಿರೆ

ದೇವ ಈ ಕೊಡೆ ಎನಗಿರಲ್ಬೇಕು ಶಂಕರಾ
ದೇವ ಈ ಕೊಡೆಯು ನಾಂ ಕೊಡೆ ಬಿಡೆಂ ಶಂಕರಾ
ಕೊಡೆವಿಡಿದು ಪೊಡವಿಯೊಳು ರಂಜಿಸುವೆನೆಲೆ ದೇವ
ಕೊಡೆಯಿರಲ್ಭೂತಳಂ ಬೆಸಕೈವುದೆಲೆ ದೇವ
ಕಡು ಕರುಣದಿಂ ನೋಡಿ ಕೊಡೆವಿಡಿದು ನಿಲ್ಲೆಂದು
ಪೊಡವಿಗೀ ಕೊಡೆಯಿಂದೆ ಪೆಸರಕ್ಕು ನಿನಗೆಂದು
ಇಂತು ಸ್ಫೈಲಾರನಂ ಕೊಡೆವಿಡಿಸಿ ನೋಡುತಂ
ಅಂತಕಾಂತಕತನುಜನತಿ ಮುದದೊಳೊಪ್ಪುತಂ

ತಿರುಗಿ ಕಿರಿದಂತರಂ ನಡೆತರುತ್ತಿರ್ಪಲ್ಲಿ
ಉಂವಣಿಸಿ ಭೈರವಂ ಸಂಭ್ರಮದೊಳಿರಲಲ್ಲಿ
ಪಿಡಿದ ಡಮರುಗದ ಕಡು ಹೊಯ್ಲು ಸಂಭ್ರಮಗಳಿಂ
ನಡೆದು ಕೂಳಂ ಬಂದು ತಿರುಗುತಿರ್ಪವರ್ಗಳಿಂ
ತಲೆಗೆದರಿ ಯಲಗಿಸಿಂ ತಿವಿದುಕೊಳುತಿರ್ಪರಿಂ
ನೆಲದಿ ನಿಂದಿರ್ದು ಮಾಮುಸಕದಿಂ ಕುಣಿವರಿಂ
ಎಸೆದಿರ್ದ ಭೈರವನ ನೆರವಿಯುಂ ನೆರೆ ಕಂಡು
ಅಸದಳದ ಶಿವಭಾರವಲ್ಲಿರ್ಪುದಂ ಕಂಡು
ಶಿವಭಾರವೇಕೆ ತ್ರಿಶೂಲ ತಾನಿವರ್ಗೇಕೆ
ಶಿವನ ಭಕ್ತರ್ಗಲ್ಲದನ್ಯರ್ಗೆ ತಾನೇಕೆ
ಎಂಬ ನುಡಿಯಿಂ ಮುನ್ನ ಜನದ ಎದೆ ಜಗ್ಗೆನಲು
ಇಂಬರಿದು ಭೈರವಂ ಪರಿತಂದು ಭೋಂಕೆನಲು
ಶಿವಭಾರಮುಂ ಪೊಳ್ತು ಪದತಳಕ್ಕೆರಗುತಿರೆ
ಶಿವಮೂರ್ತಿ ನೀನೆನಗೆ ಕರುಣಿಪುದೆನುತ್ತಮಿರೆ
ಕರುಣದಿಂ ಭೈರವಂಗಿತ್ತು ಶಿವಭಾರಮುಂ
ಧರೆ ಪೊಗಳುತಿರೆ ಕೊಟ್ಟ ಕಿಂಕರಾಕಾರಮುಂ

ತಿರುಗಿದಂ ನವಿಲೆಯುತ್ತಲು ಶಂಕರಧ್ಯಾನಿ
ಬರುತಿರ್ದನಮ್ಮಮ್ಮನತುಳ ಬಲ ಕಡುಮಾನಿ
ಶಿವನಲ್ಲಿ ನೊಸಲಕಣ್ಣಂ ಪಡೆದ ಸಂಪದಂ
ತವನಿಧಿಯುನೊಳಕೊಂಡು ಕೊಟ್ಟ ಮಹಿಮಾಸ್ಪದಂ

ಉಗ್ರ ನರಸಿಂಹನಂ ಭಂಗಿಸಿದ ಭೀಕರಂ
ಉಗ್ರಲೋಚನದ ಭಾಳಸ್ಥಳ ಭಯಂಕರಂ
ಪೆಂಬೇರ ವ್ಯೈಲನಂ ಕೊಡೆವಿಡಿಸಿದುನ್ನತಂ
ಬೆಂಬಿಡದೆ ಭೈರವನನುದ್ಧರಿಸಿದುನ್ನತಂ
ಪರದೈವಸಂತಾನ ಘನಪವನವಿಸ್ತಾರಂ
ಪರಸಮಯ ತಿಮಿರ ಕುಲಕಮನೀಯ ಭಾಸ್ಕರಂ
ಅರರೆ ಷಡ್ದರ್ಶನದ ಗರ್ವಸರ್ವಸ್ವಹಂ
ನರರ ದುರಿತೋಷ್ಣಕಾನನ ದಾವದರ್ಪಹಂ
ಆಹ ನಂದಿಯ ಮೊಗವಡದ ಮಹಿಮನೈತರಲು
ಸಾಹಸಾಭರಣನೋಲ್ದುರುತ್ತ ನಡೆತರಲು

ಕಂಡಿದಿರ್ಗೊಂಡರಾ ನವಿಲೆಯ ಮಹಾಗಣಂ
ಚಂಡ ಕರದಂಡಧರ ಹರನ ನಚ್ಚಿನ ಗಣಂ
ಸಿಡಿಲನಿದಿರ್ಗೊಳ್ವ ಜೀಮೂತ ಸಂಕುಲದಂತೆ
ಕಡುಗಾಯ್ದ ಬಿಸಿಗಣ್ಣನಿದಿರ್ಗೊಳ್ವ ನೊಸಲಂತೆ
ದಿನಕರನನಿದಿರ್ಗೊಳ್ವ ಪೂರ್ವಾದ್ರಿಯಂದದಿಂ
ಅನುಪಮನನಿದಿರ್ಗೊಳ್ಳುತೆಲ್ಲರಾನಂದದಿಂ
ಇದಿರ್ಗೊಂಡು ಬಂದು ಶಂಕರದೇವರಂ ಕಂಡು
ಸದಮಲನನೀಶ್ವರನನಪ್ರತಿಮನಂ ಕಂಡು
ನಳನಳಿಪ ಕೆಂಜೆಡೆಯ ಕಮನೀಯನಂ ಕಂಡು
ತೊಳತೊಳಪ ಸುಲಿಪಲ್ಲ ಸತ್ಯಮಯನಂ ಕಂಡು
ಪರಮಗುರುವಂ ಶರಣಕಲ್ಪತರುವಂ ಕಂಡು
ವರಬಂಧುವಂ ಭಕ್ತಸುಖಸಿಂಧುವಂ ಕಂಡು
ಜಡೆಯಶಂಕರದೇವರಂ ಹರುಷದಿಂ ಕಂಡು
ಬಿಗಿದಪ್ಪಿ ತೆಗೆದಪ್ಪಿ ಕಟ್ಟಿಳ್ಕರಿಂದಪ್ಪಿ
ಅಗಿವತಿ ಸ್ನೇಹರಸದಿಂದಗಲದಂತಪ್ಪಿ
ಮುಂಡಾಡಿ ಕೊಂಡಾಡಿ ತಳ್ಕೈಸಿ ಕುಣಿದಾಡಿ
ಕೊಂಡಾಡಿ ಕೊಂಡಾಡಿ ಭಕ್ತಿಯಿಂ ಮಣಿದಾಡಿ
ಪೋದ ಬಂದಾದ ವೃತ್ತಾಂತಮಂ ಬಿನ್ನೈಸಿ
ಸಾದರಂ ಮಿಗೆ ಲಲ್ಲೆಗರೆದು ನೆರೆ ಬೋಳೈಸಿ

ಗುಂಜಾದಿ ನವವಿಪಕ್ರಿಯೆಗಳಂ ಪೇಳ್ದೈಸಿ
ರಂಜಿಸಲ್ ಶಂಕರಂಗಿತ್ತಿತ್ತು ಹಾರೈಸಿ
ಸತ್ಯಪ್ರಸಾದವುಂ ಮನವಾರೆ ಕೈಕೊಂಡು
ನಿತ್ಯನಾನಂದದಿಂ ಶಂಭುವಂ ಬೀಳ್ಕೊಂಡು
ನಡೆತಂದು ನಿಜನಿಳಯುವುಂ ಪೊಕ್ಕು ರಾಗದಿಂ
ಜಡೆಯ ಶಂಕರನ ಚರಣಧ್ಯಾನ ಯೋಗದಿಂ
ಇರುತಮಿರಲಂದಾಗ ವಕ್ರಪಾದಂ ಪೋಗಿ

ಪುರದೊಳಗೆ ಧಾನ್ಯಕ್ಕೆ ಪೋಗುತಮಿರೆ ಸಿರಿದಾಗಿ
ತಂದ ಧಾನ್ಯಂ ಪೆರ್ಚೆ ರಾಶಿಯಾಗಿರೆ ಕಂಡು
ಅಂದು ಶಂಕರ ದಾಸಿಮಯ್ಯಂ ಮನಂಗೊಂಡು
ಗಣಪರ್ವಮುಂ ಮಾಡಲೆಂದು ಮನದೊಳ್ಬಗೆದು
ತ್ರಿಣಯನುಂ ವಕ್ರಪಾದನನಕ್ಕರಿಂ ಕರೆದು
ಸುರಿದಿರ್ದ ಧಾನ್ಯಮುಂ ಕೊಟ್ಟಣವ ಹಾಯ್ಕಿಸೆನೆ
ಇರದೆ ಶಂಕರಪುರದ ಮನೆಗಳೊಳ್ ಸುರಿವುದೆನೆ
ಕರವೊಳ್ಳಿತೆಂದಲ್ಲಿ ವಕ್ರಪಾದಂ ಬಂದು
ಭರದೊಳ್ಳೈತಂದಲ್ಲಿ ಧಾನ್ಯಂಗಳಂ ತಂದು
ಸುರಿಯಲ್ಕಿದೇನೆನಲು ಕೊಟ್ಟಣವ ಮಿದಿವುದೆನೆ
ಅರಿದಿದಿಂದೆಲೆ ಮಾರಿಕವ್ವೆ ತಾಂ ಮಿದಿವಳೆನೆ

ಕೇಳ್ದಲ್ಲಿ ವಕ್ರಪಾದಂ ತಿರುಗಿ ಪರಿತಂದು
ಆಳ್ದ ಅವಧಾರೆಂದು ಮೆಯ್ಯಿಕ್ಕುತಂ ನಿಂದು
ಒಂದು ಮನೆಯೊಳಗೆ ಬತ್ತವನೆಯ್ದಿ ಸುರಿವಲ್ಲಿ
ಎಂದಳೊಕ್ಕಲಿತಿ ಯೋರ್ವಳ್ನಿಂದು ತಾವಲ್ಲಿ
ಮಿದಿಯಲಾರೆಂ ಮಾರಿಕವ್ವೆ ಮಿದಿಯಲ್ಕೆಂದು
ಒದರಿ ನುಡಿಯಲ್ಕೆ ಆ ಬತ್ತವಂ ತಂದಿಂದು
ಎಂದೊಡಾಹಾ ನಮಗೆ ಬುದ್ಧಿಗೊಟ್ಟಳ್ಮಗನೆ
ತಂದು ಧಾನ್ಯವನೆಲ್ಲವಂ ಬೇಗದಿಂ ಮಗನೆ
ಊರ ಪೊರಗಣ ಮಾರಿ ಮಸಣಿಗಳ ಗುಡಿಗಳಿಗೆ
ಆರೈದು ಧಾನ್ಯಮುಂ ರಾಸಿ ಮಾಡೆಂದು ಮಿಗೆ

ಒಳ್ಳಿತಾದುದು ವಕ್ರವಾದ ಪೋಗೆಂದೆನಲು
ಒಳ್ಳಿತೆನೆ ಧಾನ್ಯಮಂ ರಾಶಿಮಾಡೆಂದೆನಲು

ನಡೆದು ಹೆಡಿಗೆಯ ಧಾನ್ಯಮಂ ಬಂಡಿಯಂ ನೋಡೆ
ಎಡೆವಿಡದೆ ಪುರಜನಂ ಹಾದಿಗೊಂಡುದು ನೋಡೆ
ಮಾರಿ ಮಸಣಿಗಳು ಮಾಳಿಗೆಯ ಮುಂದಿರೆ ಕಂಡು
ಧಾರುಣಿಗೆ ರಂಜಿಸುವ ಬೆಟ್ಟದಂತಿರೆ ಕಂಡು
ನಡೆತಂದು ಮಾರಿಮಸಣಿಯರೇಳ್ದು ಭರದಿಂದೆ
ಕಡು ಭೀತಿ ಎಡೆಗೊಂಡು ಬಂದು ಭರವಸದಿಂದೆ
ಅಕ್ಕಿ ಯಾಗದೊಡೆ ಪೊಡೆದುರುಪಿ ಕಳೆವಂ ನಾಳೆ
ಮುಕ್ಕಣ್ಣನವತಾರವರಿದರಿದು ನೀಂ ಕೇಳೆ
ನರಸಿಂಹನಂ ನೊಸಲಕಣ್ಣಿಂದೆ ಸೀಳಿದಂ
ಮರುಳು ಶಂಕರದಾಸ ಧರೆಗೆಲ್ಲ ಬಲ್ಲಿದಂ
ಎಂದೀರ್ವರುಂ ಮರುಳ ತಂಡಂಗಳಂ ಕರೆದು
ಬಂದು ಪುರದೊನಕೆ ಮೊರಗಳನೆಲ್ಲವಂ ತಂದು
ಮಾರಿಮಸಣಿಗಳೊನಕೆ ಪಿಡಿದು ಭೂತಂ ಸಹಿತೆ
ಮಾರಾರಿ ಯಣುಗನಂ ಪಾಡಿಸುತೆ ಕೇರಿಸುತೆ
ಮಿದಿದರಾ ರಾತ್ರಿಯೊಳ್ದರೆ ಮೊಳಗುವಂದದಿಂ
ಮಿದಿದರೆಲ್ಲಾ ಭೂತಮುಂ ಕೂಡಿ ಚಂದದಿಂ
ಅಕ್ಕಿಯಂ ನುಚ್ಚು ತೌಡಂ ಕೇರುತಂ ಬೇರೆ
ಲೆಕ್ಕದಿಂ ರಾಶಿ ಮಾಡುತ್ತೆ ನಲವಿಂ ಬೇರೆ
ಇರಿಸೆ ಶಂಕರದಾಸಿಮಯ್ಯನತ್ತಲ್ನೋಡಿ

ತರಣಿಯುದಯಿಸೆ ಕಿರಣ ಪರ್ವತಾಗ್ರದಿ ಮೂಡಿ
ನೊಸಲಕಣ್ಣಾತನಾನಂದದಿಂ ಬರುತಮಿರೆ
ಅಸಮಪ್ರತಾಪನಿಧಿ ಕರ.ಣದಿಂ ಬರುತಮಿರೆ
ಮುಂದೊಪ್ಪಿ ಮಾರಿಮಸಣಿಗಳಿರ್ದರಂತಲ್ಲಿ
ಒಂದೊಂದು ಮರದಲ್ಲಿ ಕೇರುತಂ ಇರಲಲ್ಲಿ
ನರೆಮಂಡೆ ಬಿಚ್ಚೋಲೆ ನಸುಮಾಸಿದುಡಿಗೆಯಿಂ
ತೆರೆಗೊಂಡ ಮೆಯ್ಯ ನುಣ್ಪಾರಿಸಿನದ ಗಾಡಿಯಿಂ
ಮೊಗದೊಳುಂ ದಾಡೆಯೊಳ್ಪತ್ತಿರ್ದ ತೌಡಿನಿಂ
ಸೊಗಯಿಸಿರೆ ತೊತ್ತು ನಡೆವಂತೆ ಮಿಗೆ ಚಲ್ವಿನಿಂ

ಇರ್ದರ್ ಶಂಕರದಾಸಿಮಯ್ಯನಂ ನಡೆ ನೋಡಿ
ಸಾರ್ದರ್ ಭಯಭಕ್ತಿಯಿಂ ಸೈಗೆಡೆದು ಕೊಂಡಾಡಿ
ನಿಂದಿರ್ದರ್ ಹೆರೆಸಾರ್ದರ್ ಕೈಮುಗಿದು ಪೊಡೆವಟ್ಟು
ಇಂದುಧರ ಬೆಸನೆಲ್ಲವಾದುದಂ ಮುಂದಿಟ್ಟು
ನೋಡು ದೇವಾ ಅಕ್ಕಿ ಇವು ನುಚ್ಚು ತೌಡೆಂದು
ಕೂಡೆ ತೋರುತ್ತಮಿರೆ ಲೇಸು ಮಾಡಿದಿರೆಂದು
ಕರುಣಿಸುತ್ತಕ್ಕಿಯಂ ಶಿವನಿಳಯದೊಳಗಿರಿಸಿ
ಬರೆ ನುಚ್ಚನಾ ಮಾರಿ ಮಸಣಿಯರ್ಗರ್ಪಿಸಿ
ಒಂದು ಗಣಪರ್ವವನಗುರ್ವಿನಿಂ ಮಾಡಿದಂ
ನಿಂದು ಶರಣಾವಳಿಗೆ ತುಷ್ಟಿಯಂ ಮಾಡಿದಂ
ಚಾರುತರ ಗಿರಿಗಳೊಳ್ಮೇರುಗಿರಿಯಪ್ಪಂತೆ
ಸುರುಚಿರ ನವಗ್ರಹದ ನಡುವೆ ರವಿ ಇರ್ಪಂತೆ
ನಡುವೆ ಶಂಕರದಾಸಿಮಯ್ಯನೊಪ್ಪುತ್ತಮಿರೆ
ಮೃಡಮೂರ್ತಿಯಾಗಿ ಸಲೆ ನೆಲೆ ಭುವನಕೊಪ್ಪುತಿರೆ
ಇಂತು ಶರಣರ ನಡುವೆಯನವರತಲೊಪ್ಪುತಂ
ಕಂತುಮದಮರ್ದನನ ಭಾವಮುಮನಪ್ಪುತಂ

ಇರಲಲ್ಲಿ ಶಿವದಾಸಿಗಳ್ಗೆ ಗರ್ಭಂ ಮೂಡೆ
ಪರಮ ಶೈವ ಜ್ಞಾನದುರುಳ ಬಲಿಯಿತು ಕೂಡೆ
ಪೊರಗೆ ಲಾವಣ್ಯರಸವಂಗದೊಳಗೋಲಾಡೆ
ಮೆರೆವ ಗರ್ಭದ ಪಕ್ವ ಸೂಚನೆ ಕರಂ ಮೂಡೆ
ನವಮಾಸಮಾದುದಾ ಶಿವದಾಸಿಗಳ್ಗಲ್ಲಿ
ಅವಯವಂಗಳ್ಸಡಿಲಿದುಚ್ಚವಪನುಗಲಲ್ಲಿ
ಪುಟ್ಟಿದಂ ಕಂದಂ ಶಿವಜ್ಞಾನದಂದಮೆನೆ
ಮೆಟ್ಟಿದಂ ಮಾಯೆಯುಂ ತನಗೆ ನಿತ್ಯತ್ವಮೆನೆ
ಆಗಳಾ ಕಂದನಂ ಕಂಡು ಮಿಗೆ ನಸುನಗುತೆ
ರಾಗದಿಂ ಜಡೆಯ ಶಂಕರದೇವರಂ ಪೊಗುತೆ
ಕಂದನಂ ನೆರೆ ನೋಡಿ ಜಾತಕರ್ಮವ ಮಾಡಿ
ಸಂದ ಸದ್ಯೋಜಾತನೆಂಬ ಪೆಸರಂ ಮಾಡಿ
ಜಡೆಯ ಶಂಕರದೇವರ ಪ್ರಸಾದವನಿಕ್ಕಿ

ಒಡನೆ ಶಿವಭಕ್ತಿಯುಂ ಬಾಯ್ಪೆಣ್ಣೆಯುಮನಿಕ್ಕೆ
ಸಲಹುತಿರೆ ನೆರೆದ ನಾಲ್ಕೈದು ಸಂವತ್ಸರಂ

ನೆಲಿಸಲ್ಕೆ ಗರ್ಭಾಷ್ಟಮಂ ದ್ವಿಜಾಗಮಕರಂ
ಕಂಡು ಶಂಕರದಾಸಿಮಯ್ಯನತಿ ಮಹಿಮೆಯಿಂ
ಖಂಡೆಂದುಮೌಲಿಯಲ್ಲಿಗೆ ಬಂದ ನೊಲ್ಮೆಯಿಂ
ಸಕಲ ಮಾಹೇಶ್ವರರ ಪ್ರಕರಮಂ ಕರೆಯಿಸುತೆ
ಅಕಳಂಕ ಚಿತ್ತನಾನಂದದಿಂ ಕರೆಯಿಸುತೆ
ಜಡೆಯು ಶಂಕರನ ಸನ್ನಿಧಿಯಲ್ಲಿ ಹರುಷದಿಂ
ಮೃಡನ ಕಾರುಣ್ಯಮಂ ಪಡೆದು ಅನುರಾಗದಿಂ
ರಂಗಮಂಟಪವೆ ಯುಪನಯನ ಮಂಟಪವಾಗೆ
ಜಂಗಮಪ್ರಕರವೇ ದ್ವಿಜಸಮಿತಿಗೆಣೆಯಾಗೆ
ಉಪನಯನವಾಯ್ತು ಸದ್ಯೋಜಾತ ದೇವಂಗೆ
ಉಪದೇಶವಾಯ್ತು ತಂದೆಯು ಕೈಯ್ಯೊಳಾತಂಗೆ
ಅಂತಾಗ ಪುತ್ರನಂ ಶಿವಭಕ್ತನಂ ಮಾಡಿ
ಸಂತತಂ ಗಣತತಿಯನಾನಂದದಿಂ ನೋಡಿ
ಮಾರಿಮುಸಣಿಗಳಿಂದೆ ಕೊಟ್ಟಣಂ ಗುಟ್ಟಿಸುತೆ
ಮಾರಾರಿ ಮೆಚ್ಚೆ ಗಣ ಪರ್ವಮಂ ಮಾಡಿಸುತೆ
ಬಂದ ಶರಣರ್ಗೆ ಪುತ್ರನನೊಪ್ಪಿಸಿಯೆ ಕೊಟ್ಟು
ಇಂದು ಶೇಖರನ ಶ್ರೀಪದಕೆ ನಂಬುಗೆಗೊಟ್ಟು
ಜಡೆಯು ಶಂಕರನ ಅನುದಿನವರ್ಚಿಸುವುದೆಂದು
ಮೃಡನ ಶರಣರ್ಗೆ ಮಿಗೆ ಬೆಸಕೆಯ್ವುದಿನ್ನೆಂದು
ಅಂದು ಸದ್ಯೋಜಾತದೇವಂಗೆ ತಿಳಿಪುತಂ
ಬಂದ ಗಣ ಸಂಕುಲಕೆ ಬಿನ್ನಪವ ಮಾಡುತಂ

ನರಲೋಕದೊಳಗಿರವು ಸಾಲ್ಗಿನ್ನು ಕರುಣಿಪುದು
ಹರನೊಳಗೆ ಪುಗುವುದಕನುಜ್ಞೆಯಂ ಬೆಸಸುವುದು
ಎಂದಲ್ಲಿ ಜಂಗಮದನುಜ್ಞೆಯಂ ಕೈಕೊಂಡು
ಬಂದನಾನಂದದಿಂ ಪುಳಕಮಂ ಕೈಕೊಂಡು
ನಡೆತಂದು ಜಡೆಯು ಶಂಕರದೇವರಂ ಕಂಡು
ಮೃಡನೊಳಗೆ ಪುಗುತೆ ಕಡು ದೃಢವಂ ಮನಂಗೊಂಡು

ದೇವ ಶಂಕರ ಚಂದ್ರಧರ ಕೃಪಾವಾರ್ಧಿಯೇ
ದೇವ ಗಂಗಾತರಂಗಾವೃತ ಕಪರ್ದಿಯೇ
ದೇವ ಸಂಸಾರವಾರಾಶಿ ವಡಬಾನಲಾ
ದೇವ ಮಾಯಾಬೃಹದರಣ್ಯ ದಾವಾನಲಾ
ದೇವ ಹರಿಯುಜರರಿಯದಾದ್ಯಂತ ರಹಿತನೇ
ದೇವ ಪೂಜಿಸುವ ಸದ್ಭಕ್ತ ಸಂಪನ್ನನೇ
ದೇವ ಎಡೆಗುಡುವುದೆನಗೆಲೆ ಜಡೆಯ ಶಂಕರಾ
ಭಕ್ತರಂ ಗರ್ಭದೊಳಗಿರಿಸೆಲೆ ಕೃಪಾಕರಾ
ಭಕ್ತರಂ ಕರುಣದಿಂ ರಕ್ಷಿಸು ದಯಾಪರಾ

ಎನುತೆ ಪುಳಕಿಸುತೆ ಕಂಪಿಸುತೆ ನಸು ಬೆವರುತ್ತೆ
ತನಿನೇಹ ಪುಣ್ಮುತ್ತೆ ಕೊನೆದು ತಲ್ಲಣಿಸುತ್ತೆ
ತೆಗೆ ಪಂಚವಕ್ತ್ರವನೆನುತ್ತೆ ಹತ್ತಿರೆ ಸಾರೆ
ಸೊಗಯಿಸುವ ಶಂಕರಂ ತೆರಹುಗುಡೆ ಮನವಾರೆ
ಬೀಜದೊಳಗಂಕುರಂ ಪುಗುತಿರ್ಪ ಮಾಳ್ಕೆಯಿಂ
ತೇಜಮಂ ಕಾಂತಿ ಬಗೆದೊಳಪುಗುವ ಮಾಳ್ಕೆಯಿಂ
ಬಿಟ್ಟ ಹಮ್ಮಂ ಜೀವನುಂ ಪರಮನಪ್ಪಂತೆ
ನೆಟ್ಟನೆ ಜ್ಯೋತಿ ಪರಮ ಜ್ಯೋತಿಯಪ್ಪಂತೆ
ಕೊಡನುದಕವಾ ಮಹಾಜಲದೊಳ್ಬೆರಿಸುವಂತೆ
ಜಡೆಯ ಶಂಕರದೇವನೋಳ್ಪೊಕ್ಕನೋಲ್ದಂತೆ
ಆಗಳೆರಗಿದವು ಪೂಮಳೆ ಜಗಂ ಮಿಗೆ ಪೊಗಳೆ
ರಾಗದಿಂ ದುಂದುಭಿಧ್ವನಿ ಗಗನದೋಳ್ನೆಗಳೆ
ನೆಗೆದುದು ವಿಮಾನವಾಕಾಶದೋಳ್ಬೆಳಗುತಂ
ಬಗೆ ಮಿಗಲ್ಕೈಲಾಸದತ್ತತ್ತ ಪೋಗುತಂ

ಬಂದು ರಜತಾದ್ರಿಯಂ ಪೊಕ್ಕು ಶಿವನಂ ಕಂಡು
ನಿಂದು ಮೆಯ್ಯಿಕ್ಕಿದರ್ ನಿಷ್ಠೆಯಂ ಕೈಕೊಂಡು
ಇರ್ದ ಶಂಕರದಾಸಿಮಯ್ಯನಂ ನೆರೆ ನೋಡಿ
ಸಾರ್ದು ಪುಳಕಂಗಳಿಂ ತೆಗೆದಪ್ಪಿ ಕೈಗೂಡಿ
ಕೇಳು ನಂದೀಶ ಇಂತಪ್ಪ ಭೀಕರರುಂಟೆ
ಭಾಳಲೋಚನವನೆಮ್ಮಿಂದ ಪಡೆದವರುಂಟೆ

ಹರಿಯಜ ಪ್ರತಿಮೆಗಳ ನುರುಪಿ ಕಳೆದವರುಂಟೆ
ಧರೆಯೊಳೆನ್ನಾಜ್ಞೆಯಂ ಕೊಂಡು ತೊನೆದವರುಂಟೆ
ಮಾರಿಯಿಂ ಕೊಟ್ಟಣಂಗುಟ್ಟಿಸಿದರಿಂತುಂಟೆ
ವೀರ ಮೈಲಾರನಿಂ ಕೊಡೆವಿಡಿಸಿದವರುಂಟೆ
ಭಾಪು ಶಂಕರದಾಸ ದೇವ ಶಂಕರದಾಸ
ಭಾಪು ಮಝು ಭಾಪೆನ್ನ ವೀರ ಶಂಕರದಾಸ
ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಇಂದುಮುಖಿ ಪಾರ್ವತಿಗೆ ಬೆಸಸಿ ಕೊಂಡಾಡುತಂ
ಹರುಷದಿಂದಂ ನೋಡಿ ಸಾರೂಪ್ಯ ಪದವಿತ್ತು
ಕರುಣದಿಂದಂ ತಂದು ನಿತ್ಯ ತೃಪ್ತಿಯನಿತ್ತು
ಭಾವಜಶರೀರ ವನದಾವ ಮುಖನೊಪ್ಪಿದಂ
ದೇವಪರಿವೃತ ದಕ್ಷ ಯಜ್ಞಹರನೊಪ್ಪಿದಂ
ನಿರುಪಾಧಿಕಾನಂದ ಕಾಂತಿಯಿಂದೊಪ್ಪಿದಂ
ಪರಮ ಶುಭಕರ ಶಾಂತಿ ವರದನಿಂತೊಪ್ಪಿದಂ
ಬೊಬ್ಬಿಡುವ ಸುರರ ತಲೆಗಳ ಭೀಮನೊಪ್ಪಿದಂ
ಅಬ್ಬರಿಸುವಜ ಕಪಾಲದ ಭರ್ಗನೊಪ್ಪಿದಂ
ಅಮೃತಮಥನೋದ್ಭೂತ ಗರಳಧರನೊಪ್ಪಿದಂ
ಅಮರಕುಲಮುಕುಟಮಣಿಖಚಿತಪದನೊಪ್ಪಿದಂ
ಸುರಚಿರ ಬ್ರಹ್ಮಾಂಡ ಭರಿತ ಶಿವ ನೊಪ್ಪಿದಂ
ಗಿರಿಜೆಯಪ್ಪಿನ ಪುಳಕ ಭರಿತಾಂಗನೊಪ್ಪಿದಂ
ಅಮಮ ಭಕ್ತರ ಪೆತ್ತ ತಂದೆ ಇಂತೊಪ್ಪಿದಂ
ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

**ವೃತ್ತ**:- ಮುದದಿಂ ಶಂಕರದಾಸಿಮಯ್ಯ ವಿಭುವಿಂ ಗಾಶ್ಚರ್ಯದಿಂದಿತ್ತು ಭಾ।
ಳದ ಕಣ್ಣಂ ಜಗದೊಳ್ಪ್ರತಾಪ ಶಿವಭಕ್ತಿಜ್ಞಾನ ವೈರಾಗ್ಯಸಂ॥
ಪದದಿಂ ಶೌರ್ಯದೊಳಾವಗಂ ಮೆರೆದ ಗೌರೀವಲ್ಲಭಂ ಭಕ್ತಿ ಸಂ।
ಪದಮಂ ಕೂರ್ತೆಮಗೀಗೆ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ॥

**ಸಮಾಪ್ತ.**

# ಆದಯ್ಯನ ರಗಳೆ.

**ಕಂದ**— ಆದಯ್ಯನನೂರ್ವಿಗೆ ಗುರು।
ಮಾದಯ್ಯನನರುಹಕುಂಭಿಕುಂಭಸ್ಥಳನಿ।
ಭೇರ್ದ್ಯೈರಯ್ಯನ ನೆರೆ ಮೆರೆದಂ।
ಮೇದಿನಿಯೊಳಗೆಮ್ಮ ಹಂಪೆಯ ವಿರೂಪಾಕ್ಷಂ॥

## ಮಂದಾನಿಲ ರಗಳೆ.

ಶ್ರೀಗೌರೀಪತಿಯೊಡ್ಡೋಲಗದೊಳು
ರಾಗಂ ಮಿಗಿಲಿರೆ ಗಣತತಿ ಕುಲದೊಳು
ಅಲ್ಲಿಯನಾದಿ ಯೆನಿಪ್ಪ ಗಣೇಶಂ
ಸಲ್ಲೀಲೆಯೊಳಿರ್ಪಲ್ಲಿ ವಿಳಾಸಂ
ಮಿಗೆ ಬಂದಳು ಸುರಕನ್ನೆಯದೋರ್ವಳು
ಸೊಗಯಿಪ ರೂಪಿಂದೊಪ್ಪುವಳೋರ್ವಳು
ಬರೆ ಕಂಡಾ ಗಣನಾಥಂ ಸೋಲ್ತಿರೆ
ಸುರಕಾಮಿನಿಯುಂ ಮೋಹದೊಳೆಳಸಿರೆ
ಹರನವರೀರ್ವರ ನೀಕ್ಷಿಸಿ ನಗುತಂ
ಕರೆದಿಂತೆಂದಂ ಕೃಪೆಯೊಳ್ಮಿಗುತಂ
ನೀವಿರ್ಬರುಮಾ ಧರೆಯೊಳು ಜನಿಸೀ
ಕಾಮನನೇಳಿಪ ಸುಖಮಂ ಧರಿಸೀ
ಬರ್ಪುದೆನಲ್ಬಿನ್ನೈಸಿದನೊಲವಿಂ
ಸರ್ಪಾಭರಣಗೆ ನಗುತವೆ ನಲವಿಂ
ದೇವಾ ಬಳಿಕಿಲ್ಲಿಗೆ ಬರಲುಂಟೇ
ದೇವಾ ಚರಣಮನೀಕ್ಷಿಪುದುಂಟೇ
ಕಾಮಂ ಕ್ರೋಧಂ ಪಿರಿದಾಧರೆಯೊಳು
ವ್ಯಾಮೋಹಂ ಪಿರಿದವನೀತಳದೊಳು

ವಂಚನೆಯುಂ ಡಂಬುಂ ಪುಸಿಯುವರೊಳು
ಸಂಚಿತ ಪಾಪಂಗಳುಮುಂಟವರೊಳು
ಎಂತಂತಿರ್ಪನದಿನ್ನೇನಪ್ಪೆಂ
ಕಂತುಹರಾ ಬಳಿಕೆಂದಾಂ ಒಪ್ಪೆಂ

ಎನೆ ನಗುತೀಶ ಗಣೇಶನನೀಕ್ಷಿಸಿ
ನಿನಗಂಜಲದೇಕಾನೇ ರಕ್ಷಿಸಿ
ನಡೆಯಿಸುವೆಂ ಕಾರಣ ವುಂಟದರೊಳು
ಕಡು ಪೆರ್ಚಿರ್ದಾರ್ ಸವಣರ್ಜಗದೊಳು
ಅವರಂ ಶಿಕ್ಷಿಸಿ ಧರೆಯೊಳ್ಮೆರೆವುತ
ಆವನಿಗೆ ಕೌತುಕ ರಸವಂ ಕರೆವುತ
ಬಳಿಕೆಮ್ಮಲ್ಲಿಗೆ ಸುಖದಿಂ ಬರ್ಪ್ಪುದು
ಪಳಿಯಾಂತಿಲ್ಲಿ ಗಣೇಶ್ವರ ನಪ್ಪುದು
ಎನೆ ಸಂತಸದಿಂದುಬ್ಬುತೆ ಕೊಬ್ಬುತೆ
ತನು ತೀವಿದ ಪುಳಕಂಗಳ ನಾನುತೆ
ಹರನಂ ಬೀಳ್ಕೊಂಡೊಲವಿಂ ಬಂದಂ
ನರಜನ್ಮಕ್ಕೆಳಸುತೆ ವೈಸಂದಂ

ಬಂದುತ್ತರ ಭಾಗದ ಶಿವಪುರದೊಳು
ಇಂದುಧರನ ಕರುಣಂ ಮಿಗೆ ಭರದೊಳು
ಶಿವಭಕ್ತನ ಸತಿಯುದರದೊಳಿರುತಿರೆ
ಶಿವಭಕ್ತೆಗೆ ಗರ್ಭಂ ಮೂಡುತ್ತಿರೆ
ನಡೆ ಮೆಲ್ಲ ಮೆಲ್ಲನೇ ಜಡನಾಗಿರೆ
ತೊಡೆ ಥಾಳದ ಮೇಳದ ಸುಖಿಯಾಗಿರೆ
ತ್ರಿವಳಿಗಳವಿರಳನಾಗುತೆ ಹಾರಲು
ನವನಾಭಿಯ ಗುಣ್ಪೊಳಗಂ ತೋರಲು
ನಡು ಸೊಂಗುತೆ ಕೀಳ್ಪೊಡೆ ವಳವೇರಲು
ಸಿಡು ಬಾಸೆಗೆ ನಯವೇರುತೆ ಬೀರಲು
ಪೀನ ಕುಚಂಗಳ ತುದಿ ಕಾಗಿಡುತಿರೆ
ನಾನಾ ರುಚಿ ಕಕ್ಷನುನೊಳಕೊಳುತಿರೆ
ಕಂಬುಗ್ರೀವಂ ತೊಳತೊಳಗುತ್ತಿರೆ
ಇಂಬಿಂ ಮುಖವಳಯಂ ಬೆಳಗುತ್ತಿರೆ

ಅಲರ್ಗಣ್ಣವಲಯುವುಂ ಸಳಿವುತ್ತಿರೆ
ನಲವಿಂ ಕುಂತಳ ವಗ್ಗಳಿಸುತ್ತಿರೆ
ನವವಾಸಂ ಶಿವಭಕ್ತಗೆ ತೋರಲು
ನವಕಾಂತಿಗಳಾ ಮೆಯ್ಯೊಳ್ಬೀರಲು
ಶಿವನಣುಗಂ ಪೊರಮಡಲನುವಾದಂ
ಅವನಿಯನೀಕ್ಷಿಸಲುರೆ ಕಣ್ದೆರೆದಂ
ಸರ್ವಾಂಗಲ್ಸಡಿಲಲ್ಸಡಿಲುತ್ತಂ
ಸರ್ವೇಶನನೊಳಗಳವಡಿಸುತ್ತಂ
ಕ್ಷೀರಾಂಬುಧಿಯಿಂ ಶಶಿಯೊಗೆವಂದದಿ
ಮೇರುವಿನಿಂ ಸುರಕುಜವೊಗೆವಂದದಿ
ಪುಟ್ಟಿರ್ದವನಿಗೆ ಸತ್ಯಂ ಪುಟ್ಟಲು
ಮೆಟ್ಟಿದನವನಿಗೆ ಸುಕೃತಂ ಮೆಟ್ಟಲು
ಶಿವನಂ ನೋಡಲು ನೆರೆ ಕಣ್ದೆರೆದಂ
ಸವಿಯಲು ಪ್ರಸಾದಕೆ ಬಾಯ್ದೆರೆದಂ
ಆದಯ್ಯನೆನಿಪ್ಪುದು ತನ್ನಾಮಂ

ಸಾದರಮೀಶಂಗತುಳ ಪ್ರೇಮಂ
ಆಗಿರೆ ಬಾಲ್ಯಮನೊಲವಿಂ ಕಳೆದಂ
ಸಾಗಿಪ ಸುಕುಮಾರತೆಯುಂ ತಳೆದಂ
ಸಂಸಾರದ ಸವಿಗಾಣುತ ಬೆಳೆದಂ
ಹಂಸಂ ಬೆಳೆವಂದದಿ ಮಿಗೆ ಬೆಳೆದಂ

ಬೆಳೆಯಲು ಗುರುಕರುಣಂ ತನಗೊದವಿತು
ತಿಳಿವಿನ ಮುಖಮೀಶ್ವರನೊಳಗೊದಗಿತು
ತಿಸುಳಂ ಡಮರುಗವಜಶಿರವಭಯಂ
ನೊಸಲೊಳ್ಕಣ್ವೃಷಭಾರೂಢತೆಯುಂ
ಲಿಂಗದೊಳಗೆ ಕಂಡಂ ಶಿವನಿರವಂ
ಪಿಂಗದೆ ಕಂಡಂ ಪರಮನ ವರವಂ
ಸೋಮಯ್ಯನೆ ಗುರು ತನಗೆಂದರಿವಂ
ಸೋಮೇಶಂಗತಿ ಮಾಹಿ ಯೆಂದರಿದಂ

ಇಂತರಿವುತ್ತಂ ನೇಮಂ ಮಾಡುತ್ತೆ
ಸಂತತ ಶಿವಸುಖದೊಳಗೋಲಾಡುತ್ತೆ

ಇರೆ ಯೌವ್ವನವಾದಯ್ಯಂಗಾಗಲು
ಹರಭಕ್ತಿಯು ತನ್ನೊಳು ಪುಟವೇಳಲು
ನೊಸಲೊಳು ಭಸಿತಮನೊಪ್ಪದೊಳಿಡುತಂ
ಎಸೆಯುಲು ರುದ್ರಾಕ್ಷಿಗಳಂ ಕೊಡುತಂ
ಶಿವನಂಘ್ರಿಗಳಂ ಚಲುವಿಂ ಮುಟ್ಟುತೆ
ಶಿವಸುಖ ಸಂತಸದೊಳಗೋಲಾಡುತೆ
ಶಿವಗಿತ್ತಾ ವೀಳೆಯುಮಂ ಸವಿವುತೆ
ಶಿವಧೂಪದೊಳಂ ತನ್ನಂ ಪೊರೆವುತೆ
ಬಲವರುತಂ ಲಲನೆಯರಂ ನೋಡುತೆ
ನಲವಿಂ ಪಶುಪತಿಗಂ ಬಿನ್ನವಿಸುತೆ
ಶಿವನಂ ನೆನೆವುತೆ ಸುಖಮಂ ತಳೆವುತೆ
ಭವನಂ ಪಾಡುತೆ ಭಾವಮನೆಣಿಸುತೆ
ಸರ್ವಂ ಬೆವಹಾರಂಗಳ ತೆರನಂ
ಉರ್ವಿಯೊಳಗೆ ಪರಿದಾಡುವ ತೆರನಂ
ಕೂಡಿದ ಮೊದಲಂ ಲಾಭದ ಪರಿಯಂ
ನೋಡಲು ಲೆಕ್ಕದ ಗಣಿತದ ಪರಿಯಂ
ಕಲಿಸಿದನಾದಯ್ಯಂಗಾ ಜನಕಂ
ಕಲಿಸಲು ಪುತ್ರನ ಕಣ್ಣಂ ಮನಕಂ
ಮಾಯಾ ವೆವಹಾರಂ ತಿಳಿವುತ್ತಿರೆ
ಆ ಯೌವ್ವನದಿಂದಂ ಗರ್ಜಿಸುತಿರೆ
ಪಿತನಾದಯ್ಯನ ಪರಿ ಮೆಚ್ಚುತ್ತಂ
ಸತತಂ ಸಂತಸದಿಂ ಬಾಳುತ್ತಂ

ಮಗನಂ ಕರೆದೆಲ್ಲಮನಾಳೋಚಿಸಿ
ಸೊಗಯಿಪ ಭಂಡಂಗಳ ನೊಲಿದೊಪ್ಪಿಸಿ
ಪಲವೆತ್ತಿನೊಳಂ ತೀವುತ್ತೋವುತೆ
ಪಲವುಂ ದೋಣಿಗರಂ ಕರದೀವುತೆ

ಪುತ್ರಂಗೆಲ್ಲವನಪ್ಪೈಸುತ್ತಂ
ಪತ್ತು ಸಹಸ್ರಂ ಪೊಂಗಳ ತರುತಂ
ಪುತ್ರನ ಕೈಯ್ಯೊಳ್ಕೊಟ್ಟಂತೆಂದಂ
ಉತ್ತಮ ವಸ್ತುಗಳಂ ಕೊಳ್ಳೆಂದಂ
ಪುಲಿಗೆರೆಯಣಿಗೆರೆಯುಂ ಪುರದೊಳಗಂ
ನಲಿವಿಂ ಪಲವುಂ ಪಟ್ಟಣದೊಳಗಂ
ಪರಿದಾಡುವುದೆಲೆ ಕಂದ ಎನುತ್ತಂ
ಹರನಂ ನೆನವುದು ಮರೆಯದೆನುತ್ತಂ
ಸೋಮಯ್ಯಂ ನಿನ್ನೊಡನೇ ಬಪ್ಪಂ
ಸೋಮಯ್ಯಂ ಚಿತ್ತದೊಳೊಲವಿಪ್ಪಂ
ಲೋಭದೊಳಿಪ್ಪದು ಸದ್ವ್ಯಯವಾಗದು
ಲಾಭವನರಿವುದು ಮರೆದಿರಲಾಗದು
ಎನೆ ನಸುನಗುತಾದಯ್ಯಂ ನುಡಿದಂ
ಮನಸಿಜ ಹರನಣುಗಂ ನೆರೆ ನುಡಿದಂ
ಮೊದಲೀಶನ ಸದ್ಭಕ್ತಿಯೆ ಲಾಭಂ
ತದನಂತರವಿನ್ನುಂಟೇ ಲಾಭಂ
ಎನುತಾಗಳೆ ಪಿತನಂ ಬೀಳ್ಕೊಂಡಂ
ಮನದೊಳು ಸೋಮಯ್ಯನನೆಡೆಗೊಂಡಂ
ನಡೆತಂದಂ ಭಕ್ತಿಯೊಳಾದಯ್ಯಂ
ನಡೆ ತರುತಿರ್ದಂ ಶಿವನಾದಯ್ಯಂ

ಇತ್ತಲು ಸುರಸತಿ ಶರ್ವನ ಸಭೆಯೊಳು
ಉತ್ತಮಗುಣ ನಿಧಿ ಜನನದ ವಶದೊಳು
ಸಲುತಂ ಪುಲಿಗೆರೆಯೊಳು ಬಂದೊಪ್ಪುವ
ಸಲೆ ಸವಣರ್ಸಂತಸದಿಂದೊಪ್ಪುವ
ಸುರಹೊನ್ನೆಯ ಬಸದಿಯ ಪೂಜಾರಿಯ
ಅರುಹಂತನನರ್ಚಿಪ ಪೂಜಾರಿಯ
ಹರುಷದಿ ಯವನಾ ಲಲನೆಯ ಬಸಿರೊಳು
ಅರುಹಂತನ ಪಾಪದ ಕಗ್ಗೆಸರೊಳು

ಪಂಕಜದಂತಿರೆ ಪುಟ್ಟಿದಳೊಲವಿಂ
ಪಂಕವನೆಂದುಂ ಪೊರ್ದದೆ ನಲವಿಂ

ಪುಟ್ಟಲು ಪದ್ಮಾವತಿ ಯೆನೆ ನಾಮಂ
ಗೊಟ್ಟರು ಪಿತೃಮಾತೆಯರತಿ ಪ್ರೇಮಂ
ತಾನಾಗಿರೆ ಶೈಶವಮಂ ಕಳೆದಳು
ನಾನಾಭರಣಂ ರಂಜಿಸೆ ಬೆಳೆದಳು
ಶಶಿಕಳೆಯಂದದಿ ಕೌಮುದಿಯಂದದಿ
ಬಿಸಕಂದದ ಕಂದದ ಮುಗುಳಂದದಿ
ತಳೆದಳು ಪದ್ಮಾವತಿ ವಿಭ್ರಮಮಂ
ತೆಳೆದಳು ನವ ಯೌವ್ವನ ಭೂಷಣಮಂ
ನಡು ನಡೆ ನುಡಿಗಳು ಕಿರಿದಾಗುತ್ತಿರೆ
ಮುಡಿವೊಲೆ ಜಘನಂ ಪಿರಿದಾಗುತ್ತಿರೆ
ಭಾಳತಳಂ ನಯಮಂ ಕರೆವುತ್ತಿರೆ
ತೋಳ ಮೊದಲು ಪೊಗರಂ ಸೂಸುತ್ತಿರೆ
ಅಂಕಂ ನೊಸಲೊಳು ರಂಗಂಬೊಗುತಿರೆ
ತಿಳಕಂ ಕಾಂತಿಯ ಮರೆಯೊಳು ನಿಂದಿರೆ
ತರದಿಂ ಬಾಲ್ಯದ ತೆರೆ ಸರಿವುತ್ತಿರೆ
ನಿರುತದ ನಲವಿಂ ಯೌವ್ವನ ವೊಪ್ಪಿರೆ
ಪುಷ್ಪಾಂಜಲಿಯಂ ನೋಟಂ ಕೆದರಲು
ಪುಷ್ಪಶರಂ ಮನದೊಳು ಮಿಗೆ ಹೆದರಲು
ತೊಡಿಗೆಯ ನಿನದಂ ವಾದ್ಯಗುಡುತ್ತಿರೆ
ನಡೆ ಸುಗತಿಗಳಂ ಮೋಳೈಸುತ್ತಿರೆ
ಯೌವ್ವನಮಲ್ಲಿ ಸುಪಾತ್ರಮದಾಗಿರೆ
ಅವ್ವಳಿಸುವ ವಿಟರೆದೆ ಬಿರಿವುತ್ತಿರೆ
ತನಗೊಳಗಾದಯ್ಯನ ನರಸುತ್ತಂ
ಮನುಜರನಾವಗ ವೊಲ್ಲದಿರುತ್ತಂ
ಇರೆ ತಾಯ್ತಂದೆಗಳರಿಯದೆ ಮರುಗುತ
ಹರೆಯದೊಳಾರುಮನೊಲ್ಲಳೆದದ್ಭುತ

ಈ ಸುಖವಿನ್ನಾರಿಗೆ ಇರ್ದಪುದೋ
ಈ ಸೊಬಗಿನ್ನಾರಂ ಸಾರ್ದಪುದೋ
ಎಂದುಮ್ಮಳದಿಂದಂ ನೋಡುತ್ತಿರೆ
ಅಂದಂದಿಂಗತಿ ಚಿಂತೆಯೊಳಿರುತಿರೆ

ಬರುತಿರ್ದಂ ಶಂಕರನಾದಯ್ಯಂ
ದುರಿತ ಕುಳಂಗಳ ನೆರೆ ಪೊಯ್ವಯ್ಯಂ
ಪುರದೊಳಗೆಲ್ಲಂ ಕಾವುಳ ನೆಗೆಯಲು
ಅರುಹಾಗಾರದೊಳದ್ಭುತ ಪೊಗೆಯಲು
ಸುರಹೊನ್ನೆಯ ಬಸದಿಯ ಜಿನನಳುತಿರೆ
ಅರುಹ ವ್ರತಿಗಳ್ಕೌತುಕವೆನುತಿರೆ
ಪುಲಿಗೆರೆಯೊಳು ಪೊಕ್ಕಂ ಶಿವಭಕ್ತಂ
ಕಲಿಭಲಿ ಸೌಖ್ಯಭಾಷಾಯುಕ್ತಂ
ಪುಗುತಂ ಬಸದಿಗಳೆದಿರಿರೆ ಕಂಡಂ
ಮಿಗೆ ಬಗೆಯೊಳಗೆ ನಿರೋಧಂಗೊಂಡಂ
ಅರಸುತ ಬಂದಂ ಹರನಾಲಯಮಂ
ಹೆರೆಯಂ ಸೂಡಿರ್ದನ ಮಂದಿರಮಂ
ಕಂಡಂ ಹೋಜೇಶ್ವರನಿಪ್ಪಿರವಂ
ಕಂಡಂ ಮೂಲಸ್ಥಾನದ ವರವಂ
ಅಲ್ಲಿಯೆ ಬೀಡಾರಂ ತನಗಾದುದು
ಎಲ್ಲಾ ವಸ್ತುವಿನಾಲಯವಾದುದು
ಬಂದ ಸುವಸ್ತುವನಲ್ಲಿರಿಸುತ್ತಂ
ಬಂದ ಗ್ರಾಹಕ ತಕಿಗೀವುತ್ತಂ
ಮೊದಲುಂ ಲಾಭಂಗಳ ನೋವುತ್ತಂ
ಸದಮಲ ಚಿತ್ತಂ ಸುಖದೊಳಿರುತ್ತಂ

ಒಂದು ದಿನಂ ನೇಮಂ ಮಾಡುತ್ತಿರೆ
ಇಂದುಧರನ ಭಕ್ತಿಯನೊಳಕೊಂಡಿರೆ
ಪುಳುಕದ ಸಂದಣಿಯಿಂ ಪರುಶನಮಂ
ಜಳಬಿಂದುಗಳಿಂದಂ ದರುಶನಮಂ

ಮಾಡುತ ಪಾದೋದಕಮಂ ಕೊಳುತಂ
ನೋಡುತೆ ಹರಕರುಣಮನೆಡೆಗೊಳುತಂ
ಭರದಿಂ ಪ್ರಸಾದ ಜೀವಕನಾದಂ
ಹರಪದ ಪಂಕಜ ಭಾವಕನಾದಂ

ಪಟ್ಟಣಮಂ ನೋಡಲು ಪೊರಮಟ್ಟಂ
ನೆಟ್ಟನೆ ಸುಖನಿಕರದೊಳಳವಟ್ಟಂ
ಸುಕುಮಾರ ಶಿರೋಮಣಿ ಬರ್ಪಂದದಿ
ಅಕಳಂಕ ಸುಧಾಕರ ಪೊಳೆವಂದದಿ
ನಲವಿಂ ಪದುಮನ ಸಖ ಬಪ್ಪಂದದಿ
ಸುಲಲಿತ ಸೌಂದರ್ಯಂ ನಡೆವಂದದಿ
ಜಂಗಮ ಸುರತರು ನಡೆತಪ್ಪಂದದಿ
ಲಿಂಗದ ಮಹಿಮಾನಿಧಿ ಬಪ್ಪಂದದಿ
ಮೆಲ್ಲನೆ ಪುರವೀಧಿಯೊಳಂ ಬರುತಿರೆ
ಬಲ್ಲಿದನಾದಯ್ಯಂ ಬರುತಿರೆ ಇರೆ

**ಪ್ರಥಮಸ್ಥಲ ಸಂಪೂರ್ಣ**

# ದ್ವಿತೀಯಸ್ಥಲ.

**ಕಂದ**— ಪುಲಿಗೆರೆಯ ಪುರಜನಂಪೂ।
ವಲಿಗೆದರಿದ ಪುಷ್ಪಸೌರ ಭಾಸ್ವಾದಮವಾ ।
ಕುಳಿತ ಮಧುಕರ ಮುಖೋದ್ಗತ।
ಕಳರವವೀಥಿಯೊಳೆ ಬರಲಾದಯ್ಯಂ॥

**ಗದ್ಯ**— ಇಂತು ಪುರವೀಥಿ ನಿರೀಕ್ಷಣ ಸಂಜನಿತ ಹರುಷ ಪುಳಕ ಶರೀರಂ ಸುಖನಿಕರ ಮುಖಾವಲೋಕನನಾಗುತ್ತಂ ಬರೆವರೆ ಮುಂದೆ ಸುಧಾಧವಳಿತ ಸೌರಭಾದಿ ವೇದಿಕಾಸ್ತಂಭಂಗಳ ನಡುವೆ ಹಂಸ ಕುಳ ಕೀರ ಕುರವಕ ಸರಸೀರುಹ ಲತಾವಳಿಗಳ ತಂಡಣೆಯಿಂ ಕೊಳನಂತೆ ವಿರಾಜಿಪ ವೇದಿಕೆಯ ಮೇಲೆ ಪದ್ಮಾವತಿಯಂ ಭೊಂಕನೆ ಕಂಡು ಸ್ನೇಹಂ ಕವಿದು ಆರ್ತಂ ತಲೆದೋರಿ ತಾತ್ಪರ್ಯಂ ಕೈಮಿಕ್ಕು ಲವಲವಿಕೆ ಬೆಳೆದು ಸವಿನೋಟಂ ಸಂದಣಿಸಿ ಸೌಂದರ್ಯದ ಮದಂ ಸೀಮೆಯ ನೊಳಕೊ ಳಲಾರದೆ ಲಾವಣ್ಯದ ರಸದೊಳು ತಾಂ ಮುಳುಗಿ ನೋಡಲರಿಯದೆ ಸಿಕ್ಕಿದ ವಿಲೋಚನದ ಬಳಿಸಂದು ಮನದೊಡನೆ ಭಾವಂ ಬಲಿದು ಸಾತ್ವಿಕ ರಸಪರವಶದಿಂ ಮಿತ್ರರ ಮೇಲೆ ಮೆಯ್ಯಸೀಡಾಡಿ ಪರಮಹಂಸನಂತಿರ್ದ ಆದಯ್ಯನಂ ಪದ್ಮಾವತೀದೇವಿ ಬೋಂಕನೆ ಕಂಡು ನವಯೌವ್ವನವಂ ಮುಂಗಾಣ್ಕೆಗೊಟ್ಟು ರೂಪನೊಪ್ಪಿಸಿಕೊಟ್ಟು ನೋಟಮಂ ಇಂಬುಗೊಟ್ಟು ಆಸೆಯಂ ನಿಮಿರ್ತೆಗೊಟ್ಟು ಚೆಲ್ವಂ ಸೂರೆಗೊಟ್ಟು ಪ್ರೇಮರಸಂ ತೀವಿ ಮನಂ ನನೆ ಏರಿ ತವಕಂ ಬೀಗಿ ತನುವರಳ್ದಿರಲಿರ್ಬರ ಪರ್ಬುಗೆಯ ನೇಹಮಂ ಮಿತ್ರಜನಂ ಕಂಡು ಕಮಳಾಕರಕ್ಕೆ ಹಂಸಮಿಥುನಂಗಳಂ ತಪ್ಪಂತೆ ತಂದು ಪದ್ಮಾವತಿಯ ಸೆಜ್ಜೆಯರಮನೆಯ ಮೃದುತರ ಹಂಸ ತೂಲ ತಲ್ಪದೊಳು ಸುಖಮಿಥುನಮನೊಲ್ದಿರಿಸುವಂತಿರಿಸಿ ಸಖೀ ಜನಂ ಕೃತಕ ಸಂಕೇತ ಗಮನಸ್ಥಾನವಾದರಿತ್ತಲು,

ಪದ್ಮಾವತಿಯುಂ ಆದಯ್ಯನುಂ ಗಾಢಾಲಿಂಗನದ ಮುತ್ತಿಗೆಯುತ್ತಲಗ್ಗ ಳವಾಗಿ ಸಕಲೇಂದ್ರಿಯಂಗಳೊಳಗುಗೊಟ್ಟು ಲಜ್ಜಾರಸಂ ಬೆಂಗೊಟ್ಟು ಅಭಿ ಮಾನದ ಕೋಂಟೆ ಕೋಳುವೋಗಿ ಧೈರ್ಯದ ಕದಂದೆರೆದು ಕರಣಂ ಕಲಿವಿಲಿಯಾಗಿ ಸುಖಂ ಸೂರೆವೋಗಿ ಮನಂ ಪಿಡಿವಟ್ಟು ಮುಟ್ಟಿದ ಸುಖ

ಮಂ ಸೋಮನಾಥನ ಸ್ಮರಣೆಯಿಂ ಸವಿವೃತ್ತಿರ್ಪ ಸುಖ ಸಮಯದೊಳು ಮುನಿಸಿಲ್ಲದ ಕಲಹಂ ಕೋಪವಿಲ್ಲದ ಖಾತಿ ಭಂಗವಿಲ್ಲದ ಸೋಲಂ ಭಾರವಿಲ್ಲದ ಬಳಲ್ಕೆ ನಿದ್ರೆ ಇಲ್ಲದ ನಿಡುಸೂಯ್ ತಣಿವಿಲ್ಲದ ತೃಪ್ತಿ ಅಗಲ್ಕೆ ಇಲ್ಲದ ವಿರಹವಾತುರಿಸಿ ಚಿತ್ತ ಭೂಮಿಯೊಳೊಳಪೊಕ್ಕು ನೇಹದ ಬೀಜಂ ದೇಹ ಮನ್ಮಥ ಘಟ್ಟಿ ಯಂತ್ರದಾಟದೊಳ್ಪುಟ್ಟಿದ ಸ್ವೇದ ಜಲದಿಂ ತಳಿತು ಪುಳುಕದಗೆಯೊಯ್ದು ನಳನಳಿಸಿ ಬೆಳೆದ ಮಕರಕೇತನುದ್ಯಾನದೊಳು ವಿಸಟಂ ಬರಿವ ವ್ಯಾಕುಳಾಕ್ಷರಂ ಕೊಳರ್ವಕ್ಕಿಯ ಧ್ವನಿಯನಿಂಬುಗೊಳುತಿರೆ ಕುಣಿವಳಕಂ ಶಿಳೀಮುಖಂಗಳನನುಕರಿಸೆ ನರು ಸುಯ್ಯಲರೆಂಬ ಗಂಧವಾಹಂ ಸುಳಿಯೆ ಗಾಢಾಲಿಂಗನದ ಲತೆವನೆಯೊಳಗೆ ಸಮಸುಖ ಸಾರ್ವಭೌಮರಾಗಿ ತಮ್ಮೊಳು ತಮ್ಮನಲ್ಲದೆ ಮತ್ತೊಂದೇನುಮನರಿಯದೆ ತಾವಿಬ್ಬರೊಬ್ಬರಾದಂತೆರಡನರಿಯದೆ

ಪಲಕೆಲವು ವತ್ಸರಂಮಿರ್ದೊಂದು ದಿನವಾದಯ್ಯನುಂ ಪದ್ಮಾವತಿಯುಂ ಒಂದಾಗಿ ಬಿನದದಿಂ ವ್ಯಾಘ್ರಪುರದ ಪೊರಗಣ ಪೂರ್ವ ತಟಾಕದಪರಭಾಗದ ತರುವನದೊಳು ಶುಕಪಿಕ ಹಂಸ ಮಯೂರಕೀರ ಲೀಲಾನಿರೀಕ್ಷಣಾಸಕ್ತರಾಗಿರಲಲ್ಲಿಗೆ ನೀಳ್ದ ಕೆಂಜೆಡೆಯಿಂ ತಾಳ್ದ ಕುಂಡಲದಿಂ ಉಟ್ಟ ಪುಲಿದೊವಲಿಂ ತೊಟ್ಟ ರುದ್ರಾಕ್ಷೆಯಿಂದಿಟ್ಟ ಭಸಿತದಿಂ ಪೊಳೆವ ಕಣ್ಗಳಿಂ ಬೆಳೆಪ ಗಂಡಸ್ಥಲದಿಂ ತೊಳಪ ಸುಲಿಪಲ್ಲ ವಿಳಾಸದಿಂ ಮೆರೆವ ವೈವೆಳಗು ಬನಕ್ಕೆ ಬೆಳ್ದಿಂಗಳಂ ಸೂಸೆ ಸತ್ಯದಂತೆ ಪುಣ್ಯದಂತೆ ಭಕ್ತಿಯಂತೆ ಬರುತಿರ್ಪ ತಪೋಧನಮೂರ್ತಿಗಳ ಆದಯ್ಯಂ ಕಂಡು ಭಯಭಕ್ತಿಯಿಂದಿದಿರ್ವಂದು ಅಷ್ಟಾಂಗ ಪ್ರಣುತನಾಗಿ ನಿಂದಿರ್ದು ದೇವ ಎತ್ತಣಿಂ ಬಿಜಯಂಗೈದಿರಿ ಕಂಗಳ ಕಾಂತಿ ಕುಂದಿದವು ಮುಖಮಂಡಲಂ ಕೊರಗಿದವು ಪುಣ್ಯೋದರಂ ಬಡವಾದುದು ಬೆಸಕೈವೆನೆಂದು ಬಿನ್ನೈಸಿದ ಭಕ್ತನ ಮೊಗಮಂ ನೋಡಿ ಎಲೆ ಮಗನೆ ಮುಂದರಿಯದೆ ಬಂದೀ ಊರಂ ನಿನ್ನೆ ಪೊಕ್ಕುನ್ನತಿಗೆಟ್ಟ ಬಸದಿಗಳಂ ಬತ್ತಲೆಯ ಬೊಂಬೆಗಳಂ ಕಂಡು ಬೆಗಡುಗೊಂಡು ಬೇವಿನ ವನಮಂ ಪೊಕ್ಕಂತೆ ಪೊಲಗೇರಿಯಂ ಸಾರ್ದಂತೆ ದೆಸೆಗೆಟ್ಟು ತೃಷೆಯಡಗದೆ ಪತ್ತುಪವಾಸಂ ಪತ್ತಿ ನಡೆಯುಡುಗಿ ತ್ರಾಣಂ ವರತು ಕಂದಿ ಕುಂದಿ ನೊಂದು ವ್ಯಾಘ್ರಪುರಮಂ ಪೊಕ್ಕು ವ್ಯಾಘ್ರಮುಖಮಂ ಕಂಡಂತತಿ ಭಯದಿಂ ಪೊರಮಟ್ಟು ಮೆಲ್ಲಮೆಲ್ಲನೆ ತಟಾಕದೇರಿಯ ಮೇಲೆ ಬರುತಂ ಭಸ್ಮಾವಶೇಷ ಲಲಾಟನಾಗಿರ್ದ ನಿಮ್ಮಂ ಕಂಡೆ

ಮಿನ್ನೆಲ್ಲಿಗಂ ಪೋಗಲಾರೆವೆಂದೊಂದು ನಿರುಪಮಸ್ಥಲದ ನೆಳಲ ಹೊಸ ಹಸಲೆಯ ಮೇಲೆ ಬಳಲ್ದು ಪಟ್ಟಿರಲವರಂ ಕಂಡು,

ಕಣ್ಣೀರಂ ತೀವಿ ಕುಕ್ಕುಳಂಗುದಿದು ಶೋಕರಸದೊಳಾಳ್ದು ದೈನ್ಯದಿಂ ಪದ್ಮಾವತಿಯ ಮೊಗಮಂ ನೋಡಲಾಕೆಯನುಕೂಲಾಲೋಚನೆಯನರಿದು ಸಂತಸಮನಾಂತು ದೇವದೇವ ಪುರದೊಳು ಪೊಕ್ಕತಿಬೇಗದಿಂ ಬೋನಮನನುತರಿಸಿ ತಳುವುಮಾಡದೆ ಬರ್ಪೆನನ್ನೆವರ ಈ ನೆಳಲೊಳಿಲ್ಲಿಯೆ ನೆಲಸಿರ್ಪುದೆಂದು ನಲವಿಂ ಬಿನ್ನೈಸೆ ಸಂತಸಂಬಟ್ಟು ನೀನೆ ಸರ್ವಸಾಧನಮಂ ಬೇಗ ಮಾಡೆಂದು ಕಳುಪೆ ಬಂದು ಪುರಮಂ ಪೊಕ್ಕು ಸಕಲ ಪದಾರ್ಥಂಗಳಂ ತಂದು ಪದ್ಮಾವತಿಗೊಪ್ಪಿಸಲೊಡಂ ದಿವ್ಯ ಪರಿಮಳದಿಂ ಸವಿಯುಂ ಸಾಲಿಡುವಮೃತಾನ್ನಮನತ್ಯಾದರದಿಂ ಮಾಡುತ್ತಿರೆ ಅತ್ತಲಾದಯ್ಯಂ ತಪಸ್ವಿ ಪಸಿದನೆಂದು ಬೇಗ ಬಂದು ನಿಳಯಮಂ ಪೊಕ್ಕು ಪದ್ಮಾವತಿಯ ಮೊಗಮಂ ನೋಡಲಾಕೆ ಒಡೆಯರಂ ಬಿಜಯಂಗೈಸಿ ತರುವುದೆನೆ ಅತ್ತಲ್ವನಕ್ಕೆ ಪೋದನಿತ್ತಲು,

ಪದ್ಮಾವತಿಯ ಪಿತನಪ್ಪ ಪಾರಿಷಸಂಡಿತಂ ಮೇರೆಗೆಟ್ಟ ಮತಿಹೀನಂ ಕೋಪಣದಿಂ ಬಂದ ಹೊಸ ಋಷಿಯರೆನಿಪ ನೀಚರಿಗೆ ಚರಿಗೆಯಂ ಪೇಳೆ ಬರಿಯ ಭಂಡರುಂ ಲೋಚಿನಂ ತಾಲ್ಯರುಂ ಬೆತ್ತಲೆಯ ಭ್ರಷ್ಟರುಂ ಕಂಚದ ಖೂಳರುಂ ತಟ್ಟುಗಳ ಅಜ್ಞಾನಿಗಳುಂ ನಾರುವಾಯ ನರಕಿಗಳುಂ ಸರ್ವಮಲಭಾಂಡರುಂ ನೆರೆದು ಬಂದು ಮನೆಯ ಮುಂದೆ ಸಂದಣಿಸೆ ಪಾರಿಷಪಂಡಿತಂ ಕಂಡು ಪೇಳ್ದದೊಂದು ಮಡಿ ಬಂದುದು ನಾಲ್ಮಡಿಯಾಯ್ತಿನ್ನೇನಂ ಮಾಳ್ಪೆನೆಂದು ಚಿಂತಿಸಿ ತನ್ನ ಸತಿಯಂ ಕರೆದು ಕೇಳಲದಕ್ಕಂಜಲುಬೇಡ ನಮ್ಮ ಪದ್ಮಾವತಿಯ ಗಂಡಂ ಗೊರವರ್ಗೆಂದು ಮಾಡಿಸಿದ ಬೋನಮಿರ್ದಪುದೇಳಿ ಎಂದು ಮಗಳಂ ಕರೆದು ಕೆಸರ ಕೊರತೆಗೆ ಕತ್ತುರಿಯಂ ಕೊಳ್ವಂತೆ ಸುಣ್ಣದ ಕೊರತೆಗೆ ಬೆಳ್ದಿಂಗಳಂ ಬಳಸುವಂತೆ ಮಸಿಯ ಕೊರತೆಗೆ ಮಾಣಿಕವಂ ಕೂಡುವಂತೆ ಬೇಲಿಯ ಕೊರತೆಗೆ ಕಲ್ಪತರುವಂ ತರಿವಂತೆ ಕಸದ ಕೊರತೆಗೆ ಕರ್ಪೂರದ ರಜವಂ ಬೆರಿಸುವಂತೆ ಪದ್ಮಾವತಿಯುಂ ಬೋನವಂ ಬೇಡೆ ಪದ್ಮಾವತಿ ನಡನಡುಗಿ ಬೇಡ ಬೇಡ ಕೊಡುವುದಿಲ್ಲೆಂದು ಬಾಗಿಲೊಳ್ನಿಲೆ ಚಂದ್ರಕಳೆಯಂ ರಾಹು ಪಿಡಿವಂತೆ ಪಿಡಿದು ಒಳಪೊಕ್ಕು ಕೊಂಡು ಪೋಗಿ ಸುರಹೊನ್ನೆಯ ಜಿನಪ್ರತಿಮೆಗೆ ಮಾರಿಯಂ ತಪ್ಪಂತೆ ತಂದು ಕಾಡುಗಿಚ್ಚಿಂಗೆ ತುಯ್ಯಲ ಸೂಡುವಂತೆ ಸುಧೆಯಂ ನಾಯಿಗೆ

ರೆವಂತೆ ಪಂಚಭಕ್ಷ್ಯಮಂ ನಾಯುಸಂಗಿಕ್ಕುವಂತೆ ಫಳರಸಮುಂ ಒಕಂಗಿ ಕ್ಕುವಂತೆ ತಂದು ಬೆತ್ತಲೆಯ ಬಣಗುಗಳಿಗಿಕ್ಕಿ ಕೆಂಗೈಗಳೊಳು ತಮ್ಮ ಪೂರ್ವಜನ್ಮದ ಕರ್ಮಶೇಷವನುಂಬಂತುಂಡು ಚಂಡಿಗಳೆಲ್ಲಂ ಪೊರಮ ಡುವ ಸಮಯದೊಳು,

ಬಳಲ್ದ ತಪೋಧನ ದೇವರ್ಗೆ ಕೈಗೊಟ್ಟು ಮೆಲ್ಲಮೆಲ್ಲನೊಡಗೊಂಡು ಬರ್ಪಾಗಳು ಬೆಳಗಿನ ಮುಂದಣ ಕತ್ತಲೆ ಪರಿವಂತೆ ಪುಣ್ಯದ ಮುಂದಣ ಪಾಪಂ ಪರಿವಂತೆ ನೋಡೆ ನೋಡೆ ಋಷಿಯರ್ಪರಿದು ಪೋಗಲಾವಯ್ಯಂ ಸಂದೇಹಿಸುತ್ತಂ ಮನೆಗೆ ಬಂದು ನೋಡುವಾಗಳ್ ಇರುಳ ತಾವರೆಯಂತೆ ಹಗಲ ಚಂದ್ರಮನಂತೆ ಮಶಿ ಪತ್ತಿದ ಸುವರ್ಣ ಪುತ್ತಳಿಯಂತೆ ಕಂದಿರ್ದ ಪದ್ಮಾವತಿಯಂ ಬೆಸಗೊಳಲು ನುಡಿಯಲಮ್ಮದೆ ಸುಮ್ಮನೆ ಸೆರೆ ಬಿಗಿದು ಭೀತಿ ಗೊಂಡಾಗ ತಮ್ಮ ತಾಯ್ತಂದೆಗಳು ಬಲ್ಪಿಂ ಮನೆಯಂ ಪೊಕ್ಕು ಬೋನಮುಂ ಕೊಂಡೊಯ್ದು ಋಷಿಯರ್ಗಿತ್ತರಿನ್ನಿವರ್ಗೆ ಬೋನಮಂ ನಾಳ್ಪೆನೆಂದು ನುಡಿಯಲಾ ನುಡಿಗೊಮ್ಮೆ ಸತ್ತು ಹುಟ್ಟಿ ಕೆಂಪಡರ್ದ ಕಂಗಳಿಂ ಕೆತ್ತುವ ಮೀಸೆಯಿಂ ಒತ್ತುವ ಕರಣಂಗಳಿಂ ಒತ್ತುವಾಸೆಯಿಂ ಮುತ್ತುವ ಕೋಪದಿಂ ಕನಲ್ದು ನೋಡುತ್ತಿವಳಂ ಕೊಂದೊಡಂ ಪಂಡಿತನಂ ಖಂಡಿಸಿದೊಡಂ ತಪೋ ಧನನಂ ತಣಿಸಿದಂತಾಗದೆನುತ್ತಂ ಒಳಗೊಳಗೆ ಹೊತ್ತಿ ಹೊಗೆವ ಜೈನರ ಸಾವಿನ ಸಂಚಕಾರದುರಿ ಕೋಪಮಂ ಬೈತಿಟ್ಟು ತಪೋಧನನಂ ನೋಡಿ ಎನ್ನೊಡವೆ ನಿಮಗೇಕೆ ಸಲ್ವುದು ಪಾಪಿಯ ಒಡವೆ ಪುಣ್ಯಕಪ್ಪುದೆ ಎಂದ ನುತಾಪದಿಂದವರನೊಡಗೊಂಡು ಪೋಗಿ ನವಫಲವಿಕ್ರಯ ವೀಧಿಯೊಳು ಕದಳೀಫಳ ದ್ರಾಕ್ಷ ಖರ್ಜೂರ ನಾರಿಕೇಳಾದಿ ಫಲಂಗಳಿಂ ತಪೋಧನನಂ ಕಳಿಪಿ,

ಆವಯ್ಯ ಮನೆಗೆ ಬಂದುಮ್ಮಳದಿಂ ಪಟ್ಟಿರಲಲ್ಲಿಗೆ ಪದ್ಮಾವತಿ ಬಂದಾ ದಯ್ಯನನಾರೋಗಣೆಗೆಬ್ಬಿಸೆ ಕನಲ್ದು ಕಿಡಿಕಿಡಿಯಾಗಿ ತನ್ನ ದೇಹಮಂ ಛಿನ್ನಪತ್ರಮಾಗಿ ಬಿಸುಡವೇಳ್ಪುದಲ್ಲದೊಡೆ ಒಂದುಪವಾಸವನಾದೊಡಂ ಮಾಳ್ಪೆನಲ್ಲದೂಟಮಿಲ್ಲೆಂದು ನುಡಿದ ಮಾತಂ ಕೇಳ್ದು ಮಗಳ ಮೋಹಕ್ಕೆ ಮಾತೆಪಿತರ್ಬಂದು ಬೇಡಿಕೊಂಡೆಲ್ಲಾ ತೆರದಿಂದೊಲ್ಲದಿರೆ,

ಇಂತಪ್ಪಾಪ್ಪೆಷ್ಟರ್ಯವೆಂತಾದೊಡಂ ತಾನರ್ಚಿಪ ಸೋಮನಾಥನಂ ಸುರಹೊನ್ನೆಯ ಬಸದಿಗೆ ತಂದಡಲ್ಲದುಂಬನಲ್ಲ ತನ್ನಂ ಪ್ರಾರ್ಥಿಸಲೇ ಕೆಂದು ನುಡಿಯೆ ಪಾರಿಷಂ ಕೇಳ್ದು ನೆಟ್ಟನೆ ನುಡಿದ ಕಟ್ಟಣಕಮುಂ

ತೊಟ್ಟನೆ ಕಿವಿಯಂ ಮುಟ್ಟಿ ಘೂರ್ಮಿಸಿ ಗಜರಿ ನುಡಿದಂ ಅದಕ್ಕಾದಯ್ಯಂ ಕೇಳಿಲೊ ಮರುಳು ಜೈನ ನೀಂ ಪ್ರತಿಯಲ್ಲ ನಿನ್ನ ಮನಮಂ ಪ್ರೇರಿಪನೀಶ್ವರಂ ನೀನೆಂದಂತೆ ಜಿನನಂ ಇಬ್ಭಾಗ ಮಾಡಿ ಸೌರಾಷ್ಟ್ರ ಪತಿಸೋಮನಾಥನಂ ಬಿಜಯಂಗೈದಲ್ಲದೂಟವಿಲ್ಲೆಂಬ ನೇಮಮಂ ಕೈಕೊಂಡೆಂ ಕೊಂಡೆನೆಂದು ಗದ್ದುಗೆಯಂ ಪೊಯ್ದಾಸ್ಫೋಟಿಸಿ ನಿಂದಿರ್ದ ಪುಲಿಗೆರೆಯಿಂ ಪೊರಮಡುವಾಗಳೊಡನೊಡನೆ ಬರ್ಪ ಪದ್ಮಾವತಿಯಂ ಕಂಡು ಸೋಮನಾಥನಂ ತಂದಪೆಂ ಪುಸಿಯಲ್ಲಂಜದಿರೆಂದು ಸತ್ಯವೃಷ್ಟಿಯಿಂ ಸಾಗಿಸಿ ನೋಡೆ ಪಿಂತಿರಲಾಕೆಯುಂ ನೀವೆಂದು ಬರ್ಪನ್ನೆಗಂ ಅಶನ ವ್ರತಮಂ ಕೈಕೊಂಡೆಂ ಪೆರಸಿಂಗಿ ನಿಲೆ,

ಸತ್ಯ ನಿಧಿಯೆನಿಪ ಸತ್ಯ ಶರಣನುತ್ತರಾಭಿಮುಖನಾಗಿ ವಿಭೂತಿಯ ವೀರಂ ರುದ್ರಾಕ್ಷಿಯ ಭದ್ರಗಜಂ ಪಂಚಾಕ್ಷರಿಯ ಪಂಚಾನನಂ ಜೈನಕುಲ ಕುಮುದ ಮಾರ್ತಂಡನೆನಿಪಾದಯ್ಯಂ ನಡೆದು ಬರುತಂ ಗಿಡಮುಂ ಮುಳ್ಳುಂ ಮಳೆಯುಂ ಸರಿಯುಂ ದರಿಯುಂ ಹಳ್ಳಂ ಕೊಳ್ಳಂ ಗಟ್ಟ ಬೆಟ್ಟಂಗಳೆನ್ನದೆ ಹುಲಿ ಕರಡಿ ಸಿಂಹ ಶಾರ್ದೂಲಂಗಳಂ ಲೆಕ್ಕಿಸದೆ ಮಳೆ ಬಿಸಿಲು ಗಾಳಿಗಳಂ ಲೆಕ್ಕಿಸದೆ ಕ್ಷುತ್ತು ತೃಷೆ ನಿದ್ರೆಗಳೆನ್ನದೆ ನಡೆವೆಡೆಯೊಳಂಗಾಲು ಮೊನೆಗಲ್ಲೊತ್ತಿ ಹಲ್ಲಯಿಸಿ ಬಿರಿದು ಬಿಸಿ ನೆತ್ತರ್ಜಿಗುರ್ತು ರಕ್ತಪಂಕದಿಂ ಮುಳ್ಳು ಕಡ್ಡಿ ದಸಿಗಳ್ಪತ್ತಿ ಮೆತ್ತಿದೊಡಂ ಕರಯುಗಮಂ ಕಂಪಿಸಿ ಬಸಿರ್ಬತ್ತಿ ಬಾಯ್ಬತ್ತಿ ಪಲ್ಗೋರಿ ಬೆನ್ನು ಕುಸಿದು ಮೊಗ ಒಣಗಿ ಕಣ್ಗಾಂದಿ ಕಾವುಳಂ ಕವಿದೊಡಂ ಸೋಮನಾಥನ ದರ್ಶನಭರಭರಿತ ಸರ್ವಾಂಗಂ ಬಗೆಗೊಳ್ಳದೆ ಭಾವಿಸದೆ ಸರ್ಪಭೂಷಣನ ಧ್ಯಾನದಿಂದಿಪ್ಪತ್ತೆಂಟು ದಿನಮೀ ತೆರದೊಳಾತುರದಿಂ ಬರ್ಪಲ್ಲಿ,

ನೆತ್ತರ್ಗಲ್ಲೆಗಳಿನುಗುಳ್ವ ಪದತಳದಡಿ ಇಡಲ್ಬಾರದೊಡೆ ಕುಳ್ಳಿರ್ದುಂ ಕುಳ್ಳಿರಲ್ಬಡೆಯದೆ ಪೊರಳ್ದುರುಳ್ದು ಬರುತ್ತೊಂದು ಬೆಲ್ಲವತ್ತದ ಮರದ ನೆಳಲೊಳ್ವಿಗತಚೇತನಂ ಪಥಶ್ರಮ ಮೂರ್ಛಿತನಾಗಿ ಬರಲಲ್ಲಿಗೆ ಚೇಲಾಳನ ಚಿತ್ತವಲ್ಲಭಂ ಅರಿವಾಳ್ತಾಂಡರ ಎಲುದೋರಿ ಸರಸವಾಡುವ ಸುಲಭಂ ವಹಿಲಯ್ಯನ ಓವದೆ ನೋಡುವ ದಯಾಭರಿತಂ ತಿರುಕುರುಪೆತೊಂಡರ ಇರದಿ ಕಾಡುವ ದಯಾಪರಂ ಸಾಯ ಬಡಿದು ಕಿವಿಯನೂದುವ ಕರುಣಿ ಎನಿಪ ಸೌರಾಷ್ಟ್ರದೊಡೆಯಂ ಸೋಮನಾಥನೋರ್ವ ವೃದ್ಧ ಮಹೇಶ್ವರನಾಗಿ ಕೊಡೆ ಕಮಂಡಲಂ ಯಜ್ಞೋಪವೀತಂ ನೊಸಲಭಸಿತಂವೆರಸಿ ಆ ದಾರಿಯಿಂ

ಬರ್ಪಂತೆ ಬಂದಾದಯ್ಯನ ಮುಂದಿಳಿವಿದಂತೆ ನಿಂದಿರೆ ಮಗನೆ ಮಗನೆ ನೀನೆಲ್ಲಿಗೆ ಪೋದಪೆ ಬಳಲ್ಕೆ ಪಿರಿದಾಯ್ತು ಸಮೀಪದೊಳೂರುಂಟೆ ಎಂದು ಕೇಳಲೊಡಂ ಚಂದ್ರಂಗೆ ಮೇಘಂ ಕವಿದೊಡಂ ಜಗಕ್ಕೆ ತಣ್ಪು ತಪ್ಪದೆಂಬಂತೆ ವೇಷದ ಮರೆಯ ಚಂದ್ರಚೂಡನ ಸುಧಾವಾಕ್ಯವಾದಯ್ಯಂಗೆ ಶೀತಳಾಮೃತವಿತ್ತು ಚೇತನಂಗೊಡಲೆದ್ದು ನಿಂದಿರ್ದು ಮಹೇಶ್ವರಂಗುತ್ತರಂಗುಡುವುದರಿಂ ಮತ್ತೆ ಹತ್ತಡಿಯಂ ಸೋಮನಾಥನನಲ್ಲಿಗೆ ನಡೆವೆನೆಂದು ಮರುಮಾತುಗೊಡದೆ ಪೋಗುತ್ತಿರೆ ತನ್ನ ಮೇಲಣ ನಿಷ್ಠೆಗೆ ಪನ್ನಗಭೂಷಣಂ ಮೆಚ್ಚಿ ಮುಂದಡ್ಡ ಬಂದು ಕೆಯ್ಯಂ ಪಿಡಿದು ಪೇಳು ಪೇಳೆಲ್ಲಿಗೆ ಪೋದಪ್ಪೆ ಎನೆ ಸೌರಾಷ್ಟ್ರ ಪತಿಯಂ ಪುಲಿಗೆರೆಗೆ ಬಿಜಯಂಗೈಸಿ ತರಲು ಪೋದಪೆಂ ನೀಂ ಬಲ್ಲೆಯಾ ನಾನರಿಯದೊಡಾತನನರಿವನ್ನೆಗಂ ಎನ್ನಸುರುಳ್ಳನ್ನೆಗಮೈದುವೆನೆಂದು ನುಡಿದ ನಿಶ್ಚಲ ವಚನಕ್ಕೆ ಮೆಚ್ಚಿ ನಿಂದೆಲೆ ಮಗನೆ ಇಂತಾದೊಡಾಂ ಸೋಮನಾಥಂ ನಿನ್ನ ನಿಷ್ಠೆಗೆ ಮೆಚ್ಚಿ ಬಂದೆಂ ಕಂದಾ ಬಳಲದಿರೆಂದು ಕರುಣಿಸಲೊಡಂ ಬಳಲಿಕೆಯುಡಂಗಿದುದರಿಂ ನಂಬುಗೆ ಏರುತ್ತಂ ವೇಷಮುಂ ಕಂಡು ಶಂಕಿಸುತ್ತಂ ದೇವ ಮಾನುಷ ಚರಿತ್ರಂ ಮಾನುಷಾಕಾರನಾಗಿರ್ದೊಡೇನೆಂದು ನಂಬಲರಿಯದಿರ್ಪೆಂ ಎನ್ನ ಮನದ ಸಂದೇಹಮಂ ಪಿಂಗಿಸಿ ಕರುಣಿಪುದೆಂದು ಬಿನ್ನವಿಸಲಾ ಮಾತಿನೊಡನೆ ಚಂದ್ರಕಳೆ ದಶಭುಜಂ ಕೆಂಜೆಡೆ ಲಲಾಟಲೋಚನಂ ಪುಲಿದೊವಲು ನಂದಿವಾಹನವೊಪ್ಪೆ ಗುರು ಕರುಣಿಸಿದ ಶಿವಲಿಂಗದೊಳಗಣ ಮೂರ್ತಿ ವಿಳಾಸಂ ಸಾಕಾರ ಸಂವಿತ್ತವಯವದ ಪರಬೊಮ್ಮಂ ಸೋಮನಾಥನಾದಯ್ಯನ ಕಣ್ಣ ಪುಣ್ಯದಂತೆ ಮುಂದೆ ತೊಳಗುತ್ತಿರೆ ಇರೆ.

## ದ್ವಿತೀಯಸ್ಥಲ ಸಂಪೂರ್ಣ

# ತೃತೀಯಸ್ಥಲ.

**ಕಂದ—** ಕಂಡಂ ತ್ರಿಶೂಲವ ಭಯಂಕ
ರಂಡ ಮರುಗವಜಕಪಾಲವಹಿಪತಿಕಟಕಂ
ಕುಂಡಲವಿಂದು ಕಳಾಪಂ
ಮಂಡಿತನಂ ಹಂಪೆಯಾಳ್ದನಂ ನಲವಿಂದಂ

## ರಗಳೆ.

ಕಂಡು ತವಕದಿಂದಂ ಸೈಗೆಡೆದಂ
ತಂಡದ ಪುಳಕವನಂಗದೊಳಿಡಿದಂ
ಅಧ್ವಶ್ರಮಮಂ ಕಳೆವಂ ತಳೆದಂ
ಸಾಧ್ವಿಯೆನಿಪ ಭಕ್ತಿಯನುರೆ ತಳೆದಂ
ನಿಂದಿರ್ದಂ ಕೈಮುಗಿದಂ ಮುಗಿದಂ
ಇಂದುಧರನ ನೀಕ್ಷಿಸುತೊಳಸುಗಿದಂ
ದೇವಾ ಮುನ್ನಿನ ತೆರದಿಂದಿಪ್ಪುದು
ದೇವಾ ನೋಡುವಡೆನಗರಿದಪ್ಪುದು
ಎಂದೊಡೆ ಮುನ್ನಿನ ಅಂದದೊಳಿರ್ದಂ
ಕಂದನ ಸಾಗರ್ಯ್ಯನೆ ಸಾರ್ತಂದಂ
ನಾಡಿದು ಬರ್ಪೆಂ ಸೋಮನವಾರಂ
ಬೇಡೈ ಬೇಡೆಂದಾ ಸಂಸಾರಂ
ಎನಲಾಪಯ್ಯಂ ನಾಡಿದು ಬಂದೊಡೆ
ಎನಗೆಂತಭವಾ ನೀನೆಂತೆಂದೊಡೆ
ಇಪ್ಪತ್ತೆಂಟುಂ ದಿನವೆಂದಿತ್ತಂ
ತಪ್ಪದೆ ನಡೆಯಲು ಬಾರದೆನುತ್ತಂ
ಪ್ರಭುವೇ ವಿಭುವೇ ರಕ್ಷಿಪುದೆನುತಂ
ಅಭವಾ ಶಂಕರ ಕರುಣಿಪುದೆನುತಂ
ಆಪಯ್ಯನ ನಲವಿಂದಪ್ಪುತ್ತಂ
ಸಾದರದಿಂ ಕೃಪೆಯಿಂ ನೋಡುತ್ತಂ
ಬಿಲ್ವತ್ತದ ನೆಳಲೊಳು ಪಟ್ಟರ್ಪೆನು

ಚೆಲ್ವಿಂ ಪುಲಿಗೆರೆಯೊಳಗಿಟ್ಟಿರ್ಪೆನು
ಮರುದಿವಸಂ ಬಂದಪೆನೆರಡಿಲ್ಲಂ
ನೆರೆ ನಂಬುಡಿರ್ದೇ ನುಡಿಗೆಡೆ ಇಲ್ಲಂ
ಎಂದಾ ಸುತನಂ ಪಟ್ಟಿರಿಸುತ್ತಂ
ಕಂದನನೊಲವಿಂ ಬೋಳ್ಕೈಸುತ್ತಂ
ನಡೆದಂ ಪುಲಿಗೆರೆಯತ್ತಂ ಶರ್ವಂ
ಮೃಡನಭವಂ ನಿತ್ಯಂ ತಾನೋರ್ವಂ

ಇತ್ತಲು ಮರೆವಟ್ಟಿರ್ದಾದಯ್ಯಂ
ಚಿತ್ರಜಹರನಾಜ್ಞೆಯೊಳಾದಯ್ಯಂ
ಘಳಿಲನೆ ಕಣ್ದೆರೆದಂ ಪುಲಿಗೆರೆಯೊಳು
ಬಳಲುವ ಪದ್ಮಾವತಿ ಇಪ್ಪೆಡೆಯೊಳು
ಕಣ್ದೆರೆಯಲು ಕಂಡಳು ಪದ್ಮಾವತಿ
ಮುಣ್ದನಿಯಿಂ ನುಡಿದಳು ಪದ್ಮಾವತಿ
ಎನ್ನಯ ನಿಧಿ ಬಂದುದೆ ಸುಧೆ ಬಂದುದೆ
ಎನ್ನಯ ಕರಿ ಬಂದುದೆ ಸಿರಿ ಬಂದುದೆ
ಎನುತುಪವಾಸದಿ ಪಟ್ಟಿರ್ದೇಳುತೆ
ಮನದೊಲವಿಂ ಪ್ರಿಯನಂ ಬಂದಪ್ಪುತೆ
ಶಿವನಂ ಕಂಡವನಂ ಕಾಣುತ್ತಂ
ಪವಣಿಲ್ಲದ ಸುಖದಿಂ ಸೇರುತ್ತಂ
ಲಲನೆಯುರಂ ಪದ್ಮಾವತಿ ಕರೆವುತೆ
ನಲವಿಂ ಬೋನವ ಮಾಡಲು ಪೇಳುತೆ
ಇರಲಾದಯ್ಯಂ ಸತಿಗಿಂತೆಂದಂ
ಭರದಿಂದಂ ಬೋನಂ ಬೇಡೆಂದಂ
ನಾಳೆ ಶಿವಂ ಸೋಮಯ್ಯಂ ಬರ್ಪಂ
ನೀಲಗಳಂ ಸೋಮಯ್ಯಂ ಬರ್ಪಂ
ಗುರು ಬರ್ಪಂ ಉರುತರ ನಿಧಿ ಬರ್ಪಂ
ಹರಿಯಜರರಿಯದಗಮ್ಯಂ ಬರ್ಪಂ
ಸುರಹೊನ್ನೆಯ ಜಿನನಂ ಸೀಳುತ್ತಂ
ಅರುಹ ವ್ರತಿಗಳ ನುರೆ ಯೋಳುತ್ತಂ

ಬಂದ ಬಳಿಕ್ಕಂ ಬೋನಂ ಮಾಳ್ಪುದು
ಇಂದುಧರನ ಕರುಣದೊಳಿಸಿವಿರ್ಪುದು

ಎಂಬೀ ನುಡಿಯಂ ಸತಿಯರ್ಕೇಳುತೆ
ಬೆಂಬೇಳುತೆ ನಡೆದೆಡಹುತೆ ತಾಗುತೆ
ಪಾರಿಶ ಪಂಡಿತನಲ್ಲಿಗೆ ಬರುತಂ
ದೂರಿಸುತುಮ್ಮಳದಿಂದಂ ನಿಲುತಂ
ಆದಯ್ಯಂ ನುಡಿದುದನರುಪುತ್ತಿರೆ
ಆದರ ಉಡುಗುತ್ತಂ ಪೇಳುತ್ತಿರೆ
ಆಹಾ ತಾನೇ ತಪ್ಪಂ ತಪ್ಪಂ
ಆಹಾ ಆಹಾ ಬಳಿಕೇನಪ್ಪಂ
ಇನ್ನೇನಿನ್ನೇನಭವಂ ಬಂದಂ
ಇನ್ನೇನೀ ಬಸದಿಯೊಳೇ ನಿಂದಂ
ತಪ್ಪದೆ ಯಾತನ ನುಡಿಯುಂ ಧರೆಯೊಳು
ತಪ್ಪದೆ ಭಕ್ತನ ನುಡಿಯುಂ ಇಳೆಯೊಳು
ತಂದಂ ತಂದಂ ತಾರದೆ ಮಾಣ್ಬನೆ
ಬಂದಂ ಬಂದಂ ಬಾರದೆ ಮಾಣ್ಬನೆ
ನಡೆನಡೆ ಎನುತಂ ಬಸದಿಗೆ ಬಂದಾ
ಕಡುಗೋಪದೊಳೆಲ್ಲರ್ಗಿಂತೆಂದಂ
ಸೋಪುಯ್ಯಂ ಬಸದಿಗೆ ಬಂದಂ ಗಡ
ಏಮಾತೇ ಊರೊಳು ನಿಂದಂ ಗಡ
ಹಸನಾಯ್ತೆಳಿಯನ ನೋಟಂ ಬೇಟಂ
ವಿಷವಾಯ್ತೆಳಿಯನ ಮಾಟಂ ಕೂಟಂ
ಏಳಿರೆ ರಂಗವೊಲೆಗಳುಮನಿಕ್ಕಿರೆ
ಏಳಿರೆ ಗುಡಿ ತೋರಣವಂಗಟ್ಟಿರೆ
ಎಂಬೀ ಕಟಕಿಗಳಂ ನುಡಿವುತ್ತಂ
ನಂಬದ ನರಕಿಗಳೊಂದಾಗುತ್ತಂ

ಇರಲಸ್ತಾದ್ರಿಯನೇರಿದನರ್ಕಂ
ಧರೆಗಾದುದು ತಿಮಿರದ ಸಂಪರ್ಕಂ

ಜೈನರ ಕಣ್ಣಾಂಧತೆ ಕವಿದಂದದಿ
ಜೈನರ ಪಾಪಂ ಪೂರಿಸಿದಂದದಿ
ಕತ್ತಲೆ ಪುರದೊಳು ತೀವಿದ ಬಳಿಕಂ
ಒತ್ತಂ ಬಿಸುತಂ ಪರ್ವಿದ ಬಳಿಕಂ
ಬೆಳಗಿನ ಬಿತ್ತಂಕುರಿಸುವ ತೆರದಿಂ
ತೊಳತೊಳಗಿದವಾ ತಾರಕಿ ನಭದಿಂ
ಸೋಮಯ್ಯನ ಬರವರಿಸುವ ತೆರದಿಂ
ಸೋಮಂ ಪೊರಮಟ್ಟಂ ಸಮ್ಮದದಿಂ
ದಿಸೆಯಂ ಕೌಮುದಿಯಿಂ ಧವಳಿಸುತಂ
ರಸೆಯಂ ಕೂಡೆ ಕುಳಿರ್ಕೊಡಿಸುತಂ
ಚಂದ್ರಂ ಪೊರವೊಟ್ಟೊಪ್ಪಿಪ್ಪಿರುಳೊಳು
ಚಂದ್ರಿಕೆ ಸುತ್ತಂ ತೀವಿರ್ಪೆಡೆಯೊಳು
ಸೋಮಯ್ಯನ ಚಿಂತೆಯೊಳಾದಯ್ಯಂ
ವ್ಯಾಮೋಹಂಗಳನಳಿದಾದಯ್ಯಂ
ಚಿಂತಿಸುತಿರಲರುಣೋದಯವಾದುದು
ಕಂತುಹರನ ಕರುಣೋದಯವಾದುದು
ಸವಣರನಾದಯ್ಯಂ ಭಂಗಿಪುದಂ
ತಪೆ ನೋಳ್ಪಿಂ ಭರದಿಂ ಸೋಲಿಪುದಂ
ಎಂಬಂದದೊಳಾದಿತ್ಯಂ ಮೂಡಲು
ಇಂಬಿನ ತಮವೆಲ್ಲಂ ಪರಿದೋಡಲು

ಪಾರಿಷ ಪಂಡಿತನೆಂದಿನ ತೆರದಿಂ
ಆರಯ್ಯದೆ ನಡೆತರುತಂ ಭರದಿಂ
ಸುರಹೊನ್ನೆಯ ಬಸದಿಯ ಪೊಸ ಕದವಂ
ಹರನೊಳಗುದ್ಭವಿಸಿದ ಸನ್ಮತವಂ
ತಗೆಯಲ್ಕುದ್ಯೋಗಿಸಿ ಹೋಗದೆ ನಿಲೆ
ಬಗೆಯೊಳ್ನೆರೆ ಬೆರಗಾಗುತ್ತುಂ ನಿಲೆ
ಒತ್ತಲು ನೂಂಕಲು ಮಿಡುಕದೆ ನಿಂದಿರೆ
ಕೆತ್ತಲು ಕಡಿಯಲು ಸೆಡೆಯದೆ ನಿಂದಿರೆ
ಕದವದು ಚಲಿಸದೆ ಧಾರುಣಿಯಂತಿರೆ

ಕದವದು ತೊಲಗದೆ ಮೇರುವಿನಂತಿರೆ
ಕಂಡಲ್ಲಿಯ ಸವಣರ್ನಡಗುತ್ತಂ
ಚಂಡಿಗಳೆಲ್ಲಂ ಬೆಂಡಾಗುತ್ತಂ
ಬೆತ್ತಲೆಗಳ್ನಿರೆಬಾಯಂ ಬಿಡುತಂ
ಸುತ್ತಿದ ಸವಣರ್ನೆರೆ ಕೂಗಿಡುತಂ
ಪಂಡಿತರೆಲ್ಲಂ ಖಂಡಿತರಾಗುತ್ತೆ
ತಂಡದ ಋಷಿಗಳ್ ತೆರದಿಂ ನೋಡುತ್ತೆ

ಇರೆ ಬರುತಿರ್ದಂ ಹರನಾದಯ್ಯಂ
ಬರುತಿರ್ದಂ ಶಶಿಧರನಾದಯ್ಯಂ
ಧರಣೀ ತಳದೊಳು ಗುರುವಾದಯ್ಯಂ
ಶರಣ ಜನದ ಸುರತರುವಾದಯ್ಯಂ
ಸುಮ್ಮಾನದ ಸಮಸುಖಿಯಾದಯ್ಯಂ
ಹಿಮ್ಮೆಟ್ಟಿದ ಕಲಿಭಲಿಯಾದಯ್ಯಂ
ನಡೆತರೆ ಪದ್ಮಾವತಿ ಬೆಂಬಿಡದಿರೆ
ಕಡು ನೇಹಿತೆ ಯೊಡನೊಡನೆ ಬರುತ್ತಿರೆ
ಒರ್ಪಾದಯ್ಯನ ಸಾಮರ್ಥ್ಯದೊಳುಂ
ಸರ್ಪಾಭರಣನ ಘನ ಕರುಣದೊಳುಂ
ಬಸದಿಯ ಮುಂದಣ ಕುರುಡಂ ಹೆಳವಂ
ಮಿಸುಗುವ ಕಣ್ಕಾಲ್ವಡೆದುಜ್ವಲವಂ
ತಳೆದಿದಿರ್ವಂದಾದಯ್ಯಂಗೆರಗಲು
ತೊಳತೊಳಗುವ ಭಸಿತವನಿಟ್ಟಿರಲು
ದೇವಾ ಗುರು ನೀವೆಂದೊಡಬರುತಿರೆ
ಭಾವಿಸೆ ಜೈನರು ಬೆರಗಾಗುತ್ತಿರೆ

ಆಯತಿಯಿಂ ಭಕ್ತಿಯ ಭಂಡಾರದಿ
ಬೀಯುಗದಲ್ಲಿಗೆ ಕೈ ಬಪ್ಪಂದದಿ
ನಿಷ್ಠೆಯ ನಿಧಿ ಕಡುಪಿಂದೈತಂದಂ
ನೆಟ್ಟನೆ ಬಾಗಿಲು ಮುಂದಂ ನಿಂದಂ
ಸವಣರ ಹಾಳಿದೆ ಕದದೆರೆವಂತಿರೆ

ಸವಣರ ಕಲ್ಲಿದೆ ಹಾಳಾಗುತ್ತಿರೆ
ನಲಿದಾದಯ್ಯಂ ಕಂಡಂ ವಿಭುವಂ
ಸಲೆ ನೆಲಿಸಿದ ಸೋಮಯ್ಯ ಪ್ರಭುವಂ
ಶಿವಭಕ್ತರ ಘನತರಸುಖ ಸಿಂಧುವೆ
ಶಿವಭಕ್ತರ ಮನದನುಪಮ ಬಂಧುವೆ
ಶರಣ ಮಹತ್ವದ ನಿತ್ಯದ ಪುರುಳೇ
ಶರಣರ ಚಿತ್ತದ ಬಿತ್ತಿನ ತಿರುಳೇ
ಸುರುಚಿರ ಶರಣರ ಕಣ್ಣಿಂಗತಿಯೇ
ವರಮುನಿಗಳ ಘನಮತಿಯುನ್ನತಿಯೇ
ಎಂದಾದಯ್ಯಂ ನೆರೆ ಪೊಗಳುತ್ತಿರೆ
ಇಂದುಧರನ ಕರುಣಂ ಕವಿವುತ್ತಿರೆ

ಭಕ್ತಿಯ ಬಾಸಣ ಓಸರಿಪಂದದಿ
ಮುಕ್ತಿಯ ಮುಚ್ಚುಳ ಮುಖವರಳ್ವಂದದಿ
ಘಳಿಲನೆ ಶಿವನ ಕವಾಟಂದೆರೆಯುಲು
ಪುಳುಕಂ ಭಕ್ತನ ಮೆಯ್ಯೊಳು ನೆಗೆಯುಲು
ಕಾಮಹರಂ ಕೃಪೆಯಿಂದೊಳಗಿರ್ದಂ
ಸೋಮಧರಂ ಮುದದಿಂ ಮೂಡಿರ್ದಂ
ಅರುಹನನೆರಳ್ಭಾಗಂ ಮಾಡುತ್ತಂ
ಹರನೊಲವಿಂದಂ ಸಲೆ ನೆಲಿಸುತ್ತಂ
ಸುರನದಿ ಜಡೆಮುಡಿ ಶಶಿಕಳೆಯೊಪ್ಪಿರೆ
ಉರಗಾಧಿಪ ಕುಂಡಲಯುಗ ಒಪ್ಪಿರೆ
ಶಶಿರವಿಶಿಖಿನಯನತ್ರಯ ವೆಸೆದಿರೆ
ಹೊಸ ಸುಧೆ ಸೂಸುವ ಸುಖಮುಖ ವೆಸೆದಿರೆ
ಡಮರುಗ ತಿಸುಳಂ ದಶಭುಜವೆಸೆದಿರೆ
ಕಮಳಜ ಶಿರವಭಯಕರಂ ಮೆರೆದಿರೆ
ಬಿಸಲಂ ಬೀರುವ ಪುಲಿದೊವಲೆಸೆಯುಲು
ಅಸದಳವೆಡೆಗಾಲೊಳು ತೊಡರೆಸೆಯುಲು
ಉರಗನ ಹೆಡೆಗಳ ಮಣಿಗೊಡೆ ಎಸೆಯುಲು
ಅರರೇ ಸೋಮೇಶಂಗೆ ಸಿಂಗರಿಸಲು
ಅಣಿಯುರದಿಂದೊಪ್ಪುವ ವೃಷಭೇಶನ

ಫಣಿಗಳ ಫಣಗಟ್ಟಿನ ಮುಗುಳ್ಗೋಡಿನ
ಶೃತಿಗಳ ನೆಲೆವನೆ ಯೆನಿಸುವ ಕಿವಿಗಳ
ಅತಿ ಧವಳದ ಕಣ್ಣೆನಿಸುವ ಕಣ್ಗಳ
ಭೀಕರ ತತಿಯಂ ಕೆಡಿಸುವ ಘ್ರಾಣದ
ಲೋಕದ ಭಕ್ತರ ಬೆಳೆ ಮುಖವಾದುದ
ಸತ್ಯಂ ಶಾಂತಂ ತನುವಾದಂತಿರೆ
ಮುಕ್ತಿಯು ವೊಳೆ ಫಲವಾದಂತಿರುತಿರೆ
ಯುಗ ಧರ್ಮಂ ಸೇವಿಪ ಚತುರಂಘ್ರಿಯು
ಸೊಗಯಿಪ ಉರಗೆಜ್ಜೆಯು ಘನ ಘಂಟೆಯು
ಪ್ರಣವು ಧ್ವನಿಗಳು ಅಂದುಗೆಯಾಗಿರೆ
ಅಣಿಯುರದಿಂ ಶೃತಿ ತಿಂಥಿಣಿಯಾಗಿರೆ
ಚಲುವಿಂದೊಪ್ಪುವ ನಂದಿಯನೇರಿದ
ಒಲಿದ ಗಣೇಶ್ವರರೊಲವಂ ಹೇರಿದ
ಹರಿಯಜ ಸುರರಿಗೆ ಪದವಂ ತೋರಿದ
ಶರಣ ಜನಕೆ ತನ್ನಿರವಂ ತೋರಿದ
ಸುರಹೊನ್ನೆಯ ಬಸದಿಯೊಳು ನೆಲಸಿದ
ನರಲೋಕದೊಳಚ್ಚರಿಯಂ ಮಾಡಿವ
ಸೋಮಯ್ಯನನತಿ ಮುದದಿಂ ಕಾಣುತ

ಕಾಮಹರನನತಿ ಒಲವಿಂ ನೋಡುತ
ಆವಯ್ಯಂ ಸುಖದಿಂ ನಲಿದಾಡುತ
ಆದರದಿಂ ಹೆಚ್ಚುತ ಹೊರೆಯೇರುತ
ಕುಣಿವುತೆ ಕೂಗುತೆ ತೊನೆಯುತೆ ತೂಗುತೆ
ಮಣಿವುತೆ ಒಲಿವುತೆ ಬೀಗುತೆ ತೇಗುತೆ
ಬಂದಾ ವೃಷಭನ ಚರಣವನಪ್ಪುತೆ
ಮುಂದರಿಯದೆ ಸುಖ ಮೂರ್ಛೆಯೊಳೊಪ್ಪುತೆ
ಪುಳಕದೊಳುಬ್ಬುತೆ ಗದ್ಗದಿಸುತ್ತಂ
ಇಳಿವಶ್ರುಗಳಿಂದಂ ನನೆಯುತ್ತಂ
ಬೆಮರುತೆ ಬಿಕ್ಕುತೆ ಸುಖದಿಂ ಸೋಂಕುತೆ
ಆಮರ್ದಪ್ಪುತ್ತುಬ್ಬುತೆ ಬೊಬ್ಬಿಕ್ಕುತೆ

ಇದರೀದಯ್ಯನನೀಶ್ವರ ನೋಡುತೆ
ಸಾರ್ದವನಂ ಪಿಡಿದೆತ್ತುತ್ತಪ್ಪುತೆ
ನಲವಿಂ ಮೂರ್ಧ್ನಿಘ್ರಾಣಂ ಮಾಡುತೆ
ಒಲವಿಂ ಸಾಮರ್ಥ್ಯಮುಮಂ ಕೂಡುತೆ

ಕೇಳಿಲೆ ಕಂದಾ ಸವಣರ್ನೆರೆದರು
ಆಳಿದ್ದಿಲ್ಲಾ ಕ್ಷುದ್ರರ್ನೆರೆದರು
ಹೋಗಿಯವಂದಿರನುರೆ ಸಂಹರಿಪುದು
ಬೇಗಂ ಶಿವಭಕ್ತಿಯನುದ್ಧರಿಪುದು
ಪೋಗೆಂದೋರ್ವ ಗಣೇಶನ ನೀವುತೆ
ರಾಗದಿ ಬತ್ತೀಸಾಯುಧಮೀವುತೆ

ಕಳುಪಲ್ಕದಯ್ಯಂ ನಡೆತಂದಂ
ಕಳೆಯೇರುತೆ ಬಾಗಿಲೊಳಂ ನಿಂದಂ
ನಿಂದಿರೆ ಸವಣರ್ಲಕ್ಕದ ಸಂಖ್ಯೆಗೆ
ಬಂದುರವಣಿಸುತ್ತಿರೆ ಕೋಪಂ ಮಿಗೆ
ಕಂಡಾದಯ್ಯಂ ಬೇಡೆಂದೆನುತಿರೆ
ತಂಡದ ಜೈನರನುರೆ ಗರ್ಜಿಸುತಿರೆ
ನೋಡಿದಪೆಂ ಸೋಮಯ್ಯನನೆಲ್ಲಂ
ಬೇಡೆನ್ನದಿರೆವಿಮೃಷ್ಟವನೆಲ್ಲಂ
ಎನುತಂ ವಚನದೊಳೊಳ್ಪಿತ್ತಾಡುತೆ
ಮನದೊಳು ಪಾತಕಮುಂ ನೆರೆ ನೆನೆವುತೆ
ಬರಲಾದಯ್ಯಂ ಗರ್ಜಿಸಿ ನುಡಿದಂ
ಅರುಹ ವ್ರತಿಗಳನೆಲ್ಲರ ಜಡಿದಂ
ಕತ್ತಲೆ ಸೂರ್ಯನನಾಲೋಕಿಪುದೇ
ಬತ್ತಲೆಗಳಿರಾ ನಿಮಗೊದಗುವುದೇ
ತರಗೆಲೆ ದಾವಾನಲನಂ ನೋಳ್ಪುದೆ
ಉರಗ ಸಮೂಹಂ ಸಿಡಿಲಂ ನೋಳ್ಪುದೆ
ನೆರೆ ಮೂರ್ಖರಿರಾ ನಿಮಗಿದು ತಕ್ಕುದೆ
ಎನೆ ಲೆಕ್ಕಿಸದುರವಣಿಸುತೆ ಬರೆವರೆ

ತನತನಗೆಲ್ಲಾ ಜೈನರ್ನಡೆತರೆ
ಗಣನಾಥನನಾದಯ್ಯಂ ನೋಡಲು

ಕ್ಷಣದಿಂದೀರ್ವರು ಆಯುಧ ವಿಡಿಯಲು
ಕೊಂಡಾದಯ್ಯಂ ಶಿವನಂ ನೆನೆವುತೆ
ಕಂಡುರವಣಿಸುತೆ ಜೈನರನಟ್ಟುತೆ
ಕೆಡೆ ಕೆಡೆ ಕೆಟ್ಟ ಶಿವದ್ರೋಹಿಗಳಿರ
ಫಡಫಡ ಪಚ್ಚ ಪಸಿಯ ಪಾತಕರಿರ
ಎನುತಿರಲೊಂದು ಸಹಸ್ರಂ ಸತ್ತುದು
ಮುನಿದಿಡಲಿಚ್ಛಾರ್ಸಿರ ಧರೆಗದ್ದುದು
ಈ ತೆರದಿಂ ಬತ್ತೀಸಾಯುಧದಿಂ
ಪಾತಕರಂ ಕೊಲುತಿರೆ ಕಡು ಭರದಿಂ
ಕಂಡಾ ಜೈನರ ತಿಂಥಿಣಿ ಎಲ್ಲಂ
ಗಂಡುಗೆಡುತ್ತತಿ ಭೀತಿಯೊಳೆಲ್ಲಂ
ಸೈಗೆಡೆದುದು ಪಲ್ಲಂ ಕಿರಿವುತ್ತಂ
ವೈಗರೆವುತೆ ಪುಲ್ಲಂ ಕಚ್ಚುತ್ತಂ
ಶರಣೆಂದರನೆಲ್ಲಂ ಮಿಗೆ ಕಾವುತೆ
ಧುರದೊಳಗಿದಿರಾದವರಂ ತೀರ್ಚುತೆ
ಮರೆವೊಕ್ಕವರ ನೆರೆ ರಕ್ಷಿಸುತ್ತಂ
ಹೆರೆ ಸೂಡಿದನಲ್ಲಿಗೆ ತಿರುಗುತ್ತಂ

ಬಂದಾ ಸೋಮಧರಂಗೆರಗುತ್ತಂ
ನಿಂದೊಲವಿಂದಂ ಕೈಮುಗಿವುತ್ತಂ
ದೇವಾ ಜೈನರು ಸಾರ್ದರು ತೀರ್ದರು
ದೇವಾ ಖಳರಂತಕನಂ ಸಾರ್ದರು
ಪರಮ ಪ್ರಭುವೇ ಆಯುಧವಿಂತಿವೆ
ಉರಿವುರಿವುತೆ ಭೋರ್ಗರೆವುತ ನಿಂತಿವೆ
ಇವನೆಲ್ಲಿರಿಸುವೆನಂತಕಹರನೇ
ಭವನೇ ಭರ್ಗನೆ ಗಿರಿಜಾವರನೇ
ಎನೆ ಸೋಮಯ್ಯಂ ಕರುಣಿಸಿ ನೋಡುತೆ
ತನಯುನನಾಲಿಂಗಿಸಿ ಮುಂಡಾಡುತೆ
ಖಡ್ಗವನೊಂದೆಡೆಯುಲಿ ಬೈತಿರಿಸಲು
ಖಡ್ಗದ ನಾಮದ ತೀರ್ಥವದೆನಿಸಲು

ಆ ಸಮಯದೊಳೆಲ್ಲಾ ಶರಣರ್ಜರೆ
ದೇಶದ ಗಣ ಮುಖ್ಯರ್ಕವಿಗಳು ಬರೆ
ಕಂಡಾದಯ್ಯಂ ಗಣಕುಲಕೆರಗುತೆ
ತಂಡದ ಪುಳುಕಾವಳಿಯಂ ಹೇರುತೆ
ಸೋಮಯ್ಯನನೊಲವಿಂ ತೋರುತ್ತಂ
ಕಾಮಹರಂ ಎಲ್ಲರ್ಗರುಪುತ್ತಂ
ನಲವಿಂ ಪ್ರಸಾದ ಭೋಗಂ ಮಾಡುತೆ
ನಲಿನಲಿದೊಲಿದೊಲಿದಕ್ಕರೊಳಾಡುತೆ
ಪದ್ಮಾವತಿಯಂ ನಲವಿಂದಪ್ಪುತೆ
ಪದ್ಮಜ ಮಸ್ತಕ ಹಸ್ತನನರಿಪುತೆ

ಇರೆ ಪೂಮಳೆಗರೆದುದು ನಭದಿಂದಂ
ತರದಿಂ ಮೊಳಗಿತು ದುಂದುಭಿವೃಂದಂ
ಬಹುವಿಧ ವಾದ್ಯಧ್ವನಿ ಪೊಣ್ಮುತ್ತಿರೆ
ಕಹಳಾರವ ಮೇಣ್ದೆಸೆ ಗುಣ್ಮುತ್ತಿರೆ
ಬಂದುದು ಪುಷ್ಪಕನಾಗಸದಿಂದಂ
ನಿಂದುದು ಶರಣರ ನಡು ಒಲವಿಂದಂ
ಏರಿದನಾದಯ್ಯಂ ಶುಭಚರಿತಂ
ಏರಿದನಾ ಪದ್ಮಾವತಿ ಸಹಿತಂ
ಶರಣರು ಸುಖದಿಂ ನಲಿದಾಡುತ್ತಿರೆ
ಅರುಹ ವ್ರತಿಗಳು ಒಲವಳಿವುತ್ತಿರೆ
ಪುರಜನವೆಲ್ಲಂ ಬೆರಗಾಗುತ್ತಿರೆ
ಧರೆ ಕೌತುಕದಿಂ ಕೊಂಡಾಡುತ್ತಿರೆ
ನೆಗೆದುದು ಪುಷ್ಪಕವಂಬರ ತಳದೊಳು
ಬಗೆ ಮಿಗೆ ನೆಗೆದುದು ತಾರಾಪಥದೊಳು
ನಡೆತರುತಂ ನಂದೀಶನ ಬಾಗಿಲ
ನಡುವೆ ವಿಮಾನವ ನಿಲಿದಾದಯ್ಯೆಲ
ಒದವಿದ ಭಕ್ತರ ಭಾಗ್ಯದ ಬಯಕೆಗೆ
ಸವಮಲ ಶರಣರ ಪರಮಜ್ಯೋತಿಗೆ
ನಿರುಪಾಧಿಕ ಜ್ಯೋತಿರ್ಮಯ ಭಾನುಗೆ

ಎರಡಾಗದ ನತ ಜನಸುರ ಧೇನುಗೆ
ಮೆಯ್ಯಿಕ್ಕುತ ಮುದದಿಂ ಪಟ್ಟಿರ್ದಿರೆ
ಕೆಯ್ಯೆತ್ತುತ ಕರುಣಂ ದೋರುತ್ತಿರೆ
ಶಿವನಾದಯ್ಯಂ ನಲಿದಪ್ಪುತ್ತಂ
ಪವಣಿಲ್ಲದ ಸುಖದಿಂಟಪ್ಪುತ್ತಂ
ನಂದೀಶಂಗಾದರದಿಂ ತೋರುತೆ
ನಿಂದ ಗಣಾಳಿಗೆ ನಲವಿಂ ಪೇಳುತೆ
ಮುನ್ನಿನ ಆದಿಗಣೇಶನ ನಾಮಂ
ಸನ್ನುತವಾಗಿಯೆ ಕೊಡುತಂ ಪ್ರೇಮಂ
ಮಿಗೆ ಪದ್ಮಾವತಿಯಂ ಕರೆವುತ್ತಂ
ಸೊಗಯಿಪ ಸುರಸತಿಯರೊಳಿರಿಸುತ್ತಂ
ಕೈಲಾಸಾಧೀಶ್ವರ ನೊಪ್ಪಿರ್ದಂ
ಶೈಲಜೆಯರ ಘನಸಿಧಿಯೊಪ್ಪಿರ್ದಂ
ಪುಲಿಗೆರೆಯೊಳು ನೆಲಸಿದನೊಪ್ಪಿರ್ದಂ
ಪುಲಿಗೆರೆ ಯರಸಂ ತಾನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

**ಕಂದಃ** — ಅಯ್ಯಯ್ಯ ನಿಮ್ಮ ನೊಲವಿಂ
ದೊಯ್ಯನೆ ಪುಲಿಗೆರೆಗೆ ಬರಿಸಿ ನಿಲಿಸಿದ ಕಲಿಯಾ
ದೈಯ್ಯನವನೆಂದು ಭಕ್ತಿಯ
ನಯ್ಯಯ್ಯಾ ಕರುಣಿಸೆನಗೆ ಹಂಪೆಯರಾಯಾ

**ಸಮಾಪ್ತಂ**

ಶಿವಾನುಭವ ಗ್ರಂಥಮಾಲಾ ನಂ॥ ೪೩

# ಹರಿಹರನ ರಗಳೆಗಳು.

## ಭಾಗ ೫

ಸಂಪಾದಕರು

**ರಾ॥ ಸಾ॥ ಫ. ಗು. ಹಳಕಟ್ಟಿ**

ಬಿ. ಎ. ಎಲ್. ಎಲ್. ಬಿ. ವಿಜಾಪುರ.

೧೯೨೫

**ಬೆಲೆ ೮ ಆಣೆ.**

ಈ ಗ್ರಂಥದ ಎಲ್ಲ ಹಕ್ಕುಗಳನ್ನು ಸಂಪಾದಕರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.

# ಪ್ರಸ್ತಾವನೆ.

ಈ ಗ್ರಂಥದಲ್ಲಿ ನಾವು ಮಹಾಕವಿ ಹರಿಹರನು ರಚಿಸಿದ ರಗಳೆಗಳಲ್ಲಿಯ ಆರು ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳಲ್ಲಿ ನಾವು (೧) ಪುರಾತನರ ರಗಳೆಗಳು (೨) ವೀರಶೈವ ಶರಣರ ರಗಳೆಗಳು (೩) ಶಿವಶರಣರ ರಗಳೆಗಳು ಎಂದು ಮೂರು ಭಾಗಗಳನ್ನು ಮಾಡಬಹುದು. ಈ ವರೆಗೆ ನಾವು ಪ್ರಕಟಿಸಿದ ೪ ಭಾಗಗಳಲ್ಲಿ ೨೦ ರಗಳೆಗಳನ್ನು ಪ್ರಸಿದ್ಧಿಸಿದ್ದು ಈ ೫ ನೇ ಭಾಗದಲ್ಲಿ ೬ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಈ ರಗಳೆಗಳು ಕನ್ನಡ ವಾಙ್ಮಯದಲ್ಲಿ ಅತ್ಯಂತ ಮಹತ್ವವಾದವುಗಳಿದ್ದು ಇವು ಲೋಕಾದರಕ್ಕೆ ಪಾತ್ರವಾಗುವವೆಂದು ನೆರೆನಂಬಿದ್ದೇವೆ.

ಈ ೫ ನೇ ಭಾಗವನ್ನು ನಾವು ಮೈಸೂರು ಓರಿಎಂಟಲ್ ಲೈಬ್ರರಿಯಿಂದ ದೊರೆದ ಪ್ರತಿ, ತುಮಕೂರು ಜಿಲ್ಹಾ ದಂಡಿನ ಶಿವರದಲ್ಲಿರುವ ಶ್ರೀ॥ ಮೂ॥ ಕಲ್ಲಯ್ಯನವರಲ್ಲಿ ದೊರೆದ ಪ್ರತಿ, ಮತ್ತು ಶ್ರೀ॥ ಮೂ॥ ಶಿವಮೂರ್ತಿಶಾಸ್ತ್ರಿಗಳು ಹುಲುಕುಂಟಿಮಠ ಕೀರ್ತನಕೇಸರಿ ಮು. ತುಮಕೂರ ಇವರು ಕಳಿಸಿದ ಪ್ರತಿ ಈ ಮೂರು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಪ್ರಕಟಿಸಿದ್ದೇವೆ. ಈ ಗ್ರಂಥಗಳನ್ನು ನಮಗೆ ಕಳಿಸಿಕೊಟ್ಟಿದ್ದಕ್ಕಾಗಿ ನಾವು ಮೇಲ್ಕಂಡ ಎಲ್ಲ ಮಹನೀಯರಿಗೆ ಕೃತಜ್ಞರಾಗಿದ್ದೇವೆ.

ವಿಜಾಪುರ — ಫ. ಗು. ಹಳಕಟ್ಟಿ.

ತಾ॥ ೧೩—೩—೩೫

# ಅನುಕ್ರಮಣಿಕೆ.


| | | ಪುಟ |
|---|---|---|
| ೧ | ಬಾಣ. | ೧ |
| ೨ | ಉದ್ಭಟದೇವ. | ೮ |
| ೩ | ಹಲಾಯುಧ. | ೧೫ |
| ೪ | ಸಾಮವೇದಿ. | ೨೧ |
| ೫ | ಮಳೆಯರಾಜ. | ೩೬ |
| ೬ | ಓಹಿಲಯ್ಯ. | ೫೭ |

# ಹರಿಹರನ ರಗಳೆಗಳು.

ಭಾಗ ೫.

*0*

## ಬಾಣಶರಣರ ಮಹಾತ್ಮ್ಯೆ.

863
3696

ಕಂದ|| ಕ್ಷೋಣೀತಳದೊಳ್ಮೆರೆದಂ
ಬಾಣ ನವಗದ್ಯ ಪದ್ಯ ಕಾವ್ಯಕಳಾಗೀ
ರ್ವಾಣನನುರ್ವೀಸುಮನೋ
ಬಾಣನ ನೊಲವಿಂದ ಹಂಪೆಯ ವಿರೂಪಾಕ್ಷಂ ।

### ರಗಳೆ.

ಭೂಮಿಯೊಳು ಕಂಧಾರವೆಂಬ ಪಟ್ಟಣದಲ್ಲಿ
ಭೂಮಿ ಪತಿಯೊಪ್ಪುವಂ ನಂದನೆಂಬರಸಲ್ಲಿ
ಆತನಗ್ಗದ ಕವಿಗಳೆನಿಸಿಕೊಂಡೊಪ್ಪುವರ್
ನೂತನಕಳಾಲಸಿತ ವಾಕ್ಯಮುಮನೊಪ್ಪುವರ್
ಬಾಣನು ಮಯೂರನುಂ ಕಾಳಿದಾಸಂ ನೋಡ
ಜಾಣರೆನಿಪಾ ಮೂವರುಂ ಪ್ರಸಿದ್ಧರ್ನೋಡ
ಅವರೊಳಗೆ ಸಜ್ಜನರ್ಶಿವಭಕ್ತಿ ಕಾಮಿಗಳ್
ಶಿವಭಕ್ತರುತ್ತಮರ್ಶ್ಯಂಕರಪ್ರೇಮಿಗಳ್
ಎನಿಪ ಬಾಣಂ ಕಾಳಿದಾಸನುಂ ಸೈತಾಗಿ
ಮನದೊಳ್ಮಯೂರನೊಡತಣ ಮಚ್ಚರಂ ತಾಗಿ
ನಂದನೋಲಗದೊಳೊಂದು ದಿವಸಮಿರ್ಬರುಮಿರ್ದು
ಸಂದ ಕವಿತೆಯ ಪುರುಡು ಮನದೊಳಗೆ ಮಿಗೆ ಸಾರ್ದು
ಎಂದರಾ ನಂದಂಗೆ ತಾವಿರ್ಬರುಂ ಕೂಡಿ
ಸಂದಣಿಸಿದೇಕಾಂತದೊಳ್ನುಡಿಗಳಂ ನೀಡಿ
ಕವಿ ಮಯೂರನನಿಲ್ಲಿ ಪುಗಿಸಲಾಗದು ದೇವ

ಅವಯುವಂ ಸರ್ವ ದುರ್ವರ್ಣವಾದುದು ದೇವ
ಎನಲಲ್ಲಿ ನಂದರಾಜಂ ಕೌತುಕಮನಾಳ್ದು
ಮನದೊಳಗಿದಂ ಪರೀಕ್ಷಿಪೆನೆಂದು ಬಗೆದಾಳ್ದು
ಅನಿಮಿತ್ತಲೋಕುಳಿಯನೊಪ್ಪದಿಂ ಹಣ್ಣಿದಂ
ತನತನಗೆ ಪರಿಜನಕ್ಕೆಲ್ಲ ನೆರೆ ಸಾರಿದಂ
ನಾಳೆಯೋಕುಳಿ ಎಂದು ಪುರಜನಕೆ ಪೇಳುತಿರೆ
ಆಳಿದ್ದು ಜನವೆಲ್ಲ ನೆರೆದು ಸಂಭ್ರಮಿಸುತಿರೆ

ಆರಿದನಾಗಳೆ ಮಯೂರಂ ಜಲಕ್ರೀಡೆಯಂ
ನೆರೆ ಬಾಣಕಾಳಿದಾಸರ ಮನಸಿನೋಜೆಯಂ
ಅರಿದು ಚಿಂತಿಸುತಿರಲ್ಕಸ್ತಮಯವಾಯಿತ್ತು
ಮೆರೆವ ಸೂರ್ಯನ ಕಾಂತಿಯಂಬುನಿಧಿಯೊಳಗಾಯ್ತು
ಮೆಲ್ಲಮೆಲ್ಲನೆ ತಮಂ ತೀವಿತ್ತು ಗಗನಮಂ
ಅಲ್ಲಲ್ಲಿ ಮುಸುಕಿದುದು ಪಸರಿಸಿತು ಲೋಕವಂ
ಭೋಂಕನೊಗೆದುದು ಮುಂದೆ ಬೆಳ್ದಿಂಗಳಂತಲ್ಲಿ
ಶಂಕಿಸುತ್ತಂ ಸತಿಸಮೂಹ ಓಡಿತ್ತಲ್ಲಿ
ಇಂದ್ರದಿಗ್ವಿವರದಿಂ ಪೊರಮಟ್ಟನೊಪ್ಪದಿಂ
ಚಂದ್ರಮಂ ಲೋಕಮಂ ಧವಳಿಸುತ್ತೊಪ್ಪದಿಂ
ಬರಲಲ್ಲಿ ಶಿವಕೀರ್ತಿ ರಾಯ ಬಾಲೆಯ ತೆರದಿ
ಗಿರಿಸುತೆಯ ದರಹಾಸಮಂ ರಂಜಿಸುವ ತೆರದಿ
ಬಂದ ಚಂದ್ರಮನಿಂದೆ ರಾತ್ರಿಯೊಪ್ಪುತ್ತಿರಲ್
ಇಂದುವಾರಾಶಿಯುತ್ತತ್ತ ಸಾರುತ್ತಿರಲ್

ನಿದ್ರೆ ಇಲ್ಲದೆ ಮಯೂರಂ ಚಿಂತಿಸುತ್ತಿರ್ದು
ಭದ್ರಗುಣನೆಂತು ಮಾಡುವೆನೆಂದೆನುತ್ತಿರ್ದು
ಮನದೊಳಗೆ ನಿಶ್ಚಯಿಸಿದಂ ಭಾನುವಿಂದಿಂದೆ
ತನುವಿನ ವಿವರ್ಣಮಂ ತೀರ್ಚುವೆಂದಿಂದಿಂದೆ
ಎಂದು ಬೆಳಗಪ್ಪ ಜಾವದೊಳೆದ್ದು ನಡೆತಂದು
ಬಂದುದಕದೊಳಗೆ ಕಂಠಪ್ರಮಾಣಂ ನಿಂದು
ಸೂರ್ಯಾಭಿಮುಖನಾಗಿ ಕೆಯ್ಯೆತ್ತಿ ಪೊಡಮಟ್ಟು

ಸಾರ ಮಂತ್ರಂಗಳಂ ಮನದ ತುದಿಯೊಳಗಿಟ್ಟು
ತ್ರಿಜಗಮಂ ಬೆಳಗುವ ಮಹಾಕಾಂತಿ ಸಂಪನ್ನ
ಭುಜಗಭೂಷಣ ಸರ್ವಕಾರುಣ್ಯ ಸಂಪನ್ನ
ಲೋಕಕ್ಕೆ ಕಣ್ಣಾಗಿ ಕಾಣಿಸುವ ಮಹಿಮನೇ
ಲೋಕಕ್ಕೆ ಬೆಳಗಾಗಿ ಬೆಳಗುವಾದಿತ್ಯನೇ
ಜೀವರಾಯುಷ್ಯ ರಾಶಿಯನಳಿವನಿಶ್ಚಳನೆ
ಭಾವಿಸಲು ತಮಕುಲವನೋಡಿಸುವ ನಿರ್ಮಳನೆ
ಎಂದಲ್ಲಿ ಸೂರ್ಯಶತಕವನೋದಿ ಮೆಚ್ಚುತಂ
ಬಂದು ಮೆಯ್ಯಂಗೊಟ್ಟನಾದಿತ್ಯನುನ್ನತಂ
ಪಡೆದು ಬಂದ ಮಯೂರಮೆಯ್ಯನಾನಂದದಿಂ
ಪಡೆದು ಬರೆ ಮೈ ಸುವರ್ಣಚ್ಛಾಯೆಯಂದದಿಂ
ಇರೆ ಮನೆಯೊಳಿರ್ದಂ ಸುಖಾಸ್ವಾದಮನನಾಗಿ

ಪರಿದುದಿತ್ತಂ ತಮಂ ಜನದ ಮನಕನುವಾಗಿ
ಬೆಳಗಾಗೆ ನಂದಭೂಪಂ ನಗರಿಯಂ ಬರಿಸಿ
ತೊಳತೊಳಗುವೋಕುಳಿಯ ಕುಪ್ಪಸಮುಮಂ ತರಿಸಿ
ಎಲ್ಲರ್ಗೆ ಕೊಡುತುಂ ಮಯೂರಂಗೆಯುಂ ಕೊಟ್ಟು
ಎಲ್ಲರಂ ಸಿಂಗರಂ ಮಾಡಲ್ಕೆ ಬೀಳ್ಕೊಟ್ಟು
ನಡುವಗಲ್ನಂದ ರಾಜಂ ಸಿಂಗರಂ ಮಾಡಿ
ನಡೆತಂದು ಕಡು ಚೆಲ್ವೆಯರ ಮೊತ್ತದೊಡಗೂಡಿ
ನನೆಯ ಹರಿಗೆಗಳಿಂದೆ ಹೂವಿನ ಕಠಾರದಿಂ
ಮೊನೆಯ ಮೊಗ್ಗೆಗಳ ಪಿಲ್ಲಣಿಗೆಯೊಯ್ಯಾರದಿಂ
ಕೇದಗೆಯ ಸಣ್ಣೆಸಳ ಕೂರಲಗು ಒಪ್ಪುತಿರೆ
ಪಾದರಿಗಳಿಂ ಸಮೆದ ಕಂಚುಳಿಕೆಯೊಪ್ಪುತಿರೆ
ಬಿದಿರಂಡೆ ಕೊಂಬು ಹೊಯಿಸಿಪ್ಪನಾಳಿಗಳೆಸೆಯೆ
ಪದೆಗೊರಲ ಪದ್ಮವದನೆಯರ ಹಂಬಂ ಮಸೆಯೆ
ಮುಂದಿರ್ದ ಪರಿವಾರಕೆಲ್ಲ ಕೆಯ್ಯಂ ಬೀಸಿ
ಸಂದಣಿಸಿ ಬೆರಿಸುತ್ತ ಪರಿಮಳಜಳಂ ಸೂಸೆ
ತಿರುಗಿದೊಡೆ ತಿರುಗಿ ನಿಂದನುವಾಗಲನುವಾಗೆ
ಬೆರಿಸಿದೊಡೆ ಬೆರಿಸಿ ಕಟ್ಟಿದಿರಾಗಲಿದಿರಾಗೆ

ಆಡುವವರೊಳ್ನಂದನಾ ಮಯೂರನನರಿದು
ನೋಡಿ ಹೊಯ್ ಹೊಯ್ ಬೆನ್ನನೊಡ್ಡೆನುತ್ತುಂ ಹೊಯ್ವ
ಹೊಯ್ಕೆ ಬೆನ್ನೊಡ್ಡಿದಂ ನಿಂದು ನೋಡದೆ ಮತ್ತೆ
ಕೆಯ್ಯಾರೆ ಹೊಯ್ದೊಡಂ ಕೆಲಕೆ ಸಾರದೆ ಮತ್ತೆ
ಇರೆ ನೊಂದೆ ಎಂದರಸನಲ್ಲಿ ಬೋಳೈಸುತ್ತೆ
ಹರುಷದಿ ಮಯೂರನಂ ನೋಡಿ ಸಂತೈಸುತ್ತೆ
ಬಾಸುಳಂ ನೋಳ್ಪ ನೆವದಿಂ ಕುಪ್ಪಸಂಗಳೆಯೆ
ಭಾಸುರ ಸುವರ್ಣ ಮಯವಾಗಿ ದೇಹಂ ಮೆರೆಯೆ
ತಿರುಗಿದಂ ಸರ್ವಸಂಭ್ರಮದೆ ತನ್ನರಮನೆಗೆ

ಕರೆ ಬಾಣ ಕಾಳಿದಾಸರನೆನುತ್ತುಂ ತನಗೆ
ಕೋಪವೇರುತ್ತ ಹುಸಿಗಲಸಿ ನಂದಂ ನೊಂದು
ತಾವಿಸುತೆ ಕರೆಹೋಗೆನುತ್ತೋಲಗದೊಳಂದು
ಇರೆ ಬಂದನಾ ಬಾಣನಾಸ್ಥಾನದೊಳಗಿಂಗೆ
ಹರುಷದಿಂ ಮುಕುಟಕೋಟಿಗಳ ನುಣ್ಪೆಳಗಿಂಗೆ
ಬಂದು ನಿಂದಿರೆ ಕಂಡು ನುಡಿದನರಸಂ ನೊಂದು
ಸಂದಣಿಪ ಕೋಪದಿಂ ನೋಡಿ ನಡುಗುತ್ತಂದು
ಇಂತು ಹುಸಿಯುಂ ಪೇಳ್ವರೆ ಮಯೂರನನರಿದು
ಸಂತತಂ ಹೊಂಬಣ್ಣವೆನಿಪ ದೇಹವನರಿದು

ಎನೆ ಬಾಣನೆಂದನೆಲೆ ನಂದನೆ ವಿಚಾರಿಪುದು
ತನುವಿನೊಳ್ಸುವರ್ಣ ಉಂಟು ಚಿತ್ತೈಸುವುದು
ತರಣಿಯಿಂ ಪೋದಿರಲ್ಪಡೆದನೀ ವರ್ಣಮಂ
ಅರಸ ಕೇಳ್ಪುಸಿನುಡಿವುದಿಲ್ಲ ದುರ್ವರ್ಣಮಂ
ಎಂದೊಡೆ ಮಯೂರನುಂಟೆಂದೊಡಂಬಡುತಮಿರೆ
ಮುಂದೆ ಬಾಣಂ ನಿಂದು ಮೂದಲಿಸಿಕೊಳುತಮಿರೆ

ಆದೊಡೇನಿಂತಿದಂ ಮಾಳ್ಪರಾರಿಂದೆನಲ್
ವಾದಕ್ಕೆ ಸೂರ್ಯನಿಂ ಪಡೆವುದೊಂದರಿದೆನಲ್
ಘುಡುಘುಡಿಸಿದಂ ಬಾಣನಾ ಸಭಾಪತಿಯೊಡನೆ
ನೃಪನ ಕರುಣವನಲ್ಲಿ ಬಲ್ಪಿಡಿದು ತೊಡಲೊಡನೆ

ಮುನ್ನುಳ್ಳುದಂ ಪಡೆದನಿಲ್ಲಿ ತಾಂ ಪೊಸತೇನು
ಬಿನ್ನಣವುದೇಕೆ ಮಿಗಿಲಂ ಪಡೆವೆನರಿದೇನು
ಪಡಿಫಡ ಇದೊಂದರಿದೆ ಕಡಿ ಕೆಯ್ಯನೊಂದಲ್ಲಿ
ತಡೆಯುದಾಗಳ್ಕಡಿಯಿಸಿದನೊಂದನಂತಲ್ಲಿ
ಕಡಿದ ಕೈ ಇರ್ದುದಾ ಯೊಡ್ಡೋಲಗದ ನಡುವೆ
ಪೃಡನಲ್ಲಿಗೆಯ್ತಂದನೊಲ್ದು ಭಕ್ತರ ನಡುವೆ
ಬಂದಲ್ಲಿ ರಂಗಮಂಟಪದೊಳಗೆ ಕುಳ್ಳಿರ್ದು
ಇಂದುಧರನತ್ತ ಮನದೊಳಗೆ ಹತ್ತಿರೆ ಸಾರ್ದು
ಹೃತ್ಕಮಳದೊಳಗಣ್ಮೆ ಶಿವಲಿಂಗಮಂ ತಂದು
ಸತ್ಯವೀಶ್ವರನೊಲ್ದು ಪೊಗಳತೊಡಗಿದನಂದು

ದೇವ ಓಂ ಜಯಜಯ ಮಹಾದೇವ ಕರುಣಿಪುದು
ದೇವ ಕಾಲಾಂತಕ ಮಹಾಕಾಲ ಕರುಣಿಪುದು
ದೇವ ಭೀಕರ ಮಹಾಕಾಳಗಳ ಕರುಣಿಪುದು
ದೇವ ಸುರರಾಪದ್ವಿನಾಶಕರ ಕರುಣಿಪುದು
ದೇವ ಚಂದ್ರಾಭರಣ ಭಾಳಾಕ್ಷ ಕರುಣಿಪುದು
ದೇವ ನಾರದಗೇಯ ಶುಭಚರಿತ ಕರುಣಿಪುದು
ದೇವ ನಾಗಾಜಿನ ಶುಭಾವರಣ ಕರುಣಿಪುದು
ದೇವ ತ್ರಿಲೋಕ ಜನ ತಿಮಿರಹರ ಕರುಣಿಪುದು
ದೇವ ಶರಣಾಬ್ಜ ಮುಖ ದಿನಮಣಿಯೆ ಕರುಣಿಪುದು
ದೇವ ಫಳಫಳಿಪ ತ್ರಿಶೂಲಧರ ಕರುಣಿಪುದು
ದೇವ ದುಸ್ತರತರ ತ್ರಿಪುರಹರ ಕರುಣಿಪುದು
ದೇವ ತ್ರಿಲೋಚನ ಮಹಾಗುರುವೆ ಕರುಣಿಪುದು
ದೇವ ಗಂಗಾವೃತ ಜಟಾಭಾರ ಕರುಣಿಪುದು
ದೇವ ಸದ್ಭಕ್ತಜನ ದಾನಕರ ಕರುಣಿಪುದು
ಎಂದು ಪೊಗಳಲ್ಕಂಕರಂ ಸುಮ್ಮಸಿರುತಿರಲ್
ಒಂದುವಂ ಕರುಣಿಸದೆ ಶಿವಲಿಂಗದೊಳಗಿರಲ್

ಅಂಬಿಕಾ ನೈತಂಬ ಬಿಂಬಲಂಪಟ ಹಸ್ತ
ಎಂಬ ನುಡಿಗೇಳ್ದು ನಸುನಗುತಭಯವರ ಹಸ್ತ

ಹೊಗಳದಿರು ಬಾಣ ಏನುಂ ಪೇಳೆನುತ್ತಮಿರೆ
ನಾಗಭೂಷಣ ಕರುಣಿಸೆನುತ ಕೈ ಮುಗಿವುತಿರೆ
ಕೆಯ್ಯೊಡನೆ ಕೊಯ್ದು ಕೈ ಪಲ್ಲವಿಸಿತಾತಂಗೆ
ಕೆಯ್ಯೊಡನೆ ಕಲ್ಪತರುವೈತಂದುದಾತಂಗೆ
ಬಂದ ಕಯ್ಯೊಂದಲ್ಲ ಬೇಡಿದವನಾದಿಯುಂ
ಅಂದು ಕೈಯ್ಯಿಲ್ಲದವರೆಲ್ಲರ್ಗೆ ದಾರಿಯುಂ
ನಿಂದು ಬಂದೆಲ್ಲರ್ಗೆ ಕೈಗಳಂ ಕೊಡಿಸುತುಂ
ಬಂದ ಭಕ್ತರ್ಗೆಲ್ಲ ಭಕ್ತಿಯಿಂದೆರಗುತಂ
ಕಹಳೆ ಮದ್ದಳೆ ಶಂಖಪಟಹ ನಾದಂಗಳಿಂ
ಬಹು ವಿಧದ ಕಿರು ಘಟೆಯು ಬಹಳ ಸ್ವನಂಗಳಿಂ
ಶರಣರೊಡಗೂಡಿ ಶಿವನಂ ಕೇಳಿಸುತ್ತಮಿರೆ
ಪರಿಪರಿಯು ಸಂತಸದ ಸುಖದೊಳೋಲಾಡುತಿರೆ

ನಂದರಾಜಂ ಕೇಳ್ದು ಕೌತುಕಮನೆಡೆಗೊಂಡು
ಬಂದು ಸಯ್ಗಡೆದು ಬಾಣನನಾಗಳೆದಿರ್ಗೊಂಡು
ಗಜಮಸ್ತಕದ ಮೇಲೆ ಪುರದೊಳಗೆ ಮೆರೆಯಿಸುತೆ
ನಿಜ ರಾಜಧಾನಿಯೊಳ್ ನೇಹದಿಂ ಮೆರೆಯಿಸುತೆ
ಇರಲಂದು ತೊಡಗಿಪರ ಸೇವೆಯುಂ ಪಿಂಗಿದಂ
ಹರನ ನಿಷ್ಠೆಯು ಭಾವಭಕ್ತಿಯೊಳ್ ಹೊಂಗಿದಂ
ಇಂತು ಪಲವುಂ ಕಾಲವೀಶನಂ ಪೊಗಳುತಿರೆ
ಸಂತತಂ ಶಿವನ ಮೆಲ್ಲಡಿಗೆ ತೊತ್ತಾಗುತಿರೆ
ಬಂದುದೊಂದಗ್ಗದ ವಿಮಾನವಾಕಾಶದಿಂ
ಅಂದು ನೋಳ್ಪರ ಕಣ್ಗೆ ಸೂರ್ಯ ಪ್ರಕಾಶದಿಂ
ಬರೆ ವಿಮಾನವನೇರಿ ರಜತಗಿರಿಗೆಯ್ತಂದು
ಪುರಹರನ ಚರಣಕ್ಕೆ ಸೈಗೆಡೆವುತುಂ ನಿಂದು
ಕಂಡು ಬಾಣಂಗೆ ಗಣಪದವಿಯುಂ ನಲಿದಿತ್ತು
ಖಂಡೇಂದುಮೌಳಿ ಪರಮ ಸ್ನೇಹಮುಂ ಪೊತ್ತು
ಭಕ್ತ ಜನದಿಚ್ಛೆಯುಂ ಸಲಿಸುವ ಕೃಪಾಸಿಂಧು
ಭಕ್ತರೇನೆಂದುದಂ ಮಾಡುವ ದಯಾಬಂಧು
ಭಕ್ತ ಗುರುಭಕ್ತನಿಧಿ ಭಕ್ತರ ಮನೋಹರಂ

ಭಕ್ತಗತಿಭಕ್ತ ಮತಿಭಕ್ತ ಸಂಪತ್ಕರಂ
ಪಂಪಾಪುರಾಂಬೋಧಿ ಪೂರ್ಣೇಂದು ಒಪ್ಪಿದಂ
ಹಂಪೆಯ ವಿರೂಪಾಕ್ಷನನವರತವೊಪ್ಪಿದಂ

**ಕಂದ॥** ವಾಣೀಪತಿಹರಿಯರಿಯದ
ಜಾಣಂ ಕಲ್ಯಾಣ ಸದನನೆನಗೊಲವಿಂದಂ
ಕ್ಷೀಣತರಪದವ ನೀವುದು
ಬಾಣನ ಸುತನೆಂದು ಹಂಪೆಯ ವಿರೂಪಾಕ್ಷಾ ॥

# ಉದ್ಭಟದೇವರ ಮಹಾತ್ಮೆ.

**ಕಂದ॥** ಪಟುತರದಿಂ ಸತಿ ನುಡಿದಾ।
ಘಟಿತಮೆನೆ ಘಟಿಯಿಸುವೆನೆನಲ್ಕೊಂಡೊಯ್ದಂ॥
ನಿಟಿಲಾಕ್ಷಂ ಪುರಸಹಿತು।
ದ್ಭಟದೇವನೆಮ್ಮ ಹಂಪೆಯ ವಿರೂಪಾಕ್ಷಂ॥

## ರಗಳೆ.

ಉರ್ವಿಯೊಳೊಂದು ಪುರಂ ರಂಜಿಸುವುದು
ಶರ್ವನ ಸದ್ಭಕ್ತಿಯನುದ್ಧರಿಪುದು
ಅಲ್ಲಿರ್ಪಂ ಶಿವಭಕ್ತಿ ಸದರ್ಥಂ
ಸಲ್ಲಲಿತಂ ಶಿವನೊಳಗೇಕಾರ್ಥಂ
ಆತನ ಪೆಸರೆಸೆವುದ್ಭಟದೇವಂ
ನೂತನ ಚಿತ್ತ ಸುಪೂಜಾಭಾವಂ
ಬಲವರ್ಪುದು ಕಾಲೊಳಗಿಡಿದಿರ್ಪುದು
ನಲಿವರ್ಪುದು ಮನದೊಳ್ನೆಲಸಿರ್ಪುದು
ಕರಣಂಗಳ್ ಶಿವನುಪಕರಣಂಗಳ್
ಪರಿಚಾರಕರಿಂದ್ರಿಯ ವರ್ಗಂಗಳ್
ಹೃದಯ ಸರೋಜಂ ಸೆಜ್ಜೆಯದಾಗಿರೆ
ಸದಮಳ ಮನವೇ ಕುಸುಮವದಾಗಿರೆ
ಹರಣಂ ಶಿವಲಿಂಗವೆ ತಾನಾಗಿರೆ
ಪರಿಣಾಮವೆಯಮೃತಾನ್ನವದಾಗಿರೆ
ಆರಾಧಿಪನಿರುಳುಂ ಪಗಲುಂ ಸಲೆ
ಪೂರೈಸುವ ಪೂಜೆಯೊಳೀಶಂ ನಿಲೆ
ಶಿವನೊಳ್ನೋಟಂ ಶಿವನೊಳ್ಕೂಟಂ
ಶಿವನೊಳ್ಮಾಟಂ ಶಿವನೊಳ್ಬೇಟಂ
ಹಾಡುವುದೆಲ್ಲಂ ಸಕಲಸ್ತೋತ್ರಂ
ಮಾಡುವುದೆಲ್ಲಂ ಪೂಜಾಸ್ತೋತ್ರಂ

ನೆನೆದುದೆ ಎಲ್ಲಂ ಪರಮಧ್ಯಾನಂ
ತನುಚೇಷ್ಟೆಗಳೀಶ್ವರನನುಮಾನಂ
ತಾನಾಗಿರೆ ಭಕ್ತಿಯು ಕರುವಾದಂ
ನಾನಾ ಸಾಮರ್ಥ್ಯದ ನಿಧಿಯಾದಂ
ತ್ರೈಕಾಲಜ್ಞಾನಮನೊಳಕೊಂಡಂ
ಲೋಕೈಕ ಪ್ರಭುವಂ ಕೆಳೆಗೊಂಡಂ

ಇಂತುದ್ಭಟದೇವಂ ನೆರೆ ಮೆರೆದಿರೆ
ಸಂತತ ಶಿವನಾನಂದದೊಳೊಪ್ಪಿರೆ
ತನ್ನ ಮನೋವಲ್ಲಭೆ ಎನಿಸಿರ್ಪಳ್
ಉನ್ನತ ಶಿವಪೂಜಾ ಸುಖಿಯಪ್ಪಳ್
ಮನಕವಯವವಾದಂತೆಸೆದಿರ್ಪಳ್
ತನುವೆರಡೊಂದೇ ಜೀವೆನಿಸಿರ್ಪಳ್
ಜೀವಕಳೆಗಳಂ ಕಲೆಯೊಳ್ತೋರ್ಪಳ್
ಭಾವದ ಬಳಿಕೆಯು ಬೆಳಸೆನಿಸಿರ್ಪಳ್
ಇಂತೆನಿಪಾ ವಲ್ಲಭೆಯುಂ ತಾನುಂ
ಸಂತ ಸುಖದೊಳೊಲಿದಿರ್ದುಂ ತಾನುಂ

ನೆತ್ತದ ಭರದಿಂದಾಡುತ್ತಿರೆಯಿರೆ
ಮುತ್ತುವದಾಯಕ್ಕುತ್ಸವಿಸುತ್ತಿರೆ
ಇರ್ದಿರ್ದುದ್ಭಟದೇವಂ ನಸುನಗೆ
ಸಾರ್ದು ಶಿವೈಕ್ಯ ಜ್ಞಾನಿ ಕರಂ ನಗೆ
ಸೆಡೆದುಳ್ಸುಯ್ವುಳ್ಮನದೊಳ್ಮಾನಿವಳ್
ಬಡವಾದಳ್ ಮಾನಿನಿ ಬಸವಳಿದಳ್
ಹಾಸಂಗಿಯನಿಳಿಪುತೆ ಹೊರೆಯಿಳಿದಳ್
ಲೇಸಾಯ್ತಾಟವೆನುತ್ತಂ ನುಡಿದಳ್
ಏಕಾಯ್ತೀಗಳ ಕಾರಣ ಹಾಸ್ಯಂ
ಏಕೆನ್ನಿಂದುಂಟೀಯುಪಹಾಸ್ಯಂ
ಏತರ ಕುಂದಂ ಕಂಡಿರಿ ನೀವೆನೆ
ಏತಕ್ಕಾದುದು ನಸುನಗೆ ನಿಮಗೆನೆ

ನಿನ್ನಯ ಕಾರಣವಲ್ಲಂಬುಜಮುಖಿ
ಎನ್ನಯ ಶರಣರ ಸಂಗಂ ಶಶಿಮುಖಿ
ಸೌರಾಷ್ಟ್ರದೊಳಿರ್ದೋಹಿಲದೇವಂ
ತಾರಾದ್ರಿಗೆ ನೆಗೆಯುತೆ ಶಿವಭಾವಂ
ಪಶುಪತಿಯೊಲವೊಚ್ಚತವಾಗಿರ್ದಂ
ಶಶಿಧರನೊಳ್ಸಂಮತವಾಗಿರ್ದಂ
ಓರ್ವನೆ ಪೋದಂ ದೇಶಿಗರಂದದಿ
ಶರ್ವನ ಕರುಣಂಬಡೆಯುದರಂದದಿ
ಘಂಟೆಯು ಮೊಳಗಾಗೆಯೆ ತಾಂ ಬಿರ್ದುದು
ನಂಟರ್ನಲ್ಲನೋಡುತ್ತಿರ್ದುದು
ಇದು ಕಾರಣದಿಂ ನಸು ನಗುತಿರ್ದೆಂ
ಸದಮಳ ಭಕ್ತಂಗಾಂ ನಗುತಿರ್ದೆಂ

ಎನೆ ಕಟಕಿಯ ನುಡಿ ಆಡಲು ಕಾಮಿನಿ
ಮನದೊಳ್ನಸುನಗುತೆಂದಳ್ಭಾಮಿನಿ
ನಗೆಯೊಪ್ಪುವುದೀ ಪುರ ಸಹಿತೊಯ್ದಡೆ
ನಗೆ ಸಫಲಂ ನಗುವಂದದೊಳೊಯ್ದಡೆ
ಕುಳ್ಳಿರ್ದೆಲ್ಲರನಾಡಲ್ಬಹುದೇ
ಒಳ್ಳಿಯರಂ ಹೊಲ್ಲಹವೆನಬಹುದೇ
ಮಾತ ನುಡಿಯೆ ಮಾತಿನೊಳೇನಪ್ಪುದು
ನೂತನ ಗುಣಮಂ ತೋರಲ್ವೇಳ್ಪುದು

ಎಂದೊಡೆ ಮನದೊಳ್ ಘುಡಿಘುಡಿಸುತ್ತಂ
ಇಂದುಧರನ ಶರಣಂ ನೋವುತ್ತಂ
ಪುರಮಂ ಕೊಂಡೊಯ್ದಪೆನರಿದಾವುದು
ಧರೆ ಚಿತ್ರವೆನಲ್ಕೊಯ್ದಪೆನೇವುದು
ನಾಡಿದು ಪೋಪೆಂ ಸೋಮನವಾರಂ
ಮಾಡುವುದುಂ ಮಾಡೆನುತುಂ ಧೀರಂ
ಇರೆ ಮಾನಿನಿಯುಣಕಕ್ಕಣಕಿಸುತಿರೆ
ಹರಭಕ್ತಂ ಕೊಂಡೊಯ್ದಪೆನೆನುತಿರೆ

ಕೊಂಡೊಯ್ವಂ ಕೊಂಡೊಯ್ವಂ ಪುರವಂ
ಕಂಡರಿಯವೆ ಕೇಳುದ್ಭಟನಿರವಂ
ಎನುತಂ ದೆಸೆಗೈಗಾವುದರಂ ತರೆ
ತನಗುಳ್ಳವರಂ ನೆರೆ ಬರಿಸುತ್ತಿರೆ
ಸಾರಿಸುತುಂ ದೆಸೆದೆಸೆಗಟ್ಟುತ್ತಿರೆ
ಮೀರಿದ ಮಾತಂ ನೆರೆ ಹರಿವುತ್ತಿರೆ
ಎನಿತೆನಿತುಂ ಸತಿ ಸಂಭ್ರಮಿಸುತ್ತಿರೆ
ಅನಿತನಿತುಂ ಭಕ್ತಂ ಮೀರುತ್ತಿರೆ
ಸರ್ವ ಜನಂ ಶಿವಪುರಮಂ ಶೀವುತೆ
ಶರ್ವನ ಗಣಪದಕೆಲ್ಲಂ ಬಯಸುತೆ
ಪಾಪಿಗಳುಂ ನಿಷ್ಪಾಪಿಗಳೆಲ್ಲಂ
ತಾಪತ್ರಯದಿಂ ಬೇವವರೆಲ್ಲಂ
ತಂಡದೊಳೆಯ್ತಂದೊಲವಿಂ ಶೀವಿತು
ಕಂಡವರುಂ ಕೇಳ್ದವರುಂ ಶೀಪಿತು
ಇನಿತು ಪುರಂ ನರರಂತಾಯ್ತಂತಿರೆ

ಅನಿತಾ ಮಾನಿನಿ ನುಡಿಗಳ್ತೀವಿರೆ
ಕೊಂಡೊಯ್ದೊಡೆ ಕೈಲಾಸದೊಳಿರ್ಪೆಂ
ಅಂಡಲೆವ ದುರಿತಗಳ ನೀಗಿರ್ಪೆಂ
ಇಲ್ಲಾ ಭಕ್ತನನೇ ಭಂಗಿಸುವೆಂ
ಎಲ್ಲಾ ಪಿರಿಯರೊಳಂ ಪಿಂಗಿಸುವೆಂ
ಎರಡುಂ ಪರಿಯಿಂದೆನಗೇ ಕಾರ್ಯಂ
ಹರಭಕ್ತಂಗರಿದಘಟಿತ ಕಾರ್ಯಂ
ಎನುತುದ್ಭಟನಲ್ಲಿಗೆ ನಡೆತಂದಳ್
ಘನ ಮಹಿಮನ ಸನ್ನಿಧಿಗೆಯ್ತಂದಳ್
ಬಂದುದು ವಾರಂ ನಿಂದುದು ಜನವಿದೆ
ಇಂದವೆ ಕೊಂಡೊಯ್ವುದು ತಳ್ವಿಲ್ಲದೆ
ಎನಲುದ್ಭಟದೇವಂ ನಡೆತಂದಂ
ಮನದೊಳಗೆರಡಿಲ್ಲದನೆಯ್ತಂದಂ
ಬಂದು ಶಿವಾಲಯದೊಳಗಂ ಪುಗುತಂ

ನಿಂದುದ್ಧೂಳನದಿಂದಂ ಮಿಗುತಂ
ರುದ್ರಾಕ್ಷಿಗಳಂ ಮೇಳೈಸುತ್ತಂ
ರುದ್ರನನೊಳಗಳವಡಿಸುತೆ ಬರುತುಂ
ಶಿವಲಿಂಗಕ್ಕಭಿಷೇಕಂ ಮಾಡುತೆ
ನವ ಪರಿಮಳ ಪೂಜೆಗಳಂ ಮಾಡುತೆ
ಧೂಪಾರತಿಗಳ ನಲವಿಂದೆತ್ತುತೆ
ಭಾಪುರೆ ಶಿವ ಎಂದಭವನ ನೋಡುತೆ
ಆರೋಗಿಸಲಿತ್ತನುನಯದಿಂದಂ
ಧೀರಂ ತಾಂಬೂಲವನೊಲವಿಂದಂ
ಕುಡುತಂ ಸದಮಳ ಮತಿ ಕುಳ್ಳಿರ್ದಂ
ಕಡು ಸಲುಗೆಯ ಶರಣಂ ಕುಳ್ಳಿರ್ದಂ
ಉದ್ಭಟನದ್ಭುತ ಗುಣಿ ಕುಳ್ಳಿರ್ದಂ
ಸದ್ಭಕ್ತಂ ಯುಕ್ತಂ ಕುಳ್ಳಿರ್ದಂ
ಹರನಂ ಚಿತ್ತದೊಳಿರಿಸುತ್ತಿರ್ದಂ
ಹರಲೀಲೆಯನುದ್ಯೋಗಿಸುತಿರ್ದಂ
ಸ್ವೇದಂ ಗದ್ಗದಮುಣ್ಮುತ್ತಿರೆ ಇರೆ
ಸಾದರದಿಂ ಪುಳಕದಿ ನೆಗೆಯುತ್ತಿರೆ
ಆನಂದಜಲಂ ಕೋಡಿಗೊಳುತ್ತಿರೆ
ನಾನಾ ನೂತನ ರಸ ಒಸರುತ್ತಿರೆ
ನೃಡ ಮೂರ್ತಿಯ ವರ್ಣನೆಯಂ ತೊಡಗಲ್

ಜಡೆಮುಡಿಗೊಂದೇ ಪದ್ಯಮನೆಸಗಲ್
ಪುರವೇಳ್ವುದು ಪುರವೇಳ್ವುದು ಶಿವ ಶಿವ
ನರಲೋಕಕ್ಕದ್ಭುತವೆನೆ ಶಿವ ಶಿವ
ಪದ್ಯಕ್ಕಂ ನೂರುಂ ಯೋಜನವಂ
ಚೋದ್ಯಂ ನೆಗೆವುತ್ತಿರ್ದುದು ನಭವಂ
ಪುರವಡರುತ್ತಿರೆ ಪುರಜನರರಿಯರು
ಧರಣಿಯ ಜನ ಬೆರಗಾಗುತ್ತಿರ್ದರು
ಪುರವಳಯಂ ಹರಿಗೋಲಂತಿರ್ದುದು
ಪುರಜನವೇರಿದ ಜನದಂತಿರ್ದುದು
ಗಗನಂ ಭವವಾರಿಧಿಯಂತಿರ್ದುದು

ಬಗೆ ಮಿಗೆ ಭರದಿಂದಡರುತ್ತಿರ್ದುದು
ದಾಂಟಿಸುವುದ್ಭಟನಂಬಿಗನಂತಿರೆ
ದಾಂಟ ನೆಗೆವುತ್ತಿರ್ದುದು ಬಣ್ಣಿಸುತಿರೆ
ಜಡೆಯಿಂ ಶ್ರೀಚರಣಂಬರೆ ಬಣ್ಣಿಸೆ
ತಡೆಯದೆ ನೂರುಂ ಪದ್ಯಂ ರಚಯಿಸೆ

ಕಾಮಾರಿಯ ಸದ್ಭಕ್ತನನರಿಯದೆ
ಕಾಮಿನಿ ನುಡಿದಳ್ಪೋಪುದನರಿಯದೆ
ಆದುದು ಮಧ್ಯಾಹ್ನವಿದೇನುದ್ಭಟ
ಪೋದುದು ನಿನ್ನಯ ಬಾಷೆಯುದುಕ್ಕಟ
ಎನೆ ನಸುನಗುತುಂ ಮೇಲುಂ ನೋಡೆನೆ
ದಿನಕರನೇರಿದ ಪೊಳ್ತುಂ ನೋಡೆನೆ
ನೋಡಿದಳಂ ತಾ ಮಾನಿನಿ ಮೇಲಂ
ನೋಡಲ್ರಜತಾಚಲದ ವಿಶಾಲಂ
ಶಶಿರವಿಕೋಟಿಗಳಂ ಭಂಗಿಸುತಿರೆ
ಪೊಸ ಪೊಸ ಬೆಳಗಿಂ ಘುಳುಘುಳಿಸುತ್ತಿರೆ
ನೋಡಲ್ಕಮ್ಮದೆ ಕಣ್ಣಂ ಮುಚ್ಚುತೆ
ನೋಡಿದ ಭಯದಿಂ ಮನದೊಳ್ಬೆರ್ಚುತೆ
ಉದ್ಭಟದೇವಂಗಂ ಮೆಯ್ಯಿಕ್ಕುತೆ
ಅದ್ಭುತ ರಸದೊಳಗಾಳುತ್ತೇಳುತೆ
ಇರೆ ನೆಗೆದುದು ಪುರವಡರಿತು ನಭವಂ
ಸುರಗಿರಿಯಂ ಮೀರಿತ್ತತಿ ವಿಭವಂ

ಕೈಲಾಸಪುರ ದ್ವಾರದ ಮುಂದಂ
ಶೈಲಜೆಯರಸನ ಭವನದ ಮುಂದಂ
ನಿಂದಿರಲುದ್ಭಟದೇವಂ ಬಂದಂ
ಇಂದುಧರನ ಆಜ್ಞೆಗೆ ನಡೆತಂದಂ
ನಡೆತರುತಂ ಕಾರುಣ್ಯಾಂಬೋಧಿಗೆ
ಕಡು ಸಲಿಗೆಯ ಶರಣರ ಸಂತೋಷಿಗೆ
ನೆನೆವರ ಮನದಾನಂದ ಪ್ರತತಿಗೆ
ಅನುನಯದಿಂ ಬಣ್ಣಿಸುವರ ಸುಮತಿಗೆ

ಬ್ರಹ್ಮಾಂಡ ಪ್ರಕರಾವೃತ ಕೀರ್ತಿಗೆ
ಬ್ರಹ್ಮಂ ಪೆಸರಿಡಬಾರದ ಮೂರ್ತಿಗೆ
ನೆನೆಯದ ಮುನ್ನಂ ಕರುಣಿಪ ದಾನಿಗೆ
ನೆನೆವರನಘದಿಂದೆತ್ತುವ ಮಾನಿಗೆ
ಮೆಯ್ಯಿಕ್ಕಿದನುದ್ಭಟದೇವಂ ಸಲೆ
ಮೆಯೊಳ್ಪುಳಕಾವಳಿ ಕೀಲಿಸಿ ನಿಲೆ
ಕಂಡಾಗಳೆ ಶಂಕರನೊಲವಿಂದಂ
ಕಂಡಾ ನಂದೀಶ್ವರ ಧರೆಯಿಂದಂ
ಪುರ ಸಹಿತಂ ನಡೆತಂದವರುಂಟೇ
ತರುಣಿಯ ನುಡಿಯಂ ಸಲಿಸಿದರುಂಟೇ
ಹರಲೀಲೆಯ ನೆರೆ ತಾಳ್ದವರುಂಟೇ
ಧರೆ ಚಿತ್ರವೆನಲ್ಬಂದವರುಂಟೇ
ಎಂದುದ್ಭಟದೇವನನೆತ್ತುತ್ತಂ
ಕುಂದದ ಕೃಪೆಯಿಂ ಬಿಗಿದಪ್ಪುತ್ತಂ
ಗಣ ಪದವಿಯನಾನಂದದಲೀವುತೆ
ಗಣ ಸಂತತಿಗತಿಶಯದಿಂದರಿಪುತೆ
ಪುರಮಂ ಶಿವಲೋಕದೊಳೊಲ್ದಿರಿಸುತೆ
ಪುರಜನಕೆಲ್ಲಂ ಕರುಣವನೀವುತೆ
ಶಶಿರವಿ ಶಿಖಿಲೋಚನನೊಪ್ಪಿರ್ದಂ
ಪಶುಪತಿ ಗಿರಿಜಾಪತಿಯೊಪ್ಪಿರ್ದಂ
ನೀಲಗಳ ನಿರ್ಮಳನೊಪ್ಪಿರ್ದಂ
ಕಾಲಹರಂ ಪುರಹರನೊಪ್ಪಿರ್ದಂ
ಭೀಮಂ ಭರ್ಗಂ ಭವನೊಪ್ಪಿರ್ದಂ
ಸೋಮಂ ಶಾಂತಂ ಶಿವನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

**ಕಂದ||** ದೇವರ ದೇವಂ ದೇವರ
ಜೀವಂ ದಯೆಯಿಂದಲೆನಗೆ ಚಂದ್ರಾಭರಣಂ
ಭಾವಿಸಿ ಭಕ್ತಿಯನುದ್ಭಟ
ದೇವನ ಸುತನೆಂದು ಕುಡುಗೆ ಹಂಪೆಯರಾಯಂ ||

# ಹಲಾಯುಧದೇವರ ರಗಳೆ.

ಕಂದ॥ ಶ್ರೀ ವಿಶ್ವೇಶ್ವರನಭವಂ
ದೇವ ಕುಲಾರ್ಕಂ ಪುರಾರಿಮೆರೆದಂ ಶಿವಷ
ಡ್ಭಾವಿ ಎನಿಪ್ಪ ಹಲಾಯುಧ
ದೇವನನೊಲವಿಂ ಹಂಪೆಯ ವಿರೂಪಾಕ್ಷಂ॥

## ರಗಳೆ.

ಉತ್ತರದಿಶಾಭಾಗದೊಳ್ಕೀರ್ತಿಯಂ ಪಡೆದು
ಒತ್ತರಿಪ ಮಾಯೆಯಂ ಸಚ್ಚರಿತದಿಂ ಗೆಲಿದು
ಇರ್ಪುದು ನವಗ್ರಾಮವೆಂಬ ಪುರವಂತಲ್ಲಿ
ಇರ್ಪನೋರ್ವಂ ಶಿವನ ಭಕ್ತನೊಲವಿಂದಲ್ಲಿ
ತನ್ನ ನಾಮಂ ಹಲಾಯುಧನೆಂಬುದಾಗಿರಲ್
ತನ್ನ ಕೆಯ್ಯಾರ್ಚನೆ ಶಿವಂಗೆ ಸವಿಯಾಗಿರಲ್
ನಡೆತಂದು ಶಿವನಿಳಯಮಂ ಪೊಕ್ಕು ಕೈಮುಗಿದು
ಮೃಡ ಮೂರ್ತಿ ಘನಕೀರ್ತಿ ಎನುತ ಕೆಯ್ಯಂ ಮುಗಿದು
ತೆಗೆದಪ್ಪಿ ಮುಂಡಾಡಿ ಮುದ್ದಾಡಿ ಮತ್ತಪ್ಪಿ
ನೆಗೆವ ಪುಳಕಂಗಳಂಗದೆ ಕೀಲಿಸುತ್ತಪ್ಪಿ
ಅಪ್ಪಳಿಯುದಲ್ಲಿ ಮಜ್ಜನಕೆರೆದು ತಳ್ಕಿರಿದು
ತಪ್ಪಿ ತಡಬಡಿಸುತುಂ ಪೊಸಪೂಜೆಯಂ ಮೆರೆದು
ಕುಣಿಯುತ್ತೆ ಮಣಿಯುತ್ತೆ ಧೂಪಮಂ ನಲಿದಿತ್ತು
ತಣಿಯುತ್ತೆ ತೂಗುತ್ತೆಯಾರತಿಗಳಂ ಪೊತ್ತು
ಆರೋಗಣೆಯನಿತ್ತು ವೀಳೆಯಂಗಳನಿತ್ತು
ತಾರಾದ್ರಿಯರಸಂಗೆ ಸಕಳ ಸುಖಮುಮನಿತ್ತು
ಪೊಸಗಬ್ಬಮಂ ಗದ್ಯಪದ್ಯಂಗಳಂ ಪೇಳ್ದು
ಅಸಮಾಕ್ಷನೊಕ್ಸಂದ ಕಿಂಕರತೆಯಂ ತಾಳ್ದು
ಇರ್ಪನೊಪ್ಪುತ್ತಿರೆ ಹಲಾಯುಧಂ ಹರುಷದಿಂ
ಸರ್ಪಭೂಷಣನ ಸದ್ಭಕ್ತಿ ಸಂಸ್ಪರ್ಶದಿಂ

ಇರಲಾ ನವಗ್ರಾಮದ ಪ್ರಭುಗಳೆಲ್ಲರುಂ
ಹರುಷದಿಂ ಕೊಂಡಾಡುತಿರ್ಪರೊಲ್ದೆಲ್ಲರುಂ
ಆ ನವಗ್ರಾಮಕ್ಕೆ ತಾನೆ ಸಜ್ಜನನಾಗಿ
ಏನೆಂಬೆ ಶಂಕರಾರ್ಚನೆಗೆ ಸಿರಿಕರನಾಗಿ
ಎಲ್ಲರುಂ ಸದ್ಭಕ್ತರಂ ಯುಕ್ತರಂ ಮಾಡಿ
ಎಲ್ಲರುಂ ಸತತಂ ಪೂಜಾಸಕ್ತಿಯೊಳ್ಕೂಡಿ
ಭಾಳಕ್ಕೆ ಭೂತಿ ನಾಲಿಗೆಗೆ ಪಂಚಾಕ್ಷರಂ
ಗಳಭುಜಾದ್ಯಂಗಕೆ ರುದ್ರಾಕ್ಷಿ ವಿಸ್ತರಂ
ಕಿವಿಗೆ ಶಿವಕೀರ್ತಿ ಕಣ್ಗಳಿಗಚ್ಚ ಸುಖಜಳಂ
ತವಕಿಸುವ ಭಾವಕ್ಕೆ ಶಿವಮೂರ್ತಿಯುಜ್ವಳಂ
ಕೆಯ್ಗಳ್ಗೆ ಸುಖವೊಸರ್ವ ಸಂಪದದ ಕಂಪನಂ
ಮೆಯ್ಗೆ ನಳನಳಿಸಿ ಬಳೆ ಬಳೆವ ಪುಳಕದ ಬನಂ
ತೊಡಿಗೆಯಾಗಿರೆ ಮಾಡಿದಂ ನವಗ್ರಾಮದೊಳ್
ಮೃಡನಲ್ಲದರಿಯದ ಹಲಾಯುಧಂ ಪ್ರೇಮದೊಳ್
ಇಂತು ನೋಡುತ್ತವಾಡುತ್ತ ಹಾಡುತ್ತಮಿರೆ
ಸಂತತಂ ಶಿವಭಕ್ತಿ ಪರ್ಬಿ ಪಲ್ಲವಿಸುತಿರೆ

ಒಂದು ದಿವಸಂ ನವಗ್ರಾಮದ ಪ್ರಭುಕುಳಂ
ಒಂದೂರ್ಗೆ ಬಂದೆಲ್ಲರುಂ ಭಕ್ತ ಸಂಕುಳಂ
ಪರಮ ಭಕ್ತಂ ಹಲಾಯುಧಗಣವರನ ಕೂಡೆ
ನೆರೆದು ಶಿವಗೋಷ್ಠಿಯಿಂದಾನಂದವಳ್ಕಾಡೆ
ಇರೆ ಮಾತುಮಾತಿಂಗೆ ಗೋಷ್ಠಿ ಮೀರುತ್ತಿರಲ್
ಹರಭಕ್ತರೊಳಧಿಕರ ಪ್ರಸಂಗಂ ಬರಲ್
ಓಹಿಲಯ್ಯಂ ಶರೀರಂ ಬೆರಸು ಪೋಗಲ್ಕೆ
ಸಾಹಸದೆ ನಸುನಗುತ ಪುರಸಹಿತ ಪೋಗಲ್ಕೆ
ಉದ್ಭಟಂಗಲ್ಲದಿನ್ನುಳಿದರ್ಗೆ ತೀರ್ವುದೇ
ಅದ್ಭುತ ರಸಂ ಮಿಕ್ಕ ಭಕ್ತರ್ಗೆ ಸಾರ್ವುದೇ

ಎನೆ ಹಲಾಯುಧದೇವನುಬ್ಬಸಂಗೊಂಡಲ್ಲಿ
ಮನದೊಳಗೆ ಶರಣನತಿ ಹುರುಡಿಸುತ್ತಂತಲ್ಲಿ

ಶಿವನೊಲ್ದೊಡರಿದೇನು ಪುರವನೊಯ್ದುದು ಪಿರಿದೆ
ಭವನ ಕಾರುಣ್ಯ ಉಳ್ಳೊಡೆ ತಾನಿವೆಲ್ಲರಿದೆ

ಎಂದೊಡೆ ಹಲಾಯುಧಂಗೆಂದರಾ ಗೌಡಗಳ್
ಸಂದಣಿಪ ಕಟಿಕೆಗಳನಾಡಿದರ್ಪ್ರಭುವುಗಳ್
ಉದ್ಭಟನನಾಳಿಗೊಳ್ವಂ ಹಲಾಯುಧ ನಿನಗೆ
ಸದ್ಭಕ್ತನಪ್ಪೆ ನೆರೆ ಕೊರತೆಯುಂಟೇ ನಿನಗೆ
ಇಂತಾಳಿಗೊಳ್ವವರ್ಘನವಲ್ಲದಿರ್ಪರೇ
ಕಂತುಮದಹರನಲ್ಲಿಗೋರ್ವನೇ ಪೋಪರೇ
ಎಮ್ಮೀ ನವಗ್ರಾಮಮುಂ ಒಯ್ಯದಿರ್ಪರೇ
ಎಮ್ಮೆಲ್ಲರಂ ಶಿವನ ಮುಂದಿರಿಸದಿರ್ಪರೇ

ಎಂದ ಕಟಿಕಿಗಳಂ ಹಲಾಯುಧಂ ಕೇಳುತಂ
ನಿಂದು ಬಾಷೆಗಳನಿತ್ತಂ ಸಭೆಯೊಳುಬ್ಬುತಂ
ನಿಮ್ಮ ನುಡಿಯಲ್ಲ ಶಿವನ ಪ್ರೇರಣೆ ಎಂದೆನುತೆ
ನೀವೆಂದ ಮಾಳ್ಕೆಯಿಂ ಕೊಂಡು ಪೋದಪೆನೆನುತೆ
ಒಂದು ಪುರಮಂ ಕೊಂಡು ಪೋದನುದ್ಭಟನಲ್ಲಿ
ಸಂದಿಸಿ ನವಗ್ರಾಮ ಸಹಿತವೆಯ್ದುವೆನಿಲ್ಲಿ
ಉದ್ಭಟಂಗುಳ್ಳ ಚಂದ್ರಾಭರಣವೆನಗಿಲ್ಲ
ಅದ್ಭುತಂ ಮಾಳ್ಪೆನೀ ಕಟಿಕಿಗಳೆಮಗೆ ಸಲ್ಲ
ನಾಳೆ ಕೊಂಡೊಯ್ವಪೆಂ ಹೊಯ್ತಂಗುರವನೆಂದು
ಶೂಲಿಯಣುಗಂ ಹೊಯ್ಸಿದಂ ಧರೆ ನಡುಗಲಂದು
ಸಡಿಫಡ ನರೋರಗರೊಳಡ್ಡ ಬರ್ಪವನಾವ
ನಡೆಗೊಂಡು ಭಕ್ತಿಕಳೆಗಿದಿರಪ್ಪನಿನ್ನಾವ
ಎಂದು ಘರ್ಜಿಸಿ ಗಜರಿ ಶಿವರಾತ್ರಿಯಂ ಮಾಡಿ
ಮುಂದೆ ಬೆಳಗಾಗೆ ಭಸಿತೋದ್ಧೂಳನಂ ಮಾಡಿ
ನಡೆವೇಂ ನವಗ್ರಾಮ ಸಹಿತಾಗಿ ನೋಡೆನುತೆ
ಮೃಡನಾಲಯಕ್ಕೆ ಬಂದಂ ಸಾರು ಸಾರೆನುತೆ

ಬಂದು ಶಿವನಂ ನೋಡಿ ಶಂಕರಾ ಶಶಿಧರಾ
ಇಂದೆನಗೆ ಕರುಣಿಪುದು ಗಿರಿಜಾ ಮನೋಹರಾ

ದೇವ ನೀಂ ಕರುಣಿಸಿದೊಡೆನಗೆ ತೀರದುದುಂಟೆ
ದೇವ ನೀಂ ಕೃಪೆ ಮಾಡಲಾವುದೊಂದರಿದುಂಟೆ
ಕರುಣಿಸಲಿರುಂಪೆಯುದು ಬ್ರಹ್ಮನಾಗದೆ ದೇವ
ಕರುಣಿಸಲ್ಮಷಕನುಂ ವಿಷ್ಣುವಾಗದೆ ದೇವ
ಭಕ್ತರಭಿಮಾನವೇ ಭಕ್ತರಾಧೀನವೇ
ಭಕ್ತರನುಕೂಲವೇ ಭಕ್ತರ ನಿಧಾನವೇ
ಜಯ ಸುರನದೀತರಂಗಾವೃತಜಟಾಭಾರ
ಜಯ ಸುಧಾಕರ ಕಳಾಧರ ಮಂಗಳಾಕಾರ
ಜಯ ಲೋಚನತ್ರಯ ವಿರಾಜಿತ ಮಹಾ ಪ್ರಭುವೆ
ಜಯ ಸರ್ಪರಾಜಕುಂಡಲಮಂಡಿತ ಪ್ರಭುವೆ
ಜಯ ವಿಮಳಪಂಚಮುಖರಂಜಿತಸದಾಶಿವನೆ
ಜಯ ನೀಲಕಂಠ ಭವಹರ ಭವಾನೀ ಧವನೆ
ಜಯ ದಶಭುಜಾದಂಡ ಜಯ ಗಜಾಜಿನಗಾತ್ರ
ಜಯ ಪುಂಡರೀಕ ಚರ್ಮಾವರಣಕಟಿಸೂತ್ರ
ಜಯ ಕಮಳನೇತ್ರಪೂಜಿತಪಾದಸರಸಿರುಹ
ಜಯ ಸಕಳಭಕ್ತಕಾಮಿತಕಲ್ಪಭೂಮಿರುಹ
ಜಯ ನಿತ್ಯ ಜಯ ಸತ್ಯ ಜಯ ಭರ್ಗ ಜಯ ಭೀಮ
ಜಯ ರುದ್ರ ಜಯ ಭದ್ರ ಜಯ ರಾಮ ಜಯ ಸೋಮ

ಎಂದು ಪೊಗಳ್ವನಿತಕ್ಕೆ ಪುರವೇಳ್ದುವಮ್ಮಮ್ಮ
ಚಂದದ ನವಗ್ರಾಮವಾಗಸದೊಳವ್ವಮ್ಮ
ನೆಗೆಯೆ ಪೂಮಳೆಗರೆದವೀ ಧರಾತಳದೊಳಗೆ
ಜಗವರಿಯೆ ದುಂದುಭಿನಾದಂಗಳ್ಮೊಳವೊಳಗೆ
ಗಗನದೊಳ್ಪೋಗುತಿರೆ ಲೋಕವೆಲ್ಲಂ ಕಂಡು
ಬಗೆಗಗೋಚರವಾಯ್ತೆನಲ್ ಕೌತುಕಂಗೊಂಡು
ಸುಖ ಗೋಷ್ಠಿ ಎತ್ತ ಮಾತಿನ ಮಾತು ತಾನೆತ್ತ
ನಿಖಿಳವರಿಯಲ್ ನವಗ್ರಾಮವೇರುವುದಿತ್ತ
ಒಂದು ಪುರ ಒಂದುದ್ಘಟನ ಕೂಡೆ ನೆರೆ ಪೋಯ್ತು
ಒಂದೆಂದೊಡೊಂಬತ್ತೆನಿಪ್ಪುದಿವರಿಂದಾಯ್ತು
ಆಹಾ ಹಲಾಯುಧನ ಭಾಷೆ ಕೇಳ್ವಗರ್ಾಸೆ

ಆಹಾ ಹಲಾಯುಧನ ಭಾಷೆ ಭಕ್ತಿಗೆ ಲೇಸೆ
ಎಂದಿಂತು ಜನವೆಲ್ಲ ತಲೆದೂಗಿ ಕೊಂಡಾಡೆ

ಬಂದೇರಿದವು ನವಗ್ರಾಮವಮರರ್ನೋಡೆ
ಇಂದ್ರಾದಿದಿಕ್ಪಾಲ ಪುರವೆಲ್ಲವಂ ದಾಂಟಿ
ಚಂದ್ರ ಮಾರ್ತಾಂಡ ತಾರಾಲೋಕಮಂ ದಾಂಟಿ
ಸತ್ಯಲೋಕಕ್ಕೆ ನೆಗೆದುವು ನವಗ್ರಾಮಮಿದು
ಸತ್ಯಶರಣನ ಹಲಾಯುಧನ ಸಾಮರ್ಥ್ಯಮಿದು
ದೇವಲೋಕಕ್ಕೆ ಪೊಸತಾಗುತಿರೆ ನಡೆತಂದು
ದೇವನಂದೀಶ್ವರನ ಬಾಗಿಲ್ವರಂ ಬಂದು
ನಿಂದಿರಲ್ ಭರದಿಂದಲಿಳಿದಂ ಹಲಾಯುಧಂ

ಇಂದುಮೌಳಿಯನೀಕ್ಷಿಸುತ್ತೆ ನಾನಾ ವಿಧಂ
ಪೊಗಳುತುಂ ಪೊಂಗುತುಂ ಮೆಯ್ಯಿಕ್ಕಿ ಪಟ್ಟಿರಲ್
ಬಗೆ ಸದಾಶಿವನ ಮೆಲ್ಲಡಿಗಳಂ ಮುಟ್ಟಿರಲ್
ಕಂಡು ಶಂಕರನಲ್ಲಿ ಗಣಕುಲಕೆ ತೋರುತುಂ
ತಂಡತಂಡದ ಮುಳುಕ ದಿಂಡೆಗೊಳಲುರ್ಬುತುಂ
ನೋಡಯ್ಯ ನಂದೀಶ ಇಂತಪ್ಪ ಭಕ್ತನಂ
ನೋಡೇಕನಿಷ್ಠೆಗೂಡಿದ ಭಕ್ತಿಯುಕ್ತನಂ
ಮಾತುಮಾತಿಂಗಿಲ್ಲಿಗೆಯ್ದಿ ಬಂದವರುಂಟೆ
ಜಾತಿಸೂತಕವಳಿದು ನೀತಿಗೆಟ್ಟವರುಂಟೆ
ಒಂಬತ್ತು ಪುರವರ್ಗ ಸಹಿತ ಬಂದವರುಂಟೆ
ಅಂಬರದ ಬಟ್ಟೆಯೊಳ್ ನಂಬಿ ಬಂದವರುಂಟೆ
ಎನ್ನ ಭಕ್ತರ್ಗೆ ಮೂದಲೆ ಮಾತು ಸೈರಿಪುದೆ
ಎನ್ನ ಭಕ್ತರ್ಗೆ ಕಪಟಂಗಳುಂ ಸೈರಿಪುದೆ
ಎನ್ನ ಭಕ್ತರ್ಗೆ ಹಿಂದೊಂದು ಮುಂದೊಂದುಂಟೆ
ಎನ್ನ ಭಕ್ತರ್ಗೆ ಪುಸಿಗಳ ಪಸರವೇನುಂಟೆ
ನವವಿಧಂ ನವಪೂಜೆ ನವನವ ಪ್ರೇಮವಿವೆ
ನವರಸಾನ್ನವು ಭಕ್ತಿ ನವನವ ಗ್ರಾಮವಿವೆ
ಎನುತುಂ ಹಲಾಯುಧನನೆತ್ತಿ ತಳ್ಕೈಸುತುಂ

ಮನವಾರೆ ಗಣಪದವನೊಪ್ಪದಿಂದೀಯುತುಂ
ಆ ನವಗ್ರಾಮಮಂ ರುದ್ರಲೋಕದೊಳಿರಿಸಿ
ನಾನಾ ಸುಖಂಗಳಂ ಚಿತ್ತದೊಳಗಾದರಿಸಿ
ದುರಿತಹರನಂತಕಹರಂ ಪಂಚಶರಹರಂ
ಪುರಹರಂ ಜನನಹರನಗಜಾಮನೋಹರಂ
ಶಶಿಧರಂ ಫಣಿಧರಂ ಸುರುಚಿರ ಜಟಾಧರಂ
ವಿಷಧರಂ ಗಜಚರ್ಮಧರನತುಳಧರಂ
ಸುರ ಶಿರೋಮಾಲಾಧರಂ ದಕ್ಷಮುಖಹರಂ
ಸರಸಿಜಾಸನ ಶಿರಃಕಮಳಮಂಡಿತಕರಂ
ಸದಮಳಂ ಸುಖಮಯಂ ಸಕಳಗುಣನೊಪ್ಪಿದಂ
ಮದನಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ ॥

**ಕಂದ॥** ಶ್ರೀವಾಣೀಪತಿಗಳ ಗುರು
ದೇವಂ ದಯೆಯಿಂದಲೆನಗೆ ಭಕ್ತಿಯನೊಲವಿಂ
ದೀವುತ್ತಿರ್ಕೆ ಹಲಾಯುಧ
ದೇವನ ಸುತನೆಂದು ಹಂಪೆಯ ವಿರೂಪಾಕ್ಷಂ ॥

# ಸಾಮವೇದಿಗಳ ಮಹಾತ್ಮೆ.

**ಕಂದ**॥ ಧರಣೀ ತಳದೊಳ್ಮೆರೆದಂ ।
ಸರಾಗದಿಂ ಸಾಮವೇದಿಗಳ ನಹಿಕಟಕಂ ॥
ಕರುಣಾಕರನಪ್ರತಿಮಂ ।
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಉತ್ತರದಿಶಾಭಾಗದೊಳಗೆ ಭಾಸುರವೆನಿಸಿ
ಛತ್ತೀಸಪುರವಿರ್ಪುದೀ ಧರೆಗೆ ತೊಡವೆನಿಸಿ
ಆ ಪುರಂಗಳೊಳೊಂದು ಪುರದೊಳಿರ್ಪಂ ನೋಡ
ಪಾಪರಹಿತಂ ಸಾಮವೇದಿ ಎಂಬಂ ನೋಡ
ಸಾಮವೇದಂ ಒಂದು ರೂಪಾಗಿ ನೆಲಸಿರ್ಪ
ಭೂಮಿಯೊಳಗುಳ್ಳ ಶಾಸ್ತ್ರಂ ಜಿಹ್ವೆಯೊಳಗಿರ್ಪ
ಸಕಲ ಕಾವ್ಯಂ ನಾಟಕಂ ತನ್ನ ಮುಖವಪ್ಪ
ಸಕಲ ವೇದಾಂತ ಸಿದ್ಧಾಂತದಿಂದ ದೃಢವಪ್ಪ
ತರ್ಕ ತಂತ್ರಂ ವ್ಯಾಕರಣ ಕಳಾವಿದನಪ್ಪ
ಮಾರ್ಕೊಳಲ್ಪಾರದ ಮಹಾವಾಗ್ಮಿ ಎನಿಸಿಪ್ಪ
ಎಂತಪ್ಪ ಪಿರಿಯರುಂ ಬಂದು ಮೆಯ್ಯಿಕ್ಕುವರ್
ಎಂತಪ್ಪ ವಿದ್ವಾಂಸರುಂ ತನಗೆ ತೆಕ್ಕುವರ್
ವೇದಮಯಮಾಚರಣೆ ನುಡಿ ಎಲ್ಲ ಶಾಸ್ತ್ರಮಯ
ವಾದುದೇನೆಂಬೆನಾತನ ಮನಂ ಶಾಂತಿಮಯ
ಎರಗನಾರ್ಗಂ ನೋಡ ತನಗೆರಗುವದು ಜಗಂ
ನೆರೆ ಹೊಗಳ ಹೊಗಳುವುದು ತನ್ನ ಧರೆ ಸೋಜಿಗಂ
ಶಿಷ್ಯರಾ ಮೂರು ಸಾಸಿರದ ಮೇಲೈನೂರು
ಪೋಷ್ಯ ವರ್ಗಂ ಧರೆಯ ಜನವೆಲ್ಲ ಸಲೆ ಮಾರು
ವಾಮ ಹಸ್ತದೊಳಲ್ಲದಿಕ್ಷನಕ್ಷತೆಗಳಂ
ವಾಮೇತರದೊಳಗ್ನಿ ನೆಲಸಿರ್ಪುದಗ್ಗಳಂ

ಇಂತಪ್ಪ ಪುಣ್ಯಕೀರ್ತಿಯನೊಪ್ಪದಿಂ ಸಾರ್ದು
ಸಂತತಂ ಛತ್ರೀಶಪುರದೊಳಗೆ ಸುಖಮಿರ್ದು

ಒಂದು ದಿವಸಂ ಸಾಮವೇದಿಗಳ್ ಶಿಷ್ಯರುಂ
ಮುಂದು ಜಾವದೊಳೆದ್ದು ಕೂಡಿಕೊಂಡೆಲ್ಲರುಂ
ಆರಣವನೋದಲಾರಣ್ಯಕ್ಕೆ ನಡೆತಂದು
ಧಾರಣೆಯ ವಿದ್ವಾಂಸರೊಡಗೂಡಿ ಬರುತಂದು
ಅಶ್ವತ್ಥ ಮೂಲವೇದಿಕೆಯಲ್ಲಿ ಕುಳ್ಳಿರ್ದು
ವಿಶ್ವ ಜನಮಾರುಮರಿಯದ ಕಾನನದೊಳಿರ್ದು
ಋಚವರ್ಧ ಋಚವೆಂಬವಂ ನಲಿದು ಪೇಳುತುಂ
ರುಚಿಯುಸಲ್ಪಾದವರೆ ಪಾದವಂ ಪೇಳುತುಂ
ಪದಪಾಳಿ ವರ್ಗ ಕ್ರಮಂಗಳಂ ತಿಳಿಪುತುಂ
ಪದುಳದಿಂದಂ ಇರ್ದು ಹಸನಿದೆಂದರಿಪುತುಂ
ಬೆರಲಿಂದುದಾತ್ತಾನುದಾತ್ತಂಗಳಂ ತೋರಿ
ಸ್ವರಿತ ಪ್ರಚಯ ಮುಖ ಸ್ವರ ಭೇದಮಂ ತೋರಿ
ಛಂದಸ್ಸು ಋಷಿ ದೇವತೆಗಳೆಂಬಿವಂ ಪೇಳ್ದು
ನಿಂದ ಮಧ್ಯಾಹ್ನ ಪರಿಯಂತರಂ ಮಿಗೆ ಪೇಳ್ದು
ನಡೆತಂದರಾ ಸಾಮವೇದಿಗಳ್ನಲವಿಂದೆ
ನಡೆತಂದರಾಕಾಶಗಮನದೊಳ್ನಲವಿಂದೆ
ಕೆಳಗೆ ಶಿಷ್ಯಪ್ರತತಿ ಕೈ ಮುಗಿದು ಬರುತಮಿರೆ
ಇಳೆಗೆ ಪೊಸತೆನೆ ಮೇಲೆ ಧೋವತಿಗಳಾರುತಿರೆ
ತಳಿಗಾಸೆ ಬೆಳಬೆಳಗೆ ಸುಲಿಪಲ್ ತೊಳತೊಳಗೆ
ನಳನಳಿಪ ಮೆಯ್ಮೆಳಗು ಬನಮೆಲ್ಲಮಂ ಬೆಳಗೆ
ನಡೆತಂದರಿಟ್ಟ ಮುಟ್ಟಿಗಳಿಂ ಪವಿತ್ರದಿಂ
ನಡೆತಂದರಿಕ್ಕಿರ್ದ ಯಜ್ಞೋಪವೀತದಿಂ
ಬರುತಿರ್ದರಾ ಸಾಮವೇದಿಗಳ್ ಗಗನದೊಳ್
ಬರುತಿರ್ದರಾ ಶಿಷ್ಯರೆಲ್ಲ ಭೂವಳಯದೊಳ್

ಇತ್ತಲಾ ಛತ್ರೀಸಪುರದಿಂದೆ ನಡೆತಂದು
ಉತ್ತಮ ಶಿವಾರ್ಚಕಶ್ವಪಚ ದೇವರ್ಬಂದು

ಭವಿಗಳಾರುಂ ಸುಳಿಯಬಾರದಟ್ಟೆಡವಿಯೊಳ್
ಭವನನರ್ಚಿಸಲೆಂದು ಸರ್ವ ಸುಖವೃತ್ತಿಯೊಳ್
ಕಾಡ ವೊಲ್ಲೆಯು ಮಲ್ಲಿಗೆಯು ಹೊದರ ತಳದೊಳಗೆ
ಕೂಡೆ ತಣ್ಪಿನ ಚಂದ್ರಕಾಂತ ಭೂಮಿಕೆಯೊಳಗೆ
ಕದಳೀದಳಂಗಳಿಂ ಕಮಲಪತ್ರಂಗಳಿಂ
ಮುದದಿಂದಶೋಕೆಮಾವುಗಳ ಕೆಂದಳಿರ್ಗಳಿಂ
ನಯವಪ್ಪ ಮೃದುವಪ್ಪ ಸಿಂಹಾಸನವನಿಕ್ಕಿ
ಭಯಭಕ್ತಿಯಿಂ ಹಿಗ್ಗುತುಂ ಪ್ರೇಮರಸ ಉಕ್ಕಿ
ನದಿಯಗ್ಗವಣಿಗಳಂ ಕುಣಿಕುಣಿದು ತಂದಿಳಿಪಿ
ಪದುಳದಿಂ ಬರ್ದುಕಿದೆಂ ಬರ್ದುಕಿದೆನೆನುತ್ತಿಳುಪಿ
ಸಂಪಿಗೆಯು ಮಲ್ಲಿಗೆಯು ಮೊಲ್ಲೆಯುಚ್ಚಲರ್ಗಳಂ
ಕಂಪಿಸುತೆ ಪುಳುಕಿಸುತೆ ಪೊಚ್ಚ ಪೊಸಪೂಗಳಂ
ಕೊಂಡು ಬಂದೆನ್ನಯ್ಯ ಎನ್ನರಸ ಬಾರೆಂದು
ಖಂಡೇಂದು ಮೌಳಿ ಫಣಿಕುಂಡಲನೆ ಬಾರೆಂದು
ಭಕ್ತಜನ ಬಾಂಧವನೆ ಬಾರಯ್ಯ ಬಾರೆಂದು
ಮುಕ್ತಿಪ್ರದಾಯಕನೆ ಬಾರಯ್ಯ ಬಾರೆಂದು
ಸಜ್ಜೆಯಿಂ ಶಿವಲಿಂಗಮಂ ತೆಗೆದು ಬೋಳೈಸಿ
ಸಜ್ಜನ ಸ್ನೇಹಮಂ ಮನದೊಳಗೆ ಮೇಳೈಸಿ
ತಳಿರ ಸಿಂಹಾಸನದ ಮೇಲೆ ಬಿಜಯಂಗೈಸಿ
ದಳದಳನೆ ಸುರಿವಶ್ರುಧಾರೆಯಿಂ ಸಂತಯಿಸಿ
ಇರವಂತಿಯೊಂದರಲನುತ್ತಮಾಂಗದೊಳಿರಿಸಿ
ಹರುಷದಿಂ ನಲಿಯುತ್ತೆ ನೆರೆ ನೋಡುತಾದರಿಸಿ
ಮುಂಡಾಡಿ ಮುದ್ದಾಡಿ ಕಣ್ಣೊಳಗೊತ್ತುತುಂ
ಕೊಂಡಾಡಿ ಕೊನೆದಾಡಿಯುರದೊಳಪ್ಪೊತ್ತುತುಂ
ಮತ್ತೆ ಬಿಜಯಂಗೆಯ್ಸಿ ನೋಡುತುಂ ತೂಗಾಡಿ
ಬಿತ್ತರಿಪ ಲಲ್ಲೆಯಿಂ ನೇಹದೊಳಗೋಲಾಡಿ
ಕೈ ಚಪ್ಪಳಿಕ್ಕುತುಂ ಬಿಕ್ಕುತುಂ ಬೀಗುತುಂ
ವೈಚಿತ್ರ ರಸದೊಳಗೆ ತೇಗಿ ತೂಗಾಡುತುಂ
ಕಂಪಿಸುತೆ ಕಳಲುತೆಂತಕ್ಕೆ ಮಜ್ಜನಕ್ಕೆರೆದು
ಜೊಂಪಿಸುತೆ ಜೋಲುತ್ತೆ ಒರ್ಮೊರ್ಮೆ ಮೈಮರೆದು

ಕಳವಳಿಸಿ ಲಿಂಗ ಶಿವಲಿಂಗ ಕರುಣಿಸುದೆನುತೆ
ಅಳವಳಿದು ತಿಳಿ ಉಳಿದು ಲಿಂಗ ಕರುಣಿಸುದೆನುತೆ
ಮೆಲ್ಲನೆಚ್ಚತ್ತು ಪುಳುಕಿಸುತೆ ಪೂಜಿಸಲೆಂದು
ಸಲ್ಲಲಿತ ಕಯ್ಗಳಿಂ ಸಂತವಿಡುತುಂ ಬಂದು
ಮೊಲ್ಲೆಯುಚ್ಚರಲ್ಗಳಂ ಸಿರಿಮುಡಿಗೆ ಸಾರ್ಚುತುಂ
ಸಲ್ಲಲಿತ ಸಂಪಿಗೆಯರಲ್ಗಳಂ ತೀವುತುಂ
ಎಸಳೊಂದು ಮರೆಯಾಗಿ ಕಣ್ಗೆಟ್ಟು ಕರಗುತುಂ
ಎಸಳಂ ಸಿವಾರಿಸಲ್ಕಣ್ಬಂದು ನಲಿಯುತುಂ
ಕೆಯ್ಗೆ ಬಂದಂತೆ ಪೂಜಿಸುತಂ ನಮಸ್ಕರಿಸಿ
ಮೆಯ್ಗೆ ಬಂದಂತೆ ಪೊರಳುತ್ತಂ ನಮಸ್ಕರಿಸಿ
ನಾಲಿಗೆಗೆ ಬಂದಂತೆ ಪೊಗಳುತುಂ ಪಾಡುತುಂ
ಲೀಲೆ ಕಾಲಾದಂತೆ ತಿರುಗಿ ಬಂದಾಡುತುಂ
ದುಂಡಿಸಿ ಪುಟಂ ನೆಗೆದು ಪೆರ್ಚಿ ಮೊರೆ ಏರುತುಂ
ತಂಡತಂಡದ ಪುಳುಕ ದಿಂಡೆಗೊಂಡುಬ್ಬುರ್ತುಂ

ಇಂತು ಮಧ್ಯಾಹ್ನ ಪರ್ಯಂತವರ್ಚಿಸಿ ಬಳಿಕ
ಸಂತಸದ ಮಳೆಗರೆದು ಕಣ್ತೀವಿದಂ ಬಳಿಕ
ಪರಮನಾರೋಗಣೆಗೆ ಹರುಷದಿಂದಂ ನೋಡಿ
ಸುರಚಿರಸ್ಥಾನದೊಳ್ ಮೂರುಕಲ್ಲಂ ಕೂಡಿ
ಮೇಲೊಂದು ಪಾತ್ರೆಯಂ ಪದುಳದಿಂ ತಂದಿರಿಸಿ
ಲೀಲೆಯಿಂ ತಳದೊಳಗ್ನಿಜ್ವಾಲೆಯಂ ಬರಿಸಿ
ಕಪಟರಹಿತಂ ಜಾತಿಧರ್ಮದೋಗರವಿರಲ್
ಶ್ವಪಚನಾಮಕ್ಕೆ ತಾನನುಕೂಲನಾಗಿರಲ್
ಆ ಕಪಾಲದನಡುವೆಯಾಯೋಗರವನಿಕ್ಕಿ
ಲೋಕಮಂ ಸೋಂಕದ ಸಮರ್ಥ ಮನದೊಳಗುಕ್ಕಿ
ಭಸಿತದಿಂದೆಲ್ಲವಂ ನೆರೆ ಶುದ್ಧಮಾಡುತುಂ
ಶಶಿಧರ ಧ್ಯಾನಮಂ ಹೃದಯದೊಳ್ಮಾಡುತುಂ
ಪಾಕಮಂ ಮಾಡುತುಂ ಶ್ವಪಚಯ್ಯನಿರುತಮಿರೆ
ಆಕಸ್ಮಿತಂ ಸಾಮವೇದಿಗಳ್ಬರುತುಮಿರೆ

# ದ್ವಿತೀಯ ಸ್ಥಲ

ವೃತ್ತ॥ ನೋಡದೆ ರಾಜ್ಯಮಂ ಸಕಲ ಸಂಪದಮಂ ಬಿಸುಟೆನ್ನ ಚಿಂತೆಯಿಂ।
ಕೂಡಿದ ಚಿತ್ತದಿಂ ನಡೆದು ಬಂದನಿವಂ ಫಲಿಯೆಂದು ಸಂತಸಂ॥
ಮಾಡುತ ತನ್ನ ಮುಂದೆ ಮೆರೆದೋಹಿಲದೇವನ ಮುಗ್ಧಭಾವಮಂ।
ನೋಡುತ ಸೋಮನಾಥನೆಸೆದಂ ನಿಜ ಭಕ್ತಮನೋರಥ ಪ್ರದಂ॥

ಗದ್ಯ॥ ಇಂತು ಸೋಮನಾಥನ ಮುಂದೆ ಕುಳ್ಳಿರ್ದೋಹಿಲಯ್ಯ ತಂದೆಗೆ ಮುದ್ದಿಸುವ ಕಂದನಂತೆ ದೇವ ದೇವ ಜನನ ಮರಣಕ್ಕಂಜಿದೆಂ ಮಾಯೆಗೆ ಮಲ್ಲಳಿಗೊಂಡೆಂ ತಾಪತ್ರಯಕ್ಕೆ ತಲ್ಲಣಿಸಿದೆಂ ನೋವಿಂ ನಾಣ್ಚಿದೆಂ ಸಾವಿಂಗೆ ಸೆಡೆದೆಂ ಅಜಾತ ನಿರ್ಮಾಯ ನಿರ್ಗುಣ ನಿರ್ಮಳ ನಿತ್ಯ ಶಿವಶಿವ ಕರುಣಿ ಸಾಯಲೀಯ್ಯದೆ ಸಲಹೆನ್ನ ಸಲಹೆಂದು ಜಿನುಗಿ ಜಿನುಗಿ ಅತ್ತತ್ತು ಬಿಕ್ಕಿ ಬಿಕ್ಕಿ ಲಲ್ಲೆಗರೆವ ಪರಮ ಭಕ್ತನ ಮುದ್ದು ನುಡಿಗಳಂ ಕೇಳುತ್ತಿರಲಿರುಳಾಗ ಶಿವಪರಿಚಾರಕ ಮುಖ್ಯಂ ಕೆಯ್ದೀವಿಗೆವೆರಸು ಶಿವಾಂಗಣ ರಂಗಮಂಟಪಂ ಶುಕನಾಸಮಂ ಶೋಧಿಸುತ್ತುಂ ಗರ್ಭಗೃಹಕ್ಕೆ ಬಂದು ಶಿವಲಿಂಗದ ಕೆಲಬಲನಂ ನೋಡುತ್ತಂ ಬರ್ಪಾಗಳ್ವೋಹಿಲಯ್ಯಂ ಬಾಡಿದ ಲತೆಯಂತೆ ಬಿದಿಗೆಯ ಚಂದ್ರನಂತೆ ಬಳಲ್ದ ಚಕೋರನಂತೆ ಮಾಗಿಯ ಕೋಗಿಲೆಯಂತೆ ಮಳೆಗಾಲದ ಹಂಸನಂತೆ ಚಂದ್ರಧರನ ಮುಂದೆ ನಿಟ್ಟರಗಾಗಿ ಕುಳ್ಳಿರ್ದ ಓಹಿಲೈಯ್ಯನಂ ಕಂಡು ಇರುಳಿಲ್ಲಿ ಏಕಿರ್ದಪೆ ಎಂದು ನುಡಿಯೆ ನುಡಿಯದಿರೆ ಕೈವಿಡಿದೆತ್ತಿ ತೆಗೆವಾಗ ಶಿವಲಿಂಗಮಂ ಬಿಡದೆ ಬಿಗಿಯಪ್ಪಿಯೊಡೆಯನಂ ಬಿಡೆಂ ಬಿಡೆಂ ಅಗಲಲಾರೆನಾರೆನೆನಲ್ಬಲ್ಪಿಂದೆ ಳತರ್ಪಾಗಳಭವಾ ಶಂಕರಾ ಶಿವನೆ ಭವನೆ ಗುರುವೆ ತಾಯೆ ತಂದೆಯೆ ತವರೆ ಪುಣ್ಯವೆ ಗತಿಯೆ ಮತಿಯೆ ಪತಿಯೆ ಕಣ್ಣೆ ಶಿವಘೋಮೊರೆಯೋ ಎಂದಳಲುತ್ತುಂ ಬಳಲುತುಂ ಬಾಯ್ವಿಡುತಿರಲದಂ ನೋಡದೆ ಶಿವಜ್ಞಾನ ಸೂತ್ರಮಂ ತಪ್ಪದಂತೆ ಪೊರಮಡಿಸಿ ಕವಾಟಂಗಳಂ ಮುಚ್ಚಿ ಮುದ್ರಿಸಿ ಪೂಜಾರಿ ಪೋಗಲಿತ್ತಲು,

ಓಹಿಲ ದೇವಂ ಪೊರಗಿರ್ದು ಎಲೆ ಅಯ್ಯ ಎಲೆ ತಂದೆ ಎಲೆ ದೇವ ನಿನ್ನಂ ನೋಡದೆಂತು ನಿಲಲಾರ್ಪೆಂ ನಿನ್ನಂ ನುಡಿಸದೆಂತು ಬರ್ದುಂಕುವೆಂ ನಿನ್ನಂ ಸೋಂಕದೆಂತು ಸೈರಿಪೆಂ ನಂಬಿಪನನಗಲ್ದುವರೆ ನಚ್ಚಿದನಂ

ಬೆರ್ಚಿಸುವರೆ ಕಾಲ್ವಿಡಿದವನಂ ಕಾಣದಂತಿರ್ಪರೆ ಪೊರ್ದಿದನಂ ಪೊರ ಮಡಿಪರೆ ಕೂಡಿದನಂ ಕೊಲ್ವರೆ ಎನುತುಂ ಬಾಗಿಲಂ ನೆಮ್ಮಿ ಪೊಸಂ ತಿಲೊಳ್ ತಲೆಯಿಟ್ಟು ಕರುಣಮುಂ ಪತ್ತಿ ವಿರಹಾಗ್ನಿ ಎತ್ತಿ ಹರಣಂ ಹೊತ್ತಿ ಕರಣಂ ಕಲಂಕಿ ಮನ ಉಕ್ಕಿ ತನು ಬೆಂದು ಅಳಲಾವರಿಸಿ ಕಾಣದ ಖಾತಿ ಕಣ್ಗೆಡಿಸಿ ಮಾಣದಳ್ಕಿ ಮುಂದುಗೆಡಿಸಿ ಒದರುತಂ ಬೆದರುತಂ ಇರ್ಪ ನಿಜ ಭಕ್ತನ ಕಿಂಕುರ್ವಾಣಂ ಮಿಕ್ಕು ಪತ್ತಿದ ಶೋಕಮುಂ ಕೇಳಲಾರದೆ ಭಕ್ತಜನಬಾಂಧವಂ ಕರುಣಿಗಳರಸಂ ಕೂಡಿದರ ಕಾಮಧೇನು ನೋಡಿದರ ಕಣ್ಣ ಪುಣ್ಯ ಬೇಡಿದರ ಕಲ್ಪಭೂಜಂ ಸಾರ್ದರ ಸಿದ್ಧರಸಂ ಪಾರ್ದರ ಪರಮ ಗುರು ನೆನೆವರ ನಿಧಾನಂ ಅರ್ಚಿಸುವರಾಯುಂ ಶ್ರೀಯುಮೆನಿಪ ಸೌರಾಷ್ಟ್ರಪತಿ ಸೋಮನಾಥಂ ಕದವಂ ತೆರೆಯಲಸುಮಾಸಿಸುತ್ತೊಲ್ಲದೆ ತಾಂ ಮಾಡಿದ ಶಿವಾಜ್ಞೆ ತಪ್ಪಲಾಗದೆಂದೆನ್ನ ಭಕ್ತನನೆಲ್ಲರ್ಗರುಪಿ ತೋರುವೆನೆಂದು ನಡೆತಂದು ನಟ್ಟಿರುಳೋಳ್ಪಟ್ಟಿರ್ದ ಶಿವನಿಯೋಗಕ್ಕೆ ಮುಖ್ಯನಪ್ಪ ರಾಜಮುದ್ರಾಹಸ್ತನಪ್ಪನನಂ ಗಂಟಲಂ ತ್ರಿಶೂಲದೊಳೊತ್ತಿ ಎನ್ನಣುಗಂ ಎನ್ನ ಭಕ್ತಂ ಓಹಿಲ ದೇವನಂ ಪೊರಗಿರಿಸಿ ಕದವಂ ಚಾಚಲಾಗದು ಬೇಗಂ ತಂದೊಳಪುಗಿಸೆಂದು ಕನಸಿನೊಳ್ಬೆಸಸಿ ಪೋಗೆ

ಪೂಜಾರಿಯೋಜೆಗೆಟ್ಟೆಚ್ಚತ್ತು ಮೂರ್ಚೆವೋಗಿ ಬೆಚ್ಚಿ ಬೆದರಿಯುಂ ತಿಂತು ನಡನಡುಗಿ ಎಂತಕ್ಕೆ ನಿಂದು ಹೋದ ಹರಣಮಂ ಹಸರಿಸಿಕೊಂಡಾಗಳೆ ಪೊರಮಟ್ಟು ಒಡನೆಯೆ ಪರಿಚಾರಕರ್ಗರಿಪುತ್ತಂ ಕೂಡಿಕೊಂಡು ಮಧ್ಯರಾತ್ರಿಯೊಳ್ ಚೋದ್ಯಂಬಡುತುಂ ಶಿವನಿಳಯಕ್ಕೆ ಬಂದು ಮುದ್ರೆಯನೊಡೆದು ಕದವಂ ತೆರೆದು ಓಹಿಲಯ್ಯನಂ ನೋಡಿ ಸಾಮರ್ಥ್ಯದ ಸಸಿಯೆ ಭಕ್ತಿಭರಿತನೆ ಮುಕ್ತಿಚರಿತನೆ ಒಳಗೆ ಪೋಗೆಂದೊಳಪೊಗಿಸಿ ಮತ್ತೆ ಕದವನಿಕ್ಕಿ ಬಿಯ್ಯಗಂಗೊಳಿಸಿ ಮುದ್ರೆಯನಿಕ್ಕಿ ಇಂತಪ್ಪ ಕಾರಣಿಕನಂ ಕಂಡು ಕಂತುಹರನ ಕೂಡೆಂತಿರ್ಪನೋ ಎಂದು ತಮತಮಗೆ ಗವಾಕ್ಷೆಯ ವಿವರದೊಳ್ಮೆಲ್ಲನೆ ನೋಡಿ ಮನವಿಟ್ಟು ನೋಡುತ್ತಿರಲೋಹಿಲದೇವನೊಳಪೊಕ್ಕು ಜೀವಂ ಬಂದಂತೆ ಕಣ್ಪಡೆದಂತೆ ಪರಿತಂದು ಸೋಮನಾಥನಂ ತೆಗೆದಪ್ಪಿ ಬಿಗಿಯಪ್ಪಿಯಮರ್ದಪ್ಪಿ ಸೋಂಕಿನೊಳಪ್ಪಿ ಮೆಯ್ಯೊಳಪ್ಪಿ ಕಣ್ಣೊಳಪ್ಪಿ ಮನದೊಳಪ್ಪಿ ಚಿತ್ತದೊಳಪ್ಪಿ ತಣಿವಿಡಿದು ಸುಖಂಬಡೆದು ಕಂಡು ಕಂಡು ಶಿವಮರುಳ್ಗೊಂಡು ಆಲಿಂಗನಮಂ ಸಡಿಲ್ಚಿ

ಪುಟವೆಳ್ದು ಹೊಮ್ಮಿ ಹೊರಳ್ದು ಜುಮ್ಮನೆ ಬೆಮರ್ತು ಕೊರ್ಬಿ ಕೊನರ್ತು ಉರ್ಬಿ ಯುರುಳ್ದುಬ್ಬರಿಸುತಿರ್ಪ ಓಹಿಲಯ್ಯನಂ ಶ್ರೀ ಹಸ್ತದಿಂ ಸೋಮನಾಥಂ ಬರ್ತೆಗೆದು ಮುಂದಿರಿಸಿಕೊಂಡು ಸವಿ ನುಡಿಗಳಿಂ ಸಂತ ಮಿಡುತ್ತಮಿರೆ ಪೂಜಾರಿಗಳ್ಕಂಡು ಸೋಜೆಗಂಬಡುತ್ತುಂ ಬೆರಗಾಗಿ ನೋಡ ಲಣ್ಮದೆ ಪೊರಮಡುತ್ತಿರಲಾದಿತ್ಯೋದಯವಾಗಲ್,

ಎಂದಿನಂದದೆ ಸುಪ್ರಭಾತ ಸಮಯ ಸಮುದ್ಭೂತ ಮೃದು ಮೃದಂಗ ಭೇರೀರವ ಪಟಹಶಂಖ ಕಹಳಾನಾದಂಗಳುಂ ಸಮಸ್ತಭಕ್ತಜನ ಭಜಿತ ಶುದ್ಧ ಸಂಕೀರ್ತನ ಸಂಯುಕ್ತ ಗಂಭೀರಧ್ವಾನಪುರಾತನ ಗೀತರವಂಗಳಂ ಬುಧನಿಕರವದನೋದ್ಗತ ಮಧುರತರ ಗದ್ಯಪದ್ಯ ಸೇವ್ಯಕಾವ್ಯ ನಾಟಕ ಪ್ರಸಂಗಂಗಳುಂ ಶುದ್ಧ ರಸಭರಿತ ಶಿವಧರ್ಮೋತ್ತರಾದಿ ಮಹಾಪುರಾ ಣಂಗಳುಂ ವಿವಿಧ ಋಷಿಚರಿತ ಋಗ್ಯಜುಃ ಸಾಮಾದಿವೇದಘೋಷಂ ಗಳುಂ ಪುಣ್ಯಪಾಠಕ ಪ್ರಕರ ರವಸ್ತೋತ್ರ ರಸಾಳಾಪಂಗಳುಂ ನವರಸ ಪ್ರಜ್ವಲಿತ ಸಂಜನಿತ ತೂರ್ಯತ್ರಯಾರಂಭ ನರ್ತಕ ನರ್ತಕೀಲಾಸ್ಯಂಗಳುಂ ಸೌರಾಷ್ಟ್ರಪತಿ ಸೋಮನಾಥನಾಲಯ ದೊಳ್ಭೋರೆಂದೋರಂತೆ ನೆಗಳೆ ಶಿವಂಗೆ ಸುಖ ಮಜ್ಜನಂ ಮಾಡಿಸಿ ಸಕಲ ಸುಕುಮಾರಕರ ಕುಸುಮ ಪ್ರಕ ರದಿಂ ಸಿಂಗರಂ ಮಾಡಿ ಧೂಪದ ಸವಿಯನಿತ್ತಾರತಿಗಳಂ ಬೆಳಗಿ ಅಮೃ ತಾನ್ನವನಾರೋಗಿಸಲಿತ್ತು ರಸಪೂಸರ್ವ ತಾಂಬೂಲಮನಿತ್ತು ಲೋಕೋ ನ್ನತಾಧಿಕಾರಿ ಮುಖ್ಯರೆಲ್ಲರುಂ ರಂಗಮಂಟಪದೊಳ್ನೆರದಿರಲೋಹಿಲಯ್ಯನಂ ಶಿವಂಗೆ ಬಿನ್ನಪಂ ಮಾಳ್ಪನಂ ಸಾವಿಂಗಂಜಿ ಶರಣ್ಪೊಕ್ಕನಂ ಕಾರುಣ್ಯ ಕಟಾಕ್ಷದಿಂ ನೋಡಿ ರಕ್ಷಿಸೆಂಬ ಮಗನ ಬಿನ್ನಪಮಂ ಸೋಮನಾಥ ಕೇಳ್ದು ಎಲೆ ಕಂದ ನಿನ್ನ ಮನವಾರೆ ಪನ್ನೆರಡು ಬರಿಸಂ ಹಿಗ್ಗಿ ಪೊರೆ ಯೇರಿ ಗುಗ್ಗುಳಮಂ ತಂದೆಮಗಿಕ್ಕೆ ಸಗ್ಗದವರುಂ ಬೆರಗಾಗೆ ಶರೀರಂ ಬೆರಸು ಕೊಂಡೊಯ್ದಪೆವೆನೆ ಹೊಂಗಿ ಹೊರೆಯೇರಿ ನೋಡಿ ನಲವೇರಿ ಹಿಗ್ಗಿ ಹರುಷಂದಳೆವೋಹಿಲಯ್ಯಂ ಸಾಹಸನಿಧಿ ಸೋಮನಾಥನಂ ಬೀಳ್ಕೊಂಡು

ಧೂಪದ ನಿಮಿತ್ತಂ ದ್ವೀಪಾಂತರಕ್ಕೆ ಪೊರಮಡುವಾಗಳಲ್ಲಲ್ಲಿಯ ಶಿಷ್ಯರುಂ ಸೇವ್ಯರುಂ ಬಲ್ಲಿದರುಂ ಪಸಾಯಿತರುಂ ಸಚಿವರುಂ ವಡ್ಡಬೆ ವಹಾರಿಗಳುಂ ಭೂಪತಿಗಳುಂ ತಂದಾರಾಧಿಸಿದ ದಂಡಿಗೆಯ ಧವಳ ಚಕ್ರದ ಸಿಗುರಿಯ ಚಾಮರದ ಕಮನೀಯ ಕಮಂಡಲದ ಹಡಪಿಗರ

ಬಾಹತ್ತರ ನಿಯೋಗಿಗಳ ಗುಗ್ಗುಳದ ಕಂಬಿಕಾರರ ಮಹಾ ಮಾಹೇಶ್ವ ರರ ಹೊಗಳ್ವ ಜನಂಗಳಂ ವಂದಿಗುಡುತ ತನ್ನ ಮುನ್ನಿನ ಪದವಿಯಿಂ ಬೇರೊಂದು ಶೈವ ಸಾಮ್ರಾಜ್ಯಂ ನೂರ್ಮಡಿಸೆ ಪುರಮಂ ಪೊರಮಟ್ಟೂ ರೂರ್ಗಳಂ ಕಳೆದು ನಾಡಂ ಪಾಯ್ದು ನದಿಗಳಂ ಮೀರಿ ಬೆಟ್ಟಂಗಳ ನೇರಿ ಗಟ್ಟದೊಳ್ನಡೆದು ಪಟ್ಟಣಂಗಳಂ ಬಿಟ್ಟು ಶಿವಕ್ಷೇತ್ರಂಗಳಂ ಕಂಡು ಪ್ರಸಾದಂಗಳಂ ಕೊಂಡು ವಿಂಧ್ಯಂಗಳಂ ಪೊಕ್ಕು ವ್ಯಾಳ ಮೃಗಂಗಳಂ ಮಿಕ್ಕು ದೇಶಂಗಳನುತ್ತರಿಸಿ ಸಮುದ್ರಂಗಳಂ ಮೀರಿ ದ್ವೀಪಂಗಳಂ ಕಳೆದು ರಸ ಒಸರ್ವ ಧೂಪಕ್ಕೆ ಧೂಪಾರತಿಯಂ ಕೊಟ್ಟು ಅಡಿಗಡಿಗೆ ಮೆಯ್ಯಿಕ್ಕುತಂ ತೂಗುತುಂ ತೇಗುತುಂ ಬಳಲುತುಂ ಬರ್ದುಂಕುತುಂ ಪಲವೆಡೆಗೆಯ್ದಿ ಧೂಪದ ಬಲಂ ಭೋರೆಂದು ಬರೆ ಸೌರಾಷ್ಟ್ರ ಪುರಜನಂ ಬೆರಸಿಯಲ್ಲಿಯ ರಸಂ ಇದಿರ್ಗೊಳುತ್ತಿರೆ ಭಕ್ತರ್ಗಡಿಗಟ್ಟಿ ಬೌದ್ಧರ್ಬಾ ಯಾರೆ ಜೈನರ್ಜವಂಗುಂದೆ ಚಾರ್ವಾಕರ್ಚಲ್ಲಿಪೋಗೆ ಪರಮ ಹರುಷದಿಂ ಪುರಮಂ ಪೊಕ್ಕು ಶಿವನಿಳಯಕ್ಕೆ ಬಂದು ಸಮಸ್ತ ದೇವರ್ಕಳ ಗುರುವಂ ನಿರುಪಾಧಿಕ ಜ್ಯೋತಿಯಂ ಪರಿಮಳರೂಪನಂ ಭುವನಪ್ರದೀಪನಂ ದಿವ್ಯ ರೂಪನಂ ಶುದ್ಧಜನ ಸಮೀಪನಂ ವ್ಯೋಮಕೇಶನಂ ಕಾಮಹರನಂ ಸೋಮನಾಥನಂ ಕಂಡು ಮೆಯ್ಯಿಕ್ಕಿ ನಿಂದು ತಂದ ಧೂಪಮಂ ಸೋಮ ನಾಥಂಗೊಪ್ಪಿಸಿ ಸರ್ಪಾಭರಣನ ಮುಂದಿರಿಸಿ ಭಂಡಾರದ ಮನೆಗೆ ತೆಗೆಯವೇಳ್ದು ಮುಂದಿರ್ದ ಸಜ್ಜಗವೆರಸಿದ ಗುಗ್ಗುಳದೊಳ್ ರಸಮುಯಮೆನಿಸ ಕೆನೆದಿರುಳಧೂಪಮಂ ಕೊಂಡು ಶರ್ಕರೆಯೊಳುಂ ಜೇನುತುಪ್ಪದೊಳುಂ ನವಘೃತದೊಳುಂ ತೊಯ್ದು ಸೋಮನಾಥಂಗೆ ಕುಡೆ ಶಿವ ಲಿಂಗದಿಂ ಶ್ರೀಹಸ್ತ ಪೊರಮಟ್ಟು ! ತಳೆದು ಕೊಳುತ್ತಿರಲಿತ್ತಂ ಶಿವನಿಳೆಯದ ಸಕಳ ದ್ವಾರಮಂ ಮುಚ್ಚಿ ತಾನುಂ ಸೋಮನಾಥನುಂ ಧೂಪ ಮಿಲ್ಲದಿರೆ ಪಾತ್ರೆಯಂ ತಂದು ಮುಂದಿರಿಸಿ ಸಿಡಿಲಕಿಡಿಯಂತಿರ್ಪ ಕೆಂಡಂಗಳಂ ಕುಪ್ಪಳಿಸಿ ಗುಗ್ಗುಳಮಂ ಮೇಲೆ ತಂದು ಸುರಿಯೆ ಗಳಗಳನ ರಳ್ದು ಚಿಮಿಚಿಮಿಸಿ ಕಾಯ್ದು ಧೂಪಂ ಸವಿಯ ಹೊಗೆಯನುಗುಳೆ ಬೀಸು ವಾಗಳುಂ ಅಮೃತರಸದ ತುಂತುರು ತೆರಳ್ವಂತೆ ಧೂಪವೆತ್ತಿ ಕಂಪು ತೆರೆ ಮಸಗಿ ತೀಡುತ್ತೆ ಪರಿಮಳದ ಮಂಜು ಕವಿವಂತೆ ಸವಿಯ ತುಷಾರವನೊತ್ತುವಂತೆ ಧೂಪದ ಸವಿಯು ಸರ್ವಾಂಗಮಂ ಪುಗೆ ಶಿವನ ಮೆಯ್ಯೆಲ್ಲಂ ಮುಖವಾಗೆ ನಾಸಿಕಕ್ಕೆ ನಾಲಿಗೆ ಬಂದಂತಾಘ್ರಾಣಿಸುತ್ತುಂ

ಸವಿಯುತ್ತುಂ ಪುಳುಕಿಸುತ್ತುಂ ಮೆಚ್ಚುತಿರಲಿಂತು ಪೊಕ್ಕ ದ್ವೀಪಂಗಳಂ ಮರಲ್ದು ಪುಗದೆ ಲೇಸಿಂಗೆ ಲೇಸನರಸಿ ತಂದಿಕ್ಕುವ ಧೂಪದ ಸೊಗಸಿನ ಸೊಕ್ಕು ಸವಿಯು ಸಾಲಿಡೆ ಧೂಪದೋಹಿಲನೆಂಬ ಪೆಸರ ಪುಣ್ಯಕೀರ್ತಿ ಸಕಳ ಜಗಮಂ ತೀವೆ,

ಪನ್ನಗಧರಂಗೆ ಪನ್ನೆರಡು ಬರಿಸಂ ಗುಗ್ಗುಳವುಂ ಸಲಿಸಿ ಪಾವನ ಪರಿಮಳವನಿನಿತು ದಿನವಿತ್ತೆ ಇನ್ನು ಶರೀರಂಬೆರಸು ಪೋಪೆನೆಂಬ ಗರ್ವಬಲವಂ ಕೂಡಿಕೊಂಡು ಸೋಮನಾಥನಲ್ಲಿಗೆ ಬಂದು ಎಲೆ ದೇವ ನಿಮ್ಮಡಿಗಳ್ಗರುಣಿಸಿದ ಪನ್ನೆರಡು ಬರಿಸಂ ನಿರ್ಮುಕ್ತವಾದುದಿನ್ನೆನಗೆ ಕರುಣಿಸೆಂದು ಬಿನ್ನವಿಸಿದ ಓಹಿಲದೇವಂಗೆ ಸಕಲಜೀವ ಸೂತ್ರಧಾರನನವರತ ಲೀಲಾಲೋಲಚಿತ್ತನಪ್ಪ ಸೋಮನಾಥಂ ತಣಿವಿಲ್ಲದೆ ಭಕ್ತನ ಕಯ್ಯೊಳಿನ್ನು ಧೂಪನಿಕ್ಕಿಸಿಕೊಳ್ವ ಸ್ನೇಹ ಪರಿಮಳದ ಸವಿಗೆ ಮನದ ಬಾಯೊರೆಯೆ ಮುಂತಿದರ್ದೋಹಿಲಯ್ಯಂಗಿಂತೆಂದಂ ಎಲೆ ಮಗನೆ ನಿನಗಿನ್ನೆಮ್ಮ ಚಿಂತೆ ಏಕೆ ನಿನ್ನ ಮುನ್ನಿನ ರಾಜ್ಯದ ನೂರ್ಮಡಿ ಸಂಪದವಾಯ್ತು ಸುಖಿಯಾದೆ ಸುಕುಮಾರನಾದೆ ಅರಸಾದೆ ಸಂತಸದೊಳಿರು ಎನೆ ಕೇಳ್ದು ದೆಸೆಗೆಟ್ಟು ಕಂಗೆಟ್ಟು ಬಾಯ್ಬಿಟ್ಟು ಬೆಬ್ಬಳಿಸಿ ಪನ್ನೆರಡು ಬರಿಸ ದುಮ್ಮಳಂ ಒರ್ಮೆ ಕವಿದು ದುಮ್ಮಾನಂ ಕಾಪೇರಿ ಆಪತ್ತೆಡೆಗೊಂಡು ಮೆಯ್ಗುಂದಿ ಮನಂ ತಾರಿ ಬುದ್ಧಿ ಕಾವುಳಂ ಮಸಗಿ ಅಹಂಕಾರವನರಿತು ಚಿತ್ತಂ ಕೊರೆದು ಜೀವಂ ಬೆಂದು ಘಳಿಲನೆ ಬೀಳ್ದು ನೆಲದೊಳ್ಪೊರಳ್ದು ಕಂಬಮಂ ಪಾಯ್ದು ಕಯ್ಯೆತ್ತಿ ಮೊರೆಯಿಟ್ಟು ಬಾಯಿ ಬತ್ತೆ ಶಿವದಿಟ್ಟು ದೇವ ದೇವ ಇನ್ನೆಂತು ಜೀವಿಪೆಂ ಎನ್ನ ಪುಟ್ಟಿಸುವಲ್ಲಿಯುಂ ರಾಜ್ಯದೊಳಿರಿಸುವಲ್ಲಿಯುಂ ವಿರಕ್ತಿಯುಂ ಕೊಂಡೆಳ್ದು ಬರಿಸುವಲ್ಲಿಯುಂ ಸಕಲಸುಖವನೀವಲ್ಲಿಯುಂ ಅಭವನುಂ ಮೃಡನುಂ ಗಿರೀಶನುಂ ಯಂತ್ರವಾಹಕನಾಗಿಯುಂ ಮಾಡಿದವನುಂ ನೀನೆ ಮತ್ತಿದೆಲ್ಲಮನಲ್ಲೆಂಬುವನುಂ ನೀನೆ ಎನ್ನ ಮೇಲೆಳ್ಳನಿತು ತಪ್ಪಿಲ್ಲ ಯಂತ್ರವಾಹಕ ನೀನೆ ಎನ್ನೊಳಿರ್ದು ನಡೆಯಿಸುವಲ್ಲಿಯುಂ ನೀನಿರಲಾನೊಂದು ರೂಪುಂಟೆ ದೇವ ದೇವ ಎನ್ನೊಳಿನಿತೇಕೆ ಒಡೆದೊಡಂ ನೂಂಕಿದೊಡಂ ಸೀಳ್ದೊಡಂ ಬಡಿದೊಡಂ ಬಿಡೆಂ ಬಿಡೆಂ ಅಭವಾ ಶಂಭುವೇ ಗುರುವೇ ಗತಿಯೇ ಮತಿಯೇ ಶಿವಧೋ ಶಿವಧೋ ಎಂದು ತನು ಒಡೆಯುಲೊಟ್ಟಿ ಒರಲ್ದು ತನ್ನ ಕಾಲಂ ಪತ್ತಿ ಕಣ್ಣೊಳು ಹರಣಂ ಕಯ್ಯೊಳು ಕಾಯುವಾಗಿರ್ದೋಹಿಲ ದೇವನಂ ಪ್ರಾಣ

ನಾಥನಪ್ಪ ಸೋಮನಾಥಂ ಬರ ತೆಗೆದು ಕಣ್ಣ ನೀರಂ ತೊಡೆದು ಮುಂದ ತಾಪಸನನಾರಿಸುತ್ತಂ.

ಅಂಜದಿರಂಜದಿರೆಲೋ ಮಗನೆ ನಿನಗೊಂದು ಹಿತೋಪದೇಶಮಂ ಕೊಟ್ಟಪೆಂ ಸಕಲ ಜಗವೆಲ್ಲೆನ್ನ ಸೊಮ್ಮಾದೊಡಂ ಪರರಂ ಪ್ರೇರಿಸಿದೆ ಪರ ಸೊಮ್ಮಂಕೊಳ್ಳದಾರ್ಗಂ ನಿರೋಧವಿಲ್ಲದೆನ್ನ ಸೊಮ್ಮನೆನಗಿತ್ತು ಪ್ರಸಾದಮಂ ಕೊಂಬ ಪರಿಯಂ ಕೇಳ್ಮಗನೆ ಕಟ್ಟಿದ ಕೆರೆ ಇಟ್ಟಿರವೆ ಬಿತ್ತಿದ ಬೆಳೆ ಮಾಡಿದ ಮನೆ ಪರರ ವಸ್ತು ನೀರಂ ಕುಡಿಯದೆ ನೆಳಲಂ ಸೇರದೆ ಪಲಮನುಣ್ಣದೆ ಮರೆದು ಪಟ್ಟಿರದೆ ಪರಿವ ತೊರೆಯ ನೀರ್ಗುಡಿಯುತುಂ ಕಾಡ ಮರಂಗಳ ನೆಳಲೊಳ್ನಿಂದು ಫಲಂಗೊಳ್ಳುತುಂ ಹೊಡೆ ಹುಲ್ಲ ಬತ್ತಮನುಣುತುಂ ಪೆಳೆ ಗುಹೆಗಳ ತಳದೊಳ್ಪಟ್ಟಿರುತುಂ ಪೋಗಿ ಎಲ್ಲರ್ಗೆ ಸಮಮಪ್ಪ ವಸುಧಾತಳಂಗಳ ಪೊನ್ನಂ ಕೊಂಡು ದ್ವೀಪಕ್ಕೆ ನಡೆದುಂ ಧೂಪಕ್ಕೆ ಕೊಟ್ಟು ನಾನಾ ವಿಧದಿಂ ಹೊತ್ತು ಹೊತ್ತೀ ತೆರದಿಂದಿನ್ನೊಮ್ಮೆ ಪನ್ನೆರಡು ವತ್ಸರಂ ಹಿಗ್ಗಿ ಹೊರೆ ಯೇರಿ ಗುಗ್ಗುಳಮನೆಮಗ್ಗಿಕ್ಕಿ ಬಳಿಕ್ಕೆ ನಿನ್ನ ಮನೋರಥವಂ ಮಾಳ್ಪೆನೆಂದು ಭಕ್ತಜನ ಸಂತುಷ್ಟ ವಿನೋದಂ ಶರಣ ಕುಲ ಗೀತಾಮೃತ ರಸಾವಗಾಹ ಚಿತ್ತಂ ಭೃತ್ಯ ಸಂಕುಳ ಪ್ರೇಮಂ ವಿವಿಧವಾಕ್ಯ ಕುಸುಮ ಕರ್ಣಾವತಂಸಂ ಶರಣ ಪರಿಣತ ಸ್ತೋಮ ಸನ್ನಿಹಿತಂ ನತನಿಕರ ಗೋಷ್ಠಿ ಸುಲಭಂ ದೇವ ದೇವಂ ಸೋಮನಾಥಂ ಬೆಸಸುತ್ತಮಿರೆ ಇರೆ.

## ದ್ವಿತೀಯಸ್ಥಲಂ ಸಮಾಪ್ತಂ

---

# ತೃತೀಯ ಸ್ಥಲ.

ವೃ॥ ಶಿವಭಕ್ತಂ ಭಕ್ತಿರೂಪಂ ಕಲಿಭಲಿಯಚಲಂ ಸ್ನೇಹದಿಂದೋಹಿಲಯ್ಯಂ।
ಶಿವನೋಳ್ಳಿರ್ದೇಸಮಸ್ಪೊಂದನುಪಮಹಿತಮಂ ಬುದ್ಧಿಗಲ್ತ್ರೋಜೆಯಿಂದಂ॥
ಭವನಂ ಭಾಳಾಕ್ಷನಂ ಭರ್ಗನನಘಹರನಂ ಭೀಮನಂ ಭಕ್ತವೃಂದೋ-।
ತ್ಸವನಂ ಶ್ರೀಸೋಮನಾಥಪ್ರಭುವನಮಮ ಬೀಳ್ಕೊಂಡನಾನಂದದಿಂದಂ॥

## ರಗಳೆ.

ಇಂತು ಬೀಳ್ಕೊಂಡು ಬಂದೋಹಿಲಯ್ಯಂ ನಿಂದು
ಕಂತು ಮದಹರಣಂಗೆ ಮತ್ತೆ ಪೊಡಮಡುತಂದು
ಭಸಿತಮಂ ಕಾಯದೊಳಗುದ್ಧೂಳನಂ ಮಾಡಿ
ಎಸೆವ ರುದ್ರಾಕ್ಷಿಗಳನವಯವದೊಳೊಡಗೂಡಿ
ಹೊಸ ಸಪುರ ವಸ್ತ್ರದಿಂ ಕೌಪೀನನಾಗುತಂ
ಮಿಸುಪ ಪಟ್ಟೆಗಳ ತೆಗೆದಿಟ್ಟು ಹೊದೆದೊಪ್ಪುತಂ
ಕಾವಡಿಯ ಕಂಬಿಯೊಳ್ನಿನ ಪಾತ್ರೆಗಳನಿರಿಸಿ
ಕಾವಿಗಳ ಸಪುರ ವಸ್ತ್ರಂಗಳಿಂ ಬಾಸಣಿಸಿ
ದೇವಲೋಕಕ್ಕಿದು ಪರಸ್ಥಾನವೆಂಬಂತೆ
ದೇವ ಶಿವಭಕ್ತಿಯಂ ಹೆಗಲೊಳಾಂತಿರ್ಪಂತೆ
ಎತ್ತಿದಂ ಪರಿಮಳದ ಕಂಬಿಯಂ ನೂತನಂ
ಮುತ್ತಿದಂ ಕರಣಂಗಳಿಂ ಸೋಮನಾಥನಂ
ನಡೆಯುತೊಂದಡಿಯನಿಟ್ಟಗಲಲಾರದೆ ತಿರುಗಿ
ಪೊಡನೆ ಎನ್ನಯ್ಯ ಎನ್ನರಸ ಎನುತಂ ಮರುಗಿ
ಕಂಬಿ ಸಹಿತಂ ಬಂದು ಬಿಗಿಯಪ್ಪಿ ನಿಂದಿರ್ದು
ಶಂಭುವೇ ಶಂಕರನೆ ಶಿವಶಿವಾ ಎನುತಿರ್ದು
ಬರುತೆ ಪೂಜಾರಿಗಳನೆಂದನೋಹಿಲದೇವ
ಎರಡಿಲ್ಲದೇಕನಿಷ್ಠೆಯ ಶಿವನ ಸದ್ಭಾವ
ಅಭವಂಗೆ ಧೂಪಮಂ ಕೊರತೆ ಮಾಡಲ್ವೇಡ
ವಿಭವದಿಂ ಬೆಸ್ಸನಿತನೀವುದಂಜಲ್ವೇಡ
ಬಡವ ಮಾಡದಿರೀಶನಂ ಸೋಮನಾಥನಂ

ಮೃಡನಂ ಮಹೇಶನಂ ಸುರನಾಥನಾಥನಂ
ಎಂದೆನುತೆ ಎಲ್ಲರೊಳ್ನಂಬುಗೆಗಳಂ ಪಡೆದು
ನಿಂದವರ ಕಯ್ಗಳಂ ಬೇಡಿಕೊಳುತುಂ ಪಿಡಿದು
ಅಂದಲ್ಲಿ ಬಿಳ್ಕೊಂಡು ಪೊರಮಟ್ಟು ಬರುತಿರಲ್
ಬಂದ ಪರಿಜನವೆಲ್ಲ ಮುನ್ನಿನಂದದೋರಲ್
ನೋಡಿ ಬೆರಗಾಗುತ್ತೆಯೋಹಿಲಯ್ಯಂ ಬಂದು
ಬೇಡ ಬೇಡೆಲೆ ಜನಂಗಳಿರ ಬೇಡೆನುತ್ತಂದು
ಮುನ್ನಿನಂತಲ್ಲ ಜನವಂ ಶಿವಂ ಸೈರಿಸಂ
ಪನ್ನಗಧರಂ ಪುರುಡಿಗಂ ಬೇರೆ ಪೊರ್ದಿಸಂ
ಮನದೊಳಗೆ ಹೊರೆಯಾಗದೊಳಗಾಗದೊಲ್ಲೆನೆಸೆ
ಮನುಜರ್ಪಲಂಬರಿರೆಸಂದಣಿಯು ಸೈಪನ
ಎಂದಲ್ಲಿ ಹೋಗನೊಲ್ಲದೆ ಮನುಜರಂ ಕಳಿಪಿ
ಬಂದನೆಮ್ಮಯ್ಯಂ ವಿರಕ್ತಿಭಾವಕ್ಕಳಿಪಿ

ಬರೆ ಶಿವಪ್ರಚ್ಛನ್ನವೇಷದಿಂದೊಡನೊಡನೆ
ಬರುತಲಿರ್ದಂ ಪುತ್ರನೇಹದಿಂದೊಡನೊಡನೆ
ಇಂತು ಬರೆ ಬಂದನೋಹಿಲದೇವನೊಲ್ಮೆಯಿಂ
ಸಂತಸದೆ ರೂಪಪಿಕ್ಕುವ ಚಿತ್ತದಳ್ತಿಯಿಂ
ಪಾದಕ್ಕೆ ರಕ್ಷೆ ನಡೆವುದೆ ರಕ್ಷೆಯಾಗುತಿರೆ
ಸಾದರಂ ಮಿಗೆ ಬಂದನಭವನಲ್ಲಾಡುತಿರೆ
ಎಲ್ಲೆಯುಂ ಸಿಲ್ಕಿನಾರೊಡನೆಯುಂ ಸುಡಿಯಿಲ್ಲ
ತಲ್ಲಣಿಸಲಿಲ್ಲ ತನಗೊಂದುವುಂ ಭಯವಿಲ್ಲ
ಕಲ್ಗಳಂ ಪರಳೊಳಂ ಮುಳ್ಳೊಳಂ ನಡೆನಡೆದು
ಅಲ್ಲಲ್ಲಿಯೂರ್ಗಳಂ ದಾಂಟುತಂ ನಡೆನಡೆದು
ಬಿಸಿಲನರಿಯದೆ ಗಾಳಿಗೋಸರಿಸದೆಯ್ತಂದು
ಪಸಿವನರಿಯದೆ ನಿದ್ರೆಯನರಿಯದೆಯ್ತಂದು
ಪಗಲೆನ್ನದಿರುಳೆನ್ನದಕ್ಕರಿಂದೆಯ್ತಂದು
ಮೃಗವೆನ್ನದಡವಿ ಎನ್ನದೆ ನಿಷ್ಠೆಯಿಂ ನಡೆದು
ದೇಶಂಗಳಂ ಕಳಿದೆರಡು ದಿನಂ ಪಸಿದಿರ್ದು
ಆಸುರದ ಪೇರಡವಿಯಂ ಪೊಕ್ಕು ನಲಿದಿರ್ದು

ಒಂದೊಂದು ಕಾಡಮರದಡಿಯೊಳೊಯ್ಯನೆ ನಿಂದು
ಸಂದ ಕಾವಡಿಯ ನಿಳುಪುತ್ತೆ ಭರದಿಂ ಬಂದು
ಆರ ಹಂಗಿಲ್ಲದೆ ನಡೆಯುವೇಳ್ದನುನ್ನತಂ
ಸೀರೆ ಕೌಪೇಕೆನುತೆ ಬಿಸುಟಂ ಜಗವನಾತಂ
ನಾರಸೀರೆಯನುಟ್ಟು ಹೊದೆದನಾನಂದದಿಂ
ಮಾಂಗಾರಿ ಮೆಚ್ಚಿ ಒಡನೊಡನೆ ಒರೆ ಹರುಷದಿಂ

ಹರಿವ ನದಿಯುದಕವಂ ಶಂಕರಂಗರ್ಪಿಸುತೆ
ತರುಕುಲದ ಫಲವುಮಂ ಶಶಿಧರಂಗರ್ಪಿಸುತೆ
ನೆಳಲ ತಣ್ಪಿನೊಳಿರ್ದು ಸೋಮನಾಥಂಗೆನುತೆ
ಸುಳಿವೆರಲನೆಮ್ಮ ಸೋಮಯ್ಯದೇವಂಗೆನುತೆ
ಕಂಪು ತೀಡಿದೊಡೆ ಸೌರಾಷ್ಟ್ರಪತಿಗೆಂದೆನುತೆ
ಹೆಂಪುಳ್ಳ ಕೊಳನಿರಲ್ ಸೋಮನಾಥಂಗೆನುತೆ
ಜಲಜಂಗಳಿರೆ ಚನ್ನ ಸೊಡ್ಡಳಂಗೆಂದೆನುತೆ
ಫಲವಿರಲ್ ಸೋಮಯ್ಯ ತಂದೆಗರ್ಪಿತವೆನುತೆ
ಕೊಡೆಹುಲ್ಲೊಳಾದ ಪ್ರಸಾದವಂ ಕೈಕೊಳುತೆ
ತಡೆವಿಡಿದು ನದಿಯ ಲಿಂಗೋದಕಮನನುಗೊಳುತೆ
ಪೊಸ ಪಣ್ಗಳಂ ಶಿವಂಗರ್ಪಿಸುತೆ ಸವಿಸವಿದು
ಹಸರುಳ್ಳ ಬಿಲ್ವಪತ್ರೆಯನರ್ಪಿಸುತ್ತಂದು
ಕಂಬಿಯಂ ಕೊಂಡೇಳ್ದು ನಡೆನಡೆದು ಪರಿತಂದು
ಶಂಭು ಶರಣೆನುತಡವಿಯೊಳಗೊರ್ವನೆಯ್ತಂದು
ಹರಿಣನಂ ಮಾವು ಮರಿಹುಲ್ಲೆಗಳ ನೋಡುತುಂ
ಕರಡಿ ಕಾಳ್ಪಂದಿ ಕಾಡಾನೆಗಳ ನೋಡುತುಂ
ಪೆರ್ಬಾವುಗಳ್ಪರ್ಬಿದಡವಿಗಳ ನೋಡುತುಂ
ಮುರ್ಬಿ ಕರ್ಬುರಿಸಿ ಕವಿದೆಡೆಗಳಂ ನೋಡುತುಂ
ಗಗನಕ್ಕೆ ನೆಗೆವ ಸಿಂಹಂಗಳಂ ನೋಡುತುಂ
ಜಗಕೆ ಪೊಸತೆನಿಪ ಭೇರುಂಡನಂ ಕಾಣುತುಂ
ಪರುಷ ಮೃಗವಂ ಕಂಡು ಪೊಡಮಟ್ಟು ನಡೆಯುತುಂ
ಶರಭಂಗಳಂ ಕಂಡು ಮೆಯ್ಯಿಕ್ಕಿ ನಡೆಯುತುಂ

ಧೂಪದ ದ್ವೀಪದಲ್ಲಿಗೆ ಸಾರಿಯಾಗುತಿರೆ
ಕಾಪಾಲಿ ಕೊಟ್ಟ ನೆನಹೆಚ್ಚರಂ ತೋರುತಿರೆ

ಭೂಮಿ: ನೀಂ ಕಲಶ ವಸುಮತಿ ಹೊನ್ನನೀಯುವ್ವ
ಸೋಮನಾಥನ ಗುಗ್ಗುಳಕ್ಕೆ ಬೆಸಕೆಯ್ಯುವ್ವ
ಎನೆ ದರಿವಿನೊಳಗೊಂದು ಕೊಪ್ಪರಿಕೆ ಹೊನ್ನಿರಲ್
ಮನವಾರೆ ಪಾತ್ರೆಯೊಳ್ತೀವುತಂ ಮೆರೆದಿರಲ್
ಕೊಂಡು ಬಂದಂ ಧೂಪವಿರ್ದೆಡೆಗೆ ಪೊಂಗಳಂ
ತಂಡತಂಡದೆ ಹರ್ಷದಿಂ ಕೊಟ್ಟ ಪೊಂಗಳಂ
ಪಾತ್ರೆಯೊಳಗಳ್ಕರಿಂ ಧೂಪವಂ ತೀವುತುಂ
ನೇತ್ರತ್ರಯನ ಸುತರ ಬಾಸಣಿಸಿಯೋವುತುಂ
ಕಟ್ಟಿ ಮುದ್ರಿಸಿ ಕಂಬಿಗಿಂಬಿನಿಂ ಪೊಡಮಟ್ಟು
ನಿಟ್ಟೆ ನೆಲೆಗೊಂಡು ಘನ ಪುಳಕವಂ ಮುಂದಿಟ್ಟು
ಸರಿಭಾಗಮಂ ನೋಡಿ ತೂಗಿ ತೂಕಮನರಿದು
ಹರುಷದಿಂ ಚಂದನಮನಿಕ್ಕಿ ತೂಕಮನರಿದು
ಬಾಳ್ಗಿನ್ನ ಸೌರಾಷ್ಟ್ರಪತಿ ಎನುತ್ತಿತ್ತಿದಂ
ಬಾಳ್ಗಿನ್ನ ಸೋಮಯ್ಯ ತಂದೆ ಎನುತಿತ್ತಿದಂ
ಧೂಪಮಂ ಪೊತ್ತು ಜನನದ ಹೊರೆಯನಿಳುಪಿದಂ
ಧೂಪಮಂ ಹೆಗಲನೇರಿಸಿ ಸಾವನಿಳುಪಿದಂ
ನಡೆದು ಬಂದಂ ತಿರುಗಿ ನವಧೂಪಮಂ ಪೊತ್ತು
ವೃಡನ ನವಪರಿಮಳದ ಗುರುಭಾರಮಂ ಪೊತ್ತು

ಧೂಪದೊಂದಡಿಯನಿಳೆ ತಾಳಲಾರದಿರೆ
ಧೂಪಮಂ ಪೊತ್ತಡಿಯನಿಟ್ಟನೊಪ್ಪುತ್ತಮಿರೆ
ಒಂದಡಿಯನಿಡೆ ನಿಜ ಪದಕೆಂದ್ರನಂಜಿದಂ
ಮುಂದಡಿಯನಿಡಲಿಂದ್ರನುಳಿದನಜನಂಜಿದಂ
ಮೂರನೆಯ ಪದದೊಳಜನುಳಿದಂ ಹರಿಯುಂಜಿದಂ
ಮೀರಿ ನಾಲ್ಕರೊಳ್ಹರಿಯುಳಿದ ಶಿವನಂಜಿದಂ
ಅಯ್ದನೆಯ ಪದಕಯ್ದು ಮುಖವನಿತೆ ಮಿಗಿಲಿಲ್ಲ
ಅಯ್ದೆ ನಡೆದೊಡೆ ಕುಡುವ ಪದವಿಗಳ ಪೆಸರಿಲ್ಲ

ಎಂದೊಡನೆ ಸೋಮನಾಥಂ ಚಿಂತಿಸುತ್ತಮಿರೆ
ಒಂದು ಪದಕೊಂದೊಂದು ಪದವಿಗಳ್ತೀರುತಿರೆ
ಪದದೊಳಗೆ ಮುಗ್ಗಿದ ಪ್ರಾಣಿ ಸಂತತಿ ಕೂಡೆ
ಪದವಿಯುಂ ಪಡೆದು ಸಗ್ಗಕ್ಕೆ ನಡೆದವು ಕೂಡೆ
ನೋಡಿದ ಮರಂಗಳುಂ ಸೋಂಕಿದ ಮರಂಗಳುಂ
ಕೂಡೆ ಭವಮುಂ ನೀಗುಪವು ಪರ್ವತಂಗಳುಂ
ಬರ್ದುಕುತಿರೆ ನಡೆತಂದನಪ್ರತಿಮನಮ್ಮಮ್ಮ
ಮುದದಿಂದಲೋಹಿಲಯ್ಯಂ ಧೀರನಮ್ಮಮ್ಮ
ಕಂಬಿ ಹೆಗಲೊಳಗಾಳೆ ಕುಸಿದುಂ ಕಾಯಂ ತಗ್ಗಿ
ಸಂಬಳಿಗೆ ತೆಗೆದು ಹೆಗಲೆಲುವುಗಳುಂ ನೆರೆ ತಗ್ಗಿ
ಕೆಲವುಪಾಸಂ ಪತ್ತಿ ಕೆಲವು ಪಾರಣೆಯಾಗೆ
ಬಲವಳಿದು ಡೆಂಡಣಿಸಿ ಹಜ್ಜೆ ಹುಣ್ಣಂತಾಗೆ
ಅಂಗಾಲೊಳುರಿಗೆಳ್ದು ಬೊಕ್ಕೆ ನೆತ್ತರನುಗುಳೆ
ಅಂಗದೊಳಗುಳ್ಳ ಸರ್ವ ತ್ರಾಣಮುಂ ಜಗುಳೆ
ಅನುಗೆಡುತ್ತವಯವಂಗಳ್ಸಡಿಲವಾದೊಡಂ
ತನು ಜರ್ಝರಂಬೋಗಿ ಜವವಳಿದು ನಿಂದೊಡಂ
ಮನವೆ ಕೈಕಾಲಾಗಿ ನಡೆವುತಿರ್ದಂ ನೋಡ
ನೆನಹು ಜೀವನವಾಗಿ ನಡೆವುತಿರ್ದಂ ನೋಡ
ಲೆಕ್ಕಿಸಂ ಕೈಕೊಳ್ಳದಕ್ಕರಿಂ ನಡೆನಡೆದು
ಮಿಕ್ಕ ನೇಹದ ನೆಳಲ ತಣ್ಪಿಂದೆ ನಡೆನಡೆದು
ಬೆಟ್ಟಂಗಳೊಳ್ನಡೆದು ನಡೆಯಲಾರದೆ ನಿಂದು
ಗಟ್ಟಂಗಳೊಳಗೆಡಹಿ ದಡದಡಿಸುತುಂ ನಿಂದು
ಬೀಳಬೀಳಲು ಶಿವಂ ಕೈಗೊಟ್ಟು ನೆಗೆವುತುಂ
ಜಾಳಿಸಲ್ಕಂಬಿಯುಂ ಕೆಯ್ಗೊಟ್ಟು ನೆಗೆವುತುಂ
ಕಾಣಬಾರದ ತೆರದೆ ಕೆಯ್ಗೊಟ್ಟು ನೆಗೆವುತುಂ
ಕೇಣವಿಲ್ಲದೆ ಶರಣನೊಡನೊಡನೆ ಸೊಗಯಿಪಂ
ಕಡು ಬಳಲೆ ಕಂಬಿಯುಂ ತಾನೆತ್ತಿ ನೆಗೆಯಿಪಂ
ನಡೆಯಲಾರದೊಡೆತ್ತಿಕೊಂಡೊಯ್ದು ನಡೆಯಿಪಂ
ಬಡವಾಗೆ ಬಡವಪ್ಪನೆಡಹೆ ತಾನೆಡಹುವಂ
ದಡದಡಿಸುವಾಗಳೊಡನೊಡನೆ ದಡದಡಿಸುವಂ

ಕೆಯ್ಸಿಟ್ಟು ಬೀಳ್ವುದಂ ನೋಡಿದಲ್ಲದೆ ಪಿಡಿಯ
ಕೆಯ್ಪಿಡಿದು ಕಾನನದೊಳೊಯ್ಯ್ಯಾರದಿಂದಲೆಯ

ಇಂತು ನಿಜಭಕ್ತ ಹೊನ್ನಯ್ಯಂಗೆ ಕರುಣದಿಂ
ಕಂತುಮದಹರನು ಕಂಬಿಯನಿಂತು ಹರುಷದಿಂ
ಬಂದನೋಹಿಲದೇಶ ನಟ್ಟಡವಿಯುಂ ಕಳೆದು
ವಿಂಧ್ಯದೇಶಂ ಮಹಾ ವಿಂಧ್ಯಂಗಳಂ ಕಳೆದು
ಬರೆ ಬರಲ್ ಸೌರಾಷ್ಟ್ರವಲ್ಲಿ ಹತ್ತಿರೆಯಾಗಿ
ಪುರಜನಂ ದೂರದಿಂ ಕಂಡು ಕೌತುಕರಾಗಿ
ಭೇರಿ ನಿಸ್ಸಾಳಮುರುಜಂಗಳಿಂದಿದಿರ್ಗೊಂಡು
ವಾರವನಿತಾಜನಂ ಭಕ್ತರಿಂದಿದಿರ್ಗೊಂಡು
ರನ್ನಗನ್ನಡಿ ಕಳಶ ಕನಕದಿಂದಿದಿರ್ಗೊಂಡು
ಸನ್ನುತ ವಿಳಾಸಿನೀ ಜನದಿಂದಮಿದಿರ್ಗೊಂಡು
ಬರಲಂದು ಪುರವರವಸಾನಂದದಿಂ ಪೊಕ್ಕು
ತರತರದೆ ಪುಳಕಂಗಳೇಳೆ ಹರುಷದಿ ಮಿಕ್ಕು
ನಡೆತಂದು ಶಿವನಿಳಯದೊಳಗೆ ಕಂಬಿಯ ನಿಳುಪಿ

ಕಡು ನೇಹದಿಂ ಸೈಗೆಡೆದು ದುಃಖವ ನಿಳುಪಿ
ಎಳ್ದು ಬಂದಪ್ಪಿಕೊಂಡೈದಿಸದೆ ಮತ್ತಪ್ಪಿ
ಆಳ್ದಂತೆ ಲಿಂಗದೊಳ್ಪುಗುವಂತೆ ಬಿಗಿಯಪ್ಪಿ
ಏನಯ್ಯ ಸೌರಾಷ್ಟ್ರಪತಿಯೆ ಬಡವಾದಯ್ಯ
ಆನಿಂತು ತಡೆದನೆಂದುಮ್ಮಳಿಸುತಿರ್ದಯ್ಯ
ಎನ್ನಯ್ಯ ಎನ್ನರಸ ಎನ್ನ ಸಮಸುಖನಿಧಿಯೆ
ಎನ್ನ ಪರಮ ಸ್ನೇಹರಸ ಸುಗೀತಾಂಬುಧಿಯೆ

ಎನುತೆ ಬಂದಲ್ಲಿ ಕಂಬಿಯುಂ ಮುದ್ರೆಯುಂ ತೋರಿ
ಮನಸಿಜಾರಿಯ ಮುಂದೆ ಇಟ್ಟು ಸಂತಸವೇರಿ
ರಸವೊಸರ್ವ ತಿರುಳ ಧೂಪವನೆತ್ತಿಕೊಂಡಲ್ಲಿ
ಪೊಸ ತುಪ್ಪದಿಂ ಶರ್ಕರಾದಿಯುಂ ತೋಯ್ದಲ್ಲಿ
ಸೋಮನಾಥಂಗಿತ್ತು ತೊನೆದಾಡಿ ತೂಗಾಡಿ

ಕಾಮಾರಿಗಿತ್ತಿತ್ತು ಕುಣಿದಾಡಿ ಮಣಿದಾಡಿ
ಪಾತ್ರೆಯೊಳ್ಕೆಂಡಮಂ ಸುರಿದು ಧೂಪವನಿಕ್ಕಿ
ನೇತ್ರದಿಂದಾನಂದ ಜಲವೊಸರೆ ಮೆಯ್ಯಿಕ್ಕಿ
ಎಲ್ಲಾ ಕದಂಗಳ ಗವಾಕ್ಷೆಗಳ ಮುಚ್ಚುತುಂ
ಸಲ್ಲೀಲೆಯಿಂದ ಧೂಪವನಿಕ್ಕಿ ಪೆರ್ಚುತುಂ
ಸುತ್ತಿ ಬಂದಾಡುತುಂ ನವ ಧೂಪಮಂ ಬೀಸಿ
ಮುತ್ತಿಕೊಂಡೊಪ್ಪುತುಂ ನವ ಧೂಪಮಂ ಬೀಸಿ
ಸೋಮಯ್ಯದೇವ ಕೈಕೊಳ್ಳಯ್ಯ ಕೊಳ್ಳಯ್ಯ
ಸೋಮಯ್ಯದೇವ ಶರಣಾಗು ಶರಣಾಗೆನುತೆ
ಕೂಗಿಡುತ್ತಂ ಬೀಸಿ ಕುಣಿದಾಡುತಂ ಬೀಸಿ
ಬೀಗಿ ಬೆರೆವುತ ಬೀಸಿ ಆಡುತಾಡುತ ಬೀಸಿ
ಮುಟ್ಟೆ ನಾಲ್ದೆಸೆಗೆ ಪೊಗೆ ಮುಸಗೆ ಬೀಸುತ್ತಮಿರೆ
ಇಟ್ಟಣಿಸಿ ಸೌರಾಷ್ಟ್ರ ದೇಶವೊಳ್ತೀವುತಿರೆ
ಕೇರಿಕೇರಿಗಳ ನಡುವೆಲ್ಲ ಧೂಪದ ಕಂಪು
ಊರೂರ ಹೊಲಹೊಲದೊಳೆಲ್ಲ ಧೂಪದ ಕಂಪು
ಕೆರೆಯೊಳಗೆ ಕೊಳನೊಳಗೆ ಗುಗ್ಗುಳದ ಸವಿಗಂಪು
ತೊರೆಯೊಳಗೆ ವನದೊಳಗೆ ಮೆರೆವ ಧೂಪದ ಕಂಪು
ತೀವುತಿರೆ ಪನ್ನೆರಡು ಬರಿಸಮೀ ತೆರದಿಂದೆ
ದೇವಂಗೆ ಬೀಸಿದಂ ಧೂಪಮಂ ಮುದದಿಂದೆ
ಮಾಗೆಯೊಳ್ಬೇಸಗೆಯೊಳುಬ್ಬರದ ಮಳೆಗಳೊಳ್
ರಾಗದೆ ವಸಂತ ಹೇಮಂತ ಋತುಕಾಲದೊಳ್
ತಂದು ತಂದೋಹಿಲಯ್ಯಂ ಧೂಪಮಂ ಬೀಸಿ
ಕುಂದದಕ್ಕದೆ ಸುಖದ ಸುಗ್ಗಿಯಿಂದಂ ಬೀಸಿ
ಹರುಷದಿಂ ಸೋಮನಾಥಂಗ ಬಿನ್ನವಿಸಿದಂ
ಕರುಣಾಕರಂಗೆ ಪರಮಂಗೆ ಬಿನ್ನವಿಸಿದಂ
ದೇವ ನಿಮ್ಮಡಿಗಳೆಂತೆಂತು ಬೆಸಸಿದಂತೆ
ದೇವ ನೀ ನಡೆಯಿಸಲ್ಕಡೆದು ಧೂಪವನಿಂತೆ
ತಂದೆ ನಾಂ ಪನ್ನೆರಡು ಬರಿಸವಾದುದು ದೇವ
ತಂದೆ ಕರುಣಿಪುದೆನಗೆ ನಿತ್ಯತ್ವಮಂ ದೇವ

ಎನುತಿರ್ದನತ್ತಲಿತ್ತಲ್ರಜತಗಿರಿಯೊಳಗೆ
ಮನಸಿಜಹರಂ ನಂದಿಗೆಂಪನಿಂದಿಳೆಯೊಳಗೆ
ಓರ್ವ ಭಕ್ತಂ ಧೂಪವಿಕ್ಕಿದಂ ಎಮಗೆಂದು
ಸರ್ವ ಮುಖದಿಂ ನಿಷ್ಠೆಯಿಂ ನೇಹದಿಂದೊಲಿದು
ಸೌರಾಷ್ಟ್ರದೊಳಗೋಹಿಲಯ್ಯನೆಂಬಂ ಕೇಳ
ತಾರಾದ್ರಿಗಾತನಂ ಕೊಂಡು ಬರ್ಪುದು ಕೇಳ
ಎನೆ ನಂದಿ ವೀರಭದ್ರಾದಿಗಳ್ನಡೆತಂದು
ತನತನಗೆ ನಲಿವ ಗಣವೃಂದದಿಂ ನಡೆತಂದು
ಸೌರಾಷ್ಟ್ರಮಂ ಪೊಕ್ಕು ಶಿವನಿಳೆಯಕೈತಂದು
ಮಾರಮದ ಮಥನನರುಪಿರ್ದ ಕುರುಪಂ ನೆನೆದು
ಬರೆ ಶಿವಾಲಯದ ಕದವೆಲ್ಲವಿಕ್ಕಿರೆ ನೋಡಿ
ಹರಭವನಮಂ ಮುಟ್ಟಲಮ್ಮದೆ ಮನಂಗೂಡಿ
ತಿರುಗಿ ಗಣಸಮಿತಿ ಕೈಲಾಸಕ್ಕೆ ನಡೆತಂದು
ಹರನೆಯವಧಾರು ಮತ್ತೊಂದು ಬಿನ್ನಪವೆಂದು
ದೇವಾಲಯದ ಕದವನಿಕ್ಕಿಕೊಂಡಿರ್ದಪಂ
ದೇವ ಸುಖದಿಂದೆ ಧೂಪವನಿಕ್ಕುತಿರ್ದಪಂ
ದೇವ ಕದವಂ ತೆರೆಯೆ ಕೋಪಿಸುವನೆಂದಂಜಿ
ದೇವ ಧೂಪದ ಸುಖಂ ಕೆಡುವುದೆಂದಾವಂಜಿ
ಬಂದೆವೆನೆ ಶಶಿಧರಂ ನಗುತವರ್ಗೆ ಬೆಸಸಿದಂ
ಮುಂದುವರಿದಾನಂದ ಜಲದಿಂದೆ ಬೆಸಸಿದಂ
ರಂಗಮಂಟಪದ ಪೂವಿನ ಕಲ್ಲನೋಸರಿಸಿ
ಲಿಂಗವಂತನನೆತ್ತಿಕೊಂಡು ಬನ್ನಿರೆ ಪರಸಿ
ಎಂದು ಬೆಸಸಿದೊಡನುಜ್ಞೆಯನಲ್ಲಿ ಕೆಯ್ಕೊಂಡು
ನಂದೀಶ ವೀರಭದ್ರಾದಿಗಳ್ನಡೆಗೊಂಡು
ಬಂದರೊಳಪೊಕ್ಕರೆತ್ತಿದರೋಹಿಲಯ್ಯನಂ
ಸಂದ ಧೂಪದ ಪಾತ್ರೆವೆರಸು ಸದ್ಭಕ್ತನಂ
ನೆಗೆದು ಕೈಲಾಸ ಸೋಪಾನವೇರಲ್ಕಂತೆ
ನೆಗೆದು ತೆರೆಗೊಂಡು ಧೂಪವನಡರುತುಂ ಮುಂತೆ
ಪೂಮಳೆಗಳೆರಗೆ ದುಂದುಭಿರವಂಗಳ್ಪುಟ್ಟೆ

ಪ್ರೇಮದಿಂ ಸೌರಾಷ್ಟ್ರಪುರದೊಳಗೆ ಗುಡಿಗಟ್ಟಿ
ನೋಡಿ ಗುರ್ಜರದೇಶವೆಯ್ದೆ ಬೆರಗಾಗುತಿರೆ

ನೀಡಿ ನೆಗೆದುದು ಗಣಂ ಗಗನತಳ ವೊಪ್ಪುತಿರೆ
ಬರೆ ದೇವಲೋಕದೊಳ್ಗಗ್ಗಳದ ಕಂಪೆಸೆಯೆ
ಸುರಗಿರಿಯುಂ ರಜತಗಿರಿಯೊಳಗೆಲ್ಲ ಕಂಪೆಸೆಯೆ
ದೇವಿ ಕೇಳ್ದಳ್ದೇವ ಈ ಕಂಪಿದೆಲ್ಲಿಯದು
ಭಾವಿಪೊಡೆ ಪೊಸ ಪರಿಮಳಂ ತಾನಿದೆಲ್ಲಿಯದು
ಹೆಂಪುಳ್ಳ ನವಧೂಪದೋಹಿಲಂ ಬಂದಪಂ
ಕಂಪಾವುದೆನೆ ದೇವಿ ಓಹಿಲಂ ಬಂದಪಂ
ಎನ್ನಣುಗನೋಹಿಲಯ್ಯಂ ಬಂದಪಂ ಗೌರಿ
ಎನ್ನ ಸುಖಸಿಧಿಯೋಹಿಲಯ್ಯ ಬಂದಂ ಗೌರಿ
ಎಂದು ಬೆಸಸುತ್ತಮಿರೆ ಬಂದನೋಹಿಲದೇವ
ಅಂದು ಗುಣಕುಲದ ನಡುವೊಪ್ಪಿ ಓಹಿಲದೇವ
ಎಯ್ತಂದು ಶರ್ವಂಗೆ ಶಂಕರಂಗೀಶಂಗೆ
ಸಯ್ತಾಗಿ ಭರ್ಗಂಗೆ ಶಶಿಧರಂಗಭವಂಗೆ
ದೇವಂಗೆ ದೇವರ ಶಿಖಾಮಣಿಗೆ ಪರಮಂಗೆ
ಭಾವಗಮ್ಯಂಗೆ ನಿಜಭಕ್ತೈಕ ವೇದ್ಯಂಗೆ
ಮೆಯ್ಯಿಕ್ಕುವಲ್ಲಿಯುಂ ಧೂಪಮಂ ಬೀಸುತಿರೆ
ಮೆಯ್ಯಪುಳಕಂಗಳಿಮ್ಮಡಿಸುತಂ ಬೀಸುತಿರೆ
ಸರ್ಪಭೂಷಣನೊಲ್ದು ನೋಡಿ ಸಂತಸವಿಡಿದು
ಒಪ್ಪದಿಂ ತಳ್ಕೈಸಿ ಕಡು ನೇಹವಿಡಿದಿಡಿದು
ನೋಡು ನಂದೀಶ ರಾಜ್ಯವನೊದೆದರಿಂತುಂಟೆ
ಮಾಡಿತ್ತನಲ್ಲೆನಲ್ಮತ್ತೆ ಮಾಡಿದರುಂಟೆ
ನೋವನರಿಯದೆ ಹೊತ್ತ ನಿತ್ತರಿಸಿದವರುಂಟೆ
ಭೂವಳಯದೊಳಗೋಹಿಲಯ್ಯಂಗೆ ಪಡಿಯುಂಟೆ
ಎಂದೋಹಿಲಯ್ಯಂಗೆ ಗಣಪದವಿಯಂ ಕೊಟ್ಟು
ಸಂದ ಗಣಕುಲದ ನಡು ಓಹಿಲನ ಮುಂದಿಟ್ಟು
ಸುರಶಿರೋಮಾಲಿಯೊಪ್ಪಿದನಚಲನೊಪ್ಪಿದಂ
ಪುರಭೀಮಕಾಲ ಕಾನನದಾವನೊಪ್ಪಿದಂ
ತಣ್ಪಿಂಗೆ ತಣ್ಪೆನಿಪ ಚಂದ್ರಧರನೊಪ್ಪಿದಂ

ಗುಣ್ಪಿಂಗೆ ಗುಣ್ಪೆನಿಪ ಗಂಭೀರನೊಪ್ಪಿದಂ
ಪೆಂಪುಳ್ಳ ಹೆಚ್ಚಳ್ಳ ಸುಖನಿತ್ಯನೊಪ್ಪಿದಂ
ಹಂಪೆಯ ವಿರೂಪಾಕ್ಷದೇವನಿಂತೊಪ್ಪಿದಂ

**ಕಂದ॥** ಪರಮವಿರಕ್ತಿಯೊಳೈತಂ
ದರವರಿಸದೆ ನಿಮಗೆ ಧೂಪಮಂ ತಂದಿತ್ತಾ
ವರದಿಂ ಸಂದೋಹಿಲದೇ
ವರಸುತ ನಾಂ ದೇವ ಹಂಪೆಯ ವಿರೂಪಾಕ್ಷಂ

---

# ಹರಿಹರನ ರಗಳೆಗಳು.

## ಭಾಗ ೬.

## ಏಕಾಂತರಾಮಿ ತಂದೆಗಳ ರಗಳೆ.

**ಕಂದ॥** ನತಜನ ಸಮೀಪನಭವಂ।
ಶ್ರುತಿ ದೂರಂ ಸಕಲದೇವಸೇವ್ಯಂ ಮೆರೆವಂ॥
ಕ್ಷಿತಿಯೊಳಗೇಕಾಂತರಾಮ।
ನತಿಶಯದಿಂ ಕರುಣಿ ಹಂಪೆಯ ವಿರೂಪಾಕ್ಷಂ॥

### ರಗಳೆ.

ಶ್ರೀಮೇರುವಿಂಗೆ ತೆಂಕಣ ದಿಶಾಭಾಗದೊಳು
ಭೂಮಿಗೆ ವಿಭೂಷಣವೆನಿಪ್ಪುದತಿ ರಾಗದೊಳು
ಹೆಸರೆನಿಪ್ಪಬ್ಬಲೂರೆಂಬ ಪೆರ್ಮೆಯ ಪುರಂ
ವಸುಧೆಗೆಸೆದಿಪ್ಪದರ ಕೀರ್ತಿ ಮಿಗೆ ಸಡಗರಂ
ಮುಗಿಲನಣ್ಮಿರುವ ಕೋಂಟೆಯ ಸೀಳ್ದ ತೆನೆಗಳಿಂ
ಗಗನದೊಳ್ಪಸರಿಸುವ ಬಿರಿದಿನಟ್ಟಳೆಗಳಿಂ
ಜಗಿಮ ಪಾತಾಳಮಂ ಮುಟ್ಟುವಗಳುದ್ದದಿಂ
ನೆಗಳ್ದಂಬರದೊಳೆಸೆವ ಹಳವಿಗೆಗಳೊಪ್ಪದಿಂ
ಹೊಳೆಹೊಳೆವ ಹೊಸಪರಿಯ ಸೋಮವೀಧಿಗಳಿಂದ
ನಳನಳಿಸುತಿಪ್ಪ ಜಿನಭವನ ಕೋಟೆಗಳಿಂದ
ಮೆಸೆವೆಸೆಗೆ ಸಂಭ್ರಮಿಪ ಜೈನರೊತ್ತೊತ್ತೆಯಿಂ

ಎಸೆವುದಾ ಪುರವದರೊಳಗೆ ಮಾನ್ಯವೃತ್ತಿಯಿಂ
ಕತ್ತಲೆಯ ನಡುವೆ ಮಿನುಮಿನುಪ ಜ್ಯೋತಿಯ ತೆರದಿ

ಸುತ್ತಿರ್ದ ಬಕದ ನಡುವಣ ಮರಾಳನ ತೆರದಿ
ತರುಗುಲ್ಮಲತೆಗಳೊಳಗಿರ್ಪ ಚಂದನದಂತೆ
ನೆರೆದ ಕಬ್ಬುನದೊಳಗೆ ಸಿಕ್ಕಿದ ಪರುಷದಂತೆ
ಬಸದಿಗಳ ನಡುವಿರ್ದುದೊಂದು ಶಿವನಾಲಯಂ
ಮಿಸುಪ ಬ್ರಹ್ಮೇಶ್ವರಂ ನೆಲಸಿದ ಶಿವಾಲಯಂ
ಆ ಶಿವಾಲಯದೊಳಗೆ ಬಡವಾಗಿ ಶಂಕರಂ
ದೇಶಿಗರ ತೆರದಿ ಸರ್ವೇಶ ತಾನಿರೆ ಕರಂ
ಜೈನರುಂ ಮಾಡುವ ನಿರೋಧಮಂ ನೋಡುತುಂ
ತನತನಗೆ ನುಡಿವ ದುಶ್ಶ್ರುತಿಗಳಂ ಕೇಳುತುಂ
ಪೂಜೆ ಇಲ್ಲದೆ ಮಜ್ಜನಕ್ಕೆರೆವರಿಲ್ಲದಿರೆ
ಓಜೆಗೆಟ್ಟಿರುಹನವರೆಲ್ಲರುಂ ಬಗೆಯದಿರೆ
ಎನ್ನಯ ನಿರೋಧಮಂ ಕೇಳರೆನ್ನವರೆಂದು
ಇನ್ನುದಾಸೀನವ ಮಾಡರೆನ್ನವರೆಂದು
ಇಂದು ಉದಯವ ಚಕೋರಿಗಳು ಹಾರೈಪಂತೆ
ತಂದೆ ಪುತ್ರನ ಬರವ ಮೋಹದಿಂ ನೋಳ್ಪಂತೆ
ಬಯಸುತಿರ್ದಂ ತನ್ನೊಳಿಂದಿರ್ಪ ವೀರನಂ
ಬಯಸುತಿರ್ದಂ ನಿಷ್ಠೆ ಬೇರ್ವರಿವ ಧೀರನಂ

ಇರಲಿತ್ತಲತ್ತಲುತ್ತರ ದಿಶಾಭಾಗದೊಳು
ಹರಭಕ್ತನೇಕಾಂತ ರಾಮಯ್ಯನೊಪ್ಪದೊಳು
ಇಪ್ಪನಾತನ ನಿಲವನೇನೆಂದು ಬಣ್ಣಿಪೆಂ
ಸರ್ಪಭೂಷಣನೊಲ್ಮೆಯವನ ತಾನೆಂದಪೆಂ
ನುಡಿಯಂ ನುಡಿದ ಬಳಿಕ ತಪ್ಪನಚಳಿತ ವಚನ
ಪಿಡಿದ ಭಾಷೆಯ ಬಿಡದೆ ಕಡೆಗಣಿಸ ದೃಢದ ಮನ
ಎಡೆಗೊಡಂ ಕೊಟ್ಟು ಪಿಮ್ಮೆಟ್ಟನಂತಹ ಕಲಿ
ತೊಡಕವಂ ತೊಡಕಿ ಬಿಡಿಸಲ್ಬಾರದಂತು ಛಲಿ
ಇಂತೆನಿಪ ಶಿವನ ಭಕ್ತಿಯ ನಿಷ್ಠೆಯಿಂ ನಿಂದು
ಚಿಂತಿಸಿದನಿರ್ದಿರ್ದು ತನ್ನ ಮನದೊಳಗಂದು
ಆರೆಬಿರಿವರಂ ವೀರರಂ ಸತ್ಯ ಭಕ್ತರಂ
ಹರವರಿಸುವಪ್ರತಿಮ ಶಿವಭಕ್ತಿಯುಕ್ತರಂ

ದಿವ್ಯ ಶಿವಲಿಂಗಂಗಳಂ ಶಿವಕ್ಷೇತ್ರಮಂ
ಸೇವ್ಯರೆನಿಸಿರ್ದ ಹರಶರಣಸಂಕುಲಮುಮಂ
ನೋಡುವುದ್ಯೋಗಮನನಾಗಿ ಚಿಂತಿಸತೊಡಗೆ
ನೋಡಬ್ಬಲೂರ ಜಿನನ ಪ್ರತಮೆ ನಡನಡುಗೆ

ಪೊರಮಟ್ಟನಪ್ರತಿಮನತುಳಬಲನುರವಣಿಸಿ
ನೆರೆ ಮನದಿ ಶಿವಭಕ್ತನಾನಂದಮಂ ಧರಿಸಿ
ಸಕಳ ಭವಿಗಳ ಪಾಪಮಂ ನೋಡಿ ಕಳೆವುತಂ
ಸಕಳ ದೇಶಂಗಳಂ ಪಾವನಂ ಮಾಡುತಂ
ದುರಿತಕುಲಮೇಘಮಾರುತಮೂರ್ತಿ ಬರುತಿರ್ದ
ಉರವಣಿಪ ನಿಂದಕಧ್ವಾಂತರವಿ ಬರುತಿರ್ದ
ಇಂತು ಪಲವೆಡೆಗೈದಿ ನಲಿನಲಿದು ಬರುತಮಿರೆ

ಮುಂತೆ ದೂರದೊಳಬ್ಬಲೂರಲ್ಲಿ ತೋರುತಿರೆ
ನೆರೆದಿರ್ದ ಬಸದಿಗಳು ಕಣ್ಗೆ ಬಿಳಿದಾಗಿರಲು
ಹರಭವನವೆಂದು ಕೈಯ್ಯೆತ್ತಿ ಪೊಡಮಡುತಿರಲು
ನಡುಗುತುಂ ಬೆಮರುತಲ್ಲಿಯು ಜಿನಪ್ರತಿಮೆಗಳು
ಘುಡುಘುಡಿಸಿ ಕಣ್ಣನೀರಿಕ್ಕುತಂ ಪ್ರತಿಮೆಗಳು
ಮುಂದಿಂಗೆ ಮೂಗೂರಿದವು ಜಿನಪ್ರತಿಮೆಗಳು
ಒಡನೆದ್ದವಾ ಬಾಗಿಲೊಳ್ಕಿಂಪಿರುಂಪೆಗಳು
ನಿಡುಸರಂಗೊಂಡು ಕರೆದುವು ಪಗಲ ಬಳ್ಳುಗಳು
ಈ ತೆರದೊಳುತ್ಪಾತವಾಗುತಿರೆ ನಡೆತಂದು
ನೀತಿ ಇಲ್ಲದ ಸವಣರೂರಹತ್ತಿರೆ ಬಂದು
ಕೂಡೆ ಪುರದೊಳ್ಪೊಕ್ಕು ಬಾಗಿಲುಗಳೊಳ್ನಿಂದು
ನೋಡೆ ಚಿತ್ರಲೆಯ ಬೊಂಬೆಗಳಿರಲ್ಕಳವಳಿದು
ತಿರುಗಿದಂ ಹರಹರ ನಮಃಶಿವಾಯೆಂದೆನುತೆ
ಪರಮ ಭಕ್ತಂ ಹೇಸಿದಂ ಸುಡುಸುಡೆಂದೆನುತೆ
ಎಲ್ಲವುಂ ಜಿನಭವನವಾಗೆ ಸುರ್ರನೆ ಸುಯ್ದು
ಪೊಲ್ಲವಾಯ್ತೆನುತೆ ಮಿಗೆ ಮರುಗಿ ಮುಮ್ಮಳವಾಯ್ತು
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಛೀ, ಛೀ ಎನುತೆ

ನೆಲನವ್ವೊಯ್ದು ತನ್ನಂ ಬೈದುಕೊಳುತುಂ ಬರುತೆ
ಹುಟ್ಟಿದಂದಿಂದಮಿಾ ಪ್ರತಿಮೆಯುಂ ಬಲ್ಲನೇ
ಕೆಟ್ಟನಿಂತೇಕಾಯ್ತು ತಾಂ ಭಕ್ತನಲ್ಲನೇ
ಪೋಪೊಡಿರುಳಾಯ್ತಿರಲ್ಬಾರದೇವೇಂ ಶಿವನೆ
ಆಪತ್ತಿನಗಿದರಿಂದಧಿಕವಿಲ್ಲೆಲೆ ಶಿವನೆ

ಎನುತಿರಲ್ಬ್ರಹ್ಮೇಶ್ವರಂ ಕರುಣದಿಂ ಬಂದು
ತನಗೆ ಸೊಗಸುವ ಭಕ್ತವೇಷವಾರ್ಗದಿ ನಿಂದು
ರಾಮಿತಂದೆಗಳ ಕೆಲಬಲದಲ್ಲಿ ಸುಳಿವುತಿರೆ
ಕಾಮಹರನಲ್ಲಿ ತನ್ನಂ ಮರಿಸಿ ನಿಲುತಮಿರೆ
ಕಂಡಿದೇನೀ ಪುರದೊಳಿರ್ಪವರ ಪರಿಯಲ್ಲ
ಖಂಡೇಂದುವಮೌಳಿಯ ಶರಣರೋರ್ವರೂ ಇಲ್ಲ
ಶಿವನ ಭಕ್ತರ ವೇಷವಾರ್ಗದಂತಿರ್ದಪುದು
ಹವಣಿಸದೆ ಎನ್ನ ಮುಂದೆಡೆಯಾಡುತಿರ್ದಪುದು
ನೆರೆದ ಕಲ್ಗಳ ನಡುವೆ ಪರುಷದ ಕಣಿಯು ಕಂಡೆ
ಸರ ಹರಿದ ಮಣಿಗಳೊಳ್ಚಿಂತಾಮಣಿಯು ಕಂಡೆ
ಗುಣಹೀನ ಧೇನುಗಳೊಳಗೆ ಕಾಮಧೇನುವಿದೆ
ಕಣಿಗಿಲೆಯ ತೋಪಿನೊಳು ಸಲೆ ಕಲ್ಪವೃಕ್ಷವಿದೆ
ನುಡಿಸಿ ನೋಡುವೆನಾದುದಕ್ಕೆಂದು ಸಾರ್ತಂದು
ನಿಡು ಸುಯ್ಯುತುಮ್ಮಳಿಸುತೆಂತಕ್ಕೆ ಎಯ್ತಂದು
ಶರಣಾರ್ಥಿ ನಿಮ್ಮ ಮಠವಾವುದೆಂದೆನುತೆರಗೆ
ಪುರದೊಳಗೆ ಬ್ರಹ್ಮೇಶನಾಲಯವೆನುತೆ ಪೋಗೆ
ಎಲ್ಲಿ ಬ್ರಹ್ಮೇಶ್ವರಂ ಎನುತ್ತೆ ಕಣ್ಬಂದಂತೆ
ನಿಲ್ಲದುರವಣಿಸುತಲ್ಲೈದಿ ಗುರುಗಳ್ಸಿಂತೆ
ನಡೆದೊಡೆ ನಡೆದು ಪರಿದೊಡೊಡನೊಡನೆ ನಡೆತಂದು
ವೃಡನಾಲಯುಂಬುಗಲ್ಪೆನ್ನಲ್ಲಿ ಪುಗುತಂದು
ಘೂಪ್ಪೆನಲ್ಶಂಕರನ ಚರಣತಳದೊಳು ಬಿರ್ದು
ಕುಪ್ಪಳಿಸಿ ಕಣ್ಣನೀರೊಡೆಯಲಳಲುತ್ತಿರ್ದು
ಏನೈಯ್ಯ ಶಿವನೆ ಉಮ್ಮಳಿಸುತಿರ್ಪೈ ತಂದೆ
ಏನೈಯ್ಯ ಕರನಿರೋಧಮೊಳಿರ್ಪೆ ಎಲೆ ತಂದೆ

ಎಂದೆನುತ್ತಪ್ಪಿಕೊಂಡಡಿಗಡಿಗೆ ಮುಂಡಾಡಿ
ಬಂದಾಯುಷಮನುಸುರ್ದು ಕಡು ಮೋಹದಿಂ ನೋಡಿ
ದೇವ ಇಂತಿರತಕ್ಕುದೇ ದೂಷಕರ ನಡುವೆ
ದೇವ ಇಂತಿರ್ಪರೆ ಶಿವದ್ರೋಹಿಗಳ ನಡುವೆ

ಎನೆ ಶಶಿಧರಂ ರಾಮತಂದೆಯಂ ಬಿಗಿದಪ್ಪಿ
ಎನಗೊಡೆಯರಿನಿತು ದಿನವಿಲ್ಲೆನುತಮರ್ದಪ್ಪಿ
ನಿನ್ನ ಬರವಂ ಪಾರುತಿರ್ದೆನೆಲೆ ರಾಮೈಯ್ಯ
ಎನ್ನೊಲವು ಬರ್ಪಂದದಿಂ ಬಂದೆ ರಾಮೈಯ್ಯ
ಅರುಹಸರ ಪ್ರತಿಮಾದಿಗಳನೆತ್ತಿ ಬಿಸುಟು ಕಳೆ
ನೆರೆದಿರ್ಪ ಜೈನಸಂಕುಳವನೆಬ್ಬಟ್ಟಿ ಕಳೆ
ಎಂದು ಬೆಸಸಲು ರಾಮತಂದೆ ಹರುಷಂದಳೆದು
ಅಂದಿನಿರುಳಂ ಹರನೊಳೇಕಾಂತವಂ ಕಳೆದು
ವಸುಧೆಗಿನಕಿರಣ ಶಿವಭಕ್ತಿ ಪಸರಿಸುವಂತೆ
ದೆಸೆದಿಕ್ಕನಾವರಿಸಿ ತೊಳಗಿ ಬೆಳಗುತ್ತಿಂತೆ

ಬೆಳಗಾಗೆ ಶಿವನ ಪೂಜೆಗೆ ಪೂವ ತರಲೆಂದು
ಗಳಗಳನೆ ಬರೆ ರಂಗಮಂಟಪದ ನಡುವಂದು
ಹರನತ್ತ ಕಾಲಾಗಿ ಪಟ್ಟಿರೆ ಸವಣಗುನ್ನಿ
ಹರನಣುಗನೀಕ್ಷಿಸುತ್ತೇಳೆಲೆ ಹುಳಿತಗುನ್ನಿ
ಹರನಿರ್ಪ ದೆಸೆಯೊಳೀ ಪರಿ ಇರಲ್ತಕ್ಕುದೇ
ನರಕಿ ಏಳೇಳು ಶಿವದ್ರೋಹಿ ಇರತಕ್ಕುದೇ

ಎಂದ ನುಡಿಗೇಳಿ ಸವಣಂ ಕರಂ ಘುಡುಘುಡಿಸಿ
ಡಂಬಿನ ಗೊರವ ಗಳಹದಿರು ನಿನ್ನ ಮಾತು ಹುಸಿ
ಶಿವನೆಂದಡಾರೆಲ್ಲಿಯಾರ್ಗಿತ್ತನೆಲೆ ಗೊರವ
ಹವಣರಿಯದೆನ್ನೊಡನೆ ನುಡಿವರೆ ಮರುಳ್ಗೊರವ
ಎನೆ ರಾಮತಂದೆ ಘುಡುಘುಡಿಸಿ ಮಸಗಿದನಂದು
ಕೊನೆ ಮೀಸೆ ಕೆತ್ತೆ ಸೆಡಿಲೇಳೆ ಎಳ್ದಂ ನಿಂದು

ಕೇಳ್ದಿಲವೊ ಮೂರುಂಪುರಂಗಳುರುಪಿದುದನರಿಯ
ಕಾಲನಂ ಭಸ್ಮೀಕೃತವ ಮಾಡಿದುದನರಿಯ
ಕಾಮನಂ ನೋಸಲಗಣ್ಣಿಂದುರುಪಿದುದನರಿಯ

ಸೋಮನಂ ಸಿರಿಮುಡಿಯೊಳಗೆ ಸೂಡಿದುದನರಿಯ
ಹರಿಯಜರ ನಡುವೆ ಉರಿಲಿಂಗವಾದುದನರಿಯ
ಅರೆಯುಟ್ಟೆ ಬಪ್ಪ ವಿಷಮಂ ಧರಿಸಿದನನರಿಯ
ಹುಲಿಗೆರೆಯೊಳುದಯಿಸಿದ ಸೋಮನಾಥನನರಿಯ
ಎಲೆ ಮರುಳೆ ಬಾಣಂಗೆ ಕೆಯ್ಯನಿತ್ತುದನರಿಯ
ಎಲೆಲೆ ಮಯ್ಯೂರಂಗೆ ಮೈಯ್ಯನಿತ್ತುದನರಿಯ
ಎಲೆ ಕಾಳಿದಾಸಂಗೆ ಕಣ್ಣನಿತ್ತುದನರಿಯ
ಎಲೆಲೆ ನಂಬಣ್ಣಂಗೆ ತನ್ನನಿತ್ತನನರಿಯ
ಎಲವೊ ದಾಸಂಗೆ ಶವಸಿಧಿಯನಿತ್ತುದನರಿಯ
ಓಹಿಲನನಿಳೆಯರಿಯೆ ಒಯ್ದ ದೇವನನರಿಯ
ಆಹ ಉದ್ಭಟನ ಪುರವೆರಸಿ ಒಯ್ದನನರಿಯ
ಎಲವೊ ಕರುಕುಚಿಕಂಗೆ ತಂದೆ ಇತ್ತನನರಿಯ
ಎಲವೋ ಕೊಡಗೂಸಿಯ ಹಾಲ ಸವಿದನನರಿಯ
ಎಂದು ಘರ್ಜಿಸಿ ರಾಮತಂದೆಗಳ್ಮೊದಲಿಸಿ
ಸಂದ ಭಕ್ತಂಗೆ ಸವಣ ನುಡಿದನಗ್ಗಲಿಸಿ

ಎಲೆ ಭಕ್ತ ತೆಗೆ ಪುರಾಣದ ಮಾತು ನಿನಗೇಕೆ
ಎಲೆ ಭಕ್ತ ಹಿಂದಾದ ಹಳೆಯ ಮಾತುಗಳೇಕೆ
ಇಂದೆಮ್ಮ ಮುಂದೆ ನಿನ್ನಯ ತಲೆಯನರಿದು ಪಡೆ
ಸಂದುದು ಬಳಿಕ್ಕ ನುಡಿಯಾವೆಲ್ಲರುಂ ನೋಡೆ
ಪಡೆಯಲ್ಲಿನಪ್ರತಿಮೆಗಳನೆತ್ತಿ ಬಿಸುಡುವೆವು
ನಡುವೆ ಶಿವಲಿಂಗಪ್ರತಿಷ್ಠೆಯಂ ಮಾಡುವೆವು
ಎನುತಿದನೋಡಂಬಟ್ಟೆವೆಂದು ಸವಣರ್ನುಡಿಯೆ
ತನಗಿಚ್ಚೆಯಂತಿರ್ಪುದಂತವರದಂ ನುಡಿಯೆ

ಆ ರಾಮತಂದೆ ಪುಳಕಿತನಾಗಿ ಹಿಗ್ಗುತುಂ
ಭೋರೆಂದು ಗುಡಿಗಟ್ಟಿ ಮತ್ತೆ ಮೈವೆಚ್ಚುತುಂ
ಇದು ಭಾಷೆ ಭಾಷೆ ಒರೆ ಒರೆ ಇದನೊಡಂಬಟ್ಟೆ
ಇದನಾರವೊಡೆ ಬಳಿಕ ಬಹುವೇ ಶಿವನ ಒಟ್ಟೆ
ಎಂದು ಭಾಷಾಪತ್ರಮಂ ಬರೆಯಿಸಿದನಂದು
ತಂದು ನೆರಹಿರೆ ನಿನ್ನ ಸವಣರನೆನುತ್ತಂದು

ಕರೆಯುವೇಳ್ದಂ ಜಗದೊಳುಳ್ಳ ಶಿವಭಕ್ತರಂ
ಬರುತಲಿರ್ದುದು ಹರನ ಗಣ ಸಮಿತಿಯೊತ್ತರಂ
ಅಗ್ಗಣಿಯ ಹೊನ್ನಿತಂದೆಗಳವರ್ಮುಂತಾಗಿ
ಅಗ್ಗಳೆಯ ದೇವರಸರವರ್ಗಳುಂ ಸಹಿತಾಗಿ
ದೆಸೆ ನೂರು ಗಾವುದದೊಳುಳ್ಳ ಶರಣರ ಮೊತ್ತ
ಎಸೆಯೆ ನೆರೆದುದು ಲಕ್ಕಲೆಕ್ಕದಿಂದತ್ತತ್ತ
ರಜತಗಿರಿ ಜಯಿಸಿ ಭಕ್ತರ ರೂಪುಗೊಂಡಂತೆ
ನಿಜಭಸಿತಕಾಂತಿಯುಂ ಚಂದ್ರಿಕೆಯೊಳಳ್ದಂತೆ
ಮುಕುಟದ ಮಹಾಮಹಿಮರಪ್ರತಿಮರಲ್ಲಲ್ಲಿ
ಅಕಳಂಕಚರಿತರನುಪಮಕೃಪಾಕರರಲ್ಲಿ
ಒಪ್ಪುವ ಕರಸ್ಥಲ ಉರಸ್ಥಲದಚಲರಲ್ಲಿ
ನಿಪ್ಪಸರದಚ್ಚ ಶಿವಲಿಂಗವ್ರತಿಗಳಲ್ಲಿ
ಪಂಚಾಕ್ಷರಿಯೆ ರೂಪುಗೊಂಡಂದದಿಂ ಕೆಲರು
ಪಂಚಭೌತಿಕವಿಲ್ಲದೊಡಲೊಳಿರ್ಪರ್ಕೆಲರು
ಶಾಂತರುಗ್ರರು ಸತ್ಯರನುಪಮತ್ಯಾಗಿಗಳು
ಸಂತೋಷಿಗಳ್ಸುಖಿಗಳಸಮಶಿವಯೋಗಿಗಳು
ನೀಡಿ ನೆಗಪಿದ ಕೋಟಿವೃಷಭಧ್ವಜದ ನಡುವೆ
ಕೂಡೆ ಕೇಳಿಸುವ ಶರಣರ ಸಂದಣಿಯ ನಡುವೆ
ಗಿರುಘಟಿಯ ಮದ್ದಳೆಯ ಕರಡೆಗಳ ಧ್ವನಿಯೊಳಗೆ
ತುರುಗಿದವುಜೆ ತಾಳ ಕವುಸಾಳದ ರವದೊಳಗೆ
ಕೊಂಬುಗಳ ಚಿರುಲುಗಳ ಕಹಳೆಗಳ ಧ್ವನಿಯೊಳಗೆ
ಬೊಂಬುಳಿಯ ಕಿನ್ನರಿಯ ಶಂಖಧ್ವನಿಗಳೊಳಗೆ
ಆರರೆ ನಡೆತಪ್ಪ ಸಿಂಹದ ಜಂಗುಳಿಗಳಂತೆ
ಉರವಣಿಸಿ ಘುಳುಘುಳಿಪ ಶರಭನ ನೆರವಿಯಂತೆ
ಮೊಳಗಿ ಮಿಂಚುತೆ ಬರ್ಪ ಸಿಡಿಲಬಳಗದ ತೆರದಿ
ತೊಳಗುತ್ತೆ ಬೆಳಗುತ್ತೆ ಬರ್ಪ ಕವಿಗಳ ತೆರದಿ
ಬಂದು ನೆರೆದುದು ಭೂಮಿಯಗಲಕ್ಕೆ ಹರಗಣಂ
ನಿಂದುಘೇ ಚಾಂಗು ಬೊಲ್ಲೆನುತಿರೆ ಶಿವನ ಗಣಂ
ಇಂತು ನೆರೆದಿರ್ದುದೊಂದೆಸೆಯೊಳಭವನ ಗಣಂ

ಮುಂತೆ ಮತ್ತೊಂದೆಸೆಗೆ ಸಾರ್ದು ಜೈನರ ಗಣಂ
ನೆರೆದು ಬರುತಿರ್ದುದು ಜಿನಪ್ರತಿಗಳಲ್ಲಲ್ಲಿ
ಹರಿದು ಸಡಗರಿಸಿ ಸಾಲ್ವಿಡಿದು ಬರುತಲ್ಲಲ್ಲಿ
ಕೆಯ್ಯ್ಯಗುಂಡಿಗೆ ಮೋಟ ಕುಂಚದ ಹರಿದ ತಟ್ಟು
ಮೆಯ್ಯ್ಯಗೇಣುದ್ದದ ಮಲಂ ಹರಿದ ತಲೆಕಟ್ಟು
ಮಿಂಚುದಲೆ ಹಡಿಕೆವಾಯಿ ಹಗೆ ಹಲ್ಲುಗಳ ಮೊರೆ
ಸಂಚಿಸಿದ ಹಲವು ಮಲವೆತ್ತು ಹೊಲಸು ನಾರೆ
ಕುರುಡರುಂ ಕುಂಟರುಂ ಡಂಭರುಂ ಸೀತರುಂ
ಬರಡರುಂ ನಿಃಕರಡರುಂ ನಿಜದ ಹುಸಿಕರುಂ
ಕ್ಷುದ್ರರುಂ ವಾಚಾಳರುಂ ಕೆಟ್ಟ ಸವಣರುಂ
ನಿದ್ರೆಯಿಂದೆದ್ದು ಬಂದಂತಿಪ್ಪ ಜಾಡ್ಯರುಂ
ಬತ್ತಲೆಗರುಂ ಬಡಕರುಂ ವೀತರಾಗರುಂ
ಕತ್ತಲಿಪ ಮುಖದ ಭಾಗ್ಯದ ಭೋಗಹೀನರುಂ
ಮುತ್ತ ಮುದುನರಿಯಂತೆ ಬಳ್ಳಗರೆವರ್ಕೆಲರು
ಕತ್ತೆಯಂತರಿಚಿಕಾಳ್ಗೆಡೆವುತಿರ್ಪರ್ಕೆಲರು
ಗೂಗೆಯಂತಿರೆ ಮಿಗೆ ಪಲುಂಬುತಿರ್ಪರ್ಕೆಲರು
ಕಾಗೆಯಂತಿರೆ ಕಾಕುಗೆಡೆಯುತಿರ್ಪರ್ಕೆಲರು
ಉಮ್ಮಳಿಪ ಕಪಿಯಂತೆ ಸುಮ್ಮನಿರ್ಪರ್ಕೆಲರು
ತಮ್ಮೊಳಗೆ ತಾವು ಗುಜುಗುಜುಗುಟ್ಟುವರ್ಕೆಲರು
ವಾದದಿಂ ವಸಿಷ್ಠನಂ ಗೆಲೆವ ಪಂಡಿತರಲ್ಲಿ
ಸಾಧಿಸಿ ಸಕಲ ಮಂತ್ರ ಶಕ್ತಿಯಿಂದಂತಲ್ಲಿ
ವಾದವಶ್ಯಂ ಮೋಹನಸ್ತಂಭನವ ಬಲ್ಲ
ಭೇದಂಗಳಂ ದಂಡ ಸಾಮಂಗಳಂ ಬಲ್ಲ
ಪಂಡಿತರ್ಸವಣರುಂ ಜೈನರಾರ್ಹತರಲ್ಲಿ
ತಂಡತಂಡದ ಋಷಿಗಳೆಂಬ ಶ್ರಾವಕರಲ್ಲಿ
ಸವಣವಡೆಕೂಡೆ ನೆರೆದುದು ಗಣಂಗಳ ಮುಂತೆ
ರವಿಕಿರಣದುರವಣೆಗೆ ಸಾರ್ದ ಕಣ್ಗತ್ತಲೆಯಂತೆ
ದಾವಾನಲಂ ನೋಡಿ ನೆರೆದ ತರಗೆಲೆಯಂತೆ
ಭಾವಿಸೆ ಮಹಾನಿಲಂಗೊಂಡಿರ್ದ ಮುಗಿಲಂತೆ
ಇಂತು ನೆರೆದಿರ್ದುದಾಶೇಷಶ್ರವಣರಲ್ಲಿ

ಅಂತದಂ ನೋಡಿ ನಗುತಾನಂದದಿಂದಲ್ಲಿ
ಆ ಸಮಯದೊಳು ರಾಮತಂದೆ ತಾನೊಪ್ಪಿದಂ
ಭಾಸುರವೆನಿಪ್ಪ ಭಕ್ತ್ಯಂಗನೆಯನಪ್ಪಿದಂ
ನಳನಳಿಪ ಘುಳುಘುಳಿಪ ಸಿಂಗರಂ ಮಾಡಿದಂ
ಬೆಳಬೆಳಗುತಿರ್ಪ ಪೊಸ ಭಸಿತಮಂ ಪೂಸಿದಂ
ಕರದೊಳುಂ ಕಂಠದೊಳು ರುದ್ರಾಕ್ಷೆಯುಂ ಧರಿಸಿ
ಶಿರ ಕೊರಲು ತೋಳುಗಳೊಳಂತವಂ ಸಿಂಗರಿಸಿ
ಸುರುಚಿರ ಸುವರ್ಣ ಪಳಿಯುಂ ತೆಗೆದು ಬಿಗಿದುಟ್ಟು
ನೆರೆದ ಸವಣರ್ನಡುಗಲು ಬುಬೆಂದು ಬೊಬ್ಬಿಟ್ಟು
ಗಾಳಿಯುಂ ಸೀಳ್ವ ಪೊಸ ಕೂರಸಿಯನಳವಡಿಸಿ
ಬಾಲೇಂದುಧರನಣುಗನುಬ್ಬಿನಿಂದಗ್ಗಳಿಸಿ
ಕಾಲ ತೊಡರುಲಿಯೆ ಘುಲುಘುಲುಕೆಂದು ನಡೆತಂದು
ಲೀಲೆ ಮಿಗೆ ಭಕ್ತರುಘೆ ಚಾಂಗು ಬೊಲ್ಲೆನಲಂದು
ಬಂದ ಶಿವಭಕ್ತರ್ಗೆ ಮೆಯ್ಯಿಕ್ಕಿ ಹೋ ಎಂದು
ನಿಂದು ನುಡಿದಂ ರಾಮತಂದೆ ಹಿಗ್ಗುತ್ತಂದು
ಈ ಶಿರವನರಿದು ಹತ್ತಿಸಿ ಶಿವನನೊಲಿಸುವೆಂ
ಸಾಸಿರ ಜನರನೊಡೆದು ಲಿಂಗಮಂ ನಿಲಿಸುವೆಂ
ಇದು ಭಾಷೆ ಇದನಳುಪೆ ಜೈನರೇನೆಂದುದಂ
ಮುದದಿಂದೊಡಂಬಟ್ಟೆನೆಂದಲಗನೆತ್ತಿದಂ

ಆಗಳಾ ಜೈನರೆಲ್ಲಂ ಕೌತುಕಂ ಬಡಲು
ರಾಗದಿಂ ಭಕ್ತರೆಲ್ಲಂ ಸಂತಸಂ ಬಡಲು
ಎಡದ ಕೆಯ್ಯಿಂದ ಜಡೆಯುಂಸುತ್ತಿ ಪಿಡಿವಾಗ
ಎಡೆಗುಡದೆಯಲಗಂ ಶಿರಕ್ಕೆ ಮೋಹಿಸುತಾಗ
ಏನೆಂಬೆನೇನೆಂಬೆನೆಲೆಲೆಲೆಲೆ ಕೌತುಕಂ
ಆನರಿಯೆ ನಾನರಿಯೆನಾಹ ಧೀರಾಂತಕಂ
ಘರಿಲೆಂಬ ದನಿ ಪುಟ್ಟುವಲ್ಲಿಂದ ಮುನ್ನರಿದು
ಹರನಿರ್ದ ದೆಸೆಗಟ್ಟಿ ತಲೆವಿಡಿದು ನಲಿನಲಿದು
ಶಿರವನೇರಿಸಿ ಮಲೆದು ಸರಸರನೆ ಹಿಮ್ಮೆಟ್ಟಿ
ಬರುತ ಹಿಂದಣ ನಂದಿಯುಂ ಮಲಂಗಿರೆ ಮುಟ್ಟಿ

ಸವಣರೆಲ್ಲಂ ನಡನಡನೆ ನಡುಗಿ ಘೋಳಿಟ್ಟು
ತಮತಮಗೆ ಭೀತಿಗೊಂಡೆಲ್ಲರುಂ ಮರವಟ್ಟು
ಮಾಯವಿದು ಮಂತ್ರವಿದು ಮಾಹೇಂದ್ರಜಾಲವಿದು
ಕಾಯವೇಳ್ದಿಂತು ಮಾಡುವದು ಕೌಟಿಲ್ಯವಿದು
ಎಮಗಿದರ ಪರಿ ತಿಳಿಯದೆನುತಾಹತರಳುಕಿ
ನೆವದಿಂದಲೇಳಲುದ್ಯುಕ್ತರಾಗಿ ಮನವಳುಕಿ

ಅಂತದಂ ಕಂಡಗ್ಗಣಿಯ ಹೊನ್ನಿತಂದೆಗಳು
ಇಂತಾಗಲಾಗದೆನೆ ನುಡಿದು ಪರವಾದಿಗಳು
ಚನ್ನಾಯಿತೈಯ್ಯ ಕಪಟವಿದೆನಲು ತಮತಮಗೆ
ಬಿನ್ನಾಣವೇಕೆ ಮಾಡುವುದನುಸುರುವುವೆಮಗೆ
ಎನೆ ಸವಣರೇಳ್ದು ತಮ್ಮೊಳ್ವಿಚಾರಿಸಿ ನೋಡಿ
ತನತನಗೆ ನುಡಿವೇಕ ವಾಕ್ಯವಾಗುತೆ ಕೂಡಿ
ಇಂತೆಂದರೇಳು ದಿವಸಕ್ಕೆ ಶಿರವಂ ಕೂಡೆ
ಮುಂತೆ ಶಿರವಂ ಪಡೆವುದೆಮ್ಮ ಮತವೆಂದಾಡೆ

ನುಡಿಯೆ ಕೈಕೊಂಡೆವೆನುತಂ ಹೊನ್ನಿತಂದೆಗಳು
ವೃಡನ ಮೊಗಮುಂ ನೋಡಿ ತಲೆದೂಗಿ ತಂದೆಗಳು
ಇಂತು ಮಾಡಿದಿರೀ ಸವಣರಿದಕ್ಕೇನೆಂದು
ಕಂತುಹರಮೂರ್ತಿ ವಿ ಗೆ ಪೊಸತು ಮಾಡುವೆನೆಂದು
ಏಳು ದಿನವೀ ಶಿರವನಿಂತೀ ತೆರದೊಳಿರಿಸಿ
ಬಾಲೇಂದುಧರನಣುಗನಿಚ್ಚೆಯಿಂದನುಕರಿಸಿ
ನೆರೆಯುವೇಳ್ಕೇಳು ದಿವಸಕ್ಕೆ ಶಿರವಂ ಕೂಡಿ
ನೆರೆ ಲೋಕವರಿಯೆ ಮೆರೆವೇಂ ಪಡೆವೆನಿಳೆ ನೋಡಿ
ಪಡೆಯದೊಡೆ ಬ್ರಹ್ಮಾಂಡವೊಡೆಯದೇಕಿರ್ದಪುದು
ಪಡೆಯದೊಡೆ ಶಿವನ ಕೈಲಾಸವೆಂತಿರ್ದಪುದು
ನುಡಿದು ತೋರದೊಡೆ ಶಿವಭಕ್ತಿಯೆಂತಿರ್ದಪುದು
ವೃಡನ ಸಮ್ಮುಖದಿ ಪಡೆವೇಂ ಪಡೆವೆನೆನುತಿರ್ದು

ಎಂದು ಗರ್ಜಿಸುತೆ ಕಂಕಣದಾರವಂ ಕಟ್ಟಿ
ಅಂದು ಸವಣರ ಮನಂ ನಡುಗಿ ಸರಕಂ ಕಟ್ಟಿ

ಒಡನೆ ನಾನೂರೊಡೆಯರುಂ ಕಂಕಣಂಗಟ್ಟಿ
ಸಡಿಫಡ ಜಿನನ ಬೊಂಬೆಗಳನೆಲ್ಲ ಹುಡಿಗಟ್ಟಿ
ಕಳೆಯಬೇಕೆನುತಾರುತುಂ ಬೊಬ್ಬಿರಿವುತಿರಲು
ಘುಳುಘುಳಿಸಿ ಘೂರ್ಮಿಸುತೆ ಕುಪಿತರಾಗುತ್ತಿರಲು
ಆ ಸಮಯದೊಳು ಹೊನ್ನಿತಂದೆಗಳು ಸಡಗರಿಸಿ
ಲೇಸಪ್ಪ ಹೊನ್ನ ಹೊಸ ಪರಿವಾಣಮುಂ ತರಿಸಿ
ಅದರೊಳ್ದಣಿಂಬಮುಂ ಪಾಸಿ ಭಸಿತವನಿಟ್ಟು
ಮುದದಿಂದ ಪಾದೋದಕ ಪ್ರಸಾದವನಿಟ್ಟು
ಸುಲಿದ ಪಲ್ಮಿನುಗೆ ಕೆತ್ತುವ ಮೀಸೆಯಿಂದೊಪ್ಪೆ
ಛಲದಿಂದೆ ಗಂಟಿಕ್ಕಿ ಬಿಗಿದ ಪುರ್ಬಿಂ ಪೊಪ್ಪೆ
ಘುಳುಘುಳಿಪ ರಾಮತಂದೆಗಳ ಶಿರಮುಂ ತಂದು
ಇಳುಪಿದರ್ಪರಿವಾಣದೊಳಗೆ ಬೊಬ್ಬಿಡುತಂದು

ಎತ್ತಿದಂ ಶಿವಭಕ್ತರೆಲ್ಲರುಘೆಯುಘೆ ಯೆನಲು
ಸುತ್ತಿರ್ದ ಸವಣ ಪಡೆ ಕೌತುಕಂಬಡುತಿರಲು
ಶಿವನ ಪ್ರಸಾದಮುಂ ನಿಂದು ಹೊರುವಂದದಿಂ
ಭವನ ಕೀರ್ತಿಯನೊಪ್ಪದಿಂ ಧರಿಸುವಂದದಿಂ
ಗಿರಿಶನಭಿಮಾನಮುಂ ಪೊತ್ತು ನಿತ್ತರಿಪಂತೆ
ಶರಣ ಸಂಕುಳದ ಹರಣಮನರರೆ ಹೊರುವಂತೆ
ಹೊತ್ತು ಕೊಂಡಂ ಹೊನ್ನಿತಂದೆ ಹರಿವಾಣಮುಂ
ಹೊತ್ತುಕೊಂಡರ್ಸವಣರೆಲ್ಲ ದುಮ್ಮಾನಮುಂ
ಹಿಂದೆ ದೇಹಕ್ಕೆ ಕಾಪಿಟ್ಟು ನೆರೆ ಧೀರರಂ
ಮುಂದೆ ನಡೆಗೊಂಡನಪ್ರತಿಮನಭಿನವಹರಂ
ಹೊತ್ತ ಬಾಳೆತ್ತಿದ ಕಠಾರಿ ಕಿತ್ತಲಗುಗಳು
ಸುತ್ತಂ ತಳೆತರ್ು ಥಳಥಳಿಪ ಪೊಸಕೈದುಗಳು
ನೋಡಲೆಂದವನಿಯಗಲಕ್ಕೆ ನೆರೆದರಸುಗಳು
ಕೂಡೆ ನೆರೆ ತೀವಿತ್ತು ಶಿವಭಕ್ತರಿಕ್ಕೆಗಳು
ಗಗನವೆಡೆಯಿಲ್ಲೆನಿಸಿ ತುರುಗಿದ ವೃಷಧ್ವಜವ
ಜಗವದಿರೆ ಹೊಯ್ವ ನಿಸ್ಸಾಳದ ಮಹಾರವವ

ದೆಸೆಗೇಳ್ವ ತೆರದಿ ಮೊಳಗುವ ಭೇರಿಗಳ ನಡುವೆ
ಅಸಮಾಕ್ಷನಣುಗನಾ ವೀರವೃಂದದ ನಡುವೆ
ನಡೆತಂದನಾಗಳಿಳೆ ಬೆರಗಾಗಿ ತಲೆದೂಗೆ
ಒಡನೆ ಭಾಷೆಯ ಗಣಂಗಳ್ಸಹಿತ ಬಂದಾಗೆ

ಬಂದು ಪುಲಿಗೆರೆಯ ಪಟ್ಟಣಮನೊಲವಿಂ ಪೊಕ್ಕು
ಸಂದಣಿಸಿ ಮೆರೆವುತ್ತೆ ಬರುತಂ ಮನಂ ಮಿಕ್ಕು
ಸೋಮನಾಥನ ಪದಕ್ಕೇರಿಸುತೆ ಪೊಡಮಟ್ಟು
ಭೂಮಿಗಚ್ಚರಿಯೆನಲ್ಕಲ್ಲಿಂದ ಪೊರಮಟ್ಟು
ಅಣ್ಣಿಗೆರೆಯಮೃತನಾಥನ ಚರಣಮಂ ಕಂಡು
ಬಣ್ಣಿಸುತ್ತಲ್ಲಿ ನೆಲೆವರಕೆಯಂ ಕೈಕೊಂಡು
ಕೆಂಭಾವಿಯೊಳ್ಭೋಗನಾಥನಲ್ಲಿಗೆ ಬಂದು
ಬೆಂಬಳಿಯೊಳುರುಳ್ದಾತನೆ ಕರುಣಿ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿಗೈತಂದು
ಒಪ್ಪುವಾ ರಾಮತಂದೆಯ ಶಿರಂ ಶರಣೆಂದು
ಆ ವೃಂದದೊಳು ನಾಗನಾಥನಲ್ಲಿಗೆ ಬಂದು
ದೇವ ನಿಮ್ಮಯ ಕರುಣವೀಯೆನುತ್ತಂ ನಿಂದು
ಪೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮಂಗೆ
ನಿನ್ನ ಪ್ರಸಾದವೀಯೆನುತೆ ಕರುಣಂಬಡುಗೆ
ಹಂಪೆಗೈತಂದು ವಿರುಪಾಕ್ಷಲಿಂಗವ ಕಂಡು
ಹೆಂಪಿಂದೆ ಹೆಚ್ಚುತ್ತೆ ಹಿಗ್ಗುತ್ತೆ ನಡೆಗೊಂಡು
ಇವು ಮೊದಲ್ಗೊಂಡು ಶಿವಪುರವೆಲ್ಲರೊಳ್ಮೆರಿಸಿ
ಭುವನವೆಲ್ಲರಿಯೆಲೇಳುಂ ದಿವಸವುಂ ಮೆರಿಸಿ
ತಿರುಗಿ ಬರುತಿರ್ದುದಪ್ರತಿಮನಭವನ ಗಣಂ
ನೆರೆದು ಬರುತಿರ್ದುದಹಿಧರನ ನಚ್ಚಿನ ಗಣಂ
ಈ ಬಂದುದರುಹಕುಲವಿಲಯಾಗ್ನಿ ಮುಖವೆಂಬ
ಈ ಬಂದು ದೆಲೆ ಜೈನ ಹರಿಶರಭ ಮುಖವೆಂಬ
ಬಿರುದೆತ್ತಿ ಕರೆವ ಕಹಳೆಯನಲ್ಲಿ ಪಿಡಿಸುತಂ
ಬರುತಿರ್ದರಬ್ಬಲೂರತ್ತಲುರವಣಿಸುತಂ

ಉರವಣಿಸಿ ನಡೆತಂದು ಬ್ರಹ್ಮೇಶ್ವರನ ಮುಂದೆ
ಹರಿವಾಣ ಸಹಿತ ತಂದಿಳುಪಿ ಭಕ್ತರ ಮುಂದೆ
ಹೋಹೋ ಉಘೇ ಜಾಂಗುಬೊಲ್ಲೆಂದು ಸಂಭ್ರಮಿಸಿ
ಆಹೊ ಶಿವ ತಾನೆ ಎಂದೆನುತೆ ಮಿಗೆ ಹಾರೈಸಿ
ಶಿರಮಂ ತೆಗೆದು ಶಿವನ ಪೀಠ ಮೂಲದೊಳಿರಿಸಿ
ಹರನ ಪ್ರಸಾದ ಪಾದೋದಕದಿ ಸಿಂಗರಿಸಿ
ತೆಗೆದು ತಂದಾ ಶಿರವನೆತ್ತಿ ನಲವಿಂ ತೋರಿ
ಬೊಗುಳ್ವ ಸವಣನೋಡಿರೋ ಎನುತ್ತಂ ಸಾರಿ
ಜಡಿಯುತೀ ಸವಣ ಗುನ್ನಿಗಳ ಕೈಕೊಂಬರೇ
ವೃಡನ ಭಕ್ತಮುರ್ನಿಯುಲೇನುಮಂ ಬಗೆವರೇ

ಎನುತಗ್ಗವಣಿ ಹೊನ್ನಿತಂದೆಗಳ್ಸಡಗರಿಸಿ
ಘನ ಸಂಭ್ರಮದಿ ಕುಣಿದು ಕುಕಿಲಿರುವುತಬ್ಬರಿಸಿ
ಶರಣರ್ಜನಪ್ರತಿಮೆಗಳನೆತ್ತಲನುವಾಗೆ
ಸುರಸಮಿತೆ ಪೂಮಳೆಗಳಂ ಕರೆಯಲನುವಾಗೆ
ತಂದು ಶಿವಲಿಂಗಪ್ರತಿಷ್ಠೆಯಂ ಮಾಳ್ಪಂತೆ
ತಂದು ಪೀಠಿಕೆಯೊಳಗೆ ಲಿಂಗಮನಿಳಿಪುವಂತೆ
ಇಳಿಪಿದರು ರಾಮತಂದೆಗಳ ದೇಹದ ಮೇಲೆ
ಇಳಿಪುವಲ್ಲಿಂ ಮುನ್ನ ಉರವಣಿಸುತಂ ಮೇಲೆ
ಒಂದು ಕೈಯುಲಿ ತನ್ನ ಶಿರವ ಹತ್ತಿಸಿಕೊಳುತೆ
ಒಂದು ಕೈ ಕೂರಲಗನಾಯುತವನೆಡೆಗೊಳುತೆ
ಮುರಿದೇಳ್ದು ಗರ್ಜಿಸುತೆ ದೆಸೆದೆಸೆಯ ನೋಡುತಂ
ಇರೆ ಕಂಡು ಸವಣವಡೆ ನಡನಡನೆ ನಡುಗುತಂ
ಆಯೇಳ್ದನಾಯೇಳ್ದನಮ್ಮಯ್ಯ ರಾಮಯ್ಯ
ಆಯೇಳ್ದನಾಯೇಳ್ದನೆಲೆಲೆಲೆಲೆ ರಾಮಯ್ಯ
ಆ ನಡೆದನತ್ತತ್ತಲೇಕಾಂತರಾಮಯ್ಯ
ಈ ನಡೆದನಿತ್ತಿತ್ತಲೇಕಾಂತರಾಮಯ್ಯ

ಎನುತ ಸವಣಪರಿಯುಲೇಳ್ದು ಹರವರಿವರಿದು
ಮುನಿದು ಭುಗಿಭುಗಿಲೆನುತೆ ಹೊಗೆಯಿಲ್ಲದುರಿ ಉರಿದು

ಕೂದಲುಗನೆತ್ತಿ ಭುಗಿಭುಗಿಲೆಂದು ತಿರುಪುತಂ
ಕಾರಮಿಂಚಿನ ತೆರದಿ ಹೊಳೆದು ಘುಳಿಘುಳಿಸುತಂ
ಪರಿದನಟ್ಟಿದನೋಡಿಸಿದನರುಹ ನಿಕರಮಂ
ತಿರುತಿರುಗಿ ಕೈವೀಸಿದಂ ಭಕ್ತನಿಕರಮಂ
ಕೈವೀಸಿ ತಮತಮಗೆ ವೀರರೆಲ್ಲರ್ನೆರೆದು
ಕೈವಾರದಿಂದೆ ಬಸದಿಗಳೊಳಗೆ ಪುಗುತಂದು
ಕಿತ್ತು ಬಿಸುಟರ್ಜಿನಪ್ರತುಮೆಗಳನಲ್ಲಲ್ಲಿ
ಎತ್ತಿದರ್ಬತ್ತಲೆಯ ಬೊಂಬೆಗಳನಲ್ಲಲ್ಲಿ
ನಾನಾ ವಿಧದ ಸಂತಸಂ ಸಾರ್ದ ಕೂಟಮಂ
ಏನೆಂಬೆನಾ ಭಕ್ತರಾನಂದದಾಟಮಂ
ನಲಿನಲಿದು ನೆಗನೆಗೆದು ನಿಂದು ನಿಂದಾಡುತಂ
ಉಲಿದುಲಿದು ಪರಿಪರಿದು ಮುರಿಮುರಿದು ಹಿಗ್ಗುತಂ

ಇರ್ದ ಭಕ್ತರ ನೋಡುತೀಕ್ಷಿಸುತ ರಾಮಯ್ಯ
ಪೊರ್ದಿದವರಂ ಕರೆದನೇಕಾಂತ ರಾಮಯ್ಯ
ಆನಂದದಿಂದೆ ಶಿವಲಿಂಗಂಗಳಂ ತರಿಸಿ
ನಾನಾ ಮುಹೂರ್ತದಿಂದಂ ಲಿಂಗವಂ ನಿಲಿಸಿ
ಲಿಂಗ ಪ್ರತಿಷ್ಠೆಗಳನಲ್ಲಲ್ಲಿ ಮಾಡುತಿರೆ
ಹಿಂಗದೆ ಹರನನಕ್ಕರಿಂದ ಕೊಂಡಾಡುತಿರೆ
ಆಗಳೆರಗಿದವಲ್ಲಿ ಪೂಮಳೆಗಳೊಪ್ಪದಿಂ
ಮೇಗೆ ದುಂದುಭಿಶಂಖನಾದಂಗಳೊಪ್ಪದಿಂ
ಮೊಳಗಿದವು ಮಂಗಳ ಮೃದಂಗಂಗಳಲ್ಲಲ್ಲಿ
ತೊಳಗಿದವು ಧವಳಾತಪತ್ರ ಚಾಮರವಲ್ಲಿ
ಆ ಸಮಯದೊಳು ಸಕಲ ಭಕ್ತರೆಲ್ಲಂ ಪೊಗಳೆ
ಆಸುರದಿ ಹೊಗಳತೊಡಗಿದರುತ್ಸವಂ ನೆಗಳೆ
ಶಿವನ ಕೀರ್ತಿಗೆ ಮೂರ್ತಿಯಾದೆ ಎಲೆ ರಾಮಯ್ಯ
ಭವನ ಕೀರ್ತಿಯ ಲತೆಗಡರ್ಪಾದೆ ರಾಮಯ್ಯ
ಸಂದುದು ಸದಾಚಾರ ನಿನ್ನಿಂದೆ ರಾಮಯ್ಯ
ಓ ಸಂದುದೀಶ್ವರನಲ್ಲಿಗೇಕಾಂತರಾಮಯ್ಯ
ಸಂದ ಭಕ್ತರ ಕಣ್ಣಾ ಪುಣ್ಯವೇ ರಾಮಯ್ಯ

ಇಂದು ನಿನಗೆಣೆ ಯಾವನೇಕಾಂತರಾಮಯ್ಯ
ಭಾಪುರೇ ವೀರ ಸೋಮೇಶ್ವರನೆ ಕೀರ್ತಿಯೇ
ಭಾಪು ಮಜಭಾಪೆನ್ನ ಭಕ್ತ ಚೂಡಾಮಣಿಯೆ

ಎಂದು ಪೊಗಳಲ್ಕೆ ಶಿವಭಕ್ತರ್ಗೆ ಕೈಮುಗಿದು
ನಿಂದು ಪೊಡಮಟ್ಟು ಬಲವಂದು ತನುವುಂ ಸುಗಿದು
ಶರಣರ್ಗೆ ಸಂತಸದ ಗಣಪರ್ವಮಂ ಮಾಡಿ
ಹರಿವರಿಯ ಹರುಷಂಗಳಿಂದಲೋಕುಳಿಯಾಡಿ
ಎಲ್ಲರ್ಗೆಯುಡಕೊಟ್ಟು ಮಿಗೆ ಸಂತಸಂ ಬಡಿಸಿ
ಎಲ್ಲರಂ ನಿಜನಿವಾಸಕ್ಕೆ ಬಿಜಯಂಗೈಸಿ
ಹೊನ್ನತಂದೆಗಳನಿದಿರ್ಗೊಂಡು ಪುರದೊಳ್ಕರಿಸಿ
ಮನ್ನಿಸುತ್ತವರ ಹುಲಿಗೆರೆಗೆ ಬಿಜಯಂಗೈಸಿ
ಇರುತಮಿರೆ ಬಂದ ಪುಷ್ಪಕದೊಳಗೆ ರಾಮಯ್ಯ
ಆರರೆ ಕುಳ್ಳಿರುತಿರ್ದನೇಕಾಂತರಾಮಯ್ಯ

ಆ ಗಣಂಗಳ್ಸಹಿತ ದೇವದುಂದುಭಿ ಸಹಿತ
ಮೇಗೆ ನೆಗೆದುದು ಸರ್ವವಾದ್ಯ ರಭಸಂ ಸಹಿತ
ನಡೆವುತಿರೆ ಗಗನದೊಳಗಿಳೆ ಕೌತುಕಂಬಡಲು
ಮೃಡಭಕ್ತರುತ್ಸವದಿ ಮಿಗೆ ಸಂತಸಂಬಡಲು
ಒಂದು ರಜತಾದ್ರಿಯ ಸಮೀಪಕ್ಕೆ ಸಾರುತಂ
ನಂದೀಶನಿರ್ದ ಬಾಗಿಲೊಳಿರ್ದು ಸಾರುತಂ
ಮೆಯ್ಯಿಕ್ಕುತಂ ಮೃಡನ ಪದತಳದೆಡೆಗೆ ಸಾರ್ದು
ಕೆಯ್ಯಂ ಮುಗಿದು ಮುಗಿದು ಪುಳಕಮುಣ್ಮುತ್ತೆ ಸಾರ್ದು
ಇರಲಭವನತಿಶಯ ಸ್ನೇಹದಿಂ ಬಿಗಿಯಪ್ಪಿ
ಗಿರಿಸುತೆಗೆ ಪೇಳುತಂ ಪ್ರೇಮದಿಂ ಬಿಗಿಯಪ್ಪಿ
ನೋಡು ಪಾರ್ವತಿ ಧೀರನಂ ಮಹಾ ಭಕ್ತನಂ
ನೋಡು ನಂದೀಶ ನಿಷ್ಠಾಭಕ್ತಿಯುಕ್ತನಂ
ಅಬ್ಬಲೂರೊಳ್ಸವಣರೊಳು ವಾದಿಸಿದರುಂಟೆ
ನಿಬ್ಬರದ ಭಾಷೆಯುಂ ಕೈಕೊಂಡರಿಂತುಂಟೆ
ಶಿರವನರಿದೇಳುದಿನವಿರಿಸಿ ಪಡೆದವರುಂಟೆ

ಉರವಣಿಸಿ ಎನ್ನ ವಿಶ್ವಾಸಿಸಿದರಿಂತುಂಟೆ
ಎಂದು ಬೊಬ್ಬಿರಿಸುತಂ ಗಣಕುಲಕೆ ತೋರುತಂ
ಸಂದಣಿಪ ಲೀಲೆಯಿಂ ಸುಖರಸದೊಳಾಳುತಂ
ರಾಮತಂದೆಗೆ ಒಲ್ದು ಗಣಪದವನೀವುತಂ
ಕಾಮಹರನಲ್ಲಿ ಸಾಮೀಪ್ಯ ಪದವೀವುತಂ
ಶಂಕರಂ ಶಶಿಧರಂ ಗಿರಿಜೇಶನೊಪ್ಪಿದಂ
ಪಂಕಜೋದ್ಭವ ಶಿರಃ ಕಂಜಕರನೊಪ್ಪಿದಂ
ಅಭಯಹಸ್ತಂ ಶೂಲಪಾಣಿ ಇಂತೊಪ್ಪಿದಂ
ವಿಭವದಿಂ ಡಮರುಘಂಟಾಹಸ್ತನೊಪ್ಪಿದಂ
ಹೆಂಪೆಸೆವಲಂಪಿನಿಂ ಪ್ರಮಥನಿಧಿಯೊಪ್ಪಿದಂ
ಹಂಪೆಯ ವಿರೂಪಾಕ್ಷಲಿಂಗನಿಂತೊಪ್ಪಿದಂ

**ಕಂದ**॥ ವಸುಧೆಯೊಳು ಜೈನರಂ ವಾ।
ದಿಸಿ ಗೆಲ್ದೇಕಾಂತರಾಮ ತಂದೆಯ ಶಿಶುವೆಂ॥
ದೊಸೆದೆನಗೆ ಕೃಪೆಯನೀವುದು।
ಶಶಿಯಂ ಸೂಡಿದನೆ ಹಂಪೆಯ ವಿರೂಪಾಕ್ಷಂ॥

# ವೈಜಕ್ಕವ್ವೆಯ ರಗಳೆ.

**ಕಂದ**॥ ಅರುಹ ಕುಲಕುಮುದ ಭಾಸ್ಕರ ।
ನರುಹದ್ವಿಪ ಸಿಂಹ ಹಂಪೆಯ ವಿರೂಪಾಕ್ಷಂ ।
ಶರಣಾರ್ಜಯ ಎನೆ ಮೆರೆದಂ ।
ಪರಿವಳಿಗೆಯ ವೈಜಕಾಂಬೆಯಂ ಧಾರುಣಿಯೊಳ್ ॥

## ಉತ್ಸಾಹ ರಗಳೆ.

ಒಂದು ಶಿವಪುರಂ ವಿರಾಜಿಸಿರ್ಪುದುತ್ತರಾಭಿಯಲ್ಲಿ
ಇಂದುಧರನ ಹರನ ಶರಣ ವೃಂದದಿಂದಲೊಪ್ಪುತಲ್ಲಿ
ಶಿವನ ಭಕ್ತನೋರ್ವನಿರ್ಪನಾತನರಸಿ ಪರಮ ಭಕ್ತೆ
ಭವನ ಭಾವ ಭರಿತ ಚರಿತೆ ಸರ್ವ ಲಕ್ಷಣ ಪ್ರಯುಕ್ತೆ
ಅಂತವರ್ಗೆ ಪುಟ್ಟಿದಳ್ವಿವೇಕ ನಿಧಿ ಯೆನಿಪ್ಪ ಬಾಲೆ
ಕಂತುಹರನ ನೊಲಿಸಬಲ್ಲ ನಿರ್ವಿಕಾರಯುಕ್ತ ಶೀಲೆ
ನಾಮವಾಗೆ ಓಜೆವೆತ್ತ ವೈಜಕವ್ವೆ ಎಂಬುದಾಗೆ
ಸೋಮಧರನ ಕಿವಿಗೆ ಸವಿಗಳೀವ ಕರ್ಣಪೂರವಾಗೆ
ಬೆಳೆಯುತಿರ್ದಳಿಂದುಕಳೆಗೆ ಮುಖದ ಬೆಳಗನೀವುತಲ್ಲಿ
ಬೆಳೆಯುತಿರ್ದಳವಳು ನಿತ್ಯನೇಮದಚಲ ಭಕ್ತಿಯಲ್ಲಿ
ಬೆಳೆಯೆ ಬಾಲಲೀಲೆ ಕಳೆದು ಯೌವ್ವನಂ ತಳೆರ್ತು ತೋರೆ
ತೊಳಗುವಂಗರೇಖೆ ಕನಕಲತೆಯೊಲಂತೆಯೊಪ್ಪಿ ಮೀರೆ
ಪದತಳಂ ಸರಾಗ ನಳಿನ ದಳದ ಕಂಪನೀಳಿಸುತ್ತೆ
ಮುದದೆ ಗುಲ್ಫಗಳ್ಸುವರ್ಣ ಘುಟಿಕೆಯಂತೆ ರಂಜಿಸುತ್ತೆ
ಜಾನುದೇಶವಾನತರ್ಗನೂನ ಪದಮನಿತ್ತು ತಣಿಪೆ
ಭೂನುತಂಗಳೂರುದಂಡವಲ್ಲಿ ರಂಭೆಯೊಳ್ಪನಳಿಪೆ
ಕೃತಕ ಗಿರಿಯ ಸಿರಿಯನೆಳೆದು ಸೆಳೆದುಕೊಂಡು ಜಘನ ಒಪ್ಪೆ
ಅತನುವಿಂಗೆ ಪುಗಪೊಡಡ್ಡಲಾದ ತೆರದಿ ತ್ರಿವಳಿಯೊಪ್ಪೆ
ಪೊಕ್ಕು ಗುಣ್ಪನರಿವೊಡತನುಗರಿದೆನಿಪ್ಪ ನಾಭಿ ಎಸೆಯೆ
ಮಿಕ್ಕು ಮೀರಿ ಸೈತನಾಗಿ ಸೂಸದಡರ್ದ ಬಾಸೆ ಎಸೆಯೆ

ಮಿಸುಪ ಮೊಲೆ ಮನೋಜಕುಂಭಿ ಕುಂಭಯುಗಮನೆಯ್ದೆ ನೆಗಳೆ
ಎಸೆವ ತೋಳಮೊದಲನಂಗ ಖಡ್ಗಲತೆಯ ಹೊಗರನುಗುಳೆ
ವದನ ಮಂಡಲಂ ಮೃಗಾಂಕ ಬಿಂಬಮಂ ನಗುತ್ತ ಪಳಿಯೆ
ಸುದತಿಯಕ್ಷಿ ಮದನಬಾಣದುದಯಮಂ ನಿಮಿರ್ಚಿ ಕಳೆಯೆ
ಕುಂತಳಂ ಕವರ್ತು ಕೊರ್ವಿ ಕುಸುಮ ಗಂಧದಿಂದ ಮೆರೆಯೆ
ಇಂತು ವೃಜಕಪ್ಪೆಯೊಪ್ಪಿ ಯೌವ್ವನಂ ಪೊದಳ್ದು ಮೆರೆಯೆ

ತಂದೆ ಕಂಡು ಮಗಳರೂಪ ಯೌವ್ವನಕ್ಕೆ ನೇಹದಿಂದೆ
ಇಂದುಮುಖಿಗೆ ವರನನರಸವೇಳ್ಕುಮೆಂಬ ಚಿತ್ತದಿಂದೆ
ಇರುತಿರಲ್ಕೆ ಬಂದಳೂರ್ಗೆ ತನ್ನ ತಂಗಿ ನೋಡಲೆಂದು
ಪರಿವಳಿಗೆಯೊಳಿರ್ಪ ಜೈನನರಸಿ ಹರ್ಷದಿಂದೆ ಬಂದು
ಸುಖದೊಳಿರ್ದ ವೃಜಕವ್ವೆ ಇರವನಳ್ಕರಿಂದೆ ನೋಡಿ
ನಿಖಿಳ ಸಂಪದಕ್ಕೆ ನೆಲೆಯದಪ್ಪುದೆಂದು ಮತ್ತೆ ನೋಡಿ
ತನ್ನ ಪುತ್ರನಪ್ಪ ನೇಮಿಸೆಟ್ಟಿಗುಚಿತವೀಕೆ ಯೆಂದು
ಉನ್ನತ ಪ್ರಮೋದೆ ಯೌವ್ವನಂ ಸಮಾನವಪ್ಪುದೆಂದು
ನೆನೆದು ನೋಡಿದಳಣ್ಣನಲ್ಲಿ ನಲಿದು ಸಲುಗೆಯಿಂದೆ
ಮನದೊಳುತ್ಸಹಂಬಡುತ್ತೆ ಬೇಡಿದಳ್ಪಿಮೋಹದಿಂದೆ
ನಿನ್ನ ಮಗಳನೆನ್ನ ನಿಜತನೂಭವಂಗೆ ಕುಡುವುದೆಂದು
ಸನ್ನುತಂ ಸಲಕ್ಷಣಂ ವರಾನ್ವಿತಂ ಸಮಾನವೆಂದು
ನುಡಿಯೆ ಕೇಳ್ದು ಸೋದರಳಿಯನಾದೊಡೇನು ಭವಿಗೆ ಕೊಡೆನು
ವೃಡನ ಭಕ್ತರಾವು ಸವಣಗುನ್ನಿಗಳ್ಗೆ ಹೆಣ್ಣ ಕುಡೆನು

ಎಂಬ ನುಡಿಗೆ ತಂಗಿಯೊಟ್ಟೆಯೊರಲಿಯುಳುತೆ ಬೇಡಿ ಕಾಡಿ
ನಂಬಿ ನೆಚ್ಚಿ ಬೆನ್ನ ಬಂದ ಸೋದರಕ್ಕೆ ಲೇಸು ಮಾಡಿ
ನುಡಿದರಪ್ಪುದಪ್ಪುದೆನ್ನ ಸೊಸೆಯನೆಂತು ಬಿಡುವಳಲ್ಲ
ಕುಡದೆ ನಿಂದೊಡೆನ್ನ ತನುವನಳಿವಳಲ್ಲದುಳಿವಳಲ್ಲ
ಎಂದು ನುಡಿಯುತೊಂದುಪಾಸವೆರಡುಪಾಸವಿರ್ದಳಲ್ಲಿ
ಅಂದು ನೆರೆಯ ಹೊರೆಯ ನಂಟರಿಷ್ಟರೆಲ್ಲ ನೆರೆವುತಲ್ಲಿ
ನೋಡು ನಿನ್ನ ತಂಗಿ ಪಟ್ಟಿರುತ್ತೆ ಸತ್ತೊಡಕಟ ಲೇಸೆ
ಬೇಡ ಜೀಯ ಜೈನರಾದೊಡೇನು ಮಗಳನೀವುದೈಸೆ

ಪಿರಿಯರಲ್ಲಿ ನಂಟರಲ್ಲಿ ನಲ್ಲರಲ್ಲಿ ಛಲವಿದೇಕೆ
ಗುರುವಿನಲ್ಲಿ ಗೋತ್ರದಲ್ಲಿ ತಂಗಿಯಲ್ಲಿ ಬಲ್ಪಿದೇಕೆ
ಎಂದು ಪೇಳೆ ಭಕ್ತನಂದು ಕಂದಿ ಕುಂದಿ ಮನವನಿಳುಪಿ
ನೊಂದು ಸುಯ್ದೊಡಂಬಡುತ್ತೆ ಬಂಧುಜನವನೆಯ್ದೆ ಕಳುಪಿ
ಇಹದ ಕೀರ್ತಿಗಂಜಿ ಪರದ ಗತಿಯನೆಯ್ದೆ ಮರೆದು ಕಳೆದು
ಅಹಹ ಕುಡುವೆನೆಂಬ ಬುದ್ಧಿ ಚಿತ್ತದೊಳಗೆ ಬೇಗ ಹೊಳೆದು
ಕೊಟ್ಟೆನೇಳು ತಂಗಿ ಬಟ್ಟಗುತ್ತತನವಿದೇವುದೆಂದು
ಕೊಟ್ಟನವ್ವ ಪುತ್ರಿಯಂ ಸುಧರ್ಮದಿಂದೆ ರಕ್ಷಿಸೆಂದು

ನುಡಿಯೆ ಪುಳುಕವೇಳಲೆಳ್ದು ಪರಮ ಹರುಷ ಚಿತ್ತೆಯಾಗಿ
ಒಡನೆ ಹುಟ್ಟಿದಣ್ಣನಂ ಸರಾಗದಿಂದಲಪ್ಪಿ ಪೋಗಿ
ಕರೆಯಿಸಲ್ಕೆ ಬಂದ ಜೋಯಿಸಂಗೆ ದಕ್ಷಿಣೆಗಳನಿತ್ತು
ಹರುಷದಿಂದೆ ಲಗ್ನಮಂ ಸಮೀಪ ದಿನದೊಳೆಯ್ದೆ ಪೊತ್ತು
ಇರೆ ವಿವಾಹಮಂಟಪಂ ಸವಿಸ್ತರಂ ನಿಮಿರ್ಚುತಲ್ಲಿ
ಅರರೆ ತಳಿರ ಮಕರತೋರಣಂಗಳೊಪ್ಪಿ ನೆಗೆದವಲ್ಲಿ
ನಡುವೆ ವೇದಿಕಾ ವಿಳಾಸವಾಗಳೊಪ್ಪುತಿರ್ದುದಲ್ಲಿ
ಮಡದಿಯರ್ಕಳೆಲ್ಲ ದಂಡೆತೊಂಡಿಲಿಂದೆ ಮೆರೆಯಲಲ್ಲಿ
ಇಂತು ಮದುವೆಯುತ್ಸವಂ ವಿರಾಜಿಸುತ್ತಮಿರ್ದುದಿತ್ತ

ಕಂತುಹರನ ಭಕ್ತೆ ಪೈಜಕವ್ವೆ ನಿತ್ಯನೇಮದತ್ತ
ಬಂದು ಶಿವನ ಮುಂದೆ ನಿಂದು ಸೂಸಿ ಸುಯ್ದು ಗಾಸಿಯಾಗಿ
ಇಂದುಮೌಳಿ ಕರುಣಿಸೆನುತೆ ನಿತ್ಯನೇಮ ಹಸ್ತೆಯಾಗಿ
ದೇವ ಭವಿಗೆ ಮದುವೆ ಎಂದು ತಾಪಿಸಿರ್ದು ಏವೆನೈಯ್ಯ
ಭಾವಿಸಲ್ಕೆ ಭವಿಯ ಸೋಂಕದಾವ ತೆರದೊಳಾರ್ಪೆನೈಯ್ಯ
ತಿಳಿವಿನೊಳಗೆ ಪುಟ್ಟಿ ಮರವೆಯೊಳಗದೆಂತು ಪುಗುವೆನೈಯ್ಯ
ಬೆಳಗಿನೊಳಗೆ ಬೆಳೆದು ತಮದೊಳೆಂತು ಪೋಗಿ ಬೀಳ್ವೆನೈಯ್ಯ
ನಿನ್ನನರಿಯದಚ್ಚ ಬಚ್ಚ ಬರಿಯ ಭವಿಗಳಲ್ಲಿ ದೇವ
ನಿನ್ನನೆಂತು ನೆನವೆನೆಂತು ಮಾಳ್ಪೆನೆಂತದೆಂತು ದೇವ
ಏಕೆ ಭಕ್ತರೊಳಗೆ ಬೆರಸಿ ಭವಿಗಳೊಳಗೆ ನೂಂಕಿದಪ್ಪೆ
ಏಕೆ ನಿನ್ನನರುಪಿ ಮರೆಯಲೀಯದಿಂತು ನೋಡುತಿಪ್ಪೆ

ಕರುಣಿ ಎಂಬರಭವ ಕರುಣವಿಲ್ಲದಂತಿರಿಪ್ಪಿರಯ್ಯಾ
ಕರುಣಿ ಯೊರಲುತಿರ್ದೆನೆನ್ನನಕ್ಕಟಾ ನಿರೀಕ್ಷಿಸಯ್ಯಾ
ದೇವ ಚಂದ್ರಮೌಳಿ ಶೂಲಿ ಗರಳಕಂಠ ಕರುಣಿಸಯ್ಯಾ
ದೇವ ಸಲಿಲಶಯನ ನಯನ ಚರಣಕಮಲ ಕರುಣಿಸಯ್ಯಾ

ಎಂದು ಪುಯ್ಯಲಿಡುವ ಪುಯ್ಯಲಂ ಪುರಾರಿಯಾಲಿಸುತ್ತೆ
ಬಂದು ವೈಜಕವ್ವೆಗೊಂದು ಮರಹನಲ್ಲಿ ಕೇಲಿಸುತ್ತೆ
ಕನಸಿನೊಳಗೆ ನಿಂದು ವೈಜಕವ್ವೆ ನಿನಗೆ ಚಿಂತೆ ಬೇಡ
ಅನುದಿನಂ ಸಮೀಪದಿಂದ ನಗಲೆನವ್ವ ನಂಬು ಬೇಡ
ಮದುವೆಯಾಗಿ ಪೋಗು ಮಗಳೆ ಮರೆವುದಿಲ್ಲ ನಿನ್ನನೆಂದು
ಮದನವೈರಿ ಕರುಣದಿಂದೆ ನಿಂದು ಬೆಸಸಿ ಪೋಗಲಂದು
ಮೆಲ್ಲನೆಚ್ಚರೊಳಗೆ ಸಂದು ವೈಜಕವ್ವೆ ತಿಳಿದು ನೋಡಿ
ಅಲ್ಲಿಗಲ್ಲಿಗಡರ್ದ ನಳನಳಿಪ್ಪ ಪುಳಕದೊಳಗೆ ಕೂಡಿ
ಶಂಭು ಬೆಸಸಿತಕ್ಕೆ ಮನವನಿಂಬುಗೈದು ನಂಬಿ ನಚ್ಚಿ
ಡಂಭರಹಿತೆ ಗರ್ವರಹಿತೆ ಜೈನರಹಿತೆ ನಚ್ಚಿ ಮೆಚ್ಚಿ
ಇರೆ ವಿವಾಹದುತ್ಸಹಂ ವಿರಾಜಿಸುತ್ತಮಿರ್ದುದಲ್ಲಿ
ಕರುಣಿಯರ್ಕಳೆಸೆವ ಸಿಂಗರಂಗಳೊಪ್ಪುತಿರ್ದುದಲ್ಲಿ
ಆಗಳೆಲ್ಲ ತೆರದ ಸಂಭ್ರಮಂಗಳೊಳಗೆ ನಲಿದು ಬಂದು
ರಾಗದಿಂದೆ ಮದುವೆ ಮಂಟಪಾಂತರಂಗದೊಳಗೆ ನಿಂದು
ಸಕಲ ವಸ್ತು ನಿಕರ ಹಸ್ತವಾದ ಬಂಧುಜನಗಳೊಳಗೆ
ಸುಕರವೆನಿಪ ಮುಕುರಕಳಶಲಸಿತಲಲನೆಯರ್ಕಳೊಳಗೆ
ವರನಿರಲ್ಕೆ ವೈಜಕವ್ವೆಗೊಪ್ಪಿ ಸಿಂಗರಂಗಳಾಗೆ
ತರುಣಿಯರ್ಕಳಿಂಬುಗೊಂಡು ಬರ್ಪ ಗಾಡಿ ಗಮಕವಾಗೆ
ತಂದು ತಂಡುಲಂಗಳೊಳಗೆ ಬೇರೆ ಬೇರೆ ನಿಲಿಸಲಲ್ಲಿ
ಅಂದು ನಡುವೆ ತೆರೆ ವಿರಾಜಿಸಲ್ಕೆ ಬಂಧುನಿಕರವಲ್ಲಿ
ಆಯತಕ್ರಣಾದ ಚಿತ್ರರಾಲಿಸುತ್ತೆ ನೋಡೆ ನೋಡೆ
ಜೋಯಿಸನ ಮುಹೂರ್ತ ವಚನದೊಡನೆ ತೆರೆಗಳಲ್ಲಿ ಕೂಡೆ
ವೈಜಕವ್ವೆಗಳ್ಗೆ ಸೋಲ್ತ ನೇಮಿಸೆಟ್ಟಿಯೊಪ್ಪಲಾಗೆ
ಮೂಜಗಂಗಳರಿಯೆ ಮುಂದೆ ಮೆರೆವುದಕ್ಕೆ ಚಿನ್ಹವಾಗೆ

ವರ ಸುವಾಸಿನೀ ಜನಂಗಳೆತ್ತು ವಾರತಿಗಳು ಮೆರೆಯೆ
ಪರಸುತಿರ್ಪ ಪರಕೆ ಮಂಗಳಂಗಳಂ ನಿಮಿರ್ಚಿ ಕರೆಯೆ
ಇಂತು ಮದುವೆ ಬಳೆಯುತಿರೆ ಚತುರ್ಥಿಯುಂ ಸಡಿಲ್ಚಿ ಕಳೆದು

ಮುಂತೆ ಪರಿವಳಿಗೆಗೆ ನಡೆದು ಪೊಕ್ಕು ಸುಖವನೊಲ್ದು ತಳೆದು
ತಮದ ನಡುವೆ ನಿರ್ಮಳ ಪ್ರಭಾಂತರಾಂಶು ವಿರ್ಪತೆರದಿ
ಅಮಮ ತರುಗಳೊಳಗೆ ಚಂದನಂ ವಿರಾಜಿಸಿರ್ಪ ತೆರದಿ
ನೇಮಿಸೆಟ್ಟಿಯೊಡನೆ ವೈಜಕವ್ವೆ ಸುಖದೊಳೊಂದಿರುತ್ತೆ
ಕಾಮಹರನೊಳಗೆ ನೆನೆಯುತೊಳಗೆ ಕಂಡು ಪೂಜಿಸುತ್ತೆ
ಭಸಿತ ರುದ್ರರಕ್ಷೆಯುಂ ಮನಶ್ಶರೀರದೊಳಗೆ ತಳೆದು
ಪುಸಿವು ಕಾಮವಾಸೆ ಲೋಭವೆಂಬ ಕಸವನುಡುಗಿ ಕಳೆದು
ಹೃದಯ ನಿಳಯಕಮಳವಳಯ ಕರ್ಣಿಕಾಸುಪೀಠದೊಳಗೆ
ಸದಮಳ ಪ್ರಕಾಶರಾಶಿ ರೂಪುಲಿಂಗ ಒಳಗೆ ತೊಳಗೆ
ಮನದ ಪುಷ್ಪ ಪೂಜೆ ನೆಗಳೆ ನೇಹದುಸಿರ ಧೂಪವೆಸೆಯೆ
ನೆನಹಿ ನರಿವಿನಚ್ಚ ಬೆಳಗಿನ ಪ್ರಕಾಶ ದೀಪವೆಸೆಯೆ
ಭಕ್ತಿಯೋಗರಂ ವಿರಾಜಿಸಲ್ಕೆ ಶಿವನನೆಯ್ದ ತಣಿಪೆ
ಮುಕ್ತಿ ಸುಖದೊಳಿಂತು ಬಾಳುತಿರ್ಪಳಖಿಳ ಭವವನಿಳಿಪೆ
ಜಲದ ಜಲಜದಂತೆ ಪವನನಂತೆ ತರಣಿ ಕಿರಣದಂತೆ
ತಿಲದ ತೈಲದಂತೆ ವಹ್ನಿಯಂತೆ ಯಾತ್ಮತೇಜದಂತೆ
ಜೈನರೊಳಗೆ ಹೊದ್ದಿ ಹೊದ್ದದಿರ್ಪಳಮಮ ನಿರ್ಮಳಾಂಗಿ
ದಾನನಿಧಿ ನವೀನ ಭಕ್ತೆ ಪರಮ ಶೀಲೆ ಸುರುಚಿರಾಂಗಿ
ವಿಮಳಭಕ್ತೆ ಶಾಂತಿಯುಕ್ತೆ ಯತಿವಿರತೆ ವೈಜಕವ್ವೆ
ಅಮಮ ಗುಪ್ತೆ ಭವಸಮಾಪ್ತೆ ಶೈವಭಕ್ತೆ ವೈಜಕವ್ವೆ
ಇಂತೆನಿಪ್ಪ ಗುಣಗಣಕ್ಕೆ ನಿಳಯವೆನಿಸಿ ನೆನೆಯುತಿರ್ದು
ಸಂತತಂ ಪುರಾರಿಯಂ ಸರಾಗದಿಂದೆ ಬಯಸುತಿರ್ದು
ದೇವ ಭವಿಗಳೊಳಗಣಿರವಿದೆಂದು ಮಾಣ್ಪುದೆಂದೆನುತ್ತೆ
ದೇವ ನಿನ್ನನೆನ್ನ ಕಣ್ಗಳಾರೆ ಕಾಣ್ಬೆನೆಂದೆನುತ್ತೆ
ದೇವ ಚಿತ್ತವೃತ್ತಿ ತಣಿಯೆ ಪೂಜಿಸುವೆನದೆಂದೆನುತ್ತೆ
ದೇವ ಜೈನರೊಳಗೆ ಸಿಲ್ಕಿದೆಂ ಪುರಾರಿ ಬಿಡಿಸೆನುತ್ತೆ

ಇಂತು ಶಂಕರಂಗೆ ಸಾರಿ ತೋರಿ ಮೀರಿ ದೂರಿಸುತ್ತೆ
ಚಿಂತೆ ಬಲಿಯೆ ಭಕ್ತಿ ನಲಿಯೆ ಶಂಭು ನಲಿಯೆ ಭಾವಿಸುತ್ತೆ

ಇರುತಿರಲ್ಕೆ ನೇಮಿಸೆಟ್ಟಿ ಹರುಷದಿಂದೆ ಮನೆಗೆ ಬಂದು
ಕರೆದು ವೈಜಕವ್ವೆ ಕೇಳ ಸಕಳ ಋಷಿಗಳೆಲ್ಲ ನೆರೆದು
ಚರಿಗೆ ಮಾಡಿದಪ್ಪರಿಲ್ಲಿ ಬೋನಮಂ ವಿರಾಜಿಸೆಂದು
ಸರಸ ವಸ್ತು ನಿಕರಮಂ ಸರಾಗದಿಂದೆ ಮುಂದೆ ತಂದು
ತೋರಿಕೊಟ್ಟು ವೈಜಕವ್ವೆಗಿಸಿದೆನಿಪ್ಪ ಮಾತನಾಡಿ
ಮೀರದಂತೆ ಮುಳಿಯದಂತೆ ಬೋಳವಣೆಯನೆಯ್ದೆ ಕೂಡಿ
ಮಾಡುತಿರ್ದಳಲ್ಲಿ ಬೋನಮಂ ಮಹೇಶಭಕ್ತಿಯುಕ್ತೆ
ನೋಡೆ ನೋಡೆ ಮೃಡ ವಿವೇಕನಿಧಿ ದಯಾಂಬುನಿಧಿ ವಿರಕ್ತೆ

ಹಾಲಲವುಗು ಹಾಲಲುಂಡೆ ಹಾಲಮಂಡಿಗೆಗಳನಟ್ಟು
ಮೇಲೆನಿಪ್ಪ ತರಗಪೂಷಣಾಂಬುಮಂ ತೆರಳ್ಕೆ ಇಟ್ಟು
ಲಡ್ಡುಗೆಗಳನೆಸೆವ ಬೀಸುಹೊರಿಗೆಗಳನೆಯ್ದೆ ಸಾರ್ಚಿ
ಇಡ್ಡಲಿಗೆಯ ನಣ್ಣೆಮಾಲ ಪಾಯಸಂಗಳಂ ನಿಮಿರ್ಚಿ
ಚಂದ್ರಿಕಾಸುಬೀಜವೆನಿಪ ಕಳವೆಯೋಗರಂಗಳಾಗೆ
ಸಾಂದ್ರ ರುಚಿಯ ಕಂಪನಾಂತ ಶಾಕಪಾಕ ತತಿಯುಮಾಗೆ
ಕಿವಿಗೆ ಕಣ್ಗೆ ಜಿಹ್ವೆಗೈದೆ ನಾಸಿಕಕ್ಕೆ ತೀವಿ ಮೆರೆವ
ರವದ ಚೆಲ್ವ ಮೃದುಸುಗಂಧರುಚಿಗಳಿಂದೆ ಸವಿಗಳೊರೆವ
ಮಧುರವಾಮ್ಲ ಕಟುಕ ತಿಕ್ತ ಲವಣ ಕೈಪೆ ಹೆಸರನುಳ್ಳ
ಮಧುಗೆ ವಿಧುಗೆ ಸುಧೆಗೆ ಮಿಗಿಲೆನಿಪ್ಪ ರುಚಿಯ ರೂಪನುಳ್ಳ
ಸಕಲ ಸುಖವನಾಂತ ಷಡುರಸಾಯನಂಗಳೊಪ್ಪ ಮಾಡಿ
ಸುಕರ ಚಿತ್ತೆ ಸಚ್ಚರಿತ್ರೆ ವೈಜಕವ್ವೆ ಮಾಡಿ ನೋಡಿ

ಅಕ್ಕಟಾ ಸುವಸ್ತುವಂ ಮಹೇಶ ನಿನಗೆ ಸಲಿಸಲಿಲ್ಲ
ತಕ್ಕ ಭಕ್ತವಿತತಿಗೆಯ್ದೆ ತವಕದಿಂದೆ ತಣಿಪಲಿಲ್ಲ
ಇಂತು ಮಾಡಿದೆಯ್ಯ ಎನ್ನ ತಂದೆ ಜೈನರೊಳಗೆ ಕೂಡಿ
ಕಂತು ವೈರಿ ನಿನಗೆ ಭಕ್ತಿ ಮಾಡಲಿಲ್ಲದಂತೆ ಮಾಡಿ
ಇಂತಿದಂ ಪುರಾರಿ ನಿಮ್ಮ ನರಿಯದಚ್ಚ ಪಾಪಿಗಳ್ಗೆ

ಎಂತು ಮಾಡಿ ನೋಡಿ ಕುಡುವೆನಯ್ಯ ಸವಣಗುನ್ನಿಗಳ್ಗೆ
ಎಂದಳಲ್ದು ಕಂದಿ ಕುಂದಿ ನೊಂದು ಕಣ್ಣನೀರನಿಕ್ಕೆ

ಬಂದು ತಾಗಿತಭವನಂ ಸಮರ್ಥೆ ಸತ್ಯ ಭಕ್ತಿಯುಕ್ತೆ
ತಾಗೆ ಶಂಭುವರಿದು ಮೆಚ್ಚಿ ಕರುಣದಿಂದೆ ಗಿರಿಜೆಗೆಂದ
ರಾಗವಲರಿ ನುಡಿದನಲ್ಲಿ ಕೇಳು ನಿನಗೆ ಪೇಳ್ವೆನೊಂದ
ವೈಜಕವ್ವೆಯುಕ್ಕೆಯಂ ಸಡಿಲ್ಚಿ ಕೊಂಡು ಬರ್ಪೆನೆಂದು
ರಾಜಿಸುತ್ತೆ ದೇವ ಶರಣವೇಷದಿಂದೆ ಬರುತಲಂದು
ದಶಭುಜಂಗಳಂ ಭುಜದ್ವಯಂಗಳಾಗೆ ನಿರ್ಮಿಸುತ್ತೆ
ಎಸೆವ ಪಂಚಮುಖವನೊಂದು ವದನದೊಳಗೆ ರಂಜಿಸುತ್ತೆ
ಹೆರೆಯನಲ್ಲಿ ಕಿರಿಯ ಜಡೆಗೆ ಮಿಸುಪ ಕುಸುಮವಾಗಿ ಮಾಡಿ
ಮೆರೆವ ಕೊರಲಗರಳಮಂ ಶರೀರವರ್ಣದೊಳಗೆ ಕೂಡಿ
ಪುಲಿದೊವಲ್ವಿಭೂತಿ ಭೂಷಣಂ ವಿಶೇಷಮಾಗಲೊಪ್ಪೆ
ನಲಿದು ಕುಣಿವ ಕುಂಡಲಂಗಳುಭಯ ಗಂಡತಟದೊಳೊಪ್ಪೆ
ಸುಲಿದ ಪಲ್ಲ ಬೆಳಪ ಕಣ್ಗಳಭವನಲ್ಲಿ ಚೆಲ್ವುಗೊಂಡು
ನಲಿಯುತಜಕಪಾಲ ಪಾತ್ರೆಯೊಪ್ಪೆ ಕರದೊಳಾಂತುಕೊಂಡು
ಬಂದು ಪರಿವಳಿಗೆಯ ನೇಮಿಸೆಟ್ಟಿ ಇರ್ಪ ಮನೆಯ ಮುಂದೆ

ನಿಂದು ವೈಜಕವ್ವೆ ಕಾಣ್ಬ ಕೇಳ್ವ ತೆರದಿ ಕರುಣದಿಂದೆ
ಭವನ ವೇಷದಚ್ಚ ಶರಣವೇಷದಿಂದೆ ರಂಜಿಸುತ್ತೆ
ಶಿವನ ಕರುಣವಕ್ಕೆ ನಿಮಗೆ ಭಿಕ್ಷೆ ಈವುದೆಮಗೆನುತ್ತೆ
ಇರೆ ಸದರ್ಥೆ ವೈಜಕವ್ವೆ ಹರುಷದಿಂದೆ ಕೇಳುತಂದು
ಸರವನಾಲಿಸುತ್ತೆ ಕಿವಿಗೆ ಕಣ್ಗಳಾದ ತೆರದೆ ಬಂದು
ನೆನೆವ ಮನಕೆ ಕಾಮಧೇನುವಾದ ತೆರದಿ ಬಂದಿರಯ್ಯ
ಮನದ ಬಯಕೆ ಭಾವಿಸಲ್ಕೆ ರೂಪುಗೊಂಡ ತೆರಮೊಳಯ್ಯಾ
ಎನುತೆ ಪುಳುಕಿಸುತ್ತೆ ಕಂಪಿಸುತ್ತೆ ಪದದ ಮೇಲೆ ಬೀಳ್ದು
ವಿನುತ ಭಕ್ತೆ ಹರುಷಚಿತ್ತೆಯಾಗಿ ಬೇಗಿ ಮೆಲ್ಲನೇಳ್ದು
ದೇವ ಪಾತ್ರೆ ಕಿರಿದು ವಸ್ತು ಪಿರಿದದೆಂತು ಮೊಳ್ಪೆನೆಂದು
ಭಾವಭಕ್ತಿಭರಿತೆ ತೀವುತಿರ್ದಳಲ್ಲಿ ತಂದು ತಂದು
ತಂದು ತೀವಲೊಳಕೊಳುತ್ತಲಿರ್ದುದಲ್ಲಿ ದೇವಪಾತ್ರೆ

ಅಂದು ಕೌತುಕಂಬಡುತ್ತಲಿಕ್ಕಿದಳ್ಸರೋಜನೇತ್ರೆ
ಒಳಗೆ ಶೀರೆ ಪಾತ್ರೆ ಶೀವೆ ವೈಜಕವ್ವೆ ನೋಡಿ ನಲಿದು
ಎಳಸಿ ಹಿಗ್ಗಿ ಬಳಸಿ ಮೆಚ್ಚಿ ಹೆಚ್ಚಿ ನಚ್ಚಿ ಪವಣನರಿದು
ದೇವ ಪೋಗವೇಳ್ಪುದಭವ ಪಸಿದಿರಿನ್ನು ಇರಲ್ಕೆವೇಡ
ದೇವ ಮತ್ತೆ ಭವಿಗಳಿಲ್ಲಿ ಬಂದು ಸುಳಿಯೆ ಕಾಣವೇಡ
ಎನೆ ವಿಭೂತಿಯಂ ಕೊಡುತ್ತೆ ಮಾತನಾಡಿ ಪೊಳ್ತುಗಳೆದು
ತನು ಸುರುಳ್ವುದೇಕೆ ವೈಜಕವ್ವೆ ನಿನಗೆ ಚಿಂತೆ ಪಿರಿದು

ಎನುತಿರಲ್ಕೆ ಬರುತೆ ನೇಮಿಸೆಟ್ಟಿ ಋಷಿಯರೆಲ್ಲರಂದು
ಮನದೊಳತಿ ನಿರೋಧದಿಂದೆ ನೋಡೆ ನೋಡೆ ನೆಗೆದನಂದು
ನೆಗೆಯೆ ಋಷಿಯರೆಲ್ಲ ಮುಟ್ಟುಘಡವಿದಾದುದೊಳ್ಳೆನೆಂದು
ಬಗೆಯೊಳತಿ ವಿಷಾದವೇರೆ ನೊಂದು ತಿರುಗಿ ಪೋಗಲಂದು
ಮನೆಗೆ ಬಂದು ನೇಮಿಸೆಟ್ಟಿ ಮುನಿದು ಸುಯ್ದು ನುಡಿದನಂದು
ವನಿತೆ ನೀನಿದೇಕೆ ಇಂತು ಮಾಡಿ ಎನ್ನನಿರಿದೆ ಎಂದು
ಋಷಿಯರೋಗರಂಗಳಂ ತಪಸ್ವಿಗಿಕ್ಕಿ ಕೆಡಿಸಿ ಕಳೆದೆ
ಹೊಸೆದ ಹುವ್ವಿನಂತೆ ಋಷಿಯರೆಲ್ಲ ಪಸಿದು ಪೋದರುಣದೆ
ಗೊರವನೆಂಜಲಾಯ್ತು ಮುಟ್ಟುಘಡವನಿಂತು ಮಾಡಿ ನಿಂದೆ
ಅರುಹನ ವ್ರತಕ್ಕೆ ಪೊಲ್ಲಗೆಯ್ದು ಕುಂದನಿಂತು ತಂದೆ

ಎಂದ ನೇಮಿಸೆಟ್ಟಿಗಂದು ನುಡಿದಳೆಮ್ಮ ವೈಜಕವ್ವೆ
ಇಂದುಧರನ ಭಕ್ತಿಯುಕ್ತೆ ನಿಜದ ನೀರೆ ವೈಜಕವ್ವೆ
ಶಿವನ ನೊಸಲನಯನದೆಂಜಲೆಂಬುದರಿಯ ಲೋಕವೆಲ್ಲ
ಭವನ ಕರುಣದಿಂದಲಿರ್ಪುದೆಂಬುದರಿಯ ಭುವನವೆಲ್ಲ
ನೇಮಿಸೆಟ್ಟಿ ಹೀನದಕ್ಕೆ ಮರುಳನಾಗಿ ಕೆಟ್ಟು ನುಡಿದೆ
ಭೂಮಿಯೊಳಗೆಯರುಹನೆಂದಡಾರದೆಲ್ಲಿ ಬರಿದೆ ಮುನಿದೆ
ವೇದದೊಳಗೆ ಶಾಸ್ತ್ರದೊಳಗೆ ನೋಡಲಿಲ್ಲ ನುಡಿಯಲಿಲ್ಲ
ಆದಿದೇವರಾದಿಯಲ್ಲಿ ಹೇಳಲಿಲ್ಲ ಕೇಳಲಿಲ್ಲ
ಬಯಲ ಬರಿಯ ಬೊಂಬೆಗಳ್ಗೆ ಭಕ್ತಿ ಮಾಡಿ ಮರುಗಲೇಕೆ
ನಯವಿಹೀನ ಪರದ ಗತಿಯ ನಳಿದು ಕೆಟ್ಟು ಪೋಗಲೇಕೆ

ಎಂದ ವೈಜಕವ್ವೆಗುತ್ತರಕ್ಕೆ ತೆರಹುಗಾಣದಿರ್ದು
ನೊಂದು ನೇಮಿಸೆಟ್ಟಿ ಕೋಪದಿಂದೆ ಬಂದು ಹತ್ತಿಸಾರ್ದು
ತನ್ನ ಭಾಗ್ಯ ಕುಸುಮಮಾಲೆಗಲಸಿ ಪೊಸೆದು ಬಿಸುಡುವಂತೆ
ತನ್ನ ಪುಣ್ಯ ಫಲವನಂದು ಜಡಿದು ಘಾಸಿ ಮಾಡುವಂತೆ
ಪಾಪಿ ಮುಟ್ಟಿ ಬಡಿದನಲ್ಲಿ ವೈಜಕವ್ವೆ ಸೆಡೆದು ನೋಯೆ
ಕೋಪಿ ಬಡಿದನಲ್ಲಿ ರಜತ ಗಿರಿಯೊಳಭವನೈದೆ ನೋಯೆ
ಬಡಿಯೆ ವೈಜಕವ್ವೆ ಶಿವನನಂದು ನೆನೆಯುತಿರ್ದಳಲ್ಲಿ
ಮೃಡನನಂತರಂಗದೊಳಗೆ ಭಾವಿಸುತ್ತಮಿರ್ದಳಲ್ಲಿ
ಇರ್ಪಲಿರಲ್ಕೆ ಭಕ್ತೆನೋಯೆ ನೋಡಲಾರೆನೆಂಬ ತೆರದಿ
ತರಣಿ ಇಳಿದನಪರ ಜಳಧಿವಳಯದೊಳಗೆ ಮೆಲ್ಲನುರದಿ
ಇಳಿಯೆ ವೈಜಕವ್ವೆಯೊಡನೆ ವೇಳೆಗೊಂಡ ತೆರದಿ ಬಳಲೆ
ನಳಿನ ಸಮಿತಿ ಮುಗಿಯೆ ಕುಮುದವಲರೆ ಚಕ್ರವಾಕವಗಲೆ
ಕವಿಯೆ ತಮವನಂತರಂ ಸುತಾರಕಾಳಿ ಘಳಲನೊಗೆಯೆ
ನವಕರಂಗಳಿಂದೆ ಬೆಳಗುತೋಷಧೀಶನಂದು ನೆಗೆಯೆ
ವೈಜಕವ್ವೆ ನೊಂದು ಕಂದಿ ಕುಂದಿ ಮಧ್ಯನಿಶಿಯೊಳೆಯ್ದೆ
ರಾಜಶೇಖರಂಗೆ ಮೊಯ್ಯಲಿಕ್ಕೆ ನೋವು ಶಿವನನೆಯ್ದೆ

ಕನಸಿನಲ್ಲಿ ಮುನ್ನ ಬಂದ ತೆರದಿ ಶಂಭು ಒಲ್ದು ಬಂದು
ಮನದ ಕೊನೆಯ ಮೊನೆಯ ಭಾವದಚಲದೀಪ್ತಿಯೊಳಗೆ ನಿಂದು
ನಿನಗೆ ಚಿಂತೆ ಬೇಡ ಬೇಡ ವೈಜಕವ್ವೆ ನಾಳೆ ನೋಡ
ಜಿನನ ಸಿರವ ನೊಡೆದು ಜಡಿದು ಮೂಡಿ ನಿಲ್ವೆ ನಂಜಬೇಡ
ಎಂದು ಬೆಸಸಿ ಪೋಗೆ ಮೆಲ್ಲನೆಚ್ಚರೊಳಗೆ ಸಂದು ತಿಳಿದು
ಇಂದುಧರನ ಕೃಪೆ ಇದೆಂದು ಹರುಷಚಿತ್ತೆ ಮನದೊಳರಿದು
ಇರೆ ಪುರಾರಿ ಜಿನನನೊಡೆದು ಮೂಡುವುದನೆ ನೋಳ್ಪೆನೆಂದು
ತರಣಿಯೊಗೆದನಲ್ಲಿ ವೈಜಕವ್ವೆಗಿತ್ತ ನಲವಿನಂದು
ಅರಿವುತೆಲ್ಲರರಿಯಲೆಂದು ಭಸಿತಮಂ ತೆರಳ್ಚಿ ಪೂಸಿ
ಅರಿವುರುಳ್ಗಳಿನಿಸ ಜೈನ ಕುಲವ ಕಲೆಗೆ ಹೇಸಿ
ಸುಲಿದ ಪಲ್ಲ ಸುಲಲಿತಾಂಗಿ ಧವಳ ವಸನದಮೃತ ಮೂರ್ತಿ
ಛಲದ ಲಲನೆ ನಲಿವಿನೊಲವು ಶಿವನ ಭವನ ಭುವನಕೀರ್ತಿ
ವೈಜಕವ್ವೆ ನಿಳಯದೊಳಗೆ ಸುಖದೊಳೊಪ್ಪುತಿರ್ದಳಿತ್ತ

ರಾಜಿಸುತ್ತ ಧರಣಿಯೊಳಗೆ ಜೈನರೆಲ್ಲ ಬಸದಿಯತ್ತ
ಬಂದು ಕದವನೊತ್ತಿ ತೋಗದಿರ್ದೊಡಲ್ಲಿ ಸವಣರೆಲ್ಲ
ನಿಂದು ಕೌತುಕಂಬಡುತ್ತೆ ವಿಕೃತಿವೇಷನಿಹತರೆಲ್ಲ
ಹಾರೆ ದಬ್ಬುಕಂಗಳಿಂದೆ ಒತ್ತಿ ಒತ್ತಿ ನೂಂಕಿ ಸೆಡೆಯೆ
ಮೇರೆಯಿಲ್ಲದಚಲ ಕಠಿಣತರುಗಳಿಂದೆ ಒತ್ತಿ ಕೆಡೆಯೆ
ಮತ್ತ ಕರಿಗಳಿಂದ ಒತ್ತಿ ನೂಂಕಿಸುತ್ತೆ ಬಾಡಿ ಬಳ್ಕಿ
ಮತ್ತೆಯುಂ ಸಹಸ್ರವೇಳೆಯಂತುವಿರದೆ ನೂಂಕಿ ತಳ್ಕಿ
ಜೈನರೆಲ್ಲ ಜಂಗುಜರಿದು ಋಷಿಗಳೆಲ್ಲ ಮಟ್ಟವಾಗೆ
ಮಾನವಳಿದು ಮೌನ ಉಳಿದು ಹೀನ ಮನದ ದೀನರಾಗೆ
ಏಕೆ ಜಿನ ಕವಾಟವಿಕ್ಕಿತದ್ಭುತ ಪ್ರಕಾರವೆಂದು
ಏಕೆ ತಾನಿದಾದಪುದು ವಿರೋಧವೆಂದು ಮುಳಿದು ನೊಂದು
ಎಮ್ಮ ಪುರದೊಳಿಂದು ನಿನ್ನ ಧರ್ಮ ಹಾನಿ ಗೈವರುಂಟೆ
ಉಮ್ಮಳಕ್ಕೆ ಕಜ್ಜವೇನೊ ಜೀವತತಿಯನಳಿದರುಂಟೆ
ಇಲ್ಲದಿರ್ದೊಡರುಹನಿಂತು ಕದವನಿಕ್ಕಿಕೊಳ್ವನಲ್ಲ
ಎಲ್ಲರಂತೆ ಭೂತಹಿಂಸೆ ಮಾಳ್ಪ ಸಮಯವಿಂತಿದಲ್ಲ
ಜೀವತತಿಗೆ ನೋವು ಬಂದೊಡರುಹನಿಲ್ಲಿ ನಿಲ್ವನಲ್ಲ
ಭಾವಿಸಲ್ಕೆ ಸುಮ್ಮನಿರದೆ ಪೇಳಿರೆಮಗೆ ಜೈನರೆಲ್ಲ

ಎಂದೊಡಾ ನೇಮಿಸೆಟ್ಟಿ ನಿನ್ನೆ ಬಡಿದೆನೆನ್ನ ಸತಿಯ
ಇಂದು ಕದವನಿಕ್ಕಿತೇನನೆಂಬೆನೆನ್ನಗಲ್ದ ಮತಿಯ
ಎನಲು ಜೈನರೆಲ್ಲರುಂ ತೆರಳ್ಚಿ ಕೂಡಿಕೊಂಡು ಬಂದು
ವನಿತೆ ಮೈಜಕವ್ವೆಯಲ್ಲಿಗೆಲ್ಲರೈದೆ ಸಾರ್ದು ನಿಂದು
ಚರಣದಲ್ಲಿ ಬೀಳ್ದು ಮೈಜಕವ್ವೆ ನಿನ್ನ ನೋವಿನಿಂದೆ
ಅರುಹನಲ್ಲಿ ಕದವನಿಕ್ಕಿಕೊಂಡು ಕಾಡುತಿರ್ದನಿಂದೆ
ಬಂದು ಕದವನಿಂದು ತೆರೆಯಿಸುತ್ತೆ ಕರುಣಿಸೆಂದು ನುಡಿಯೆ
ಇಂದುವದನೆ ನಗುತೆ ನುಡಿದಳಲ್ಲಿ ಪಿರಿಯರೆಯ್ದೆ ಸೆಡೆಯೆ
ಏಕೆ ಬಂದಿರಣ್ಣ ಮೈಜಕವ್ವೆ ಎತ್ತಲರುಹನೆತ್ತ
ಲೋಕನಾಥನರುಹಸಿರವನೊಡೆದು ಮೂಡಿ ನಿಂದನತ್ತ
ನೀವು ಬೇಡಿಕೊಳಲಿದೇಕೆ ನಾನೆ ಬರ್ಪೆನೆನ್ನ ಗತಿಗೆ
ನೀವಿದೇಕೆ ಬೇಡವಾಯುಸಂಗೊಳಲ್ಕೆ ನೋಡ ಧರೆಗೆ

ಪೊಸತು ಮಾಳ್ಪೆನೆನುತ ನಡೆದಳಭವ ಭಕ್ತೆ ವೈಜಕವ್ವೆ
ಅಸಮ ನಯನನಚಲಭಕ್ತಿ ನೆಲಸಿ ನಿಂದ ವೈಜಕವ್ವೆ
ಬಕನಿಕಾಯ ಮಧ್ಯದೊಳಗೆ ನಡೆವ ರಾಜಹಂಸಿಯಂತೆ
ಸಕಲ ಜನನ ಕುಲದ ನಡುವೆ ವೈಜಕವ್ವೆ ನಡೆಯುತಿಂತೆ

ಬಂದು ಶಿವಕವಾಟದಲ್ಲಿ ನಿಂದು ನೋಡುತಚಲಭಕ್ತೆ
ಇಂದು ವದನೆ ಸುಕೃತ ಸದನೆ ದೇವರಲ್ಲಿ ಸಹಜಯುಕ್ತೆ
ದೇವ ಸತ್ಯ ನಿತ್ಯ ಭರ್ಗ ಭೀಮ ರುದ್ರ ಕರುಣಿಸಯ್ಯ
ದೇವ ಸಕಲ ಭುವನ ತಿಮಿರಹರಣ ಕಿರಣ ಕರುಣಿಸಯ್ಯ
ದೇವ ಗಿರೀಶ ಗಿರಿಜೆಯರಸ ತತ್ವದರ್ಶ ಕರುಣಿಸಯ್ಯ
ದೇವ ಚಂದ್ರ ಸುರನದಿ ಕಳಾಪಜೂಟ ಕರುಣಿಸಯ್ಯ
ಎಂದು ಪೊಗಳ್ವ ತುತಿಗಳೊಡನೆ ಶಾಂತಿ ಕುಸುಮ ವರಲ್ದ ತೆರದಿ
ಇಂದುಧರನ ನಿಜದ ಪರಮ ಭಕ್ತೆ ತೆರಹುಗುಡುವ ತೆರದಿ
ಶಿವನ ಕಣ್ಗಳೆವೆಯ ಸಂಪುಟಂಗಳಲ್ಲಿ ಸಾರ್ವ ತೆರದಿ
ಭವನ ನಿಷ್ಠೆಯೊಗ್ಗು ಹಿಗ್ಗಿ ತನ್ನೊಳೆಡೆಯನೀವ ತೆರದಿ
ಶಿವಕವಾಟವಲ್ಲಿ ತೆರೆಯಲೊಳಗೆ ತೋರುತಿರ್ದುದರರೆ
ನವಮರೀಚಿ ಮಸಗಿ ದೆಸೆಗೆ ಪರಿದು ತೊಳಗಿ ಬೆಳಗಲರರೆ

ಜಿನನ ಶಿರವನೊಡೆದು ಶಿವನ ಲಿಂಗವಲ್ಲಿ ಬೆಳೆದು ನೆಗೆಯೆ
ಅನಘನಪ್ರಮಾಣ ನತುಳ ತೇಜ ನಮಳ ಕಾಂತಿಯೊಗೆಯೆ
ಜೈನರೆಲ್ಲ ಕಂಡು ಕಣ್ಗಳುರಿದು ತನುಗಳರಿದು ಬೀಳೆ
ಮಾನವಳಿದು ಗಂಡುಗೆಟ್ಟನೂನ ದುಃಖಜಲದೊಳಾಳೆ
ನೆರೆದ ಋಷಿಯರೆಲ್ಲ ಬೆಂದ ಮರದ ತೆರದಿ ಜಂಗುಜರಿಯೆ
ಪರಮಪಂಡಿತರ್ಕಳೆಲ್ಲ ಮೆಲ್ಲಮೆಲ್ಲನೇಳ್ದು ಸರಿಯೆ
ಆಗಳಲ್ಲಿ ವೈಜಕವ್ವೆ ಭವನನಪ್ಪಿ ಶಿವನನಪ್ಪಿ
ರಾಗವಲರೆ ಚರಣತಳವನಪ್ಪಿ ಮತ್ತೆ ಮಾಣದಪ್ಪಿ
ಪುಳಕವಡರೆ ಗದ್ಗದಂಗಳಡಸೆ ಬೆಮರಬಿಂದು ನೆರೆಯೆ
ಇಳ್ವ ಸುಖಜಲಂ ವಿಲೋಚನಂಗಳಿಂದೆ ಸೂಸಿ ಪರಿಯೆ
ಕುಣಿದು ಮಣಿದು ತಣಿದು ತೇಗಿ ತೂಗಿ ಬೀಗಿ ವೈಜಕವ್ವೆ

ಆಣೆಯುರಂಗಲುಕ್ಕಲಾಡಿ ಹಾಡಿ ನೋಡಿ ವೈಜಕವ್ವೆ
ತನ್ನ ಚರಣದಲ್ಲಿ ಬೀಳ್ದ ನೇಮಿಸೆಟ್ಟಿಗೆಂದಳಂದು
ಎನ್ನ ಸಂಗವಾದ ನಿನಗೆ ಪಾಪವಾಗಲಾಗದೆಂದು
ಕರುಣದಿಂದೆ ಭಸಿತವಿಟ್ಟು ಶೈವದೀಕ್ಷೆಯಂ ತೊಡರ್ಚಿ
ಪರಮ ಪಂಚವರ್ಣಕರ್ಣ ಕುಹರನಪ್ಪುದಂ ನಿಮಿರ್ಚಿ
ಎನ್ನ ಪೆಸರ ವೈಜನಾಥದೇವರಿವರ ನರ್ಚಿಸುವುದು
ಉನ್ನತ ಪ್ರಮೋದವಂ ಮಹೇಶನಲ್ಲಿ ಪೆರ್ಚಿಸುವುದು

ಎಂದು ನುಡಿವುತಿರಲಿರಲ್ಕೆ ಪುಷ್ಪವೃಷ್ಟಿ ಸುರಿದವಲ್ಲಿ
ದುಂದುಭಿ ಪ್ರಣಾದದೊಡನೆ ಶಂಖನಾದ ಒಗೆದುದಲ್ಲಿ
ನಡುವೆ ಬಂದು ಒಂದು ಪುಷ್ಪಕಂ ಜಗಂಗಳೆಲ್ಲ ಹೊಗಳೆ
ವೃಡನ ಭಕ್ತಸಂಕುಳಕ್ಕೆ ಸಂತಸಂಗಳೆಯ್ದೆ ನೆಗಳೆ
ಭುವನವೆಲ್ಲ ಪೊಗಳೆ ವೈಜಕವ್ವೆ ಪುಷ್ಪಕದೊಳೆ ಪೊಕ್ಕು
ಶಿವಗಣಂಗಳೊಳಗೆ ಯಂಬರಕ್ಕೆ ನೆಗೆದು ಮೀರಿ ಮಿಕ್ಕು
ಬಂದು ನಂದಿನಾಥನಿರ್ಪ ಬಾಗಿಲಲ್ಲಿ ಭೋಂಕನಿಳಿದು
ಇಂದುಮೌಳಿ ಶರಣೆನುತ್ತೆ ಪುಳುಕತತಿಯನೆಯ್ದೆ ತಳೆದು
ಎನ್ನ ನಿಧಿಯೆ ಎನ್ನ ಮಧುವೆ ಎನ್ನ ಸುಧೆಯೆ ಕರುಣಿಸೆಂದು
ಎನ್ನ ಗುರುವೆ ಪರಮ ಗುರುವೆ ಪರಕೆ ಪರವೆ ಕರುಣಿಸೆಂದು
ತಂದೆ ತಾಯೆ ಗತಿಯೆ ಮತಿಯೆ ಚಂದ್ರಚೂಡ ಕರುಣಿಸೆಂದು
ಬಂದು ವೈಜಕವ್ವೆ ಹರನ ಚರಣದಲ್ಲಿ ಬೀಳಲಂದು
ಶಂಭು ಒಸೆದು ನಲಿವುತೆತ್ತಿ ಶಿರದ ಮೇಲೆ ಕರವನಿಟ್ಟು
ಡಂಭರಹಿತ ನೊಲವುಸಹಿತ ವೀಕ್ಷಿಸುತ್ತೆ ಚಿತ್ತವಿಟ್ಟು
ಗಿರಿಜೆ ನೋಡ ವೈಜಕವ್ವೆಯಂತೆ ನಿಷ್ಠೆಯುಳ್ಳರುಂಟೆ
ಪರರ ಸಮಯದೊಳಗೆ ನಿಂದು ಭಕ್ತಿಯುಕ್ತೆಯಾದರುಂಟೆ
ಸವಿಗೆ ಸವಿಗಳೆನಿಪ ವಸ್ತು ಕುಲವನೆನ್ನೊಳಿತ್ತರುಂಟೇ
ಭುವನದೊಳಗೆ ಭಕ್ತಿಯಂ ವಿರಾಜಿಸಲ್ಕೆ ಮೆರೆದರುಂಟೆ
ಎಂದು ಕೊಂಡು ತೊನೆದು ರುದ್ರ ಕನ್ನಿಕಾನಿಯೋಗವಿತ್ತು
ಸಂದ ಗಣನಿಕಾಯದೊಳಗೆ ಸಕಲಸುಖವನೆಯ್ದೆ ಹೊತ್ತು
ರಜತ ಗಿರಿಯ ಪಿರಿಯ ನಿಳಯದೊಳಗೆ ಬೆಳಗುತಿರ್ದನಲ್ಲಿ

ಬುಡಕನಂ ಲತೆಗಳೊಳ್ ಲಲನೆಯರ ನಡುವಿನೊಳ್
ಕೆಡಿಸುವುದು ವಂಶಮಂ ಮೋದರೊಳ್ ವೃಷಭನೊಳ್
ಅವನಿಗತಿ ಕಂಟಕಂ ಕೇತಕೀ ವೃಂದದೊಳ್
ಭುವನಕಂಟಕವೆಂಬುದಂಬುಜದ ನಾಳದೊಳ್
ಪೆರ್ಚುಕುಂದೆಂಬುದಾ ಚಂದ್ರನೊಳ್ ಶರಧಿಯೊಳ್
ಪೆರ್ಚಿರ್ದ ದಾನಾರ್ಥವೆಂಬುದಾ ತುಂಬಿಯೊಳ್
ಇಂತಿವರೊಳಲ್ಲದಾ ನಾಡೊಳೆಲ್ಲೆಲ್ಲಿಯುಂ
ಸಂತತಂ ಸುಖಮಯಂ ದೇಶದೊಳಗೆಲ್ಲಿಯುಂ

ಆ ದೇಶದೊಳ್ ರಾಜಧಾನಿಯೆನಲೊಪ್ಪುವುದು
ಭೂದೇವತೆಯ ನೊಸಲತಿಲಕವೆನಲೊಪ್ಪುವುದು
ಭಾರತೀಯ ಪೀಠವೆಂಬುದು ಪಟ್ಟಣದ ನಾಮ
ಈರೇಳ್ಜಗಂಗಳಿಗೆ ಕೀರ್ತಿವಡೆದುದು ಗ್ರಾಮ
ಅಲ್ಲಿ ಶುದ್ಧ ಸ್ಫಟಿಕದಿಂದೆಸೆವ ಕೋಂಟೆಯಿಂ
ಅಲ್ಲಿ ಕಸ್ತೂರಿಯ ಕೆಸರಾಳ್ವೇರಿಮುಹಿಮೆಯಿಂ
ಅಲ್ಲಿ ಮನೆಮನೆಗಳೊಳ್ಕುಂಕುಮದ ಮಡಿಗಳಿಂ
ಅಲ್ಲಲ್ಲಿ ದ್ರಾಕ್ಷಾಲತಾಮಂಟಪಂಗಳಿಂ
ಬಾಳೆ ಕಿತ್ತಳೆ ಹೇರಳೆ ನಿಂಬೆ ವನಂಗಳಿಂ
ನಾರಿಕೇಳಂ ನವಾಮ್ರಂ ಮಾತುಳಂಗಳಿಂ
ತಳಿರೊತ್ತಿ ರಾಜಿಸುವಶೋಕದ್ರುಮಂಗಳಿಂ
ಕಳಹಂಸ ಮಿಥುನದಿಂ ಬಳಸಿದ ಕೊಳಂಗಳಿಂ
ವೇದಘೋಷಂ ಪುರಾಣ ಪ್ರಸಂಗಂಗಳಿಂ
ಆದರಿಪ ಶಿವಕಥನ ಶೈವಾಗಮಂಗಳಿಂ
ಅಲ್ಲಲ್ಲಿ ಶಶಿಕಾಂತ ಭವನಿಕೆಗಳಿಂದೆಸೆವ
ಅಲ್ಲಲ್ಲಿ ನೆಲೆಯ ಕರುಮಾಡಂಗಳಿಂದೆಸೆವ
ರಾಜಿಸುವ ನವಸೂರ್ಯಸೋಮವೀಧಿಗಳೆಸೆವ
ರಾಜಭೂಷಣನ ಭವನಾವಳಿಗಳಿಂದೆಸೆವ

ಪಟ್ಟಣವನಾಳ್ವನಪ್ರತಿಮಭೂಪಂ ನೋಡ
ಕಟ್ಟಧಿಕನುತ್ತಮ ಪ್ರವರಸೇನಂ ನೋಡ

ಗಜಘಟಾಶ್ವಾಳಿ ರಥನಿಕರ ಸಂಪದ ಕರಂ
ನಿಜಭುಜಾಗ್ರಪ್ರಯುುತ ವೀರಲಕ್ಷ್ಮೀವರಂ
ವಿವಿಧವಿದ್ಯಾಧರಂ ಸತ್ಕಾವ್ಯಕೋವಿದಂ
ನವಗೀತವಾದ್ಯನೃತ್ಯತ್ರಯಕಳಾವಿದಂ
ನಿತ್ಯ ಸಾರಸ್ವತಂ ಸತ್ವ ಸಂಪದಕರಂ
ಸತ್ಯಸಾಹಿತ್ಯಗುಣಗಾಂಭೀರ್ಯ ವಿಸ್ತರಂ
ಆ ಪ್ರವರಸೇನರಾಜಂಗೆ ಹೊಯ್ಕೈಯ್ಯೆನಿಸಿ

ವಿಪ್ರನೊಪ್ಪುವನಾ ಪುರಕ್ಕೆ ಧನಪತಿ ಯೆನಿಸಿ
ತನ್ನ ಪೆಸರೊಪ್ಪುವ ಸುವರ್ಣಭಟ್ಟಂ ನೋಡ
ತನ್ನ ಸಂಪನ್ನತೆ ಕುಬೇರಂಗೆ ಸರಿ ನೋಡ
ಪೊರ್ದಿದರ್ಪೊರೆದರ್ಗೆ ಕೋಟಿ ಸಂಖೆಯ ಧನಂ
ಸಾರ್ದ ಶಿಷ್ಯಾವಳಿಗನಂತ ಸಂಖೆಯ ಧನಂ
ಹೆಸರಸತ್ರಂ ಹೆಸರ ಪುರವರ್ಗವಲ್ಲಲ್ಲಿ
ಹೆಸರ ಕೆರೆಯುರವಟಿಗೆಯಾರವೆಗಳಲ್ಲಲ್ಲಿ
ಹೆಸರಗ್ರಹಾರಂ ಶಿವಾಲಯುಗಳಲ್ಲಲ್ಲಿ
ಹೆಸರ ಧರ್ಮಪ್ರಕರವೆಣಿಸಲೆನಗರಿದಲ್ಲಿ

ಇಂತೆಸೆವ ವಿಪ್ರಂಗೆ ಸುತನೋರ್ವನೊಪ್ಪುವಂ
ಸಂತತಸುವರ್ಣಭಟ್ಟನ ಮನವನಪ್ಪುವಂ
ಆತನ ಪೆಸರ್ಪುರಕೆ ಮೆರೆವ ಮಲುಹಣನೆಂದು
ಆತನ ವಿಳಾಸದೊಳ್ ಪಿತನ ಚಿತ್ತಂ ಸಂದು
ಉಪನಯನ ವೈವಾಹಮಂ ವಿಭವದಿಂಮ್ಮಾಡಿ
ವಿಪುಳವೇದ ಸರಸ ಶಾಸ್ತ್ರಜ್ಞರಂ ಕೂಡಿ
ಶೈವೋಪದೇಶಮಂ ಪಿರಿಯರಿಂ ಮಾಡಿಸುತೆ
ದೈವಜ್ಞನಪ್ಪ ಮಗನಂ ನೋಡಿ ಪುಳುಕಿಸುತೆ
ದಿವ್ಯವಸ್ತ್ರಂ ಗಂಧಕಸ್ತೂರಿ ಪುತ್ರಂಗೆ
ನವ್ಯ ಭೂಷಣವಿತತಿವಿಸ್ತರಂ ಪುತ್ರಂಗೆ
ಗೀತ ವಾದ್ಯಂ ನೃತ್ಯ ಲೀಲೆ ಪುತ್ರನ ಮುಂದೆ
ನೂತನ ವಿನೋದ ಸರಸೋಕ್ತಿ ಪುತ್ರನ ಮುಂದೆ

ನವಫಳಂ ನವರಸಂ ನವಸುಖಂ ಪುತ್ರಂಗೆ
ನವವಾಹನಂ ನೂತನ ರತ್ನಂ ಪುತ್ರಂಗೆ
ಇಂತು ಪುತ್ರಂಗಿತ್ತು ಕಣ್ತೀವಿ ನೋಡುತಂ
ಸಂತತಂ ಮಲುಹಣನ ಮೋಹದೊಳ್ನಲಿಯುತಂ

ಚಿಂತಿಸಿದನಾತಂಗೆ ಸುಖದೊಳಿರ್ಪಂದಮಂ
ಮುಂತೆ ಮಾನಿಸರ ಹಂಗಿಲ್ಲದೊಂದಂದಮಂ
ನಿಚ್ಚಂ ಸಹಸ್ರ ಹೊನ್ನಂ ಲೆಕ್ಕಮಂ ಮಾಡಿ
ಅಚ್ಚರಿ ಮಿಗಲ್ಮೂರು ವತ್ಸರಕ್ಕನುಮಾಡಿ
ಓರ್ವಂಗೆ ಪರಮಾಯು ನೂರು ವತ್ಸರಮೆಂದು
ಸರ್ವ ಧನದೊಳಗೆ ತೆಗೆದಂ ಮಲುಹಣಂಗೆಂದು
ಮೂರು ಕೋಟಿಯು ಮೇಲೆ ಲಕ್ಕವರುವತ್ತಾಗೆ
ಬೇರೆ ವಿವರಿಸಿದ ಹೊನ್ನಂ ಮಲುಹಣಂಗಾಗೆ
ಕಟ್ಟಿ ಮುದ್ರಿಸಿದಂ ಸುವರ್ಣಭಟ್ಟಂ ನೋಡ
ಪಟ್ಟಣಕ್ಕಿಳಿಗೆ ಪೊಸತಾಗಲಾತಂ ನೋಡ
ಈ ತೆರದೊಳರ್ಥಮಂ ಪುತ್ರಂಗೆ ಬೈತಿಟ್ಟು
ನೂತನ ಸುಖಂಗಳಂ ಮನದೊಳಗೆ ಮುಂತಿಟ್ಟು
ಒಂದೆರಡು ವತ್ಸರಂ ಸುಖದೊಳಿರ್ಪನಿತಕ್ಕೆ
ಸಂದಣಿಸಿ ಹರ್ಷದಿಂ ಪದುಳವಿರ್ಪನಿತಕ್ಕೆ

ಬಂದುದು ಸುವರ್ಣಭಟ್ಟಂಗೆ ಕಾಲನ ದಾಳಿ
ನಿಂದು ಸೋಂಕಿತ್ತಸುವನೆಯ್ದೆ ರೋಗದ ದಾಳಿ
ಸೋಂಕಿತ್ತುಗ್ರಜ್ವರಂ ತಾಪದಿಂದಳ್ಕಿದಂ
ಭೋಂಕನೆ ಸುವರ್ಣಭಟ್ಟಂ ದಿವಕ್ಕೈದಿದಂ
ತಂದೆ ಸ್ವರ್ಗಸ್ತನಾದುದನರಿದು ಮಲುಹಣಂ
ಮುಂದುಗೆಟ್ಟರಿವುಗೆಟ್ಟೊರಲುತ್ತೆ ಮಲುಹಣಂ
ಸರ್ವ ಸಂಭ್ರಮದಿಂದ ತಂದೆಯಂ ಸಂಸ್ಕರಿಸಿ
ಸರ್ವಮುಖದಿಂ ಪಿಂಡಪಿತೃಕಾರ್ಯಮಂ ಸಲಿಸಿ
ಸಕಲ ಭರಭಾರಕ್ಕೆ ತಾನೆ ವಲ್ಲಭನಾಗಿ
ಸಕಲ ಪರಿಜನಕೆಲ್ಲ ರಕ್ಷೆಶಿಕ್ಷಕನಾಗಿ

ಉತ್ತಮಂ ವ್ಯವಹಾರಪರಿಣತಂ ತಾನಾಗಿ
ಉತ್ತಮೋತ್ತಮ ಸಂಪದಕ್ಕೆ ನೆಲೆವನೆಯಾಗಿ
ಇರೆ ಮಲುಹಣನನಪ್ಪಿದುದು ಯೌವ್ವನೋದಯಂ

ಸ್ಮರನ ಕೈಗೆಯ್ದಿತ್ತು ಪುಷ್ಪಚಾಪೋದಯಂ
ಸವಿ ನುಡಿಗಳಂ ಕಿವಿಗಳಾಲಿಸಲ್ತೊಡಗಿದವು
ಅವಯವಂ ಮೃದುವಸನದಿಚ್ಛೆಯನೊಡರ್ಚಿದವು
ನೋಟವೊಪ್ಪುವ ರೂಪನೆಚ್ಚರಿಸಲೆಳಸಿದವು
ತೋಟಗೆಳಿಸುವ ಮುರ್ಬು ಗಂಟಿಕ್ಕತೊಡಗಿದವು
ಸವ ಮಧುರಮಂ ಜಿಹ್ವೆ ಬಯಸಲನುಗೈಯಿತ್ತು
ನವ ಗಂಧಮಂ ಘ್ರಾಣವರಿಯಲನುಗೈಯಿತ್ತು
ಗುಡಿ ಮೆಲ್ಲಮೆಲ್ಲನಕ್ಷಿಗಳತ್ತ ಹೊದ್ದಿತ್ತು
ಸಡೆಯುರವಣೆಯನುಳಿದು ಗಮಕದೊಳ್ಬೆರಸಿತ್ತು
ಕರತಳಂ ತನುರುಚಿಯ ನೋವಸಂಗೈಸಿದವು
ಕರಣತತಿ ಭೋಗಸಂಪದಮನಿಚ್ಛೈಸಿದವು
ಇಂತು ಸರ್ವೇಂದ್ರಿಯಂ ಸುಖದ ಬಳಕೆಗೆ ಸಲಲ್
ಕಂತು ಚಿಂತಿಸಿ ಷೋಡಶಪ್ರಾಯದೊಳ್ನಿಲಲ್
ಅಂಗರುಚಿ ಮುಗ್ಧೆಯರ ಕಣ್ಗೆ ಕನ್ನಡಿಯಾಗೆ
ಅಂಗಲತೆ ತರುಣಿಯರ ಸಂಗಸಂಪದವಾಗೆ
ಸುರಕುಜದ ಚಂದನದ ಕರ್ಪುರದ ಸಸಿಯಂತೆ
ಪರಿಮಳದ ಚಂದ್ರಿಕೆಯ ಕಾಂತಿ ಕರುವಿಟ್ಟಂತೆ
ಬೆಳೆಯುತಿರ್ದಂ ಸುಖಮನೆಳಸಿ ಮಲುಹಣಸಿತ್ತ
ಬೆಳೆಯುತಿರ್ದಳ್ ಸುಖಾಕಾರೆ ಮಲುಹಣಿಯತ್ತ

ಆ ದೇಶದಧಿದೈವವೆನಿಪ ವಿಜಯೇಶ್ವರನ
ವೇದಕ್ಕಗಮ್ಯವೆಂದೆನಿಪ ವಿಜಯೇಶ್ವರನ
ಪಾತ್ರದ ವಿಳಾಸಿನಿಯೆನಿಪ್ಪ ಪದ್ಮಾವತಿಯ
ಚಿತ್ರತರ ಮಧುರತರ ನಾಟಕಕಳಾವತಿಯ
ಎಸೆವ ಬಸಿರೊಳ್ ಬಂದು ಶಿಶುಭಾವಮಂ ತಳೆದು
ಕುಸುಮಬಾಣನ ಕೀರ್ತಿ ಬೆಳೆವಂದದಿಂ ಬೆಳೆದು

ಮಲುಹಣಿಯ ಜೌವ್ವನವನೇನೆಂದು ಬಣ್ಣಿಪೇಂ
ಮಲುಹಣನ ಸಕಲ ಸುಖನಿಧಿಯನೇನೆಂದಪೇಂ

ಮನವನೆಡೆಗೊಂಡನಾ ಮನಸಿಜಂ ಪರಿತಂದು
ತನುವನೆಡೆಗೊಂಡುದಾ ಸೌಭಾಗ್ಯವೆಯ್ತಂದು
ಪ್ರೇಮದಿಂ ಮಧುರೂಪಿನೊಳ್ಪುಗಲ್ಪೂತನಂ
ಪೂಮುಡಿಯನಿಂಬುಗೊಂಡುದು ಮಕರಕೇತನಂ
ಭ್ರೂಲತೆಯನಾಶ್ರಯಿಸಿತಿಕ್ಷುಚಾಪಂ ನೋಡ
ಆಲೋಕನವನೊತ್ತಗೊಂಡವಲರ್ಗಣೆ ನೋಡ
ಮಿಗೆ ಸೊಬಗಿನೊಳ್ಪೊಕ್ಕಳಲ್ಲಿ ರತಿಯೆಯ್ತಂದು
ಮೊಗವನೋಲೈಸಿದಳ್ ಸರಸಿಜಶ್ರೀ ಬಂದು
ನೆಯ್ದಿಲೆಯರಲ್ಬಯಸಿ ಕರ್ಣಪಾಲಿಕೆಯೊಳಿರೆ
ಎಯ್ದಿ ಶಶಿಕಾಂತ ಗಂಡಸ್ಥಲವನಪ್ಪುತಿರೆ
ಗಂಧವಹನೆಳಸಿ ಮಧುರಶ್ವಾಸದೊಳ್ ಪುಗಲ್
ಬಂಧುರವೃಣಾಲರುಚಿ ಭುಜಲತೆಗಳೊಳ್ಮಿಗಲ್
ಅಮಳ್ವಕ್ಕಿಗಳ ಚೆಲ್ವು ಘನಕುಚವನಿಚ್ಛೈಸೆ
ಕಮಲಸೂತ್ರದ ಕಾಂತಿ ಬಾಸೆಯಂ ಬಾಸಣಿಸೆ
ಬಾಸೆ ತನ್ನಂ ತೋರಿ ಬಡನಡುವನುಂಟೆನಿಸೆ
ಮೀಸಲ್ಗೊಳನ ಗುಣ್ಪು ಸುಳಿನಾಭಿಯೊಳ್ನೆಲಸೆ
ಮದನನಿಳಯದ ನೇತ್ರದಂಡದಾಕೃತಿ ಬಂದು
ಸದಮಳ ತಿವಳಿಯೊಳ್ನೆಲಸೆ ನಲವಿಂದಂದು
ಕೃತಕಾಚಲದ ಸೊಂಪು ತಣ್ಪು ವೃತ್ತಂ ಬಯಸಿ
ನುತ ಜಘನಮಂ ಬಳಸಿ ಪರ್ಬಿ ಪದಪಿಂದೆಳಸಿ
ಕದಳಿಯಾಕೃತಿ ಬಟ್ಟದೊಡೆಗಳಂ ಸಾರುತಿರೆ
ಮದನದೊಡೆಯಾಕಾರ ಕಣಗಾಲ್ಗೆ ಸೇರುತಿರೆ
ಕೆಂದಾವರೆಯ ಕೆಂಪು ಪದತಳವನೋಲೈಸೆ
ಮಂದಯಾನಂ ಎಸೆವ ಹಂಸಗತಿಯಾವರಿಸೆ
ಇಂತು ಸರ್ವಾಂಗ ಸೌಂದರ್ಯಮಂ ಕೆಳೆಗೊಂಡು
ಕಂತು ಮೊದಲಾಗಿ ಚರಿಸುವ ರೂಪನೊಳಕೊಂಡು
ಅಳಿ ತುಡುಂಕದ ಮಘಮಘಿಪ ಬಿರಿ ಮುಗುಳಂತೆ

ಎಳಸುವ ಚಕೋರಿ ಮೊಗವಿಡದ ಚಂದ್ರಿಕೆಯಂತೆ
ಪಿಕಚಂಚು ಸಂಚಾರವಿಲ್ಲದೆಳೆದಳಿರಂತೆ
ಶುಕಮುಖದಿ ಅಣ್ಣೆವಳಿಯುದ ಪಕ್ವ ಫಳದಂತೆ
ತೊಳತೊಳಗಿ ಬಳೆವುತಿರ್ದಳ್ ಚಂದ್ರಕಳೆಯಂತೆ
ನಳನಳಿಸಿ ಬಳೆವುತಿರ್ದಳ್ ಕುಸುಮಶರದಂತೆ

ಬಳೆವ ಮಲುಹಣಿಯ ರೂಪಂ ಜನನಿ ಮಿಗೆ ನೋಡಿ
ಆಳವಲ್ಲದಳ್ಕರಿಂ ಸುಖರಸದೊಳೋಲಾಡಿ
ನವ ಯೌವ್ವನದ ನೆಲೆಗೆ ಮನದೊಳಗೆ ತೂಪಿರಿದು
ಅವಯುವದ ಚೆಲ್ವಿಂಗೆ ಕಣ್ಗಳೊಳ್ ತೂಪಿರಿದು
ಕಡು ನೇಹದಿಂದೆ ನವ ಲಾಸ್ಯಮಂ ವ್ಯೆಗೊಳಿಸಿ
ಪ್ಪೃಡನೊಲ್ವ ರಸಗಾನಮಂ ನೆರೆ ಕೊರಳ್ಗೊಳಿಸಿ
ಮಗಳ ನಿಟ್ಟಿಸುತ ಕಣ್ಗೊಳಗಿಕ್ಕಿ ಮುಚ್ಚುತ್ತಿರೆ
ಮಿಗೆ ವಿಳಾಸಿನಿಯರಿಂ ಸಿಂಗರಿಸುತಿರುತಮಿರೆ

## ಪ್ರಥಮಸ್ಥಲ ಸಂಪೂರ್ಣ

# ದ್ವಿತೀಯಸ್ಥಲ.

ಕಂದ॥ ಹೊಸನಡೆ ಹೊಸನುಡಿ ಹೊಸಮುಡಿ ।
ಹೊಸ ಹೊಸ ಸೌಭಾಗ್ಯವೆಸೆವ ಹೊಸ ಲಾವಣ್ಯಂ ।
ಹೊಸಹರೆಯಂ ಹೊಸನೋಟಂ ।
ಹೊಸ ಜವ್ವನದೇಳ್ಗೆ ಮಲುಹಣಿಗೆ ಚಿತ್ರತರಂ ॥

## ಗದ್ಯ.

ಇಂತೊಪ್ಪೆ ಚರಣಂ ತೀವಿದ ಮಂದಗತಿಯಿಂದಪರಭಾಗಂ ತೀವಿದ ನಿತಂಬದಿಂ ಉರಂ ತೀವಿದ ಪೇರ್ಮೊಲೆಯಿಂ ಮೊಗಂ ತೀವಿದ ಲೋಚನದಿಂ ಅವಯವಂ ತೀವಿದ ಚೆಲ್ವಿಂ ಮೆಯ್ತೀವಿದ ಜವ್ವನದಿಂ ಮನಂ ತೀವಿದ ಸುಖದಿಂ ಮರೆದು ಮನಸಿಜಂ ಮುದ್ರಿಸಿದ ನನೆಗಣೆಯಂತಿರ್ದ ಮಲುಹಣಿಗೆ ಸುಕುಮಾರಾಂಗಿಗೆ ಹೊಸ ಹರೆಯದೊಡನೆ ರಸಮಯವೆನಿಪ್ಪ ಲಾಸ್ಯ ಸಂಪದಂ ಕೈಗೂಡಿತ್ತೆಂಬುದಂ ಪದ್ಮಾವತಿಯರಿದು ವಸಂತಮಾಸದೊಳೊಂದು ದಿವಸಂ ವಿಜಯೇಶ್ವರದೇವರಂ ಕೇಳಿಸಲೆಂದು ಕ್ಷಣಮಂ ಕೈಕೊಂಡು ಮಲುಹಣಿಗೆ ಸಿಂಗರಂ ಮಾಡಲ್ಕೆ ಸಖೀಜನಕ್ಕೆ ಪೇಳೆ,

ಕೆಳದಿಯರ್ನಲಿದು ಬಂದು ಮಾಂದಳಿರ ಹಸೆಯ ಮೇಲೆ ಪುಷ್ಪಮಂಜರಿಯಪ್ಪಂತಿರ್ದ ಸುಕುಮಾರಾಂಗಿಗೆ ನನೆಯಂಬಂ ಕೈಗೆಯ್ವ ವಸಂತವಿಳಾಸಿನಿಯರಂತಿರ್ದ ವಿಳಾಸಿನಿಯರ್ಮಲುಹಣಿಗೆ ಪಾದಮುದ್ರಿಕೆಯನಲಂಕರಿಸಿ ಸೊಡಗಮನಮಲರ್ಚಿಸಿ ನೇವುರಮನಳವಡಿಸಿ ಕಂಕಣಮಂ ತಿರುಂಪಿ ನೂಂಕಿ ರತ್ನಮುದ್ರಿಕೆಗಳಂ ಕೆಯ್ಗೊಳಿಸಿ ಬಾಹುಪೂರಯಮನಿಕ್ಕಿ ಕರ್ಣಾವತಂಸಮಂ ಕೆಳೆಗೊಳಿಸಿ ಚಕ್ರಮಿಥುನಕ್ಕೆ ಗವಸಣಿಗೆಯನಿಕ್ಕುವಂತೆ ಕುಚಯುಗಕ್ಕೆ ಕಂಚುಕೆಯಂ ತೊಡಿಸಿ ತೋರಮುತ್ತಿನ ಹಾರಮಂ ಹತ್ತೆ ಸಾರ್ಚಿ ಶಶಿಬಿಂಬಕ್ಕೆ ಶುಕ್ರನಂ ಸೇರಿಸುವಂತೆ ಮುಖಬಿಂಬದೊಳ್ ಮುತ್ತಿನ ಮೂಕುತಿಯಂ ಮೇಳೈಸಿ ಕಾವನಂಬಂ ಕತ್ತುರಿಯ ಸಾಣೆಯಿಕ್ಕುವಂತೆ ಕಜ್ಜಳಮನೆಚ್ಚಿ ಎಳೆಲತೆಯಂ ಬೆಳ್ದಿಂಗಳಿಂ ಬಾಸಣಿಸುವಂತೆ ನವದುಕೂಲಮಂ ನಿರಿವಿಡಿದುಡಿಸಿ ನಿರ್ಮಳ ಶಶಿಬಿಂಬದಂತಿರ್ದ ಮುಖಮಂಡಲಕ್ಕೆ ಚಂದ್ರಮನ ದಿಟ್ಟಿ ತಾಗದಂತೆ

ಕತ್ತುರಿಯ ತಿಲಕಮಂ ನೊಸಲೊಳಿಟ್ಟು ಕಾಮನ ಮೆಯ್ವೆಗು ಮರೆ ವೊಕ್ಕಂತೆ ಕತ್ತಲಿಪ ಮುಡಿಯೊಳ್ ಹೊಸ ಕುಸುಮದೆಸಳಂ ತುರುಂಬಿ ತೊಡಿಸಿದಾಭರಣಮುಮಂ ಮುಡಿಸಿದ ಪೊಸ ಪುವ್ವಂ ನಸುದೋರ್ಪ ಸಪುರ ದುಕೂಲಮಂ ಮುಸುಂಕಿಟ್ಟು,

ಗಿಳಿ ಹಂಸೆ ಕೋಗಿಲೆ ಕುಸುಮಕುಲಂ ಮಧುಕರಂ ಮಂದಾನಿಲಂ ಚಂದ್ರಿಕೆ ಚಕೋರ ಚಕ್ರವಾಕವೆಳಗಳ್ಳಿಗಳ್ಳಿರಿದು ಬಂದು ಕಾವನ ಪುವ್ವಿನಂಬಂ ನಡುವಿಟ್ಟುಕೊಂಡೋಲೈಸುತುಂ ಬರ್ಪಂತೆ ಪದ್ಮಾವತಿ ಮೊದಲಾದ ಸಕಲ ಸಂಪ್ರದಾಯಮುಂ ಸಖೀ ಜನಂಗಳುಂ ಸುತ್ತಿ ಮುತ್ತಿ ಬರೆ ಮಲುಹಣಿಯು ಮರೆಗೊಂಡು ಕರ್ಬಿನ ಬಿಲ್ಲಗೊಲೆಗೇರಿ ಸುತ್ತ ಎಲರಂಬಂ ನಡೆತರೆ ಪೂಸಿದ ಚಂದನದ ಜವಾಜಿಯ ಯಕ್ಷ ಕರ್ದಮದ ಸೌರಭ್ಯದೊಡನೊಡನೆ ದೆಸೆದೆಸೆಗೆ ಪಸರಿಸಿ ತೀಡುವ ಹೊಸ ಜವ್ವನದ ಪಸಿಯ ಕಂಪಿನ ಬಳಿವಿಡಿದು ಸುಮಿಟರ್ಕಮಿದು ಬರೆ ತುಂಬಿ ಗಳ ಝೋಂಕಾರಂ ಕಂಕಣದ ಝಣತ್ಕಾರಂ ನೂಪುರದ ಕ್ರೇಂಕಾರಂ ಪಾದಮುದ್ರಿಕೆಯ ರಣತ್ಕಾರಂ ಮದನನಬಿಲ್ಲ ಟೇಂಕಾರಂ ಬೆರಸಿ ಬೆಳೆದು ಪುರಜನರ ಕಿವಿಗಳ್ಗೆ ಹೊಸ ಸವಿಗಳಂ ಸಾಲಿಡೆ ವಿಳಾಸದಿಂ ವಿಜಯೇಶ್ವರದೇವರ ರಂಗಮಂಟಪಕ್ಕೆ ಬಂದು ಚಂದ್ರಧರಂಗೆ ವಂದ ನಂಗೆಯ್ದು ಗಿರಿಜಾವಲ್ಲಭನಂ ಕೇಳಿಸಲೆಂದು ಸಕಳ ಸಂಪ್ರದಾಯಮುಂ ಸುಗತಿ ಸಂವರಣೆಗೊಂಡು ರಂಗಂಬುಗುತ್ತಿರಲು,

ಇತ್ತ ಮಲುಹಣದೇವಂ ವಿಜಯೇಶ್ವರದೇವರ ದಿವ್ಯ ಪಾದಪ್ರಣಾತ ನಿತ್ಯ ನಿಯಮಾಸಕ್ತನಾಗಿ ನೊಸಲೊಳಿಟ್ಟ ಭಸಿತದ ಕೀಲಿಸಿದ ಕರ್ಣಾ ಭರಣದ ಕೈಗೊಳಿಸಿದ ತೋರಹಾರದ ಉಟ್ಟು ಕೊದೆದ ಹೊಸ ದುಕೂ ಲದ ಕಿವಿಯೊಳಂಕೆಗೊಂಡ ಮೃಗಮದದ ಕಕ್ಷಪುಟದೊಳ್ಮಗಮಗಿಪ ಕತ್ತುರಿಯ ಸಾರದ ಉದ್ವರ್ತನಂಗೆಯ್ವ ಚಂದನದ ತುರುಂಬಿದ ಕುಸು ಮಾವಳಿಯ ಪೊಸ ಕಂಪುಂ ಸೊಗಯಿಸುವ ಸೊಂಪುಂ ಮೋಹಿಸುವ ಬೆಳಗುಂ ಮುಪ್ಪುರಿಗೊಂಡು ಬಳಸಿ ಬೀದಿವರಿಯೆ ಏರುಂಜವ್ವನದುರ್ಬು ಕೊರ್ಬು ಪರ್ಬುಗೆವಡೆಯೆ ನಿಜ ನಿಳಯಮಂ ಪೊರಮಟ್ಟು ಬಪ್ಪಾಗಳ್ ವೇದ ನಾದಾಕ್ಷರದೊಡನಕ್ಷತೆಗಳಂ ನೀಡುವ ವಿಪ್ರಕುಲದ ನವೀನ ಗದ್ಯ ಪದ್ಯದೊಡನೆ ನಲವರಕೆಯಂ ನೀಡುವ ಕವಿಗಳ ಕೈವಾರದೊಡನೆ ಸ್ತುತಿಗಳಂ ನೀಡುವ ವಂದಿಗಳಂ ತುಂಬಿಗಳ ನುಣ್ಚರದೊಡನೆ ಜೋಳಿಸಿ

ಮಾಣದಾಣತಿಗುಡುವ ಗಾಯಕರಿಂ ಸಮ ಕುಲಂ ಸಮ ಶೀಲಂ ಸಮ ರೂಪು ಸಮಪ್ರಾಯದೊಡನೆ ಮನಂಗೊಡುವ ಮಿತ್ರರೆನಿಪ ವಿಟ ವಿದೂಷಕ ನಾಗರಿಕ ಪೀಠಮರ್ದನರ್ನಡುವೆ ಕಾಮನ ಕೆಯ್ಸೆರೆ ಬರ್ಪಂತೆ ವಿಜಯೇಶ್ವರ ದೇವರ ಶಿವಾಲಯಕ್ಕೆ ನಡೆತಂದು,

ಮಲುಹಣಿಯು ತನ್ನ ನೇಹಂ ತನ್ನನೀ ತೆರದೊಳ್ ಸುತ್ತುವುದೆಂಬುದಂ ತೋರುವಂತೆ ಪ್ರದಕ್ಷಿಣಂ ಬಂದೊಳಪೊಕ್ಕು ಸೋಮಧರನ ವಾಮಭಾಗದೊಳ್ಪದ್ಮಾಸನನಾಗುತ್ತಂ ಆಗಮಸ್ಥಾನದೊಳ್ವಿಭೂತಿಯನಿಟ್ಟು ಪಂಚಬಾಣಕ್ಕಡೆಮಾಡುವಂತೆ ಶೋಷಣ ದಾಹನ ಪ್ಲವನಂಗಳಿಂ ಹೃದಯಾಧಾರಮಂ ಶುದ್ಧಿಮಾಡಿ ಎಲೆ ದೇವ ಈ ಕನ್ನೆಯಂ ನೋಂಕಿದ ಬಳಿಕ್ಕಮೆನ್ನಂಗವಿಕಾರವೆಲ್ಲಂ ತನ್ನಂಗದೊಳೆಂಬುದಂ ಮುಟ್ಟಿ ತೋರುವಂತಂಗನ್ಯಾಸಕರನ್ಯಾಸಮಂ ನಿಮಿರ್ಚಿ ಎಲೆ ದೇವ ಪಲವು ದಿನಕ್ಕಲ್ಲದೆ ನಿತ್ಯ ನಿಯಮಕ್ಕೆ ಬೇರೆನೆಂಬುದನೇಕಾಂತದೊಳ್ಬಿನ್ನವಿಪಂತೆ ಜಪವನೆಣಿಸಿ ಎಲೆ ದೇವ ಮಲುಹಣಿಯಂ ಕಂಡ ಬಳಿಕ ನಿನ್ನಂ ಕಾಣ್ಬುದರಿದೆಂಬುದಂ ಅರಿಪುವಂತೆ ಕಣ್ಗಳಂ ಮುಚ್ಚಿ ಎಲೆ ದೇವ ನಿನ್ನೋಲಗದ ಕನ್ನೆಯಂ ಬೇಗ ಕರುಣಿಸೆಂದು ಕಾಲ್ವಿಡಿವಂತೆ ಲಿಂಗದಂಘ್ರಿಯೊಳ್ ಸ್ಪರ್ಶನಮಂ ಮಾಡಿ ಮಲುಹಣಿಯಂ ಬೇಡಿ ಸದಾಶಿವನಿಂ ಧಾರೆಯಂ ಪಡೆವಂತೆ ಪಾದೋದಕಮಂ ಕೊಂಡು ಪೊಡೆಮಟ್ಟು ಬೀಳ್ಕೊಂಡು ಸೌಂದರ್ಯಸಂಪನ್ನಂ ವಿಳಾಸನಿಧಿ ಸೌಭಾಗ್ಯಸಾರೋದಯಂ ಸೌಕುಮಾರ್ಯಕಟಾಕ್ಷವಿಕ್ಷೇಪಂ ರಸಭರಿತಚಿತ್ತನಪ್ಪ ಮಲುಹಣದೇವಂ ತಿರಿಗಿ ಬರ್ಪಾಗಳ್,

ಮುಂದಣ ರಂಗಮಂಟಪದ ಮಧ್ಯದೊಳಿತ್ತರಂಗೊಂಡೋಲಗಮಿತ್ತು ಕುಳ್ಳಿರ್ದ ಪರಮಭಕ್ತರ ಸಚಿವರ ರಾಜಪುತ್ರರ ವಡ್ಡ ವ್ಯವಹಾರಿಗಳ ಕವಿಗಳ ಕಳಾವಿದರ ಸತ್ಯರ ಸಾಹಿತ್ಯರ ಸಂಗೀತ ಸಂಪನ್ನರ ವಿಳಾಸಿನಿಯರ ಪರಿಜನದ ಪುರಜನದ ನಡುವಣ ರಂಗಮಂಟಪದೊಳ್ನರ್ತನಂಗುಡುವ ತಾಳದ ಗತಿಗುಡುವ ಮದ್ದಳೆಯ ಲಹಣಿಗುಡುವ ಆವುಜದ ದೆಖ್ಖಾಳಂಗುಡುವ ಕರಡೆಯ ಸವಿಗುಡುವ ವೀಣೆಯ ನಯಂಗೊಡುವ ಕಿನ್ನರಿಯ ಲಲ್ಲೆಗೊಡುವ ಕೌಸಳದ ಹಲ್ಲಣಿಗುಡುವ ವಾಸದ ಲಲ್ಲೆಗುಡುವ ಜೇವಣಿಗೆಯರ ಸಂಗೀತದ ಸಂದಣಿಯೊಳ್ಪುಷ್ಪಾಂಜಲಿಯ ಸಮಯದೊಳ್ ನವೀನ ಕನ್ಯಾವರವಿವಾಹಮೂರ್ತದ ತೆರೆ ಸರಿವಂತೆ

ಮಲುಹಣ ನೊಡೆ ನೊಡೆ ಜವನಿಕೆಯೋಡೆ ದೊಣೆಯನಗಲ್ದ ಕಾವ-
ನಂಬಿನಂತಿರ್ದ ಮಲುಹಣಿಯ ರೂಪಿನೊಳ್ನೋಟಂ ಸಿಲ್ಕಿ ಎವೆ ಬಿರಗಾಗಿ
ಕಣ್ಗಳ ಧಾರೆಯಿಂದೊಳಪೊಕ್ಕು ರೂಪು ಕರಣವನೊಕ್ಕಲಿಕ್ಕಿ ಭಾವಮಂ
ಬರಿಕೈದು ಚಿತ್ರಮಂ ತೊತ್ತಳಿದುಳಿದು ಜೊಲ್ಲು ಝೊಂಪಿಸಿ ಮಿತ್ರರ
ಮೇಲೆ ಮೆಯ್ಯನೀಡಾಡುವ ಜೌವ್ವನಿಗನಂ ಮಲುಹಣಿ ಭೋಂಕನೆ
ನೋಡಿ ಕಂಡು ಮನಂ ಬೆದರಿ ಹೃದಯಂ ನಡುಗಿ ತನು ಬೆಮರ್ತು
ಗತಿ ಸ್ತಂಭಿಸಿ ಪಾದಂ ಪೈಸರಂಬೋಗಿ ಹಸ್ತಂ ಮಲಂಗಿ ನೋಟ
ಮಚ್ಚೊತ್ತಿ ಮೂರ್ಚಿಸುವ ಮಗಳಂ ಪದ್ಮಾವತಿ ಕಂಡು ಇದೇನಿದೇನು
ರಂಗಮಂಟಪಂ ವಿರಹಮಂಟಪವಾದುದು ಈಶ್ವರ ಕೇಳಿಕೆ ರತೀಶ್ವರ ಕೇಳಿಕೆ
ಯಾದುದು ಅಕ್ಕಕ್ಕ ಸೋಜಿಗಂ ಸೋಲ್ತ ಮಲುಹಣಂ ಸದರ್ಶನೆಂ
ಬುದಂ ಅರಿದು ಮನಮಂ ಬಲಿದು ಈರ್ವರುಮನೊಡಗೊಂಡು ಬಂದು,

ಪರ್ಬಿದ ನೇಹಮಂ ನೆಲೆವೆರ್ಚಲೊಡರ್ಚಿಸಿ ನಿಜನಿಳಯಕ್ಕೈತಂದು
ಮದನಕೇಳಿ ಸದನವೆನಿಪ್ಪ ಸೆಜ್ಜೆಯ ಮನೆಯ ಸಿರಿಮಂಚದ ಹಂಸತೂಳ
ತಳ್ಪದೊಳ್ಜವಳಿಗೊಳಿಸಿ ತಾನುಂ ಸಖೀಜನಂಗಳುಂ ಜಾಣಂ ಜಾರಲನಂಗ
ಕೇಳಿಗೆ ಮನಂ ಸಂದಣಿಯಲ್ಲಿಂದ್ರಿಯಂಗಳುರವಣಿಸೆ ತವಕಮನುಗುಳೆ
ಲಜ್ಜೆ ಹೆಜ್ಜೆದೆಗೆಯೆ ಮನಂ ಮುಂದುಗೆಟ್ಟು ಅನುರಾಗವಲ್ದು ಸವಿ
ನೋಟಂ ಒಳಪೊಕ್ಕು ಭೀತಿ ಬಿಟ್ಟು ಮುಂಡಿನಾಳಂ ವೈಸಂದು ಸೋಂಕು
ಸವಿಗಂಡಾಲಿಂಗನಕ್ಕಾತುರಿಸಿ ರೂಪಂ ಕಣ್ತೀವಿ ನೋಡಿ ಕುಚಭಾರ
ಲಪ್ಪಿ ಮೆಯ್ಯಾರೆ ಕೂಡಿ ಮನಂದಣಿಯೆ ಮರೆದು ಮರಹನರಿಯದೆ
ಅರಲುಗೊಂಡ ಚಕೋರನಂ ಬೆಳ್ದಿಂಗಳೊಳ್ ಬಿಸುಟಂತೆ ಹಸಿದ
ಪಿಕನಂ ಪೊಸ ಬನದೊಳಿರಿಸಿದಂತೆ ಬಳಲ್ದ ಚಕ್ರಮಿಥುನಕ್ಕೆ ಬಿಸಿಲೊಳ್
ಬಳಲ್ವಂತೆ ಮನದರ್ಥದೊಡನೆ ತನುವಿನ ಸುಖಂ ತಲೆಗೇರೆ ಬೇರೆ
ಬೇರೆ ಅವಯವದ ಕೂಟಕ್ಕೆ ಸರ್ವಾಂಗಮನೊಪ್ಪಿಸಿ ಕೊಟ್ಟು ಅಪ್ಪಿ
ದೊಡೆ ಬಿಡಲರಿದು ಅಗಲ್ದೊಡೆ ಬಾಳಲರಿದೆನಿಪ ಮಲುಹಣಿಯ ತನು
ವಿನ ಕದಂಬಾಮೋದಂ ತೀಡೆ ಮನೋಮೇಘಂ ತೊರೆಯೆ ನೋಟದ
ಮಿಂಚಡರೆ ಬಳಲ್ಮುಡಿಯೆಂಬ ನವಿಲಾಡೆ ಕೂಡೆ ಪೊಣ್ಮುವ ಸವಿದನಿ
ಮೊಳಗೆ ಎಚ್ಚರೆಂಬ ಹಂಸೆಯೋಡೆ ಮೋಹದ ಮಳೆ ಕರೆದು ಚಿತ್ತ
ಭೂಮಿ ತಣಿದು ಅನುರಾಗದ ಬೀಜಂ ಬಿತ್ತಿ ಮುನಿಸಂಕುರಿಸಿ ಪ್ರಣಯ
ಕಲಹಂ ಪಲ್ಲವಿಸಿ ತಿಳಿವಿನ ಪೊನೆ ಮುಗುಳೊತ್ತೆ ಆಲಿಂಗನಂ ಫಲಿತ

ಮಾದ ಸಮಾನುರಾಗದೊಳಗಲದಿರೆ ಮತ್ತೆ ಮತ್ತೆ ಬೇಡಿ ಕೂಡುವಲ್ಲಿಂ ನೋಟವರಿದಪ್ಪುವ ಸ್ಪೈರಣೆಯರಿದು ಸೋಂಕುವ ಆಸೆಯರಿದಾಲಿಂಗಿಸುವ ಬಯಕೆಯರಿದು ಬೆರಸುವ ಮನವರಿದನುಭವಿಸುವ ಇಚ್ಛೆಯರಿದು ಹೆಚ್ಚುವ ಅಗ್ಗಳಿಕೆಯರಿದು ಬೋಳೈಸುವ ಎಚ್ಚರಿಕೆಯ ಸಮರತಿಯೊಳಿರ್ದು ಹಿಗ್ಗಿ ಸುಖದ ಸೋಂಕು ಮಿಕ್ಕು ಮೀರಿ ನಲಿವು ತಲೆಗೆತ್ತಿ ನಖಮುಖದಿಂ ಸೋಂಕಿ ಸೆಳೆಯಲನುಗೈಯ್ವಲ್ಲಿಂ ಮುನ್ನಂ ರೋಮಾಂಚದ ಬಾಸುಳೆಳ್ವ ಸುಕುಮಾರಾಂಗಿಯೊಳೊಲ್ದು ನೆರೆವ ಸುಖಸಮಯದೊಳ್ಕರುಣವೆಲ್ಲಂ ನೋಟ ನೋಟವೆಲ್ಲಂ ನುಡಿ ನುಡಿಯೆಲ್ಲಂ ವಿರಹ ವಿರಹವೆಲ್ಲಂ ದೈನ್ಯ ದೈನ್ಯವೆಲ್ಲಂ ಸಾತ್ವಿಕಂ ಸಾತ್ವಿಕವೆಲ್ಲಂ ಮೆಯ್ ಮೆಯ್ಯೆಲ್ಲಂ ಕೂಟಂ ಕೂಟವೆಲ್ಲಂ ಮನಂ ಮನಮೆಲ್ಲಂ ಮೆಚ್ಚು ಮೆಚ್ಚೆಲ್ಲಂ ಸೋಲಂ ಸೋಲವೆಲ್ಲಂ ರಸಮಯವಾಗಿ,

ಸಂವತ್ಸರಂಗಳುಂ ದಿನಂಗಳಾಗಿ ದಿನಂಗಳುಂ ನಿಮಿಷಗಳಾಗಿ ಪದ್ಮಾವತಿ ಸಂಪನ್ನೆಯಾಗಿ ನಿಚ್ಚಂ ಸಾಸಿರ ಹೊನ್ನೊಂದು ನೂರುಂ ಬರಿಸಕ್ಕೆ ತಂದೆ ಮಡಗಿದ ಧನಂ ಹತ್ತು ಬರಿಸಕ್ಕೈವದಿರೆ ಧನಂ ತೀರೆ ಮನಂ ತೀರದಿರೆ ಮುಡಿದ ಹೂವಗಲ್ದೊಡಂ ಹಿಡಿದ ಪರಿಮಳವಗಲದಿರ್ಪಂತೆ ಮೋಹರಸಮಾರದೆ ಸಮಸುಖಸಾರಹೃದಯಸಂಜಾತಹರ್ಷರಾಗಿ ಮಲುಹಣನುಂ ಮಲುಹಣಿಯುಂ ಪರಮಾನುರಾಗದೊಳಗಲದಿರೆ ಮೆಲ್ಲಮೆಲ್ಲನೆ ಪಲವುಂ ದಿನಕ್ಕೆ ಬರ್ಪ ಪೊನ್ನಿನುರುವಣಿಯುಡುಗೆ ಉಚಿತ ವ್ಯಯಕ್ಕೆ ಆಪದ್ಧನವಿಲ್ಲದಿರೆ ಪದ್ಮಾವತಿ ಬೆಚ್ಚಿ ಬೆದರಿ ಎಚ್ಚರಂಗೊಂಡರ್ಥದ ಸವಿಗೆ ಮನಮುಂ ನಾಲಗೆಯುಂ ಲವಲವಿಸಿ ಮಿಕ್ಕು ಮೀರಿದ ರಕ್ಕಸಿಗುಂಟಣಿ ಚೂತಮನಪ್ಪಿದ ಮಲ್ಲಿಕಾಲತೆಯನಗಲ್ಚುವ ಬಿರುಗಾಳಿಯಂತೆ ಭೇರುಂಡವಕ್ಕಿಯ ನಡುವಂ ಸೀಳಲೊಯ್ವ ಲುಬ್ಧಕನಂತೆ ಮಗಳನಗಲ್ಚಲ್ ಬಗೆದು,

ಏಕಾಂತಮುಂಟೆಂದು ವಿಳಾಸಿನಿಯರಂ ಕಳುಪೆ ಬಂದ ಸಖಿಯರವರೀರ್ವರಿರವಂ ಕಂಡು ಕರೆಯಲಾರದೆ ಪೋಗಲುಂ ಮೀರಲುಂ ಅರಿಯದೆ ತಳುವಿತ್ತಂ ಕಂಡು ಪಿಡಿಮಿಡಿಗೊಳುತ್ತುಮಿರೆ ತಾನೆ ಬಂದು ರವಣಿಸಿ ನುಡಿದೆಲ್ಲರಂ ಜರಿದು ಝಂಕಿಸಿ ಪಳೇಳ್ಮಗಳೆ ನಿಮ್ಮ ಮಾವಂ ದ್ವೀಪಾಂತರದಿಂ ದಿವ್ಯ ವಸ್ತ್ರಾಭರಣಂಗಳಂ ಕೊಂಡು ಬಂದನವನ

ನೋಡಲ್ಕೆ ಏಳೇಳ್ಮಗಳೆ ಎಂಬ ನುಡಿ ಕಿವಿಯೊಳಂಬಂ ಹೊಸದಂತಾಗೆ
ಆಲಿಂಗನಮನಗಲಲಾರದೆ ಅಂತಃಕರಣದೊಳ್ ಹೊತ್ತಿದ ಕಾಮಗಿಚ್ಚಿನ
ತಿದಿಯೊತ್ತಿದಂತೆ ಕಿಡಿ ಸೂಸೆ ಸೂಯ್ಪು ಕೋಪಂ ಸೂಸಲರಿದು ಹರಣಂ
ಹಾರಿ ಹಮ್ಮುಯಿಸುತ್ತಿರಂತಕ್ಕೆ ಸಂತಯಿಸಿಕೊಳ್ಳಲಾರದೆ ಈ ರಕ್ಕಸಿಯ
ನುಡಿ ಯೆದೆಗಿಚ್ಚಂ ನಂದಿಸಿ ಬರ್ಪೆನಂಜದಿರೆಂಬಂತೆ ಮಲುಹಣನಂ
ದಯಾದೃಷ್ಟಿಯಿಂ ನೋಡಿ ಮೆಲ್ಲಮೆಲ್ಲನಚ್ಚಳಿಯಮಾಲಿಂಗನಮಂ ಬಿಚು
ತಿರ್ಪಲ್ಲಿ ಹಂಸೆಯೆಂಬಾಗಿಡಾಗಿ ಬೀಳ್ವಂತೆ ಮಂಚದಿಂ ಕೆಳಕ್ಕೆ ಬೀಳ್ವ
ಮಲುಹಣೆಯಂ ಸಖಿಯರ್ಕಯ್ಯಾಂತು ಪಿಡಿಯಲಂತಂತು ತರಹರಿಸಿ
ನೊಸಲ ಕಣ್ಣ ಹೊಗೆ ಸುತ್ತಿದ ಪೂಸರವಂತೆ ಕೆಳದಿಯರ ಕೈಯ್ಯೊ
ಳ್ಮೈಯ್ಯನೀಡಾಡೆ,

ಮೆಲ್ಲಮೆಲ್ಲನೆ ಬಂದು ತಾಯಂ ನೋಡಿ ಕೆಯ್ಯಾ ನೀಡಿ ಎಲೆ
ಪಾಪಿ ಎಲೆ ಸುಖಸ್ವೈರಿ ಕರೆದ ಕಾರಣವೇನೆಂದು ಬೆಸಗೊಳ್ವುದುಂ
ಎಲೆ ಮರುಳ್ಮಗಳೆ ಅರ್ಥಂ ತೀರ್ದುದು ಜವ್ವನಂ ಸೋರ್ದುದು ಇನ್ನೀ
ಮಲುಹಣನಂ ಬಿಡುಬಿಡೆಂದು ನುಡಿಯೆ ಸಿಡಿಲದನಿಗೇಳ್ದ ಹಂಸೆಯಂತೆ
ಸಡಸಡನೆ ನಡುಗಿ ಎಲೆ ತಾಯೆ ಕಮಲತಂಡುಲಮನಾರೋಗಿಪ
ಹಂಸೆಗೆ ಹರಳನಿಕ್ಕುವರೆ ಕೋರಕಮಂ ಸವಿವ ಕೋಕಿಲೆಗೆ ಕೊರಡ
ನಿಕ್ಕುವರೆ ಬೆಳ್ದಿಂಗಳನಾಸ್ವಾದಿಪ ಚಕೋರಿಗೆ ಬಿಸಿಲಂ ಮಾಳ್ಪರೆ ಪರಿ
ಮಳವನುಣ್ವ ತುಂಬಿಗೆ ಹೊಗೆಯನಿಕ್ಕುವರೆ ಪಳರಸವನೀಂಟುವರ
ಗಿಳಿಗೆ ಕಾದನೀರೆರೆವರೆ ಮಲುಹಣನೊಳಭೇದ ಸುಖದೊಳಿರ್ಪೆನ್ನೊಡ
ನಿಂತು ಮಾತಂ ನುಡಿವರೆ ಲೋಭ ಮುಂತಾಗಿ ಹುಟ್ಟಿದ ದೀನೆ ಮುಪ್ಪು
ಮುಂತಾಗಿ ಹುಟ್ಟಿದ ಸಿರಸೆ ಸುಖಮಂ ಕೊಯ್ವ ಮಾನಸಗರಗಸವೆ
ಅಯ್ಯೋ ಏಕೆನ್ನನರಿದರಿದು ಸುಟ್ಟಪೆ ಇದಿರಿದು ಬಿಸುಟಪ್ಪೆ ದಾಕ್ಷಿಣ್ಯ
ದಹನೆ ಪೋಗು ಪೋಗೆಂದು ಭೋಂಕನೆ ತಿರುಗಿ ಮಲುಹಣನೊಳ್
ನೇಹ ಸುಖ ಸುಪ್ತಿಯಿಂದಿರ್ಪ ಮಗಳ ಮೋಹಕ್ಕೆ ಪದ್ಮಾವತಿ ಬೆರ
ಗಾಗಿ ಕೈಯರ್ಥಮಂ ಸೆಳೆದು ಕೊಂಡಂತೆ ಮಮ್ಮಲಂ ಮರುಗಿ ಮಗಳ
ದಾಕ್ಷಿಣ್ಯಕ್ಕೆ ಮತ್ತಂ ಕೆಲವು ದಿನಮಿರಿಸಿ ಸೈರಿಸಲಾರದೆ ಮಲುಹಣೆಯ
ನಂದಂದಿಂಗೆ ಕರೆಕರೆದಗಲ್ಕೆಯನಭ್ಯಾಸಂಮಾಡಿ ಮಲುಹಣನಂ ಸೆಜ್ಜೆ
ಯೊಳ್ಮಾದಲಿಸಿ ಕುಳ್ಳಿರ್ದೆಡೆಯೊಳ್ಕುಸುರಿದರಿದು ನಿಂದಿರ್ದೆಡೆಯೊಳ್ನೀರಂ
ಚಲ್ಲಿ ಮನೆಯ ಮುಂದೆ ಸುಳಿವ ಹೊಸ ಹರೆಯದ ಸಂಪನ್ನರಪ್ಪ

ರಾಜಪುತ್ರರುಟ್ಟುಡುಗೆಯಂ ತೊಟ್ಟ ತೊಡಿಗೆಯಂ ಕಂಡು ಸ್ವೈರಿಸಲಾರದೆ ಮನಂ ಮರುಗಿ ಓಡಂ ಕಚ್ಚಿ ವಿಳಾಸಿನಿಯರಂ ಸಿಂಗಾರಮಂ ಒಡಿದು ಕಾಜ್ಜಗಳಮಂ ತೆಗೆದು ಬೇನೆ ಇಲ್ಲದೆ ನರಳ್ಪ ಸಾವಿಲ್ಲದೆ ಶೋಕಂಗೈಯ್ವ ಬರಿಸಾಲಕ್ಕೆ ಪುಸಿದಗಹಂ ಕೊಟ್ಟು ಮಲುಹಣನಂ ಮನೆಯಿಂ ಪೊರಮಡಿಸಿ ನಿಶ್ಚಲನಂ ಸ್ವೀಕರಿಸಿ ಸಸ್ಪನನಿದಿಗೋಳಲೆಂದು ಪದ್ಮಾವತಿಯು ಮಲುಹಣಿಯುಂ ಮಲುಹಣನ ವಿರಹ ಸಂತಪ್ತ ಚಿತ್ತೆಯುಂ ತಿಳುಹಿ ಬೋಧಿಸುತ್ತಮಿರೆಯಿರೆ.

## ದ್ವಿತೀಯ ಸ್ಥಲ ಸಂಪೂರ್ಣ

## ತೃತೀಯ ಸ್ಥಲ.

**ಕಂದ॥** ಪೊರಮಡಿಸೆ ಮಲುಹಣಂ ನೆರೆ।
ಮರುಗಿ ಮನಂಗುಂದಿ ಕಂದಿ ಮನ್ಮಥಬಾಣಂ॥
ಮರುಮೊನೆಗಂಡಂತದರೊಳ್।
ಗೆರಗಿ ಕರಂ ತನುವನುರುಪಿ ಪೊರಳುತ್ತಿರ್ದಂ॥

### ರಗಳೆ.

ಇಂತು ಮಲುಹಣನಂಗಜಾಗ್ನಿಯೊಳ್ಬೇವುತಂ
ಸಂತತಂ ಮಲುಹಣಿಯ ಮೋಹದೊಳ್ಪೊರಳುತಂ
ಪೊರಮಡಿಸೆ ಪೋಗಲಾರದೆ ಮನೆಯ ಮುಂದಿರ್ದಂ
ಮರುಗಿ ಮನವುಕ್ಕಿ ತಲೆಗರೆದು ತಾಪಿಸುತಿರ್ದಂ
ನಡೆದು ಗಳಗಳನೆ ಪೋಪಂ ಕಾರ್ಯವಿನಿತಿಲ್ಲ
ನುಡಿವನೊರ್ವರ್ ತನ್ನಂ ನುಡಿಸುವವರಿಲ್ಲ
ಸುಮ್ಮನಿರ್ಪಂ ಧ್ಯಾನವೆಳ್ಳಿನಿತು ತನಗಿಲ್ಲ
ನೆಮ್ಮಿ ಕುಳ್ಳಿರ್ಪನನುಸಂಧಾನವಿನಿತಿಲ್ಲ
ನಿಂದರಂ ಕಂಡು ಮಲುಹಣಿ ಎನುತೆ ಸೋಂಕುವಂ
ಬಂದರಂ ಕಂಡು ಮಲುಹಣಿ ಎನುತಪ್ಪುವಂ
ದಾರಿಯೊಳ್ಬೀದಿಯೊಳ್ಮಲುಹಣಿಯ ಕಳವಳಂ
ಕೇರಿಕೇರಿಗಳೊಳಗೆ ಮಲುಹಣಿಯ ಕಳವಳಂ
ನಿಂದಿರ್ದರ್ ಕುಳ್ಳಿರ್ದರ್ ನಡೆನಡೆದು ಬೆಚ್ಚುವಂ
ಮುಂದಿರ್ದರಂ ಕಂಡು ಬಂದಂತೆ ಹೆಚ್ಚುವಂ
ಭಾವರತಿಯೊಳ್ಕೂಡಿ ಕಣ್ಮುಚ್ಚಿ ಕರಗುವಂ
ಭಾವದಚ್ಚಳಿಯೆ ಕಣ್ದೆರೆದರಸಿ ತಿರುಗುವಂ
ತನುವೆತ್ತಿ ಪೊರವಳಲಬನದೊಳಗೆ ಪರಿದಲ್ಲಿ
ತನತನಗೆ ಶೀವಿರ್ದ ಪೂಗೊಳನ ತಡಿಯಲ್ಲಿ
ಕಮಳಮಂ ಮಲಹಣಿಯ ಮೊಗಮೆಂದು ಮುಟ್ಟುವಂ
ಕುಮುದಮಂ ಮಲುಹಣಿಯ ಕಣ್ಗಳೆಂದಕ್ಷಿಯೊಳಗೊತ್ತುವಂ
ಮಧುಕರಂಗಳನಳಕಮೆಂದು ತಲೆಯೊತ್ತುವಂ
ಅಧರಮೆಂದಾ ಬಿಂಬಫಳಮನಚ್ಚೊತ್ತುವಂ

ದಾವಾಗ್ನಿಯೆಂದಶೋಕೆಯನರಿದು ಹೆರೆ ಸಾರ್ದು
ಪೂವನಂಗಜಬಾಣವೆಂದು ಕಂಡೊಳಸಾರ್ದು
ಬಿಸಿಯು ಬೆಳಗೆಂದು ಬೆಳ್ದಿಂಗಳಿಗೆ ಹೇಡೈಸಿ
ಪಸಿಯು ಕಿಚ್ಚೆಂದು ಪೊಸ ಪಲ್ಲವಕೆ ತಲ್ಲಣಿಸಿ
ಯೋಡಿಬಂದೂರೊಳಗೆ ಹಳಹಳಿಸುತಂ ಪೊಕ್ಕು
ಬಾಡಿ ಬಸವಳಿದು · ಮಲುಹಣಿಯ ವಿರಹಂ ಮಿಕ್ಕು
ಗಳಗಳನೆ ನಾಲ್ಕೈದವಸ್ಥೆ ದೇಹದೊಳೇರೆ
ಯೊಳಗೊಳಗು ಸುಡಲೊಳಗು ಪೊರಗೆಲ್ಲ ಕಾಹೇರೆ
ವೈಸೋಂಕೆ ಮೆಲ್ಗಾಳಿ ಘರಿಘರಿಲನರಿದಪುದು
ಕೈ ಸೋಂಕೆ ಬೆಳ್ದಿಂಗಳಗ್ಗಳಂ ಕಾದಪುದು
ಹೊಕ್ಕ ಕೊಳನುಕ್ಕಿ ನೆರೆ ಬತ್ತಿ ಬರಿದಾದಪುದು
ಮಿಕ್ಕು ಮುಟ್ಟಿದ ಪಲ್ಲವಂಗಳುರಿ ಸೀದಪುದು
ಯೆಂಬ ವಿರಹದೊಳಿರುತಿರಲಾರದೆಯ್ತಂದು
ಇಂಬಿಲ್ಲದಾತುರಂ ತಲೆಗೇರೆ ಪರಿತಂದು

ಮಲುಹಣಿಯ ಮನೆಯ ಮುಂದಲ್ಲಲ್ಲಿ ನಿಂದಿರ್ದು
ಮಲುಹಣಂ ಮತಿಗೆಟ್ಟು ಕಳವಳಿಸುತುಂ ಸಾರ್ದು
ಉರವಣೆಯ ಕರಣಂಗಳೊಡಗೂಡಿ ತಾಪಿಸುತ್ತ
ತಿರುಗಿ ಮಲುಹಣಿ ಮಲುಹಣಿ ಎಂದು ಮೂರ್ಛಿಸುತ್ತ
ತನ್ನಿಂದ ತಾನೆ ಮತ್ತೆಚ್ಚತ್ತು ನೋಡುತ್ತ
ಉನ್ನತಾನಂಗ ಶಿಖಿಯಿಂದುರಿದು ಬೇವುತ್ತ
ನಡೆತಂದು ಮಲುಹಣಿಯ ಬಾಗಿಲೊಳ್ ಬಳಲುತುಂ
ಅಡಿಗಡಿಗೆ ಘನತಾಪವೆಡೆಗೊಂಡು ಕಳಲುತುಂ
ದೂರಿಸುತೆ ತಾಪಿಸುತೆ ತಾ ಭಿತ್ತಿಯಂ ನೆಮ್ಮಿ
ಹಾರುತುಂ ಕಣ್ಮುಚ್ಚಿ ಕೊರಗಿ ವಿರಹಂ ಪೊಣ್ಮಿ
ಮಲುಹಣಿಯನೀಕ್ಷಿಸಿದ ಕಣ್ಗೆ ತೊತ್ತಾಗುತುಂ
ಮಲುಹಣಿಯ ನುಡಿಗೇಳ್ವ ಕಿವಿಗೆ ಮಾರಾಗುತುಂ
ಕೆಳದಿಯರ್ ಪೊರಮಡಲು ಚರಣದೊಳ್ ಪೊರಳುತುಂ
ಅಳವಲ್ಲದುರವಣೆಯ ತಾಪದೊಳು ಕೆರಳುತುಂ
ಮನದೊಳಗೆ ಕಣ್ಣೊಳಗೆ ಮಲುಹಣಿಯ ಕಳವಳಂ

ತನುವಿನೊಳ್ ತವಕದೊಳ್ ಮಲುಹಣಿಯ ಕಳವಳಂ
ಬಂದೆಂಜಲಂ ಚೆಲ್ಲುವೊಂದು ಹೊಸ ಕುಳಿಯೊಳಗೆ
ನಿಂದು ಮಧ್ಯಮ ರಾತ್ರಿ ಪರ್ಯಂತವದರೊಳಗೆ
ಇರಲಲ್ಲಿ ಮಲುಹಣಿದೇವಿಯಾರೋಗಿಸಿದ
ಪರಿಯಾಣಮುಮನೊರ್ಬಳ್ ಹೊಸ ವಿಳಾಸಿನಿ ತೊಳೆದ
ಉದಕಮಂ ಚೆಲ್ಲಲಾತನ ಮೇಲೆ ಪಸರಿಸಲ್
ಪಡೆದು ಪುಳಕಪ್ರತತಿ ತನ್ನ ಮೆಯ್ಯೊಳ್ಮಿಗಲ್
ಹಾ ಮಲುಹಣಿ ಮಲುಹಣಿ ಎಂದು ಹಾರೈಸೆ
ಆ ಮಾತು ಮಲುಹಣಿಯ ಕಿವಿಗಳೊಳ್ಪೂರಯಿಸೆ

ಮಲುಹಣನ ದನಿಯೆಂದು ಗಳಗಳನೆ ನಡೆತಂದು
ಮಲುಹಣ ಇದೇಕಿಂತು ನಿಲ್ವರೇ ನೀನೆಂದು
ಕೆಟ್ಟೆ ನೀನೇಕಿಲ್ಲಿ ನಿಂದಿರ್ಪೆ ಪೋಗೆನ್ನುತೆ
ಮುಟ್ಟೆ ಕೈಗೊಡಹಿ ಕಡು ವಿರಹಕ್ಕೆ ಕಂಪಿಸುತೆ
ಹೋಗಲುರಿಯೊಳಗೆ ತುಪ್ಪವನೆರೆದ ತೆರನಾಗೆ
ಪೂಗಣೆಗಳಿಟ್ಟಣಿಸಿ ಮುಸುರಿ ಮನಮಂ ತಾಗೆ
ಮತ್ತೆ ವಿರಹಂ ನೆಗೆದು ಕರಣದೊಳ್ನೂರ್ಮಡಿಸೆ
ಹೊತ್ತಿ ಹೊಗೆಯಿಲ್ಲದೊಳಗುರಿ ಪರಿದು ನೂರ್ಮಡಿಸೆ
ನಿಂದಿರ್ದನಿರ್ದನಿರ್ದಂ ಮಹಾ ನಿಶಿಯೊಳಗೆ
ಸಂದಣಿಸಿ ಮುಂದೈಸಿ ಕವಿವ ಹೊಸ ಹಿಮದೊಳಗೆ
ಇರೆ ಕರೆದುದತಿ ಸೂತ್ನ ಶೀತಪಾತನ ಮೇಲೆ
ಪರಿಪರಿಯ ಹೊಸ ಹಿಮದ ಘಟ್ಟಿಯಾತನ ಮೇಲೆ
ಮುಚ್ಚೆ ಮುಸುಕಲು ನಡುವೆ ಮಲುಹಣಂ ನಿಂದಿರ್ದ
ನಚ್ಚರಿಯ ವಿರಹದಿಂ ಹಿಮದೊಳಗೆ ಸಂದಿರ್ದ
ಎಳೆಯ ಬೆಳ್ಮುಗಿಲೊಳಗೆ ಹೊಳೆವ ಪಾವಕನಂತೆ
ಹೊಳೆವಾಲಿಕಲ್ಲಮನೆಯೊಳಗಿರ್ಪ ರವಿಯಂತೆ
ದಿಟ್ಟಿಸಲ್ಕಣ್ಮುಚ್ಚೆ ಕೊಯ್ವ ಸೀತದ ನಡುವೆ
ಮುಟ್ಟಿದೊಡೆ ಕೈಕಡಿದು ಬೀಳ್ವ ತುಹಿನದ ನಡುವೆ
ನೆನೆದೊಡೆ ಮನಂ ಮುರುಂಟುವ ಸೀತಳದ ನಡುವೆ
ತನು ಕರಗಿ ಕೋಡಿಸುವ ಬಹಳ ಸೀತದ ನಡುವೆ

ಕೊಲುವ ಹಿಮನಾತಂಗೆ ಶಿಶಿರೋಪಚಾರವದು
ಒಲಿವ ಬೇಗೆಯು ಬೆಂಕಿಗೊಂಡಲೆವ ಶೀತವದು
ತಾನಾಗೆ ಹಿಮದ ಗೂಡಾರದೊಳಗಿರ್ಪಂತೆ
ನಾನಾ ಹಿಮೋಪಚಾರದ ಹಿಮಗೃಹದಂತೆ
ಬೆಳಗಪ್ಪಿನಿಂ ಶೀತಳಾಲಯದೊಳೊಪ್ಪಿರಲ್
ಬೆಳಗಾಗೆ ಮಲುಹಣಿಯು ಕಣ್ಗೆ ಪೊಸತಾಗಿರಲ್

ಕಂಡು ಮಲುಹಣಿಯಿದೇಂ ಹಿಮವೊಟ್ಟಿಲೇಕಿಲ್ಲಿ
ಕಂಡೆನಾನಿರುಳಿರ್ದ ಮಲುಹಣಂ ತಾನಿಲ್ಲಿ
ಅಕಟಕಟ ಮಲುಹಣಂ ಹಿಮದೊಳ್ಮರುಂಟಿದಂ
ಅಕಟಕಟ ಪಾಪಿ ಎನಗೊಲ್ದು ನೆರೆ ಮಗ್ಗಿದಂ
ಪಾಪಿಯಾದೆಂ ಪಾಪಿಯಾದೆನೆಂದೆನುತಲ್ಲಿ
ತಾಪಿಸುತ್ತಂ ಪರಿಚ್ಛೇದಿಸುತ್ತಂತಲ್ಲಿ
ಸತ್ತ ನೋಡ ಮರಣವಿದು ತಪ್ಪದೆನುತ ಬಂದು
ಸುತ್ತುಮುತ್ತಿರ್ದ ಸತಿಯರು ಸಂದಣಿಸಿ ನಿಂದು
ತೆಗೆ ಹಿಮವನೆಂದು ಮರವುಟ್ಟನಿಂ ತೆಗೆಯಿಸಲ್
ಪೊಗೆದು ಕೆಲಬಲಕಿಕ್ಕಿ ಸುತ್ತುಂ ನಿವಾರಿಸಲ್
ಕಪಟವಳಿದೊಳಗೊಪ್ಪುವನುರಾಗವಿರ್ಪಂತೆ
ಯುಪಚಾರವಳಿದು ಸತ್ಯಸ್ನೇಹವಿರ್ಪಂತೆ
ಇರ್ದನಾ ಮಲುಹಣಂ ವಿರಹಕ್ಕೆ ತಂಪಾಗಿ
ಇರ್ದನಾ ಮಲುಹಣಂ ತಾಪಕ್ಕೆ ತೆರಹಾಗಿ
ಇರೆ ಕಂಡು ಮಲುಹಣಿ ಮನಂ ಮರುಗಿ ಬೆರಗಾಗಿ
ಉರಿವರಿವ ವಿರಹದುರವಣೆಗೆ ಕಲ್ಮರನಾಗಿ
ಮಲುಹಣನಳ್ಕರಿಂ ಕರುಣದಿಂದಂ ನೋಡಿ
ಮಲುಹಣಿ ಮನೋದುಃಖದಿಂದೆ ನುಡಿದಳ್ಬಾಡಿ

ಎನ್ನ ಮೇಲಿಕ್ಕುವೀ ಚಿತ್ತದಾತುರತೆಯಂ
ಪನ್ನಗಾಭರಣನೊಳ್ಮಾಳ್ಪುದೆನ್ನೊಲ್ಮೆಯುಂ
ಎಂದ ಮಾತಂ ಕೇಳ್ದು ಬಳಿಕ ನೀನೆನಗಪ್ಪೆ
ಇಂದುಧರನಂ ಬೇಡು ನಿನ್ನತ್ತನಾಂ ಬಪ್ಪೆ
ಎನ್ನ ಹವಣೇ ಕೋಟಿ ಮಲುಹಣಿಯರಾಗರೇ

ಮನಸಿಜಾರಿಯನರಿದು ದುಃಖವಂ ನೀಗರೇ
ಬೇಡಿಕೊಳ್ಳೀಶ್ವರನೊಳೆನ್ನ ಮಲುಹಣ ಪೋಗು
ನೋಡಬಾರದು ವಿರಹದನುತಾಪವಂ ನೀಗು
**ಎನೆ ವಿರಹವಂ ತೆಗೆದು ಹರನ ಮೇಲಿಕ್ಕಿದಂ**
**ತನಿನೇಹವಂ ಶಿವನ ಮೆಲ್ಲಡಿಗೆ ಸಾರ್ಚಿದಂ**

ನಡೆತಂದನಾ ಹಿಮವನೋಸರಿಸಿ ಮಲುಹಣಂ
ಪೃಡನಲ್ಲಿಗನುತಾಪವೆಯ್ದುತಿರೆ ಮಲುಹಣಂ
ಬರಲಲ್ಲಿ ವಿಜಯೇಶ್ವರನ ರಂಗ ಮಂಟಪಕೆ
ಹರನ ಶಂಕರನ ಶಶಿಧರನ ಶಿವಮಂಟಪಕೆ
ಕತ್ತುರಿಯ ಸಾರವಣೆ ರಂಜಿಸುವ ಭೂಮಿಯಂ
ಮುತ್ತು ಮಾಣಿಕದಿನೊಪ್ಪುವ ರಂಗವೋಲೆಯಂ
ನಡುವೆ ಕೇಳಿಸುವ ತೂರ್ಯತ್ರಯದ ಲಹರಿಯಿಂ
ಪೊಡೆವಡುವ ಬಲವಪ್ಪ ಕುಣಿವ ಭಕ್ತಾಳಿಯಿಂ
ತನತನಗೆ ಭೋರೆಂಬ ದುಂದುಭಿ ಧ್ವನಿಗಳಿಂ
ತನತನಗೆ ಪೂರಯಿಪ ಶಂಖಸ್ವರಗಳಿಂ
ಅಲ್ಲಲ್ಲಿಯುಚ್ಚರಿಪ ವೇದನಾದಂಗಳಿಂ
ಅಲ್ಲಲ್ಲಿ ಕೇಳಿಸುವ ಶಿವಕೀರ್ತನಂಗಳಿಂ
ತರತರಂಗೊಂಡು ಬರ್ಪಗ್ಗಣಿಯ ಹಾದಿಯಿಂ
ನೆರೆನೆರೆದು ತರುತಿರ್ಪ ಪರಿಮಳದ ವೀಧಿಯಿಂ
ಪಂಚಧಾರಾಶರ್ಕರಾಭಾಜನಂಗಳಿಂ
ಪಂಚಾಮೃತಂ ತುಂಬಿಯೊಪ್ಪುವ ಕೊಡಂಗಳಿಂ
ಸಂದಣಿಪ ಸಂಭ್ರಮವನೆಂತಕ್ಕೆಯೋಸರಿಸಿ
ಇಂದುಧರನಲ್ಲಿಗಾತುರಚಿತ್ತನುರವಣಿಸಿ
ಸಂದಣಿಸಿ ಕುದಿವ ಕರಣಂಗಳಿಂ ನಡುಗುತುಂ
ಬಂದು ಕುಳ್ಳಿರ್ದು ಶಿವನಂ ಹೊಗಳ ತೊಡಗುತಂ

ದೇವ ಶಂಕರ ಭಕ್ತಜನ ಮನೋರಥ ರೂಪ
ದೇವ ಶಶಿಧರ ಶರಣಹೃದಯ ಸದಮಳ ದೀಪ
ಗೌರೀಕಚಪ್ರಚಯ ಪುಷ್ಪಗಂಧಕ್ಕೆಳಸಿ
ಭೋರೆನುತ್ತೆರಗಿ ಮಧುಕರವ್ರಜಮನನುಕರಿಸಿ

ಸೊರಿವ ಗರಳದ ಗರುವ ಕರುಣಿಪುದು ಕರುಣಿಪುದು
ಜಡೆಯು ಮಧುರಾಂಶುಮಂಡಿತ ಮಕುಟ ಕರುಣಿಪುದು
ಸುರಶಿರೋಮಾಲೆಯು ಮಹಾಮಹಿಮ ಕರುಣಿಪುದು
ಸರಸಿಜಾಸನ ಶಿರಃಕಂಜ ಕರ ಕರುಣಿಪುದು
ಕರುಣಿಪುದು ಕರುಣಾಳು ಶಂಭುಸಿಖಿ ಕರುಣಿಪುದು
ಗಿರಿಜಾಮನೋಹರನೆ ಕರುಣಿಪುದು ಕರುಣಿಪುದು
ಎಂದು ಕುದಿಕುದಿವ ಕರಣಂಗಳೊಳ್ ಬಣ್ಣಿಸಲ್
ಬಂದು ವಿರಹಸ್ತೋತ್ರನೀಶನೊಳ್ ಸಂದಿಸಲ್

ಶಂಕರಂ ಕೇಳ್ದು ಸೈರಿಸಲಾರದೇಳ್ತಂದು
ಭೋಂಕನೆ ಮಹಾಲಿಂಗದಂಗದಿಂದ್ಯೈತಂದು
ಸುರಿವ ಪೂಮಳೆಯೊಳಗೆ ಪೊಯ್ವ ದುಂದುಭಿಯೊಳಗೆ
ನೆರೆವ ಗಣಕುಲದೊಳಗೆ ಕರೆವ ಕಹಳೆಗಳೊಳಗೆ
ತಿರುಜಡೆ ಮಹಾಮಕುಟವಿಂದುಕಳೆ ರಂಜಿಸಲ್
ಕರೆಗೊರಲ್ ಪಂಚಮುಖದಶಭುಜಂ ರಂಜಿಸಲ್
ಮೆಚ್ಚಿದೇಂ ಬೇಡಿಕೊಳ್ಳೆಲವೊ ಮಲುಹಣ ಎನಲ್
ಚೆಚ್ಚರಂ ಮಲುಹಣಿಯು ಸೀವುದೆನೆಗೆಂದೆನಲ್
ಕೊಟ್ಟೆನೆಲೆ ಮಗನೆ ಕೊಟ್ಟೆಂ ಮತ್ತೆ ಬೇಡೆನಲ್
ಸಿಟ್ಟಿ ಪಿರಿದಾಯ್ತು ಮಲುಹಣ ಬೇಡು ಬೇಡೆನಲ್
ದೇವ ಮಲುಹಣಿಯೊಡನೆ ನೂರುಂ ಬರಿಸಮಿರ್ದು
ದೇವಲೋಕಕ್ಕೆ ನಿಮ್ಮಡಿಗಳಂ ನೆರೆ ಸಾರ್ದು
ತನು ಸಹಿತಲೀರ್ವರುಂ ಬರ್ಪಂತೆ ಕರುಣಿಪುದು
ಮನವಾರೆ ಸುಖದೊಳಿರ್ಪಂದಮಂ ಕರುಣಿಪುದು
ಎಂದೊಡಭವಂ ಕೊಟ್ಟೆನೆಂದು ಕಾರುಣ್ಯದಿಂ
ಮುಂದಿರ್ದ ಲಿಂಗದೊಳ್ಪೊಕ್ಕನಾನಂದದಿಂ
ಪುಗಲತ್ತಲಿತ್ತಲೀಶ್ವರಸುಪ್ರಸಾದದಿಂ
ಬಗೆವೆರ್ಚೆ ಮೆಯ್ವೆರ್ಚೆ ಬರುತಿರ್ದನೊಪ್ಪದಿಂ
ಮಲುಹಣಿಯುಮವಳ ತಾಯುಂ ಕೂಡಿ ವೈಯಿಕ್ಕಿ
ಮಲುಹಣಂ ಮುಂದೆ ಬಂದಾನಂದದಿಂದುಕ್ಕಿ
ರಂಗಮಂಟಪದೊಳಗೆ ಹರುಷದಿಂ ಮುಂದಿಟ್ಟು

ಲಿಂಗದ ಸಮುಕ್ಷದೊಳ್ಮಗಳನೊಪ್ಪಿಸಿ ಕೊಟ್ಟು
ಮಗಳುಮಂ ಮಲುಹಣನ ನಗರಿಯೊಳು ಮೆರಿಸುತುಂ
ಸೊಗಯಿಪ ಪ್ರವರಸೇನಂ ಬಂದು ಮೆರಿಸುತುಂ
ಬರೆ ನಿಜ ನಿವಾಸಕ್ಕೆ ಬಂದರಾನಂದದಿಂ
ಪರಮುನಿತ್ತಾಜ್ಞೆಕೆಯಗ್ಗೂಡಿ ಸಮುಚಿತ್ತದಿಂ

ಕಾಮಮುಂ ಕ್ರೋಧಮುಂ ಶಂಕರಂಗರ್ಪಿತಂ
ನೇಮಮುಂ ಪ್ರೇಮಮುಂ ಶಶಿಧರಗರ್ಪಿತಂ
ಕೂಟಮುಂ ತೃಪ್ತಿಯುಂ ತ್ರಿಣಯನಿಂಗರ್ಪಿತಂ
ನೋಟಮುಂ ಬೇಟಮುಂ ಪುರಹರಂಗರ್ಪಿತಂ
ಕಂಡುದುಂ ಸೋಂಕಿದುಂ ಕಾಮಾರಿಗರ್ಪಿತಂ
ಕೊಂಡುದುಂ ಸವಿದುದುಂ ವಿಷಧರಂಗರ್ಪಿತಂ
ಆಗಿ ನೂರುಂಬರಿಸಭವನಾಜ್ಞೆಯೊಳಿರ್ದು
ನಾಗಭೂಷಣನಿತ್ತ ಭೋಗನಿಕರದೊಳಿರ್ದು
ಭೂಲೋಕದಿರವು ಸಾಲ್ಗೆಂದಿರ್ಬ್ಬರುಂ ಬಂದು
ಬಾಲೇಂದು ಮೌಳಿಯುಲ್ಲಿಗೆ ಭರದೊಳೇಳ್ತಂದು
ದೇವ ಮುನ್ನಿತ್ತ ವರಮುಂ ಕರುಣಿಸುದು ತಂದೆ
ದೇವಯಿಲ್ಲಿರವೆಮಗೆ ಸಾಲ್ಗುಮಿನ್ನೆಲೆ ತಂದೆ
ಕಾರುಣ್ಯವಾರ್ಧಿ ವಿಜಯೇಶ್ವರನೆ ಕರುಣಿಸುದು
ಮಾರಾರಿ ದುರಿತಾರಿ ಕಾಲಾರಿ ಕರುಣಿಸುದು
ಭಕ್ತಾತ್ರಸಂತುಷ್ಟಮುಕ್ತನೇ ಕರುಣಿಸುದು
ಮುಕ್ತಿದಾಯಕನೇ ಗರಳಗ್ರೀವ ರಕ್ಷಿಸುದು
ಗಗನಚರಪುರದಹನನವನವಹ್ನಿ ಕರುಣಿಸುದು
ಸಗುಣನಿರ್ಗುಣತತ್ವನಿತ್ಯನಿಧಿಕರುಣಿಸುದು
ಸತ್ಯನೆ ಸದಾಶಿವನೆ ಶಾಶ್ವತನೆ ಕರುಣಿಸುದು
ನಿತ್ಯನೆ ನಿರಾಶ್ರಯನೆ ನಿರ್ಭಯನೆ ಕರುಣಿಸುದು
ನಿರ್ಮಳನೆ ನಿರುಪಮನೆ ನಿರವಯನೆ ಕರುಣಿಸುದು
ನಿರ್ಮಳನೆ ನಿಷ್ಕಳನೆ ಕರುಣಿಸುದು ಕರುಣಿಸುದು
ಗಜಚರ್ಮದಭವ ಪುಲಿದೊವಲದರಸ ಕರುಣಿಸುದು
ಭುಜಗಾಭರಣ ನಿರಾವರಣನಿಧಿ ಕರುಣಿಸುದು

ಉಗ್ರದೇವೋಗ್ರಗರಳಗ್ರೀವನೆ ಕರುಣಿಪುದು
ನಿಗ್ರಹಾನುಗ್ರಹ ಸಮುಗ್ರಬಲ ಕರುಣಿಪುದು

ಎಂದು ಪೊಗಳುತ್ತ ಪೊಣ್ಮುತ್ತ ಪತ್ತಿರೆ ಬಂದು
ಇಂದುಧರನೊಳ್ಪೊಕ್ಕರಾನಂದದಿಂದಂದು
ಮೇಲೆ ನೆಗೆದುದು ವಿಮಾನಂ ಗಗನವೆಡೆಗೊಳಲ್
ಭೂಲೋಕದೊಳ್ ಪುಷ್ಪವೃಷ್ಟಿ ಸುಖಮುಂ ಕೊಡಲ್
ನೆರೆದ ಕಾಶ್ಮೀರ ದೇಶಂ ನೋಡಿ ಬೆರಗಾಗೆ
ಹರಭಕ್ತರೆಲ್ಲರ್ಗೆ ಸಂತಸಂ ಪಿರಿದಾಗೆ
ಮಹಣಿಯು ಮಹಣನು ಜಯಜಯಧ್ವನಿಯೊಳಗೆ
ಲಲನೆಯರ ಅನುಮಿಷರ ಚಮರ ಸೀಗುರಿಯೊಳಗೆ
ಬಂದು ಕೈಲಾಸಮಂ ಪೊಕ್ಕರಾನಂದದಿಂ
ಇಂದುಧರನಂ ಕಂಡು ವ್ಯೆಯ್ಯಿಕ್ಕಿ ಹರುಷದಿಂ
ಬಂದಿರ್ದ ಸುಖಮಿಥುನಮಂ ಶಿವಂ ನೆರೆ ನೋಡಿ
ಇಂದುಮುಖಿ ಪಾರ್ವತಿಗೆ ತೋರಿ ಹರುಷಂಗೂಡಿ
ಕಡು ನೇಹದಿಂ ಮಹಣಗೊಲಿದರಿಂತುಂಟೆ
ಬಿಡದುರಿವ ವಿರಹಕ್ಕೆ ಮೆಯ್ಯಾಂತರಿಂತುಂಟೆ
ಹಿಮದೊಳಗೆ ನಿಂದಿರ್ದು ಸೈರಿಸಿದರಿಂತುಂಟೆ
ಹಿಮಗೃಹದೊಳಗಿರ್ಪಂತೆ ನಿಂದಿರ್ದರಿಂತುಂಟೆ
ಎನ್ನಲ್ಲಿ ಬೇಡೆನಲ್ ಬೇಡಿ ಬಂದವರುಂಟೆ
ತನ್ನ ವಿರಹವನೆನ್ನ ಮೇಲಿಟ್ಟರಿಂತುಂಟೆ
ಎಂದು ಕೊಂಡಾಡುತುಂ ಗಣಕುಲಕೆ ತೋರುತುಂ
ಮುಂದುವರಿದಾನಂದ ರಸದೊಳೋಲಾಡುತುಂ
ಮಹಣಂಗಲ್ಲಿ ನಲವಿಂದ ಗಣಪದವಿತ್ತು
ಮಹಣಿಗೆ ರುದ್ರಕನ್ನಿಕೆಯರಿಪ್ಪಿರವಿತ್ತು

ಸಕಲ ಗುಣ ನಿಖಿಳಪತಿಯಕಳಂಕನೊಪ್ಪಿದಂ
ಸಕಲಸುರನಿಕರಮಣಿಮಕುಟಪದನೊಪ್ಪಿದಂ
ಅಸಿತಸಮಭಸಿತಮಯನಿಶಿತತನು ವೊಪ್ಪಿದಂ
ಕುಸುಮಶರ ಪುರದಹನ ವನವಹ್ನಿಯೊಪ್ಪಿದಂ

ಸುರರ ಖೇಚರರ ಕಿನ್ನರರ ಪತಿಯೊಪ್ಪಿದಂ
ಗರುಡ ಗಂಧರ್ವ ಮುನಿವರರ ಪತಿಯೊಪ್ಪಿದಂ
ಸುರುಚಿರ ಸುಧಾಕರ ಕಳಾಜೂಟನೊಪ್ಪಿದಂ
ಆದರೆ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

**ಕಂದ॥** ಕರುಣಂ ಮಿಗೆ ಮಲುಹಣನಂ
ವಿರಹಾನಲದಗ್ಧ ಚಿತ್ತನಂ ಮಲುಹಣಿಯೊಳ್ ।
ನೆರಪಿ ನೆರೆ ಮೆರೆದ ಪಂಪಾ ।
ಪುರಪತಿ ಎಮಗೀಗೆ ಭಕ್ತಿ ಸುಖ ಸಂಪದಮಂ ॥

# ಭೃಂಗೀಶ್ವರನ ರಗಳೆ.

ಕಂದ॥ ಶೃಂಗಾರಾದಿ ಸಮಸ್ತ ರ।
ಸಂಗಳನಭಿನಯಿಸಿ ತೋರಿ ಮಿಗೆ ಮೆಚ್ಚುತ್ತಂ॥
ಲಿಂಗಿಸುತೆ ತನ್ನನಿತ್ತಂ।
ಭೃಂಗೀಶಂಗೆಮ್ಮ ಹಂಪೆಯ ವಿರುಪಾಕ್ಷಂ॥

## ರಗಳೆ.

ಶ್ರೀಕೈಲಾಸ ಸಭಾಮಂದಿರದೊಳ್
ಲೋಕೇಶ್ವರನಿರೆ ಭದ್ರಾಸನದೊಳ್
ಕೆಲಬಲದೊಳ್ ಶೈವಗಣಂ ಬಂದಿರೆ
ಜಲಜಭವಂ ಜಲಶಯನಂ ಬಂದಿರೆ
ಸುರರುಂ ಕಿನ್ನರರುಂ ಸಂಗಡದೊಳ್
ಗರುಡಗಂಧರ್ವರ್ವಗಡದೊಳ್
ಮುನಿಗಳ್ ಸಿದ್ಧರ್ ವಿದ್ಯಾಧರರುಂ
ಮನುಗಳ್ ಕಿಂಪುರುಷರ್ಖೇಚರರುಂ

ವೇದಂ ತರ್ಕಂ ತಾವೊಂದೆಸೆಯೊಳ್
ನಾದಂ ರಾಗಂ ಬೇರೊಂದೆಸೆಯೊಳ್
ರವಿ ಶಶಿಕೋಟಿಗಳಂತೊಂದೆಸೆಯೊಳ್
ಭುವನಾಧಿಕ್ಯಪತಿಗಳೊಂದೆಸೆಯೊಳ್
ಮುಕುಟಂಗಳ ಪಂಕ್ತಿಗಳೊಂದೆಸೆಯೊಳ್
ಸಕಲಾನರ್ಘ್ಯಮಣಿಗಳೊಂದೆಸೆಯೊಳ್
ತರದಿಂ ಸುರನಾರಿಯರೊಂದೆಸೆಯೊಳ್
ನೆರೆದಿರೆ ಕಿನ್ನರಿಯರದೊಂದೆಸೆಯೊಳ್
ಸುರಪನನಲನಂತಕ ನೈರುತಿಗಳ್
ವರುಣನನಿಲ ವಿತ್ತಪ ದಿಕ್ಪತಿಗಳ್
ಬಂದಿರೆ ಚಂದ್ರಾಭರಣನ ಸಭೆಯೊಳ್
ಹೇಂದದ ಕಾಂತಿ ನೆಗೆದವೇಣ್ದೆಸೆಯೊಳ್

ಮೊಳೆತವು ಸುರಸತಿಯರ ತನುವಿಂದಂ
ಬೆಳೆದವು ರನ್ನದ ತೊಡಿಗೆಗಳಿಂದಂ
ದಳವೇರಿದವು ಸಿತಾಂಬರದಿಂದಂ
ತಳಿತವವರ್ಗಳ ಮುಖರಸದಿಂದಂ
ಕವಲ್ವರಿದವು ಕಂಗಳ ಕಡೆಯಿಂದಂ
ತವೆ ಕುಸುಮಿತವಾದವು ನಗೆಯಿಂದಂ
ಇಂತೆಸವಾ ನವರತ್ನಪ್ರಭೆಯೊಳ್
ಸಂತತವೊಪ್ಪುವ ಶರ್ವನ ಸಭೆಯೊಳ್
ಗಡಣದ ಕಿನ್ನರಿಯುರ್ತಾರೈಸಲ್
ಮೃಡನ ಮನಂ ಸುಖದಿಂ ಹಾರೈಸಲ್
ರಾಗದ ರಸದೊಳ್ ಸಭೆಯೀಸಾಡಲ್
ಲಾಗಿನ ಲಹರಿಯೊಳಗೆ ಮುಳುಗಾಡಲ್

ವಹಣಿಯ ತೆರೆಯೊಳ್ ತೇಂಕಾಡುತ್ತಿರೆ
ಬಹು ಸುಗತಿಗಳೊಳಗೋಲಾಡುತ್ತಿರೆ
ತಿರುಪಿನ ಸುಳಿಗಳೊಳಗೆ ಸುಳಿವುತ್ತಿರೆ
ತರದಿಂ ವಹಣಿಗಳೊಳೆ ಮಣಿವುತ್ತಿರೆ
ಕಂಪನದೋಳ್ಪೊಂಪುಳಿವೋಗುತ್ತಿರೆ
ಇಂಪಿನ ಸೋಂಪಿನೊಳಗೆ ಕರಗುತ್ತಿರೆ
ಕಿನ್ನರಿಯರ್ ಶಿವನಂ ಕೇಳಿಸುತಿರೆ
ಪನ್ನಗಭೂಷಂ ತಲೆದೂಗುತ್ತಿರೆ
ಇರಲೊಂದಣಕದ ಜವನಿಕೆ ಮೂಡಲ್
ಸುರಸಭೆ ಕೌತುಕದಿಂದಂ ನೋಡಲ್
ಭೃಂಗೀಶಂ ತಾನಾಗದೆ ಮಾಣಂ
ಹಿಂಗಿಸು ಸಭೆಯುಂ ಬಂದಂ ಜಾಣಂ
ತೆರಹಂಗುಡು ಚಕ್ರಿಗೆ ಕಿನ್ನರಪತಿ
ಹೆರೆಸಾರಿಂದ್ರ ತೊಲಗು ವಾಣೀಪತಿ
ಹೋ ಹೋ ಕಳಕಳವೇಕೆಂದೆನುತಂ
ಆಹಾ ಹೊಸ ಪರಿ ಚಿತ್ರೈಸೆನುತಂ
ನಂದೀಶಂ ನುಡಿವುತೆ ಹೆರಸಾರಲ್
ಚಂದದ ರಸವಾದ್ಯಂಗಳ್ ಸೇರಲ್

ಸಂಗೀತರಸಂ ರಂಗಂಬೊಕ್ಕುದು
ಸಂಗಡಿಸಿದ ಕಡು ಸೊಗಸಂ ಮಿಕ್ಕುದು
ಆಡದ ಮುನ್ನಡ್ಡೈಸಲ್ತೊಡಗಿತು
ನೋಡದ ಮುನ್ನವೆ ಸೊಗಯಿಸತೊಡಗಿತು
ನೋಡುವವರ ಮನಮುಂ ಜವನಿಕೆಯೊಳ್
ನಾಡೆ ಜಗಳವಾಡುತ್ತಿರೆ ಸಭೆಯೊಳ್

ದಿಧಿಕಾರವನಾಗುಳಲ್ಮೃದ್ದಳೆಗಳ್
ಸುಧೆಯುಂ ಸೂಸುತ್ತಿರಲಾವುಜಗಳ್
ಸುಗತಿಯನುಗುಳುತ್ತಿರೆ ಕಹಳೆಗಳುಂ
ಸೊಗಸಂ ಸೋಂಪಿಸುತಿರೆ ಕರಡೆಗಳುಂ
ಕೈಸಾಳಂ ಸನ್ನೆಯೊಳೊತ್ತುತ್ತಿರೆ
ದೇಸಾಳಂ ನುಡಿಯೊಳೆ ಬೆಳೆವುತ್ತಿರೆ
ತಾಳಂ ನರ್ತನಮುಂ ಕರೆವುತ್ತಿರೆ
ಮೇಳವಣೆಗೆ ಶಬ್ದಂ ಕೂಡುತ್ತಿರೆ
ಬಿಂಕದ ಕಾಳಾಸಂ ತುಳ್ಕಾಡಲ್
ಭೊಂಕನೆ ಮುಂದಣ ಜವನಿಕೆಯೋಡಲ್

ಹೊಗೆ ತಗ್ಗಿದ ಹುತಹವನಂತಿರ್ದಂ
ಮುಗಿಲೋಸರಿಸಿದ ರವಿಯಂತಿರ್ದಂ
ಛಾಯೆಯುಡಂಗಿದ ಜ್ಯೋತಿಯೊಲಿರ್ದಂ
ಮಾಯೆಯುಡುಗಿದ ಹರನಂತಿರ್ದಂ
ಇರಲೊಪ್ಪಿತು ಭೃಂಗಿಯ ಶೃಂಗಾರಂ
ಶಿರಮಧ್ಯದ ಲಿಂಗದ ವಿಸ್ತಾರಂ
ಭಾಳಂ ತೀವಿದ ಭಸಿತದ ತಿಳಕಂ
ತಾಳಕ್ಕೊಲೆದಾಡುವ ಕೈಚಳಕಂ
ಫಣಿಕುಂಡಲ ಮುತ್ತಿನ ಹಾರಂಗಳ್
ಮಣಿಖಚಿತದ ರತ್ನನ ಮುದ್ರಿಕೆಗಳ್
ಕೆಯ್ಯೂರಂ ಹೊಸ ವಜ್ರದ ಕಂಕಣ
ಒಯ್ಯಾರಂ ಮಿಗೆ ಗೆಜ್ಜೆಯ ಚಲ್ಲಣ
ವೆಸೆಯಲ್ ಸರ್ವಾಂಗದ ಹೊಸ ಭಸಿತಂ

ಮಸಗಲ್ ಕಾಲ್ತೊಡರು ಝಣ ಝಣಿತಂ
ಕೈಯ್ಯೊಳಗೊಪ್ಪಲ್ ನರ್ತನ ದಂಡಂ
ಮೈಯ್ಯೊಳ್ ಹೊಳೆಯಲ್ ಗತಿಗಳ ತಂಡಂ
ಮೊಳೆಯಲ್ ಸರ್ವಾಂಗದೊಳೆ ಸುಗತಿಗಳ್
ಬೆಳೆಯಲ್ ತ್ರಿಭಂಗಿಗೊಂಡಾಕೃತಿಗಳ್
ಮುಂದುವರಿಯೆ ಮೆಚ್ಚುಗಳೋಲಗದೊಳ್
ಸಂದಣಿಸಲ್ಕಾಹಂಗಳ್ಮುಖದೊಳ್
ಕಡೆಗಂಗಳ ಕೊನೆಯೊಳ್ಮೇಳೈಸಲ್
ನಿಡುಪುರ್ವಿನ ತುದಿಯೊಳ್ಮೇಳೈಸಲ್
ಕರತಳದಿಂ ಬಹು ಗತಿಗಳ ಸೂಸುತೆ
ಚರಣತಳದಿ ಹೊಸ ತಾಳಂಗುಟ್ಟುತೆ
ತಡವಿ ತಡವಿಯಾಡುತೆ ಹಿಮೆಟ್ಟುತೆ
ಕಡು ಸೊಗಸಂ ಕೈಲಾಸದಿ ತೋರುತೆ
ನಡೆದು ನಡೆದು ಲಾಗಿನಲೋಲಾಡುತೆ
ತಡೆದು ತಡೆದು ತೂಗುತೆ ಲೋಲಾಡುತೆ
ಪಿರಿದುಂ ನೆಗೆದಾಕಾಶದಿ ನಿಲುತಂ
ತರಹರಿಸುತೆ ಪಂಜರದೊಳ್ತಿರುತಂ
ಥಾಳದೊಳುಂ ಮುತ್ತಂ ಬಳುಕುತ್ತಂ
ತಾಳವನವಯುವದೊಳ್ ಪಿಡಿವುತ್ತಂ

ಆಡಿತೆ ಗತಿ ನಿಂದುದೆ ಕೈಲಾಸಂ
ನೋಡಿತೆ ಸೊಗಸಿರ್ದುದುವೆ ವಿಳಾಸಂ
ತಾನಾಗಿರೆ ರಸಮಯನಾಗಾಡುತೆ
ನಾನಾ ವಿಧ ಬಹು ಗತಿಗಳ್ ತೋರುತೆ
ಭಾಪಾಮಜೆ ಮದ್ದಳೆರೇ ಯೆನುತಂ
ಭಾಪುರೆ ಕಹಳೆ ಸುದೇಶಿಯೆನುತ್ತಂ
ದೇವುರೆ ಹೊಸತುಗ್ಗಡಣೆಯೆನುತ್ತಂ
ರಾವುರೆ ತಾಳದ ಗತಿಯೆಂಡೆನುತಂ
ಅವಧಾರುರೆ ಮೇಳವಣಿಯೆಂದೆನುತಂ
ಅವಧಾರಭವನೆ ಕರುಣಿಯೆಂದೆನುತಂ

ನೆಗೆದು ತಿರುಗಿ ಕೆಯ್ಯಾರಿ ನಿಲುತ್ತುಂ
ಬಗೆಯುದೆ ತಲೆಯಿಂ ನಡೆದಾಡುತ್ತುಂ
ಬರೆಯಿಂದಂ ಹರಿದಾಡಿ ನಿಲುತ್ತುಂ
ಬೆರಲೂರಿಯೆ ತಿರ್ರನೆ ತಿರುಗುತ್ತುಂ
ಕೆಯ್ಯೊಳ್ಕಾಲೊಗೆದಂತಾಡುತ್ತುಂ
ಮೆಯ್ಯೆಲ್ಲಂ ಮುಖನಾದಂತಿರುತಂ
ಕೆಲದೊಳ್ ಬಲದೊಳ್ ಸುತ್ತೇಣ್ದೆಸೆಯೊಳ್
ನೆಲನೊಳ್ಮುಗಿಲೊಳಗಂಬರಪೆಡೆಯೊಳ್
ಹೊಸ ಕರಣಂಗಳನೀಡಾಡುತ್ತಿರೆ
ಶಶಿಧರನೊಲವಿಂ ತಲೆದೂಗುತ್ತಿರೆ
ಹೆಸರಿಡಬಾರದ ಗತಿಗಳನಾಡುತೆ
ಹೊಸ ಹೊಸ ಪರಿಗಳ ರೀತಿಯನಾಡುತೆ
ಮನದೊಳೆ ದೇಹವನಡಗಿಸಿಯಾಡುತೆ
ಮನವೇ ತನುವಾದಂತಿರಲಾಡುತೆ
ಗತಿಗೆ ಮನಂ ಹೊಸ ತನುವಾದಂತಿರೆ
ಗತಿಗೆ ತನುವಿನವಯವವಾದಂತಿರೆ
ಸಮ ವಿಷಮಂಗಳ ಪರಿಗಳನಾಡುತೆ
ಕ್ರಮದಿಂ ನವರಸಗತಿಗಳನಾಡುತೆ
ಧಾರುಣಿಯಂದದೆ ತಿರದಿಂದಾಡುತೆ
ವಾರಿಯ ವೋಲ್ ನಿರ್ಮಳನಾಗಾಡುತೆ
ಅನಲನ ವೋಲುಜ್ವಲನಾಗಾಡುತೆ
ಅನಿಲನ ವೋಲ್ ಸುತ್ತುಂ ಸುಳಿದಾಡುತೆ
ಗಗನದ ವೋಲ್ತನ್ಮಯನಾಗಾಡುತೆ
ಮೃಗಧರನಂತಿರೆ ಹೊಸ ಕಳೆಯೇರುತೆ
ದಿನಕರನಂತಿರೆ ದೆಸೆಯಂ ಬೆಳಗುತೆ
ಎಸಿಸುಂ ಜೀವನ ವೊಲ್ ಚೇತರಿಸುತೆ
ಎಳವಿಸಿಲಂತಿರೆ ಬಣ್ಣ ದೋರುತೆ
ಬೆಳ್ದಿಂಗಳ ವೋಲ್ತಂಪಂ ಬೀರುತೆ
ಕೋಗಿಲೆಯಂತಿರೆ ಸರಗೈದಾಡುತೆ
ರಾಗದಿ ಗಿಳಿಯಂತಿರೆ ನುಡಿದಾಡುತೆ

ಅಳಿಯಂತಿರೆ ಝೋಂಕಾರದೊಳಾಡುತೆ
ಕಳಹಂಸೆಯು ವೊಲ್ಕೆಲ್ಲನೆ ನಡೆಯುತೆ
ಎಳಲತೆಯಂದದಿ ತೂಗಾಡುತ್ತಂ
ಎಳೆಮಿಂಚಿನ ವೊಲ್ ಹೊಳೆದಾಡುತ್ತಂ
ಮುಗಿಲಂತಿರೆ ಮೊಳಗುತೆ ಬಂದಾಡುತೆ
ಮಿಗೆ ಚಾದಗೆಯಂತಿರೆ ನಲಿದಾಡುತೆ
ನವಿಲಂತಿರೆ ಸವಿದನಿಗೊಟ್ಟಾಡುತೆ
ನವ ಪ್ರೇರಣೆಯಿಂ ಶಬ್ದಂದೋರುತೆ
ನಲವಿಂ ಕಾಲೊಳ್ಕಟ್ಟಿದ ಗೆಜ್ಜೆಗ
ಳುಲಿಯುಲ್ಲತಿಗಳನುಗುಳುವ ಹೆಜ್ಜೆಗ
ಳಳವಡೆ ಪದಗತಿಯಂ ಬಾರಿಸುತಂ
ಸೆಳೆವುತೆ ಹಿಮ್ಮೆಟ್ಟುತೆ ನಿಂದಿರುತಂ
ಪದತಳದೊಳೆ ತಟಗಿರ್ರೆಂದೆನುತಂ
ಮೃದುಗತಿಯೊಳ್ ಘುಲಘುಲಕೆಂದೆನುತಂ
ಚರಣತಳದೊಳುಗ್ಘಡಿಸುವ ತೆರದಿಂ
ನೆರೆದ ಸುಗತಿ ಕಾಲ್ಗೆರಗಿದ ತೆರದಿಂ
ಗತಿ ಪುಳಕಿತವಾಗಿರೆ ಹೆಜ್ಜೆಗಳಿಂ
ದತಿ ಚಲ್ವಿನ ಶಬ್ದದ ಹೆಜ್ಜೆಗಳಿಂ
ಬಾರಿಸುತಂ ಕಿವಿಗಿನಿದಂ ತೋರುತೆ
ಹಾರೈಸಲ್ ಬಹು ರೂಪಂದೋರುತೆ

ದಕ್ಷನ ಮುಖಮಂ ಕೆಡಿಸಿದ ಪರಿಯಂ
ತ್ರ್ಯಕ್ಷಂ ತ್ರಿಪುರವನುರುಪಿದ ಪರಿಯಂ
ಕಾಮುನನಭವಂ ನೋಡಿದ ಪಥಿಯಂ
ಪ್ರೇಮದಿ ರತಿ ಮಿಗೆ ಶೋಕಿಪ ಪರಿಯಂ
ಗಿರಿಜೆ ತಪಸ್ಸಿನೊಳಗಿರ್ದ ಪರಿಗಳಂ
ಕರುಣದೊಳೀಶಂ ಬಂದ ಪರಿಗಳಂ
ಪ್ರೇತಪತಿಯನಂದುರುಪಿದ ಪರಿಯಂ
ಶ್ವೇತಂಗೊದವಿದ ಕರುಣದ ಪರಿಯಂ
ಉಪಮನ್ಯು ತಪಂಬಟ್ಟ ಪರಿಗಳಂ

ಕಪರ್ದಿ ಪಾಲ್ಗಡಲಿತ್ತ ಪರಿಗಳಂ
ಪುಲಿಯ ತೊವಲನುಗಿದುಟ್ಟ ಪರಿಗಳಂ
ಕಲಿ ಗಜಚರ್ಮವ ತೊಟ್ಟ ಪರಿಗಳಂ
ತಡೆಯದೆ ಕಡಲಂ ಕಡೆದ ಪರಿಗಳಂ
ಕಡೆಯಲ್ ಹೊಸ ಬಿಸುವುಗುಳ್ದ ಪರಿಗಳಂ
ಸುರಸಂತತಿ ಬಿಗುತೋ‍ರ್ಿದ ಪರಿಯಂ
ಕೊರಳೊಳ್ಗರಳವ ಧರಿಸಿದ ಪರಿಯಂ
ಭಾವರಸದ ಲಹರಿಯನಾಡುತ್ತಿರೆ
ದೇವಂ ಮನದೊಳ್ಮಿಗೆ ಹಿಗ್ಗುತ್ತಿರೆ

ನಂಬಿಗೆ ಕುಂಟಿಣಿಯಾದ ಪರಿಗಳಂ
ನಿಂಬಿಗೆ ಸೂರೆಯನಿತ್ತ ಪರಿಗಳಂ
ಭೋಗಣ್ಣನೊಡನೆ ಪೋದ ಪರಿಗಳಂ
ರಾಗದಿ ಪುರದೊಳ್ನಿಂದ ಪರಿಗಳಂ
ಕಣ್ಣಪ್ಪಂ ಕಣ್ಣಿತ್ತ ಪರಿಗಳಂ
ಬಣ್ಣಿಸೆ ಶರ್ವಂ ಮೆರೆದ ಪರಿಗಳಂ
ಕಲ್ಲಂ ಕೊಂಡವನಿಟ್ಟ ಪರಿಗಳಂ
ನಿಲ್ಲದೆ ವರವಂ ಕೊಟ್ಟ ಪರಿಗಳಂ
ಬೇಡಂ ಬೇಂಟೆಯನಾಡಿದ ಪರಿಯಂ
ರೂಢೀಶಂ ದಿಟ ಮಾಡಿದ ಪರಿಯಂ
ಓಹಿಲನಂ ಕೊಂಡೊಯ್ದಾ ಪರಿಯಂ
ನೇಹದೊಳುದ್ಭಟನೈದಿದ ಪರಿಯಂ
ಅಲ್ಲಯ್ಯನ ಕೈಯೊಕ್ಕ ಪರಿಗಳಂ
ಬಲ್ಲಾಳನ ಮನವರಿದ ಪರಿಗಳಂ
ಏಕಾಂತದ ರಾಮಯ್ಯನ ಪರಿಯಂ
ಲೋಕಾಂತವದಂ ಮಾಡಿದ ಪರಿಯಂ
ಬಸವಣ್ಣಂ ವಿಷವುಂಡ ಪರಿಗಳಂ
ವಿಷವುಂ ಪ್ರಸಾದವಾದ ಪರಿಗಳಂ
ಕನ್ನೆಯುಳುತೆ ಹಾಲೆರೆದ ಪರಿಗಳಂ
ಬಿನ್ನಣದಿಂ ತಾನುಂಡ ಪರಿಗಳಂ

ಚೆನ್ನನ ಮನೆಯೊಳು ಸಲಿಸಿದ ಪರಿಯಂ
ಮನ್ನಿಸಿ ಚೋಳಂಗೊಲಿದಿಹ ಪರಿಯಂ
ಚೀಲಾಳನನರಿದಿತ್ತ ಪರಿಗಳಂ
ಸೋಲದೆ ಮಗನಂ ಕರೆದ ಪರಿಗಳಂ
ಕಕ್ಕನ ಕಂಕರಿಗಾಡಿದ ಪರಿಯಂ
ಚಿಕ್ಕನನಭವಂ ಕಾಡಿದ ಪರಿಯಂ
ದಾಸನನಭವಂ ಕಾಡಿದ ಪರಿಯಂ
ಕೇಶವರಾಜಂಗಂಜಿದ ಪರಿಯಂ
ಗುಂಡನ ಮುಂದಾಡಿದ ಪರಿಯ ಗಳಂ
ಚಂಡೇಶ್ವರನಂ ಮೆರೆದ ಪರಿಗಳಂ
ಹಂಪೆಯೊಳಗೆ ನೆಲಸಿದ ಪರಿಯುಗಳಂ
ಹಂಪೆಯು ಹರಿಹರಗೊಲಿದ ಪರಿಗಳಂ †
ಇವು ಮೊದಲಾಗಿರೆ ಶಂಕರನೊಲವಿಂ
ಸವಿದಾಡಿದ ಸುಖಲೀಲೆಯೊಳೊಲವಿಂ
ಬಹು ರೂಪುಗಳಂ ಬಂದಾಡುತ್ತಂ
ಬಹಳ ರಸಂಗಳೊಳೋಲಾಡುತ್ತಂ

ಆಡುತ್ತಾಡ-ತ್ತೆಡಿಸಿ ನಿಲುತಿರೆ
ನೋಡುವ ಸಭೆ ಮಿಗೆ ಘೋಳನೆ ನಗುತಿರೆ
ಸಭೆಯು ಮೆಯ್ಯ ಜೊಮ್ಮಲ್ಲಂ ಹಾರಲ್
ಅಭಿನವ ಮುಖದೊಳ್ ನಸುನಗೆ ದೋರಲ್
ಪ್ರಹಸನ ರಸಮಂ ತೊಡಗಿದನಾಗಳ್
ಸಹಸದ ನಗೆಗಳ್ಮೂಡಲ್ಮೊಗದೊಳ್
ಕೊಡಗಿಯಾಟವನೇರಿಸಿಕೊಂಡಂ
ನೋಡಿ ನಗುತ್ತಿರೆ ದೇವರ ತಂಡಂ
ತಲೆಯೊಳ್ಸುತ್ತಿದ ಕವಡಿಕೆ ದಂಡೆಗ
ಳೊಲವಿಂ ಪಲ್ಗಳ ಪಿಡಿಸಿದ ಕವಡೆಗ
ಳ್ಕಣ್ಣೊಂದರೊಳಿಕ್ಕಿದ ಬೆಗ್ಗವಡಿಕೆ

---

† ಪಾಠಾಂತರ—
ಹಂಪೆಯು ಹರಿಗಂಗೊಲಿದಾಪರಿಯಂ

ಕಣ್ಣಂ ಮೆಳ್ಳಿಸಿ ನೆತ್ತಿಯ ಚೆಂಡಿಕೆ
ಹಲುಗಿರಿಯುತೆ ಪುರ್ಬಂ ನೆಗೆಪುತ್ತಂ
ಬಲುಗಿವಿಯಂ ಮಂಡಿಸಿ ಮಣಿವುತ್ತಂ
ಬಾಯಂ ತೆರೆವುತೆ ಬರಿದೆ ನಗುತ್ತಂ
ಆ ಯೆಂದೀಶನನೇಡಿಸಿ ನಿಲುತಂ
ಕೊಂಕಿ ನಡೆದು ಕೆಯ್ಯಂ ಮುರುಕಿಸುತಂ
ಟೊಂಕಮನುರುಗಿಸಿ ಸಿಂದೇಡಿಸುತಂ
ಮೊಳಕೈ ಮುಂಗೈಗಳನಾಡಿಸುತಂ
ಮೊಳಕಾಲಿಕ್ಕುತ್ತಿರಗುತೆ ನಿಲುತಂ
ಕಾಲುಂ ಕೆಯ್ಯುಂ ಚೆಂಗೊಂಡಾಗಿರೆ
ಮೇಲುಂ ತಳವುಂ ಕೆಲವುಂ ಡೊಂಕಿರೆ
ಕುಳ್ಳಿರ್ದೇಳುತ್ತಂ ಬೀಳುತ್ತಂ
ಅಳ್ಳಿಯನೆರಡು ಕರದಿ ಬೆರಟುತ್ತಂ
ಮೆಳ್ಳಿಸಿ ನೋಡುತೆ ಪುರ್ಬಂ ಕೆತ್ತುತೆ
ಘೊಳ್ಳನೆ ಸಭೆ ನಗೆ ಪಲ್ಲಂ ಕಿರಿವುತೆ
ಅಡ್ಡಂ ತಿಗಟಂ ವಿಸಟಂ ಬರುತಂ
ಗುಡ್ಡಿಸಿ ಮುಗಿಲುದ್ದಕೆ ನೆಗೆವುತ್ತಂ
ಅಣಕಂ ಮೆರೆವುತೆ ಮೆಯ್ಯಿಕ್ಕುತ್ತಂ
ತ್ರಿಣಯನ ನೋಡುತೆ ಗಹಗಹಿಸುತ್ತಂ
ಮೂಗಿನ ತುದಿಯಂ ಮೆಳ್ಳಿಸಿ ನೋಡುತೆ
ತೂಗಿ ತೊನೆದು ಕೃಚಪ್ಪಳಿಗುಟ್ಟುತೆ
ತುದಿಗಾಲೊಳು ನಿಲುತಂದೊಲೆದಾಡುತೆ
ಬೆವಂದರಂತಿರೆ ಬೆಚ್ಚುತ್ತೋಡುತೆ
ನಿಂದಿರುತೊಂದೇ ಮಡುಹಾಡಿಸುತಂ
ಮಂದಿಯ ನೇಡಿಸುತವ್ವಳಿಸುತ್ತಂ
ಮುಡುಹುಗಳಂ ಕೊರಳೊಳು ಪತ್ತಿಸುತಂ
ಕಡೆವಾಯೊಳೆ ತುಟಿಗಳ ಜೋಲಿಸುತಂ
ಇರಿವೇ ಧ್ಯಾನಿಸಿ ಬೆಂಗಾಗುತ್ತಂ
ಮರೆದಂತೇನಕ್ಕೆಯನರಸುತ್ತಂ
ಹೊಟ್ಟೆಯನಾಡಿಸುತಂ ಹೊಂಗಿಸುತಂ

ಸಿಟ್ಟೊಡಲಾಗುತ್ತಂ ನಿಂದಿರುತಂ
ಕೊಂಕಿದ ದೇಹವನುರುಗಿಸಿ ನಡೆವುತೆ
ಬಂಕಿದ ಮುಖದೊಳ್ ಬಾಯ್ದೆರೆದುಲಿವುತೆ
ತೋಳಂ ಬೀಸುತೆ ತೂಗಾಡುತ್ತಂ
ನೀಳಂ ಮಾಡಿಯೆ ಮೊಗದಿರುಹುತ್ತಂ
ದಿಟ್ಟಿಸಿ ನೋಡುತ್ತಂ ಜಿಗಿಲುತ್ತಂ
ನೆಟ್ಟಂದದಿ ನಿಂದಿರ್ದು ನಗುತ್ತಂ
ತುಟಿ ಮಿಡುಕುತ್ತಿರೆ ಹಲು ಹರಿಗುಟ್ಟುತೆ
ಕಟಿಯಲುಗುತ್ತಿರೆಯಡ್ಡಂ ಮೆಟ್ಟುತೆ
ಕುಂಟನ ಪೋಲ್ಕೊಂಕಾಡಿ ನಿಲುತ್ತಂ
ತುಂಟನ ಪೋಲ್ಬೆಚ್ಚಡಿಗಳನಿಡುತಂ
ಹೆಳವನ ಪೋಲ್ಮೊಳಕಾಲಿಕ್ಕುತ್ತಂ
ಗಳೆಯಂದದೆ ಸೈವೆರಗಾಗುತ್ತಂ
ಎದ್ದೆದ್ದೆತ್ತಿದ ಪೋಲ್ ನಿಲ್ಲುತ್ತಂ
ಬಿದ್ದುಂ ಬಿಲ್ಲಂದದೆ ಬೆರೆಯುತ್ತಂ
ಮೂಗಂ ಪತ್ತಿಸಿ ಕೊಡಕೆಯನಾಡಿಸಿ
ಮೇಗಂ ಮೆಳ್ಳಿಸಿ ಕೊರಲಂ ತೂಗಿಸಿ
ತಲೆಯ ನಿವಾಳಿಸಿ ಕರವಂ ಬಾರಿಸಿ
ಸಿಲವಂ ಕೊಂಕಿಸಿ ಬೆರಲಂ ಬಂಕಿಸಿ
ಸುರಪನನೇಡಿಸುತಂ ರೋಡಿಸುತಂ
ಶರಣರ ಚರಣವ ಪಿಡಿದಾಡುತ್ತಂ
ದೇವನನುರುಗಿಸಿ ನೋಡಿ ನಗುತ್ತಂ
ದೇವಸಭೆಯನೊಲಿದಲ್ಲಾಡಿಸುತಂ
ನಗೆಗಳನೆಲ್ಲರ ಮೊಗದೊಳ್ಚೆಲ್ಲುತೆ
ಬಗೆಗಳ ನಗೆಯುಂ ಹೊರವಂಟಾಡುತೆ
ನೋಡುವವರ ನಗೆ ಗೂಡಾಗಿಸುತಂ
ನೋಡುವರವಯವವಂ ನಗಿಸುತ್ತಂ
ಬಂದಾಡುತ್ತಿರೆ ಹರನೋಲಗದೊಳ್
ಹೆಂದದ ನಗೆಗಳ್ ಮಸಗಲ್ಕಾಗಳ್

ಹೊಸ ಭಕ್ತಿಯ ಕರುವಿನ ಪೋಲವಂತರೆ
ಶಶಿಧರನಚ್ಚರಿಯೊಳ್ಮರೆವುತ್ತಿರೆ
ಹರಕೀರ್ತಿಯನೆ ಕೊಂಡಾಡುತ್ತಿರೆ
ವರ ಮೂರ್ತಿಯನೆ ಕಣ್ಣೊಳಗಿಟ್ಟಿರೆ
ವೈಸೋಂಕಂ ತನ್ನೊಳ್ ತೆಗೆವುತ್ತಿರೆ
ಕೈ ಶಿವಪೂಜೆಗೆ ಲವಲವಿಸುತ್ತಿರೆ
ತನ್ನ ಮರೆವುತೆ ಪರವಶನಾಗಲ್
ಭಿನ್ನಂದೋರದ ಸಮಸುಖಿಯಾಗಲ್
ಹರ ಸಾತ್ವಿಕ ಭಕ್ತಿಯ ರಸದೋರಲ್
ಕರುಣ ರಸಂ ಹರನೊಳ್ ಕೈಮೀರಲ್

ಹಿಡಿದೆತ್ತಿದ ಭೃಂಗೀಶನನೀಶಂ
ಅಡಿಗಡಿಗಪ್ಪಿದನಾ ಗಿರಿಜೇಶಂ
ಆಲಿಂಗಿಸಿ ಮೆಯ್ಯಂ ತಡಹುತ್ತಂ
ಸಾಲದಿದೆನ್ನಂ ಕೊಟ್ಟೆನೆನುತ್ತಂ
ಹಂಪೆಯ ವಿರುಪಂ ಕರುಣಂ ಮಾಡಲ್
ಸೊಂಪಿಂ ಹೊಗಳಲ್ ಸುರಸಭೆ ನೋಡಲ್
ದೇವ ಶರಣಸಂಕುಳಪರಿಪಾಲಕ
ದೇವ ಶರಣ ಮುಗುದಾಜನ ಲೋಲಕ
ದೇವ ಸಕಲವರ ವಿದ್ಯಾವಲ್ಲಭ
ದೇವ ಅನೇಕ ಶ್ರುತಿತತಿ ದುರ್ಲಭ
ದೇವ ನತಾಖಂಡಲ ಸುರಮಂಡಲ
ದೇವ ವಿರಾಜಿತ ಫಣಿಪತಿಕುಂಡಲ
ಎಂದು ಪೊಗಳುತಿರೆ ಸಂತಸದಿಂದಂ
ಇಂದುಧರಂ ಹಿಗ್ಗುತೆ ನಲವಿಂದಂ
ವರವಂ ಕುಡಲೆಂದನುಗ್ರೈವುತ್ತಂ
ಸುರಸಂತತಿಗಭಯವನೀವುತ್ತಂ
ಪರಿಪರಿಯುಳ್ಳರೊಳೋಲಾಡಿಸುತಂ
ಶರಣತತಿಗೆ ಭಕ್ತಿಯನೀವುತ್ತಂ
ಭೃಂಗೀಶನನಡಿಗಡಿಗಪ್ಪುತ್ತಂ

ಹಿಂಗದೆ ನೇಹದಿ ಸಲೆ ಮೆಚ್ಚುತ್ತಂ
ಹರಿಬೊಮ್ಮರ ವರ ಗುರು ವೊಪ್ಪಿರ್ದಂ
ಶರಣಜನದ ಸುರತರು ವೊಪ್ಪಿರ್ದಂ
ಭಕ್ತರ ಪರುಷದ ಕಣಿಯೊಪ್ಪಿರ್ದಂ
ಭಕ್ತರ ಚಿಂತಾಮಣಿಯೊಪ್ಪಿರ್ದಂ
ಭಕ್ತರ ಮತಿಯುನ್ನತಿಯೊಪ್ಪಿರ್ದಂ
ಭಕ್ತರ ಕಣ್ಣಿಂಗತಿಯೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

ಕಂದ॥ ಪರಮೋತ್ಸಾಹದಿ ಭೃಂಗೀ ।
ಶ್ವರನಂ ಕೊಂಡಾಡಿ ನೋಡಿ ನಲಪೇರುವ ರಂ ।
ಕರನೊಲ್ದು ಭಕ್ತಿಸುಖಮಂ ।
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

# ಲಿಂಗಾರ್ಚನೆಯ ರಗಳೆಯು.

ಕಂದ॥ ಇಂದುಧರ ನಿಮ್ಮ ಚರಣ।
ದ್ವಂದವನನವರತನರ್ಚಿಸುತ್ತಿಹ ಸುಖಮಂ॥
ತಂದೆ ಭವಭವದೊಳೀವುದು।
ಕಂದರ್ಪ ಮದಾರಿ ಹಂಪೆಯ ವಿರೂಪಾಕ್ಷಾ॥

## ಲಲಿತ ರಗಳೆ.

ಶ್ರೀಗುರುವೆ ಹಂಪೆಯ ವಿರೂಪಾಕ್ಷ ಕೇಳಯ್ಯ
ನಾಗಭೂಷಣ ನಿಮ್ಮ ವೇಳೆಯಾಳಾನಯ್ಯ
ಸಲುಗೆಯಂ ಬಿನ್ನಪಂಗೈಯ್ದಪೆಂ ನಾನಯ್ಯ
ಒಲವಿಂದಲೆನಗೆ ವಿರೂಪಾಕ್ಷ ಕರುಣಿಪುದಯ್ಯ
ಧರೆಯೊಳಗೆ ನಿಮ್ಮ ತೊಳ್ತೆಂದು ಸಲಹುವುದಯ್ಯ
ಪರಮ ಭಕ್ತರ ಪದಕ್ಕೆನ್ನ ಸಲಿಸುವುದಯ್ಯ

ಅಗಲದೆ ನಿರಂತರಂ ನಿಮ್ಮನರ್ಚಿಸುವುದಂ
ಮಿಗೆ ಮೆಚ್ಚಿ ಮನವುಕ್ಕಿ ಬಂದು ಪುಳಕಿಸುವುದಂ
ತುಂಗಭದ್ರಾನದಿಯ ಸಲಿಲಮಂ ಮೊಗೆತಂದು
ಲಿಂಗ ನಿಮಗಾನೆ ಮನವಾರೆ ಮಜ್ಜನಕೆರೆದು
ಮಗಮಗಿಪ ಚಂದನವನುದ್ವರ್ತನಂ ಮಾಡಿ
ಅಗರು ಕರ್ದಮಂಗಳಂ ನಿಮ್ಮ ಮೆಯ್ಯೊಳ್ಳೀಡಿ
ಅರೆವಿರಿದ ಸುರಗಿ ಸುರಹೊನ್ನೆ ಸಂಪಿಗೆಗಳಂ
ಪರಿಮಳಂಗಳನೀವ ದುಂಡ ಮಲ್ಲಿಗೆಯರಲ್ಗಳಂ
ತನಿಗಂಪನೀವ ಮಲ್ಲಿಗೆ ಮೊಲ್ಲೆಜಾಜಿಯಂ
ಮನವೊಸೆದು ಕುಯ್ತಂದ ಪರಿಮಳದ ಪಾದ್ರಿಯಂ
ಕಂಪಿಸುವ ಕೈಗಳಿಂ ಪೂಮಾಲೆಗಳನೆತ್ತಿ
ಪೆಂಪೆಸೆಯೆ ಶಿವ ನಿಮ್ಮ ಸಿರಿ ಮುಕುಟದೊಳ್ಸುತ್ತಿ
ಕಮನೀಯವೆನಿಪ ಗುಗ್ಗುಳದ ಧೂಪವನೆತ್ತಿ

ರಮಣೀಯುವೆನಿಪ ಪೊಳೆವಾರತಿಗಳನೆತ್ತಿ
ಸಂತೋಷದಿಂದ ವಾಣಿಕದ ಪರಿಯಾಣಮಂ
ಮುಂತಿರಿಸಿ ನಲವಿಂದೆ ಬೆಳಗಿದಡ್ಡಣವುಮಂ
ಚಂದ್ರಿಕೆಗಳಂ ಕಡಿದು ಕಂಡಣಿಸಿದಂತಿಪ್ಪ
ಸಾಂದ್ರ ಧವಳತಮೆನಿಪ್ಪೋಗರವನಿಂಬಪ್ಪ
ದಿವ್ಯಾನ್ನವಮೃತಾನ್ನ ದೇವಾನ್ನವಂ ಬಡಿಸಿ
ನವ್ಯ ಸೌಂಭ ಶಾಕಪಾಕಂಗಳಂ ಬಡಿಸಿ
ಹರುಷದಿಂ ಮನವುಕ್ಕಿ ಕರಗಳಂ ಮುಗಿಮುಗಿದು
ಹರನೆ ಕೈಕೊಳ್ಳೆಂದು ಭಕ್ತಿಯಿಂದಗಿದಗಿದು

ಚನ್ನಯ್ಯನಿಕ್ಕಿದಂಬಲಿಯಿದಾರೈಸಯ್ಯಾ
ಕನ್ನೆ ನಿಮಗೆರೆದ ಹಾಲೆಂದು ಹಾರೈಸಯ್ಯಾ
ಚೋಳಿಯಕ್ಕನ ಬಾಯ ತುತ್ತೆಂದು ಕೊಳ್ಳಯ್ಯ
ಚೋಳ ನಿಮಗಿತ್ತನ್ನವೆಂದು ಕೈಕೊಳ್ಳಯ್ಯ
ಕಣ್ಣಪ್ಪನಣುಗನೆಂದೆನಗೆ ಕರುಣಿಪುದಯ್ಯ
ಉಣ್ಣದಿರಬಾರದೆಂಬುದನರಿದೆನುಣ್ಣಯ್ಯ
ಇಳೆಯಾಂಡಗುಡಿಮಾರನ ವರಸುತ ನಾನಯ್ಯ
ಚಳಿಸಿ ದೇವಾನ್ನವಿಕ್ಕಿದರ ಮಗ ನಾನಯ್ಯ
ಒಕ್ಕಲಿಗ ಮುದ್ದಯ್ಯನಕ್ಕರಿನ ಸುತನಯ್ಯ
ಚಿಕ್ಕನುಣ್ಣದೊಡೆ ನಿಮ್ಮಣುಗಸುತ ನಾನಯ್ಯ
ಎಂದು ಭಕ್ತಿಯ ಮನದೊಳಾನೆ ನಿಮಗುಣಲಿತ್ತು
ಸಂದ ಶರಣರ ವರ ನಿಧಾನ ನಿಮಗುಣಲಿತ್ತು

ಪನ್ನೀರಲಗ್ಗಣಿಯ ತಂದು ಹಸ್ತಕ್ಕೆರೆದು
ಪನ್ನಗಾಧರಗೆ ಕೈಘಟ್ಟಿಯಂ ಕೊಟ್ಟೆರೆದು
ಕರ್ಪೂರ ವೀಳೆಯವನೊಸೆದಳ್ತಿಯಿಂ ಕೊಟ್ಟು
ಸರ್ಪಭೂಷಣ ನಿಮ್ಮ ಚರಣಕ್ಕೆ ಪೊಡೆಮಟ್ಟು
ಪೊರೆಸಾರ್ದು ನಿಮ್ಮ ಪೂಜೆಯನಳ್ಕರಿಂ ನೋಡಿ
ಕರಿಕಂಠ ಶರಣೆಂದು ಸದ್ಭಕ್ತಿಯಂ ಬೇಡಿ
ಮನವುಕ್ಕಿ ಸೊಗಳಲುದ್ಯುತನಾಗಿ ನಿಂದಿರ್ದು

ತಸ್ನೇಹವೊತ್ತರಿಸಿ ನಿಮ್ಮ ಹತ್ತಿರೆ ಸಾರ್ದು
ದೇವ ಮಮ ಹೃತ್ಕಮಲ ಮಂಡಿತ ವಿರೂಪಾಕ್ಷ
ದೇವ ಪ್ರಮಥ ನಿಚಯ ಪರಿವೃತ ವಿರೂಪಾಕ್ಷ
ದೇವ ನೃಕರೋಟಿಮಾಲಾಧರ ವಿರೂಪಾಕ್ಷ
ದೇವ ಕೋಟ್ಯರ್ಕ ತೇಜೋಮಯ ವಿರೂಪಾಕ್ಷ
ದೇವ ಗಂಗಾಮಕುಟರಂಜಿತ ವಿರೂಪಾಕ್ಷ
ದೇವ ಭೃಂಗೀಶನಾಂಟ್ಯಪ್ರಿಯ ವಿರೂಪಾಕ್ಷ
ದೇವ ಹರಹರ ಮನ್ಮನೋಹರ ವಿರೂಪಾಕ್ಷ
ದೇವ ಶಿವಶಿವ ಸದಾಶಿವ ಶಿವ ವಿರೂಪಾಕ್ಷ

ಎಂದಿಂತು ಪೊಗಳ್ದು ತಣಿವೈಯ್ದದೇ ಬಾಯ್ವಿಟ್ಟು
ನಿಂದೊಮ್ಮೆ ಹಾಡಿ ನೋಡುವೆನೆಂದು ಮನವಿಟ್ಟು
ಲಲಿತ ಬಂಗಾಳದಿಂದೊಲಿದು ನಿಮ್ಮಂ ಪಾಡಿ
ಮಲಹರಿ ವರಾಳಿಯಿಂದೊಲಿದು ನಿಮ್ಮಂ ಹಾಡಿ
ದೇಶಿ ಗುರ್ಜರಿಗಳಿಂದೀಶ ನಿಮ್ಮಂ ಹಾಡಿ
ದೇಶಾಕ್ಷಿ ಗೌಳದೆ ಮಹೇಶ ನಿಮ್ಮಂ ಹಾಡಿ
ಬತ್ತೀಸ ರಾಗದಿಂ ಕರ್ತು ನಿಮ್ಮಂ ಹಾಡಿ
ಚಿತ್ತದೊಡೆಯನೆ ಮತ್ತೆ ಮತ್ತೆ ನಿಮ್ಮಂ ಹಾಡಿ

ಚನ್ನಯ್ಯನಂ ಹಾಡಿ ಹೊನ್ನಯ್ಯನಂ ಹಾಡಿ
ಕಿನ್ನರಿಯ ಬೊಮ್ಮತಂದೆಯನೊಪ್ಪದಿಂ ಹಾಡಿ
ಕಕ್ಕಯ್ಯನಂ ಹಾಡಿ ಚಿಕ್ಕಯ್ಯನಂ ಹಾಡಿ
ಅಕ್ಕರಿಂ ನಿಜಲಿಂಗ ಚಿಕ್ಕಯ್ಯನಂ ಹಾಡಿ
ಒಂಕಯ್ಯನಂ ಪಾಡಿ ಬಂಕಯ್ಯನಂ ಹಾಡಿ
ಲೆಂಕಮಂಚಣ್ಣನಂ ಕಲಕೇತನಂ ಪಾಡಿ
ಬಸವರಾಜನ ಮಳೆಯರಾಜನೋಹಿಲಯ್ಯನಂ
ಮುಸುಟೆಯ ಚೌಡರಾಯನನುದ್ಭಟಯ್ಯನಂ
ಕೇಶಿರಾಜನ ದುಗ್ಗಳವ್ವೆ ದಾಸಿಮಯ್ಯನಂ
ಭಾಷೆಗೀಶನ ತಂದ ಮಿಸುಪಾದಿಮಯ್ಯನಂ
ಸಿದ್ಧರಾಮನನಲ್ಲಮನ ಮಲುಹಣಯ್ಯನಂ

ರುದ್ರ ಪಶುಪತಿ ಹಲಾಯುಧ ಮಯೂರಯ್ಯನಂ
ಸಾಮವೇದಿಗಳಿಗೊಪ್ಪುವ ಶ್ವಪಚದೇವರಂ
ಕಾಮಿತವನೀವ ಸಿರಿಯಾಳಚಂಗಳೆಯರಂ
ನಂಬಿಯಣ್ಣನ ನಿಂಬಿಯಕ್ಕ ಸತ್ಯಕ್ಕನಂ
ಕೆಂಭಾವಿಯೊಳ್ಮೆರೆದ ಭಂಗಭೋಗಣ್ಣನಂ
ಕೊಂಡಗುಳಿಯ ಕೇಶಿರಾಜ ತೆಲುಗೇಶನಂ
ಪಂಡಿತಾರಾಧ್ಯನಿಂಡೆಯ ಶಾಂತಿಮಯ್ಯನಂ
ಚೋಳ ಚೇರಮ ಗೊಲ್ಲಳನ ಬಿಬ್ಬಿಬಾಚನಂ
ಕೊಳೂರು ಕೊಡಗೂಸು ಮಹದೇವಿಯಕ್ಕನಂ
ಕಾಳಿದಾಸನ ಕಣ್ಣಪ್ಪನ ಚೆನ್ನಬಸವನಂ
ಮೋಳಿಗೆಯ ಮಾಂತಂದೆಯ ಮಾದಿರಾಜನಂ
ಅಮ್ಮವ್ವೆ ರೆಮ್ಮವ್ವೆ ಕದಿರ ರೆಬ್ಬವ್ವೆಯಂ
ನಿರ್ಮಳ ಜ್ಞಾನಿ ಕಮಳವ್ವೆ ಬಾಚವ್ವೆಯಂ
ಗುರುಭಕ್ತ ಜಗದೇವ ಮೊಲ್ಲೆ ಬೊಮ್ಮಣ್ಣನಂ
ಪರದೈವ ರಹಿತ ಶಂಕರದಾಸಿಮಯ್ಯನಂ
ನಚ್ಚಿನರುವತ್ತುಮೂವರನಸಂಖ್ಯಾತರಂ
ಅಚ್ಚರಿಯೊಳೆಸವ ಭಕ್ತ್ಯಾಂಗನೆಯರೆಲ್ಲರಂ
ಭಕ್ತಿಯಿಂ ಪಾಡಲ್ಕೊಸೆದು ಮೆಚ್ಚಾಗಿ
ಯುಕ್ತಿಯಿಂ ಮೀರಿಪರಸಂ ನಿಮ್ಮನಚ್ಚಾಗಿ
ಹೊಸ ರೀತಿ ರಾಗದಿಂ ದೆಸೆದೆಸೆಗಳಂ ಬೀರೆ
ಪಸರಿಸುವ ತಾಳದಿಂ ಸುಗತಿ ನರ್ತನವೇರೆ

ಇಂತು ಮಹಲಿಂಗಮಂ ಕಣ್ಗಳೊಳಗೊತ್ತುತ್ತಂ
ಮುಂತೆ ಹಾ ಹಾ ಯೆಂದು ವಿಷಯಕ್ಕೆಯುಳ್ಕುತಂ
ಭೃಂಗಿಯ ಪದಂಗಳಂ ನೆನೆನೆನೆದು ನೆನೆನೆನೆದು
ಭೃಂಗಿಯಿಂ ಕೋಡಗಾಟವನಾಡಿ ತೊನೆತೊನೆದು
ಗತಿ ವಾದ್ಯ ಗತಿಗಳಿಂ ಕುಣಿಕುಣಿದು ಕುಣಿಕುಣಿದು
ಅತಿಶಯ ಸುಬೋಧೆಯಿಂ ಭಕ್ತಿಗೆ ಮನಂದಣಿದು
ಏನುವಂ ತಾನರಿಯದಾನಂದದಿಂ ನಿಂದು
ಮೌನವೇ ಗತಿ ಮತಿಯದಾಗಿ ನೆರೆ ಸಲೆಸಂದು

ಪೊಗಳ್ವಕ್ಕರಂ ನಲಿದು ನಾಲಿಗೆಯ ಮೇಲಿರಲ್
ಬಗೆಯ ಭಾವಂ ಬಲಿದು ಮನವನೆಡೆಗೊಂಡಿರಲ್
ಏನೆನ್ನ ಶಂಭುವೆ ಸದಾಶಿವ ಮಹಾದೇವ
ಏನೆನ್ನ ಕಾರುಣ್ಯಸಿಂಧುವೆ ಮಹಾದೇವ
ಏನೆನ್ನ ನಚ್ಚಿನಧಿದೈವವೆ ಮಹಾದೇವ
ಏನೆನ್ನ ಮಚ್ಚಿನ ಮಹಾಸುಧೆ ಮಹಾದೇವ
ಏನೆನ್ನನೊಲಿದು ಪೊರೆವಾಳ್ದನೆ ವಿರೂಪಾಕ್ಷ
ಏನೆನ್ನನೊಲಿವ ಕುಲದೈವವೆ ವಿರೂಪಾಕ್ಷ
ಎಂದೀ ತೆರದಿ ನಿಮ್ಮನಪ್ಪಿ ಸುಖವಡೆವುದಂ
ತಂದೆ ಕರುಣಿಪುದಯ್ಯಾ ಸದ್ಭಕ್ತನಪ್ಪುದಂ

ಆವ ಜಾತಿಗಳೊಳಗೆ ಹುಟ್ಟಿಸದಡೆಲೆ ದೇವ
ನೀವಲ್ಲದರಿಯದಂತಿರಿಸೆನ್ನನೆಲೆ ದೇವ
ಇಳಿಕೆಯ್ಯದೀ ಸುಖವನೆನಗೆ ಕರುಣಿಪುದಯ್ಯಾ
ಬಳಿವಳಿಯ ತೊಳ್ತಿಂದು ಬಡಿದು ಕಲಿಸುವುದಯ್ಯಾ
ಬೇರೊಂದನೊಲಿವನಲ್ಲೆಂಬುದನರಿವುದಯ್ಯಾ
ಸಾರಿ ಮೊರೆಯಿಟ್ಟೆನೆನ್ನಂ ದಯದಿ ನೋಡಯ್ಯಾ
ಆವ ತೆರದಿಂದಾದೊಡಂ ಗುರು ವಿರೂಪಾಕ್ಷ
ದೇವ ಕರುಣಿವುದಯ್ಯಾ ಹಂಪೆಯ ವಿರೂಪಾಕ್ಷ
ಆಳಿನಪಮಾನವಾಳ್ದಂಗಯ್ಯಾ ಕಾಯಯ್ಯಾ
ಜಾಳಿಸಿದ ಪಾಪಾತ್ಮವಿದನಿನ್ನು ನೀಗಯ್ಯಾ
ಮಾಡುವವನುಂ ನೀನೆ ನೋಡುವವನುಂ ನೀನೆ
ಬೇಡುವವನುಂ ನೀನೆ ನುಡಿಸುವವನುಂ ನೀನೆ
ಈಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರುಪಾಕ್ಷ
ರಕ್ಷಿಸು ವಿರೂಪಾಕ್ಷ ರಕ್ಷಿಸು ವಿರೂಪಾಕ್ಷ
ಭಯಹರ ವಿರೂಪಾಕ್ಷ ದಯೆಗೈ ವಿರೂಪಾಕ್ಷ
ಜಯಜಯ ವಿರೂಪಾಕ್ಷ ಜಯಜಯ ವಿರೂಪಾಕ್ಷ
ಜಯ ಜಯ ನಮಸ್ತೇ ಜಯ ಜಯ ನಮಸ್ತೇ
ಜಯ ಜಯ ನಮಸ್ತೇ ಜಯ ಜಯ ನಮಸ್ತೇ

ಕಂ॥ ಕೇಳಯ್ಯ ವಿರೂಪಾಕ್ಷ ಕೃ।
ಪಾಳುವೆ ನಿಮ್ಮಡಿಯ ತೊತ್ತು ತೊತ್ತಿನ ಭೃತ್ಯಂ
ಗಾಳಿನಾಳಾಳಿ ನಾಳಾ।
ಕೇಳುಂ ಭವದಲ್ಲಿ ಹಂಸೆಯ ವಿರೂಪಾಕ್ಷಂ॥

# ಪ್ರಾರ್ಥನೆಯು ರಗಳೆ.

ಕಂ॥ ದೇವ ಹರ ದೇವ ಪುರಹರ।
ದೇವ ಸದಾ ವರದ ದೇವ ಚಂದ್ರಾಭರಣಾ॥
ದೇವ ಪತಿ ಎನಗೆ ಕರುಣಿಸು।
ದೇವ ಕೃಪಾ ಬಹುಳ ಹಂಪೆಯ ವಿರೂಪಾಕ್ಷಾ॥

## ಮಂದಾನಿಲ ರಗಳೆ.

ದೇವ ಶ್ರೀ ಪಂಪಾಪುರದಧಿಪತಿ
ದೇವ ಸದಾನತ ಸಂಕುಳ ಸದ್ಗತಿ
ದೇವಾ ಭಾಸುರ ಪಿಂಗ ಜಟಾಧರ
ದೇವ ತರಂಗ ಲಸದ್ಗಂಗಾಧರ
ದೇವ ಮಹೇಶ ಸುಧಾಕರಶೇಖರ
ದೇವ ಕಿರೀಟಾಲಂಕೃತ ಶುಭಕರ
ದೇವ ಮಧುವ್ರಜ ಸಮ ನೀಲಾಳಕ
ದೇವ ಭವಾನೀ ಸಮ ಸುಖ ಪಾಲಕ
ದೇವ ದಿವಾಕರ ಶಶಿ ಶಿಖಿ ಲೋಚನ
ದೇವ ನತ ವ್ರಜ ಮಾಯಾ ಮೋಚನ
ದೇವ ಭುಜಂಗಾರಾಜಿತ ಕುಂಡಲ
ದೇವ ಸಮುನ್ನತ ಘನ ಭುಜ ಮಂಡಲ
ದೇವ ಜಗತ್ಪಾವನ ಪಂಚಾನನ
ದೇವ ಹರಿಸ್ತುತ ನತ ಚತುರಾನನ
ದೇವ ಗಜಾಜಿನ ಮಂಡಿತ ವಿಗ್ರಹ
ದೇವ ಪ್ರಮಥ ನಿಕಾಯಾನುಗ್ರಹ
ದೇವಾ ನಿಶಿತಾಯುಧ ಸಂಚಯ ಧರ
ದೇವ ಸರೋಜೋದ್ಭವ ಶಿರಧರ ಕರ
ದೇವ ಸುರವ್ರಜ ಮಸ್ತಕ ಭೂಷಣ
ದೇವ ಶರಣ ಸಂಕುಳದಘ ಶೋಷಣ

ದೇವ ಫಣಾಧರ ವಳಯ ವಿಮಂಡಿತ
ದೇವಾನತ ಜನ ಸಂತತ ಸದ್ಗತಿ
ದೇವಾ ಹರಿ ಬ್ರೊಮ್ಮಾರ್ಚಿತ ಪದತಳ
ದೇವ ಯಶೋಧವಳಿತ ದಿಕ್‌ಸಂಕುಳ
ದೇವಾ ಪರಿವೃತ ಸುರಭೂರುಹ ಜಯ
ದೇವಾ ಅಪಾಯ ರಹಿತ ಜ್ಯೋತಿರ್ಮಯ
ದೇವಾ ಸಜ್ಜನ ಭವ ಭಯ ಭಂಜನ
ದೇವ ನಿರಂತರ ನಿತ್ಯ ನಿರಂಜನ
ದೇವ ಪುರತ್ರಯ ವನ ದಾವಾನಲ
ದೇವ ಜಲಂಧರ ಮೇಘ ಮಹಾಬಲ
ದೇವ ರತೀಶ ಮದಾಂಧ ದಿವಾಕರ
ದೇವ ಕೃತಾಂತ ಕಳೇವರ ಸಂಹರ
ದೇವ ಮೃಡಾಣೀ ದೇಹಾರ್ಧಪ್ರದ
ದೇವ ಸುಪರ್ಣಧ್ವಜ ಚಕ್ರಪ್ರದ
ದೇವ ವಿಶಾಲ ವೃಷೇಂದ್ರ ಸುಖಾಸನ
ದೇವಾ ದಕ್ಷ ವಿಯಾಗ ವಿನಾಶನ

ದೇವಾ ಅನೇಕ ಶೃತಿ ತತಿ ದುರ್ಲಭ
ದೇವ ಪುರಂದರ ಸಂಕುಳ ವಲ್ಲಭ
ದೇವ ಮಹಾ ಸಂಪತ್ ಪರಿಶೋಭಿತ
ದೇವ ವಿಶೇಷ ಜ್ಞಾನ ವಿಭೂಷಿತ
ದೇವಾ ಮುಕ್ತಿ ನಿಕಾಯ ವಿರಾಜಿತ
ದೇವಾ ಶಕ್ತಿತ್ರಯ ಸಂಸೇವಿತ
ದೇವ ವಿಶುದ್ಧ ಷಡಧ್ವ ನಿಕೇತನ
ದೇವ ಸದಾ ಶರ್ವಾಣೀ ಚೇತನ
ದೇವಾ ನಿರುಪಮ ನಿರ್ಮಳ ನಿಷ್ಕಳ
ದೇವ ಸದಾವರಣಪ್ರಭು ನಿಶ್ಚಳ
ದೇವಾ ತುಂಬುರ ವರ ನಾದಪ್ರಿಯ
ದೇವಾ ನಾರದ ವರ ವೀಣೋದಯ
ದೇವಾ ನಾದಪ್ರಿಯ ಸಂಭಾವನ

ದೇವಾ ಭಕ್ತಪ್ರಕರ ಮಹಾ ಘನ
ದೇವ ವಿವಸ್ವತ ಕೋಟಿ ಸಮಪ್ರಭ
ದೇವಾ ಕೋಟ್ಯಾನಲ ತೇಜಪ್ರಭ
ದೇವ ಜರಾಮಯ ಪಾಶ ವಿವರ್ಜಿತ
ದೇವ ಪ್ರಳಯ ಸಮಯ ಘನ ಗರ್ಜಿತ
ದೇವ ಸುಹೃಜ್ಜನ ಹೃದಯ ಸದಾ ಗತಿ
ದೇವ ಧರಿತ್ರೀ ಧರ ಹರಿ ಸಂಗತಿ
ದೇವ ನಿರಂತರ ದೇವ ವಿಪೂತನ

ದೇವ ಮಹೇಶ್ವರ
ದೇವ ಮದೀಶ್ವರ
ದೇವ ಮಹಾಚಲ
ದೇವ ಮಹಾಬಲ
ದೇವ ಮಹಾನಭ
ದೇವ ಮಹಾಪ್ರಭ
ದೇವ ಮಹಾಶಶಿ
ದೇವ ಮಹಾರಸಿ
ದೇವ ಮಹಾಭವ
ದೇವ ಮಹಾಶಿವ
ದೇವ ಮಹಾಗುಣಿ
ದೇವ ಮಹಾಮುಣಿ
ದೇವ ಮಹಾಜಪ
ದೇವ ಮಹಾತಪ

ಕಂ॥ ಶರಣು ಸುರತರುವೆ ಶರಣಾಂ ।
ಬುರುಹ ದಿವಾಕರನೆ ಶರಣು ಕರುಣಾಕರನೆ ॥
ಶರಣು ಶರಣೆನುತಲಿದ್ದೆನೆ ।
ಕರುಣಿಸು ಸದ್ಭಕ್ತಿ ಯೆನಗೆ ಶ್ರೀ ವಿರುಪಾಕ್ಷಾ ॥

# ಹಂಪೆಯ ರಗಳೆ

## ಸ್ರಗ್ಧರಾ ವೃತ್ತ

ನಿತ್ಯ ಶ್ರೀಕಂಠಾಭರಣ ಕಿರಣಸಂಘಾತ ಸಂಭೂತನೂತ್ನಾ
ದಿವ್ಯ ಪ್ರಾತುಂಗ ಗಂಗಾಧರ ಪುರಹರ ಭಾಳಾಕ್ಷ ಚಂಚದ್ಭವಾನೀ
ಪ್ರತ್ಯಕ್ಷಸ್ವಾಮಿ ಕಾಮಾಂತಕ ನಿಖಿಳ ಮುಖಾಧಾರ ವಿಸ್ತಾರ ಭಕ್ತ
ರ್ಗತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

## ಉತ್ಸಾಹ ರಗಳೆ.

ಸಕಲ ರತ್ನನಿಕರಖಚಿತ ಮಕುಟಧರನೆ ಹಂಪೆಯರಸ
ಪ್ರಕಟ ಮಕುಟ ಜಟಾಜೂಟಮಂಡಿತ ಮಹಿಮ ಹಂಪೆಯರಸ
ಸುಕರವೆನಿಸನರ್ಥಿಪಳಕ ಪಟಲ ನಿಟಲ ಹಂಪೆಯರಸ
ಸಕಲಲೋಕ ಭರಿತ ನಿರುತ ಸರ್ವಜೀವ ಹಂಪೆಯರಸ
ಮಂಡಿತ ಪ್ರಚಂಡ ಕಿರಣಗಂಡಯುಗಳ ಹಂಪೆಯರಸ
ತಂಡದಿಂದ ದೆಸೆಗೆ ಮಿಸುಪ ಸುಖದ ಮುಖವೆ ಹಂಪೆಯರಸ
ಪುರವನುರುಪಿ ಧರೆಗೆ ಪರಮ ಹರುಷವಿತ್ತೆ ಹಂಪೆಯರಸ
ಶರಣಜನಕ್ಕೆ ಹರಣವಾಗಿ ಕರುಣಿಸಿರ್ಪೆ ಹಂಪೆಯರಸ
ಕೇಳ್ವುದೆನ್ನ ಚೆನ್ನ ಬಿನ್ನಪವನುಮಾಧಿನಾಥ
ತಾಳ್ವುದಿಪನು ಮುದ್ದುಮಾಡಿ ಭಾವಭರಿತ ಭಕ್ತಿಯೂಥ

ಸಕಲ ಕಾಮ ನಿಕರದಿಂದ ವಿಕಳನಾಗುತಿರ್ದೆನಯ್ಯ
ಸುಕರವೆನಿಸ ಭಕುತಿಯರಿಯದಖಿಳ ವಿಷಯಿಯಾದೆನಯ್ಯ
ಕೋಪ ತಾಪ ಲೇಪದಿಂದೆ ತಾಪಿಸುತ್ತಮಿರ್ದೆನಯ್ಯ
ಪಾಪ ಲಾಭ ಲೋಭದಿಂದೆ ಕೋಪಿಸುತ್ತಮಿರ್ದೆನಯ್ಯ
ಮೋಹ ಮದ ಸಮೂಹದಿಂದೆ ದಾಹಿಸುತ್ತಮಿರ್ದೆನಯ್ಯ
ದೇಹದಿಚ್ಛೆ ಮೆಚ್ಚಿ ಹೆಚ್ಚಿ ಮಚ್ಚರಕ್ಕೆ ವೇಳಿಯಾದೆನಯ್ಯ
ನಾದಮೂರ್ತಿ ಪುಣ್ಯಕೀರ್ತಿ ಕಾಯ್ದುಕೊಳ್ಳೊ ಹಂಪೆಯರಸ
ವೇದಪಕ್ಷ ವಿಮಲವಕ್ಷ ರಕ್ಷಿಸೆನ್ನ ಹಂಪೆಯರಸ

ಆಸೆಯುಲಗು ನಚ್ಚಿ ಮೆಚ್ಚಿ ಮನವ ನುಚ್ಚು ಮಾಡಿತಯ್ಯ
ಗಾಸಿಯಾಗಿ ನೊಂದು ಬೆಂದು ಬರಿದೆ ಬಳಲುತಿರ್ದೆನಯ್ಯ
ಮನ ಧನಂ ಸುತರ್ಕುಲಂ ಛಲಂ ಬಲಂಗಳೆಂಬಿವೆಲ್ಲ
ಜನನಿ ಜನಕರಬಲೆ ಯೌವ್ವನಂ ಶರೀರಮೆಂಬಿವೆಲ್ಲ
ಮಿಂಚು ಮಂಜು ಕನಸು ಕರಕವೆಂಬ ತೆರನನರಿದುದಿಲ್ಲ
ಸಂಚಲಂ ಮರೀಚಿಕಾಜಲಂಗಳೆಂದು ಕಂಡುದಿಲ್ಲ
ಗಗನ ಕುಸುಮಪಂಬುಲಿಪಿಯನಿತ್ಯವೆಂದು ಬಗೆದುದಿಲ್ಲ
ಮುಗಿಲ ನೆಳಲುಮಿಂದ್ರಚಾಪವಚಿರವೆಂದು ಕಂಡುದಿಲ್ಲ
ನಿತ್ಯವೆಂದು ನಿರುತವೆಂದು ಹತ್ತೆ ಸಾರುತಿರ್ದೆನಯ್ಯ
ಸತ್ಯವರಿಯದತ್ತಲಿತ್ತ ಸುತ್ತಿ ಬಳಲುತಿರ್ದೆನಯ್ಯ
ಅರಿಯದರಿಸಿ ಮರೆದು ಮರುಗಿ ಕುರುಹುಗೆಟ್ಟೆನೆನ್ನ ಗುರುವೆ
ತೆರಹುಗಾಣದರುಹುಗುಂದಿ ಮರಹುಗೊಂಡೆನೆನ್ನ ಗುರುವೆ

ಮಾಯೆಯಂ ಸಡಿಲ್ಚಿ ಕಳೆದು ಕಾಯಿ ತಂದೆ ಹಂಪೆಯರಸ
ಜೀಯ ನಿತ್ಯ ಕಾಯಿ ದೇವರಾಯ ನೋಡು ಹಂಪೆಯರಸ
ವಿಷಯವೆಂಬ ಕೆಸರಿನೊಳ್ಬಿಳ್ದ ಪಶುವನೆನ್ನ ರಕ್ಷಿಸಯ್ಯ
ಪಶುಪತಿ ಶಿವಾ ಭವಾ ಭವಾನಿಯರಸ ಕರುಣಿಸಯ್ಯ
ಶೃತಿಗಳರಸಿ ಮತಿಗಳರಸಿ ಯತಿಗಳರಸಿ ಕಾಣದಭವ
ನತ ಜನಕ್ಕೆ ಮುಂದೆ ಬಂದು ನಿಂದು ತೋರ್ಪೆ ಕರುಣೆ ವಿಭವ
ಏಕೆ ತಂದೆ ಎನ್ನನೊಮ್ಮೆ ನೋಡಲೊಲ್ಲೆ ಹಂಪೆಯರಸ
ನಾಕಲೋಕಪತಿಗೆ ಪತಿ ಪಿನಾಕ ಪಾಣಿ ಹಂಪೆಯರಸ

ತಾಯ ಗರ್ಭದೊಳಗೆ ತಗ್ಗಿ ಕುಗ್ಗಿ ಮಗ್ಗುಲೊಳಗೆ ಮಗ್ಗಿ
ಹೇಯವೆನ್ನದುದರ ರಸವನುಂಡು ಕರುಳ ಬಲೆಯೊಳೊಗ್ಗಿ
ಮಲದ ಮೂತ್ರ ಕುಲದ ನಡುವೆ ಕಲಸಿ ನೆಲಸಿ ತೊಲಗದಿರ್ದು
ಕೆಲ ಬಲಂಗಳರಿಯದಧಮ ಕೂಪದಲ್ಲಿ ತಾಪಿಸಿರ್ದು
ಸೆಡೆದೆ ನುಡಿದೆನಾರೆನೊಲ್ಲೆನಳ್ಕಿದೇಂ ಸಮರ್ಥ ಗುರುವೆ
ತಡೆಯದೆನ್ನನಚ್ಚ ಭಕುತಿ ಸುಖದೊಳಿರಿಸು ಪರಮ ಗುರುವೆ
ದೇವ ನತವಿತಾನ ವಿವರ ಜಲಧಿ ಚಂದ್ರ ಕರುಣಿಸಯ್ಯಾ

ದೇವ ಭಕ್ತ ನಿಕರ ವಿಕಸಿತ ಪ್ರಮೋದ ಕರುಣಿಸಯ್ಯ
ಕಮಲಜಾಂಡ ಫಲ ಸಮೂಹ ವಿಮಲ ವೃಕ್ಷ ಹಂಪೆಯರಸ
ಸಮುದಿತ ಪ್ರತಾನ ಭರಿತ ಚಿತ್ರಕಾಶ ಹಂಪೆಯರಸ
ಸುರಸಮಾಜರಾಜ ರಾಜರಾಜಮೌಲಿ ಹಂಪೆಯರಸ
ಗಿರಿಸುತಾ ಲತಾ ವಿತಾನ ಕಲ್ಪ ಭೂಜ ಹಂಪೆಯರಸ
ಈಶವಿಗತದೋಷ ಪುಣ್ಯ ವೇಷ ಕರುಣಿ ಕರುಣಿಸಯ್ಯ
ಪಾಶರಹಿತ ಮುಕ್ತಿವಿಹಿತ ಭಕ್ತಿಸಹಿತ ಕರುಣಿಸಯ್ಯ

ಕಳಿದು ಮುಳಿದು ಸುಳಿದು ಹೊಳೆದು ಕಾಡಲೇಕೆ ಹಂಪೆಯರಸ
ತಿಳಿದು ಬೆಳಪ ಭಕುತಿಯಿತ್ತು ಸುಖವನೀಯೊ ಹಂಪೆಯರಸ
ಬಾಲನೊರಲುತಿರ್ದೊಡೇಕೆ ಕೇಳಲೊಲ್ಲೆ ಹಂಪೆಯರಸ
ಕಾಲಕಾಲ ವಿಮಲಶೀಲ ಭಕುತಿಲೋಲ ಹಂಪೆಯರಸ
ಕಣ್ಗೆ ಕಣ್ಣೆ ಮನಕೆ ಮನವೆ ಗುಣಕೆ ಗುಣವೆ ಹಂಪೆಯರಸ
ಪಣ್ಗೆ ಪಣ್ಣೆ ರಸಕೆ ರಸವೆ ಸವಿಗೆ ಸವಿಯೆ ಹಂಪೆಯರಸ
ಕುಲಕೆ ಕುಲವೆ ಛಲಕೆ ಛಲವೆ ಬಲಕೆ ಬಲವೆ ಹಂಪೆಯರಸ
ನೆಲಕೆ ನೆಲವೆ ಜಲಕೆ ಜಲವೆ ಶಿಖಿಗೆ ಶಿಖಿಯೆ ಹಂಪೆಯರಸ
ಅಸುವಿಗಸುವೆ ಅಣುವಿಗಣುವೆ ಯಾತ್ಮಕಾತ್ಮ ಹಂಪೆಯರಸ
ಶಶಿಗೆ ಶಶಿಯೆ ರವಿಗೆ ರವಿಯೆ ನಭಕೆ ನಭವೆ ಹಂಪೆಯರಸ
ನುಡಿಯದಿರ್ದು ನೋಡದಿರ್ದೊಡೆಂತು ಬರ್ದುಂಕುವೆಂ ತ್ರಿಶೂಲಿ
ನುಡಿಸಿ ನೋಡಿ ಬದುಕಿಸೆನ್ನನಕ್ಕರಿಂ ಕಪಾಲ ಮಾಲಿ
ನೋಡಿ ನೋಡದಿರ್ಪರುಂಟೆ ಕೂಡಿ ಕೂಡದಿರ್ಪರುಂಟೆ
ಮಾಡಿ ಮಾಡದಿರ್ಪರುಂಟೆ ಬೇಡಿ ಬೇಡದಿರ್ಪರುಂಟೆ
ಭಕುತಿ ಸುಖವನೀಯದಿಹುದಿದಾವ ಹೆಂಪು ಹಂಪೆಯರಸ
ಯುಕುತಿ ಏಕೆ ಶಿಶುವಿನೊಡನೆ ಪಶುವಿನೊಡನೆ ಹಂಪೆಯರಸ

ಎನಗೆ ತಂದೆ ತಾಯಿ ಬಂಧುಬಳಗವಚಲ ಭಕ್ತಿ ನೀನೆ
ಎನಗೆ ಸುಗತಿ ಸುಮತಿ ಸೊಂಪು ಬಿಣ್ಪು ನುಣ್ಪು ತಣ್ಪು ನೀನೆ
ತನುವಿನೊಳಗೆ ತೆರಹುಗೊಡದೆ ತೀವಿ ನಿಲ್ಲು ಹಂಪೆಯರಸ
ಮನದ ಕಣ್ಗಳೊಳಗೆ ಸುಳಿದು ಸುಖವನೀಯೊ ಹಂಪೆಯರಸ

ಎನ್ನ ಚಿತ್ತದೊಳಗೆ ತಿಳಿದು ತೊಳಗಿ ಬೆಳಗು ಹಂಪೆಯರಸ
ಎನ್ನ ಭಾವದೊಳಗೆ ಕರುಣವೆರಸಿ ಬೆರಿಸು ಹಂಪೆಯರಸ
ಭವಭವಂಗಳೊಳಗೆ ತಿರುಗಿ ಬಂದು ಸವೆದೆ ಹಂಪೆಯರಸ
ನವನವಾದಿ ಜನನದಿಂದೆ ನವೆದು ನವೆಸೆ ಹಂಪೆಯರಸ
ಹುಟ್ಟಿ ನವೆದು ನಡುವೆ ಮತ್ತೆ ಹುಟ್ಟಿ ಸವೆದು ನವೆದೆನಯ್ಯ
ಹುಟ್ಟಿದಂತೆ ಭವವನೈದಿ ಮಾರುವೋದೆ ಕರುಣಿಸಯ್ಯ
ಪರಮಪುರುಷ ಲಸಿತ ಹರುಷ ಪುಣ್ಯ ಪುರುಷ ಹಂಪೆಯರಸ
ಗರಳಧರನೆ ದುರಿತಹರನೆ ಶರಣವರನೆ ಹಂಪೆಯರಸ

ಅಖಿಳ ಗುರುವೆ ಹಂಪೆಯರಸ
ನಿಖಿಳ ಗುರುವೆ ಹಂಪೆಯರಸ
ದಾನನಿಧಿಯೆ ಹಂಪೆಯರಸ
ಮಾನನಿಧಿಯೆ ಹಂಪೆಯರಸ
ವೇದದೂರ ಹಂಪೆಯರಸ
ನಾದಸಾರ ಹಂಪೆಯರಸ

ದೇವರಮ್ಯ ಭಾವಗಮ್ಯ
ಸಹಜ ನಿತ್ಯ ಬಹಳ ಸತ್ಯ
ಭೃತ್ಯ ಸುಲಭ ಸತ್ಯ ಶರಭ
ಪರಶುಧರನೆ ಕರುಣಿಹರನೆ
ನೋಡು ಶಿವನೆ ನೋಡು ಭವನೆ
ಬಾರ ದೇವ ಸಾರ ಹೃದಯ
ಮಂಗಳಾಬ್ಧಿ ತುಂಗಲಬ್ಧಿ
ವಿಷಮನೇತ್ರ ಲಸಿತಗಾತ್ರ
ಲಿಂಗಮೂರ್ತಿ ಜಂಗಮೂರ್ತಿ

ಎನ್ನ ಗುರುವೆ ತಂದೆ ಈಶ
ಲಾಲಿಸಯ್ಯ ಪಾಲಿಸಯ್ಯಾ
ಏವೆನೀಶ ಕಾವುದೀಶ
ಆಗಳಾಗ ಈಗಳೀಗ

ಛತ್ರೋಳ ಕಾಯ ನತ ನಿಕಾಯ
ದೇವ ಗುರುವೆ ದೇವ ವರವೆ
ದೇವ ಗತಿಯೆ ದೇವ ಮತಿಯೆ
ದೇವ ಪತಿಯೆ ಹಂಪೆಯರಸ
ಜಯತು ಜಯತು ಹಂಪೆಯರಸ

# ಪಂಪಾಕ್ಷೇತ್ರದ ರಗಳೆ.

ಕಂ॥ ನೇತ್ರತ್ರಯನತ್ಯನುಪಮ
ಗಾತ್ರಂ ಪಡೆದೆಮಗೆ ಕುಡುಗೆ ಪಂಪಾನಾಥಂ ।
ಧಾತ್ರೀತಳದೊಳು ಪಂಪಾಕ್ಷೇತ್ರ
ಸ್ತೋತ್ರವನೆ ಮಾಳ್ಪ ಎನ್ನಯ ಮತಿಗುನ್ನತಿಯಂ ॥

## ರಗಳೆ.

ಎಂತೆನೆ ಸಮುದ್ರಮುದ್ರಿತ ಧರಾಮಧ್ಯದೊಳು
ಸಂತತಂ ಮೇರುವಿನ ದಕ್ಷಿಣ ವಿಭಾಗದೊಳು
ಮೆರೆವುದದು ಹೇಮಕೂಟವ್ರಾತ ಶಿವಪುರಂ
ಹೆರೆಸೂಡಿದಂ ನೆಲಸಿ ನಿಂದ ಪಂಪಾಪುರಂ
ಹರಿಯಜರು ಸೊಗಸಿನಿಂ ಪೊಗಳ್ವ ಪಂಪಾಪುರಂ
ಶರಣರೊಲವಿಂದನರಿದಿರ್ಪ ಪಂಪಾಪುರಂ

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಪಾಪಹರ ಸುತ್ತ ಯೋಜನ ಪ್ರಮಾಣಂ ಕೂಡೆ
ಅಲ್ಲಿ ಮೂಡಣ ಬಾಗಿಲೊಳಗಿರ್ಪನುನ್ನತಂ
ಸಲ್ಲಲಿತ ಗುಣಕಿನ್ನರೇಶ್ವರಂ ಶಾಶ್ವತಂ
ಅಲ್ಲಿ ತೆಂಕಣ ಬಾಗಿಲೊಳಗಿರ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯ ದಿಟಂ ಸೋಮನಾಥನತಿಪ್ರೇಮದಿಂ
ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮ ಗುಣ ಸ್ಥಾಣು ವಾಣಿಭದ್ರೇಶ್ವರಂ
ಇಂತೆನಿಸಿ ಮೆರೆವ ನಾಲ್ಕುಬಾಗಿಲುಗಳೊಳಗೆ
ತಿಂಥಿಣಿಪ ಶಿವಲಿಂಗವಿಪ್ಪುವಾ ಪುರದೊಳಗೆ

ಪಂಪಾವಿರೂಪಾಕ್ಷನಲ್ಲಿಂದನಂತರಂ
ಹೆಂಪಿಂದ ಹನುಮಂತೇಶ್ವರನಿಪ್ಪನುರುತರಂ

ರಂಭೇಶ್ವರಂ ನಳೇಶ್ವರರಿರ್ಪರಂತಲ್ಲಿ
ಶಂಭುಮುಕ್ತೇಶ್ವರಂ ಮಲ್ಲಿಕಾರ್ಜುನರಲ್ಲಿ
ಮಂಗಳಾಸ್ಪದ ರಾಮಲಕ್ಷ್ಮಣೇಶ್ವರರಲ್ಲಿ
ಹಿಂಗದೆ ಮಹಾಕಾಳದೇವರೊಪ್ಪುವರಲ್ಲಿ
ವರದ ಮಾರ್ಕಂಡೇಶ್ವರಂ ನಿಂದನೊಲವಿಂದೆ
ಸುರರಾಜನಪ್ಪಿಂದ್ರೇಶ್ವರಂ ಮುಂದೆ
ಗುರುಸೋಮನಾಥನಿಪ್ಪಂ ಪುರದೊಳಲವಿಂದೆ
ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ
ನಲವಿಂದೆಯೊಪ್ಪುತಿರೆ ನಿಂದನಜ್ಞೇಶ್ವರಂ
ನೆಲಸಿಹಂ ಮುಂದೆ ಪರಮಜ್ಞಾನಿ ಶಂಕರಂ
ತಾನಘೋರೇಶ್ವರಂ ದಾನಿ ನಾಗೇಶ್ವರಂ
ಶ್ರೀನಿಧಿಯುದಾರ ಕೇದಾರ ದೇವೇಶ್ವರಂ
ಕರಮೆಸೆವ ಲಿಂಗಛಾಯಾಮಲ್ಲಿಕಾರ್ಜುನಂ
ವರುಣೇಶ್ವರಂ ವಾಯುವೇಶ್ವರಂ ಪಾವನಂ
ತರದಿಂ ಕುಬೇರೇಶ್ವರಂ ರಂಜಿಸುವರಲ್ಲಿ
ಕರುಣಾದ್ರಿ ಈಶಾನ್ಯದೇವರೊಪ್ಪುವರಲ್ಲಿ
ಬ್ರಹ್ಮೇಶ್ವರಂ ದಯಾಪರನಗಸ್ತ್ಯೇಶ್ವರಂ
ಬ್ರಹ್ಮಂಗಭೇದ್ಯಕೋಣೆಯ ಶಂಕರೇಶ್ವರಂ

ಕ್ರಮದಿಂದೆ ಜಡೆಯ ಶಂಕರದೇವನೊಪ್ಪಿರಲು
ವಿಮಳ ಪಾತಾಳಗಂಗೆಯ ಸೋಮನೊಪ್ಪಿರಲು
ಲೋಕಪಾವನದೇವರುಂ ಕ್ಷೋಣಶಂಕರಂ
ಲೋಕಕ್ಕೆ ರಂಜಿಪೇಕಾಂತರಾಮೇಶ್ವರಂ
ಇನ್ನು ನಾನರಿಯದನೇಕಲಿಂಗಂ ಕೂಡೆ
ಸನ್ನಿಹಿತವಿಪ್ಪವಾ ಪುರದ ಸುತ್ತಂ ನೋಡೆ
ಎಣಿಸಲೆನ್ನಳವೆ ಪಂಪಾಪುರದ ಮಹಿಮೆಯಂ
ತ್ರಿಣಯನುಂ ಲಿಂಗಮಯವಾದ ನಿಸ್ಸೀಮೆಯಂ

ಇನ್ನಿರ್ದ ತೀರ್ಥಸಂತಾನ × × × ಳ್ದಪೆಂ
ಸನ್ನುತದಿ ಶಿವನ ಕಾರುಣ್ಯದಿಂ ಪೊಗಳ್ದಪೆಂ

ಅರರೆ ಮನ್ಮಥತೀರ್ಥವಿಪ್ಪದನುರಾಗದಿಂ
ವರಸೋಮತೀರ್ಥದಿಂ ಮಹಾಕಾಳತೀರ್ಥದಿಂ
ಎಸೆವ ತಾರಕ ತೀರ್ಥದಿಂ ಸೂರ್ಯತೀರ್ಥದಿಂ
ಪಸರಿಸುವ ವತ್ಸತೀರ್ಥಂ ರೈಭ್ಯತೀರ್ಥದಿಂ
ನಾಗಮಾರ್ಕಂಡೇಯ ಗಜಾಶ್ವತೀರ್ಥಂಗಳಿಂ
ಮೇಗೆ ಕಾದಂಬರೀ ಬ್ರಹ್ಮತೀರ್ಥಂಗಳಿಂ
ಇಂತೆನಿಸಿ ಮೆರೆವ ಹನ್ನೊಂದು ತೀರ್ಥಂಗಳವು
ಕಂಡುಮುದಹರನಶ್ವದಾನಮೆಂದೆನಿಪವವು

ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಠನಾಶ್ರಮವಿಪ್ಪದೊಲುಮೆಯೊಳು
ಅಲ್ಲಿ ಪಾಪವಿನಾಶಿ ಎಂಬ ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧಾ ವಿಧಾನದ ತೀರ್ಥ
ಬದರೊಳಗೆ ಬದರಿಕಾಶ್ರಮವುಂ ಕೋಟಿತೀರ್ಥ
ಪದರೊಳಗೆ ಶಬರಿಕಾಶ್ರಮವುಂ ಕೋಟಿತೀರ್ಥ
ಮಿಗೆ ದೇವಪೂತ ಪಂಪಾಸರೋವರ ಮುಂದೆ
ಸೊಗಯಿಸುವ ಕಾಮದಹನದ ಭಸಿತವದು ಮುಂದೆ
ಅಲ್ಲಿಂದ ಮಾಲ್ಯವಂತಾಚಳಮದೊಪ್ಪುವುದು
ಸಲ್ಲಲಿತ ಋಣವಿಮೋಚನ ತೀರ್ಥ ಒಪ್ಪುವುದು
ಉರಿಯುಕ್ಷತೀರ್ಥಂ ಗದಾತೀರ್ಥ ಧನುತೀರ್ಥ
ವರಶಂಖಚಕ್ರತೀರ್ಥಂ ಪದ್ಮದಳತೀರ್ಥ
ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾಕ್ಷೇತ್ರದೊಳಗಗ್ನಿತೀರ್ಥಂ ಸ್ವಾರ್ಥ
ರಾಮತೀರ್ಥಂ ಸಂದ ಪಿತೃತೀರ್ಥವಂತಲ್ಲಿ
ಏಮಾತು ಮಾಂಗಲ್ಯತೀರ್ಥ ಒಪ್ಪುವುದಲ್ಲಿ
ಶ್ರೀರುದ್ರಪಾದವಿಪ್ಪದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು
ಇನ್ನುಳ್ಳ ತೀರ್ಥಮಂ ಪೆಸಗೊಳಲೆನ್ನಳವೆ
ಪನ್ನಗರ್ ಗರುಡಗಂಧರ್ವ ಸಂಕುಳರಳವೆ
ಹರಿಯುಲ್ಲಿಯವಗಾಹವಿದ್ದು ಹರಿಪದವಿಯಂ
ಸರಸಿಜಭವಂ ಹರುಷದಿಂದಲಜಪದವಿಯಂ

ಸುರರಾಜನನುರಾಗದಿಂದಿಂದ್ರಪದವಿಯುಂ
ಪರಮ ಕಾರಣಿಕರೆಲ್ಲರು ಪರಮ ಪದವಿಯುಂ
ಪಡೆದರೆನೆ ತೀರ್ಥಮಹಿಮೆಯನೇನನೆಂದಪೆಂ
ನೃಪನ ಘನತರ ಸಕಳ ಸಾಮರ್ಥ್ಯವೆಂದಪೆಂ

ಇಂತಪ್ಪ ಲಿಂಗ ತೀರ್ಥಂಗಳಿಂದಂ ತೀವಿ
ಸಂತತಂ ಶಿವಭಕ್ತಕುಲವನೊಲವಿಂದೋವಿ
ಇಪ್ಪುದೀ ಧರೆಗೆ ತೊಡವೆನಿಸಿ ಪಂಪಾಪುರಂ
ಸರ್ಪಭೂಷಣನ ಭಾವಭರಿತ ಪಂಪಾಪುರಂ
ಪೆಸರ್ಗೊಂಡರಘವನೊಣಗಿಸುವ ಪಂಪಾಪುರಂ
ಅಸಮಾಕ್ಷನಲ್ಲಿ ಕೂಡಿಸುವ ಪಂಪಾಪುರಂ
ಬಂದು ಮರೆಹೊಕ್ಕರಂ ಕಾವ ಪಂಪಾಪುರಂ
ಸಂದಣಿಸಿ ಬೇಡಿದುದನೀವ ಪಂಪಾಪುರಂ
ವಾರಣಾಸಿಗೆಯು ಮಿಗಿಲಾದ ಪಂಪಾಪುರಂ
ಮಾರಾರಿಗಂದು ಮಗಲಾದ ಪಂಪಾಪುರಂ
ಭವದ ಭಯವಂ ನಿವಾರಿಸುವ ಪಂಪಾಪುರಂ
ತವೆ × ದುರಿತವಂ ನಿದಾರಿಸುವ ಪಂಪಾಪುರಂ
ಶಿವಪುರಗಳೊಳಗೆ ಮಿಗಿಲಾದ ಪಂಪಾಪುರಂ
ಶಿವನ ಮನದೊಳಗೆ ಸಲೆ ನಲಿವ ಪಂಪಾಪುರಂ
ಸಕಳ ಪುಣ್ಯಂಗಳೋಲಗಿಪ ಪಂಪಾಪುರಂ
ಸಕಳ ಮುಕ್ತಿಗಳಲಂಕರಿಪ ಪಂಪಾಪುರಂ
ಅಣಿಮಾದಿಗು × × ಣವಗಲದಿರ್ಪ ಪಂಪಾಪುರಂ
ತ್ರಿಣಯನಂಗ × × ಂತಪ್ಪ ಪಂಪಾಪುರಂ
ಪುರಹರಂ ಕಾಮನಂ ಸುಟ್ಟ ಪಂಪಾಪುರಂ
ಗಿರಿಜೆ ರತಿಗಭಯವಂ ಕೊಟ್ಟ ಪಂಪಾಪುರಂ
ಆ ಪುರದೊಳೊಪ್ಪುವಂ ಶಶಿಧರಂ ವಿಷಧರಂ
ಕಾಪಾಲಿ × ನದ್ಧರಹರಂ ಪುರಹರಂ
ದುರಿತ ತಿಮಿರ × × ದಿವಾಕರಂ ಭೀಕರಂ
ವರವೀವ ವಿತತ ಕರುಣಾಕರಂ ಶಂಕರಂ

ಸಕಳ ಚೈತನ್ಯ ವಿಸ್ತಾರಕಂ ಪ್ರೇರಕಂ
ಸುಕೃತ ಸುಕರ್ೈಕ ನಿಸ್ಸಾರಕಂ ಪ್ರೇರಕಂ
ಕಾಲ ಮನ್ಮಥ ಗರ್ವ ಶೋಷಣಂ ಭೀಷಣಂ
ಬಾಲಚಂದ್ರನು ಕಳಾಪೋಷಣಂ ಭೂಷಣಂ
ಹರಿಸುರಪ ಕಮಳ ರಾಜಿತಂ ಭಾವಿತಂ
ಶರಣ ನಿಕರಸ್ತೋತ್ರ ಪೂಜಿತಂ ಯೋಜಿತಂ
ಅಖಿಳ ಲೋಕಾಗಮಂ ಖಂಡಿತಂ ಮಂಡಿತಂ
ನಿಖಿಳೈಕ ಶಾಶ್ವತ ಮಹೋನ್ನತಂ ಸ × × ನುತಂ
ನೆಲಸಿಪ್ಪನಖಿಳ ಗುರುಪಂಪಾ ವಿರೂಪಾಕ್ಷ
ಒಲವಿಂದ ಶಾಂತಗುರು ಪಂಪಾವಿರೂಪಾಕ್ಷ
ಅಸಮಗುರು ವಿಷಮಗುರು ಪಂಪಾವಿರೂಪಾಕ್ಷ
ಎಸೆವ ಗುರು ವಿಶ್ವಗುರು ಪಂಪಾವಿರೂಪಾಕ್ಷ
ಎನ್ನ ಗುರು ಚೆನ್ನಗುರು ಪಂಪಾವಿರೂಪಾಕ್ಷ
ಉನ್ನತ ಸದ್ವೈಕಗುರು ಪಂಪಾವಿರೂಪಾಕ್ಷ
ಇಂತು ಪಂಪಾವಿರೂಪಾಕ್ಷನಂ ಕೆಳೆಗೊಂಡು
ಸಂತತಂ ಶಿವಭಕ್ತಿ ನವರಸದ ಸವಿಗಂಡು
ಉರುತರಾವಳಿಯೊಳೊಪ್ಪಿತ್ತು ಪಂಪಾಪುರಂ
ಪರಮೇಶ್ವರನ ಸೆಜ್ಜೆ ಎನಿಪ ಪಂಪಾಪುರಂ

**ಕಂ||** ಪಂಪಾಕ್ಷೇತ್ರದ ಮಹಿಮೆಯ
ನಿಂಪಿಂದಿಂ ಪೇಳ್ವ ಕೇಳ್ವ ಭಕ್ತರ್ಗೆಲ್ಲಂ ।
ಸೊಂಪಿಂದ ಪರಮ ಸುಖಮನ
ಲಂಪಿಂದಂ ಕುಡುಗೆ ಹಂಪೆಯ ವಿರೂಪಾಕ್ಷಂ॥

# ಸಂಸಾರ ವ್ಯಾಮೋಹ ನಿರಸನ ರಗಳೆ.

## ರಗಳೆ.

ಶ್ರೀ ವಿರೂಪಾಕ್ಷಲಿಂಗಪ್ರಭುವೆ ನೀನಿಂತು
ಭಾವಿಸುತೆ ಕಟ್ಟಿದ ಮಹಾ ಕಲ್ಪನೆಯನಾಂತು
ತಿರುಗುತ್ತಿರ್ದಪೆನಖಿಳಘೋರ ಸಂಸಾರದೊಳು
ಪುರಹರನೆ ನಿನ್ನನರಿಯದೆ ಜನ್ಮ ಶರಧಿಯೊಳು
ಎಂತೆಂತು ನೀನೆ ಕಟ್ಟಿದ ಪಟ್ಟ ಕಲ್ಪನೆಗೆ
ಅಂತಂತೆ ಮೈಯ್ಯೊಡ್ಡಿಕೊಂಡೆನಾ ಯಾತನೆಗೆ
ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ
ಹುಲ್ಲಾಗಿ ಲತೆಯಾಗಿ ಗಿಡುವಾಗಿ ಮರನಾಗಿ
ಪುಳುವಾಗಿ ಖಗವಾಗಿ ಕಪಿಯಾಗಿ ಮೃಗವಾಗಿ
ಬಳಸಿ ಬಂದಾವಾವ ಯೋನಿಗಂ ತನುವಾಗಿ
ಬೇಳಾಗಿ ಬೆಂಡಾಗಿ ಹಾಳಾಗಿ ಕಾಳಾಗಿ
ಗೋಳುಂಡೆಗೊಂಡು ಬಂದೆಂತಕ್ಕೆ ಪಶುವಾಗಿ
ಕುರುಡನೆಂತಕ್ಕೆ ಲಾವಗೆ ಪಿಡಿದ ತೆರನಾಗೆ
ಧರೆಯೊಳಗೆ ಕಾತ ಕಾಳಿನ ನ್ಯಾಯದಂತಾಗೆ
ಎಂತಕ್ಕೆ ಮನುಜ ಜನ್ಮಕ್ಕೆ ಬರಲನುವಾಗೆ

ತಾಯಿ ತಂದೆಯ ಶುಕ್ಲ ಶೋಣಿತಂ ನೆನವಾಗೆ
ಆಯುವಿಂದವಯವಂ ಬಲಿವುತೊಂದಾಗೆ
ತಾಯ ಪೊಟ್ಟೆಯ ಕರುಳ್ಸುತ್ತಿ ಮಿಗೆ ಸೆಡೆಯುತಂ
ತಾಯೆತ್ತ ಮುಗ್ಗುಲಾದತ್ತತ್ತ ಕೆಡೆಯುತಂ
ಉದರಗತ ಶಿಖಿಯು ಸೆಕೆ ತಾಗೆ ಮಿಗೆ ಕುಂದುತಂ
ಪುದಿದ ಮಾಸು ಮುಸುಂಕಲುಬ್ಬಸದೊಳೊಂದುತಂ
ಕ್ರಿಮಿ ಕೀಟಕ ಕ್ಷುದ್ರ ಜಂತುವೋಲ್ಬಳೆವುತಂ
ಶ್ರಮದಿಂದ ತಾಯಿ ಬಳಲೊಡನೊಡನೆ ಬಳಲುತಂ
ಕೀವು ನೆತ್ತರ್ನೆಣಂದೊದಹು ಮಿದುಳಂ ಮುತ್ತೆ
ಆವಾವ ಹೇಯಮುಂಟವರವರೊಳುಂ ಸುತ್ತೆ

ಇಂತು ನರಕದ ಬೇರವೊನಿಸಿದುದರದ ನಡುವೆ
ಸಂತವೊತ್ತು ಮಾಸಂ ಪೇಸಿಕೆಯ ನಡುವೆ
ಕತ್ತಲೆಯ ಕರುಳೊಳಗೆ ಮರುಳಂದದಿಂ ಬೆಳೆದು
ಒರ್ತಲೆಯ ಪುಳುವಿನಂತೆಂತಕ್ಕೆ ಬೆಳೆಬೆಳೆದು
ಅಲ್ಲಿ ಕಣ್ಬಲಿಯದಿರೆ ಕುರುಡನಾಗುತೆ ಬಂದು
ಅಲ್ಲಿ ಕಿವಿ ಬಲಿಯದಿರೆ ಕಿವುಡನಾಗುತೆ ಬಂದು
ಅಲ್ಲಿ ನಾಲಿಗೆ ಬೀಳೆ ಮೂಗನಾಗುತೆ ಬಂದು
ಅಲ್ಲಿ ಕೈ ಬಲಿಯದಿರೆ ಮುಡುಬನಾಗುತೆ ಬಂದು
ಅಲ್ಲಿ ಕಾಲ್ಬಲಿಯದಿರೆ ಹೆಳವನಾಗುತೆ ಬಂದು
ಅಲ್ಲಿ ತನು ಬಲಿಯದಿರೆ ಮುದುಡೆಯಾಗುತೆ ಬಂದು
ಜೀವಂ ಬಲಿಯದಿರಲ್ಬಸುರಿಳಿವುತಂ ಬಂದು
ಆವಾವ ಕಂಟಕಂಗಳ ನಡುವೆ ಸಲೆ ಬೆಂದು

ಬರುತ ಬರುತಡ್ಡವಾಯ್ದೊಡೆ ನೋವು ನೆರೆ ಮಿಕ್ಕು
ಉರವಣಿಸುತಲ್ಲಿ ಕತ್ತರಿ ಕಾರದೊಳು ಪೊಕ್ಕು
ಸರ್ವಾಂಗವಂ ಕಡಿಯೆ ಮಿಡುಮಿಡನೆ ಮಿಡುಕುತ್ತ
ದುರ್ವಹಾವಸ್ಥೆಯಿಂ ತಾಯಿ ನೊಂದು ಬಳಲುತ್ತ
ತಾಯದೇಹಕ್ಕಲ್ಲಿ ದುಡುದುಡುಕೆಯಾಗುತ್ತಿರೆ
ಬಾಯುಳಿವುತೆನ್ನಸುಗೆ ಸಂದೇಹವಾಗುತ್ತಿರೆ
ಇಂತು ನಾನಾ ವಿಧದ ಕಂಟಕಮುಮಂ ಕಳೆದು
ಮುಂತಿರ್ದ ಮಲಮೂತ್ರ ಹೇಸಿಕೆಂದಲೆಯಿಳಿದು
ಸೂಲಗಿತ್ತಿಯ ಕೆಯ್ಯ ಮೊರದೋಳ್ಮದುಡಿ ಬೀಳ್ದು
ಮೇಲೆ ಮುಸುಕಿರ್ದ ಮಾಂಸಂ ಸುಲಿಯೆ ಹೊಲಸೇಳ್ದು
ನಡನಡನೆ ನಡುಗಿ ಬೆಚ್ಚಂಬಿಲಮುಮಂ ಪೊಯ್ದು
ಮಿಡಮಿಡನೆ ಮಿಡುಕೆ ಪೊಕ್ಕುಳ ಬಳ್ಳಿಯಂ ಕೊಯ್ದು
ಆರಾರಾರದೇನ ಮಾಳ್ಪರಂ ತದಕ್ಕೊಳಗಾಗಿ
ಬಾರದ ಭವಂ ಬರಿಸಲಂತದಕ್ಕೊಳಗಾಗಿ

ಏರಾದವುಣ್ಣೊಡಲ ಮೊಲೆಯ ಕೀವಂ ಪೀರ್ದು
ಮಾರಾಗಿ ಮಾಯೆ ಇಚ್ಚೆಗೆ ಬೆಚ್ಚತೊಳಸಾರ್ದು

ತೊಟ್ಟಿಲೊಳ್ಮಲಮೂತ್ರದೊಂದುಂಡೆಯಾಗುತಂ
ಪಟ್ಟಿರ್ದ್ದ ಮೊಲೆಗೆ ನಾಲಿಗೆ ಗೀಳ್ತು ನೋವುತಂ
ಅಂಬಳಿಕೆ ಉಚ್ಛಿಷ್ಟವಿಳಿಯೆ ನೆರೆ ಜಾರಿಸುತೆ
ಬೆಂಬಳಿಯೊಳಿಳಿವ ಮೂತ್ರವನಲ್ಲಿ ಜಾರಿಸುತೆ
ಕೆರಕಾಗಿ ಕೆರೆಕೆರೆದು ಕಿವಿಯನೊಳಗೊಂದುತಂ
ಪರಿದೊಗವ ಸಿಂಬುಳಂ ಶ್ಲೇಷ್ಮದೋಳ್ಮುಳುಗುತಂ
ಮಲವೆಂದು ತಾನರಿಯದೆಲ್ಲವುಂ ತಿನುತಿರ್ದ್ದ
ಪುಳುವೆಂಬುದೇನರಿಯದೆಲ್ಲವುಂ ತಿನುತಿರ್ದ್ದ
ನಡುವೆ ಬಾಲಗ್ರಹಂ ಪೊಡೆಯೆ ವಿಕೃತಿಗೊಂಡು
ನಡುವೆ ರೋಗಗಳಾಗೆ ಬೆದಬೆದನೆ ಬೆಂದು
ಇಂತು ಬಾಲ್ಯದ ನರಕದೊಳಗಾಳುತಿರ್ಪಲ್ಲಿ
ಸಂತತಂ ಘೋರದೊಳ್ತಿರುಗಿ ಬರುತಿರ್ಪಲ್ಲಿ
ನಿನ್ನ ನಾಮಂದದಿಂ ನೆನೆಯಲುಂಟೇ ದೇವ
ನಿನ್ನನಿಂತೆಂದರಿಯಲುಂಟೇ ಮಹಾದೇವ

ಬಳಿಕ ಯೌವ್ವನವಾಗೆ ತಾಯ್ತಂದೆಗಳ್ಕಂಡು
ತಿಳಿದೊಂದು ಮದುವೆಯಂ ಮಾಡಲ್ಕನಂದಂದು
ಹಾಳೂರ ಕೋಳಮಂ ಕೊರಲೊಳಿಕ್ಕುವ ತೆರದಿ
ಕೇಳ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ಪಶುವಿನ ಕೊರಲೊಳೊಂದು ಪಾಶವಂ ಬಿಗಿವಂತೆ
ವಿಸುಕದಂತಲ್ಲೊಂದು ಎಳೆ ಮರವ ಬಿಗಿವಂತೆ
ದೈತೆಯಂ ತಂದೊರ್ಬಳಂ ಮದುವೆಯಂ ಮಾಡಿ
ಸ್ಪೈತಿಕ್ಕಿ ಬಿಡಬಾರದಂತೆ ನೇಹಂಗೂಡಿ
ಆ ಯೌವ್ವನದ ಗರ್ವದಿಂ ಧನದ ಗರ್ವದಿಂ
ತಾಯುಳ್ಳ ಪಿತರುಳ್ಳ ರೂಪುಳ್ಳ ಗರ್ವದಿಂ
ದುರ್ವಿಕಾರಂ ಮನವನೆತ್ತಿಕ್ಕೆ ಪರಿಪರಿದು
ದುರ್ಬೋಧರಂ ಕೂಡಿಕೊಂಡು ಸುತ್ತಂ ಸುಳಿದು
ಮದ್ದುಕುಣಿಕೆಯ ಕಾಯನಾವಗಂ ನಲಿಯುತ್ತೆ
ಹೆಡ್ಡತನದಿಂ ಪರಿದು ನಾಯ್ಹಾಲನುಂಬಂತೆ
ಒತ್ತರಿಸಿ ಪಿತ್ಥವದು ತಲೆಗೇರಿತೆಂಬಂತೆ
ಒತ್ತಂಬದಿಂ ಗ್ರಹ ವಿಕಾರವೆಡೆಗೊಂಡಂತೆ

ಲಲನೆಯರ ಸವಿನುಡಿಯುಂ ಕರ್ಣಕಿನಿದಾಗುತಂ
ತಲೆ ಪುಳಿತ ನಾಯಂತೆ ಇರದೆ ಬೇಳಾಗುತಂ
ಕಿವಿಯ ಒಳಗಿರುತಿರ್ಪ ಗುಗ್ಗೆಯಂ ನೋಡದಲೆ
ಅವರ ಹಲ್ಲಿನೊಳಿರ್ಪ ಕಿನಿಚುವಂ ನೋಡದಲೆ
ನಾಸಿಕಂ ಸಿಂಬುಳದ ಹಿರಿನಾಳವೆಂದಿರದೆ
ಪೇಸಿಕೆಯ ಮುಖವು ಬಚ್ಚಲ ನಾಳವೆಂದಿರದೆ
ನಳಿ ತೋಳ್ಗಳಸ್ಥಿಗಳ ದಂಡೆಗಳು ಯೆಂದಿರದೆ
ಲಲಿತ ಕಕ್ಷಂ ಬೆವರ ದುರ್ಗಂಧವೆಂದಿರದೆ
ಬಟ್ಟ ಮೊಲೆಗಳ್ಮಾಂಸದೊಟ್ಟಿಲ್ಗಳೆಂದಿರದೆ
ಪೊಟ್ಟೆ ಎಂಬುದು ಕರುಳ ಮೊಟ್ಟೆ ತಾನೆಂದಿರದೆ
ನಡು ಜಿಗುಪ್ಸಾರಸದ ನಟ್ಟ ನಡುವೆಂದಿರದೆ
ಎಡಬಲದ ಬರಿಗಳೆಲ್ವಿನ ಕಟ್ಟಡೆಂದಿರದೆ
ಪೊರವಾರು ಮಲಮೂತ್ರದೊರತೆ ತಾನೆಂದಿರದೆ
ಎರಗಿದೇಂ ಪ್ರಾಯದೊಳು ಬೀಭತ್ಸವೆಂದಿರದೆ
ಒಂದು ಮೂತ್ರದ ಬಟ್ಟೆಯೊಂದಮೇಧ್ಯದ ಬಟ್ಟೆ
ಒಂದೆರಡರೊಳಗಲ್ಲಿ ಮತ್ತೆ ಕಷ್ಟದ ಬಟ್ಟೆ
ಪುಳುಗಳುಂ ರಸಿಕೆಯುಂ ಸುರಿತಪೋಡದು ಬಟ್ಟೆ
ಕಳೆದಿಂದ್ರಿಯಂ ಕೀವು ಸುರಿತಪೋಡದು ಬಟ್ಟೆ
ನರರ ನರಕದ ಬಟ್ಟೆಯಂದರಿಯದಾನಿದಂ
ಪರಿಕಿಸದೆ ಕೊಂಡಾಡುತಿರ್ದೆನರೆ ಮರುಳಿದಂ
ಪುಳಿತ ಪೆಣನಂ ಕಡಿದು ತಿನುತಿರ್ಪ ನಾಯಂತೆ
ಕಳಿತ ಮಾಂಸಕ್ಕಳುಪಿ ತಿಂಬ ಬಳ್ಳುವಿನಂತೆ
ಉಚ್ಛಿಷ್ಟದೊಳ್ಪೊಳ್ಸಹಿ ಹಂದಿಯ ತೆರನಂತೆ
ಅಚ್ಚರಿಯ ಪೇಸಿಕೆಯೊಳಗೆ ಮುಳುಗುತಾನಿಂತೆ

ಸವೆದೆನೆಲೆ ಶಂಕರಾ ಶಶಿಧರಾ ಕರುಣಿಸಾ
ಶಿವನೆ ಸದಾಶಿವನೆ ಕಾಮಾರಿ ಕರುಣಿಸಾ
ಇಂತಪ್ಪ ಹೇಯದೋಳ್ನಿನ್ನ ನೆನೆಯಲುಂಟೆ
ಇಂತಪ್ಪ ಘೋರದೊಳಗಿರ್ದೆನಗೆ ನೀನುಂಟೆ
ಇಂತು ಸತಿಯರ ಮೋಹದೊಳಗೆ ಸಿಕ್ಕಿರುತಿರಲು
ಸಂತತಂ ಯೌವ್ವನದ ನರಕದೊಳು ಮುಳುಗಿರಲು

ತೊಟ್ಟಿಲೊಳ್ಮಲಮೂತ್ರದೊಂದುಂಡೆಯಾಗುತಂ
ಪಟ್ಟಿರ್ದು ಮೊಲೆಗೆ ನಾಲಿಗೆ ಗೀಳ್ತು ನೋವುತಂ
ಅಂಬಳಿಕೆ ಉಚ್ಛಿಷ್ಟವಿಳಿಯೆ ನೆರೆ ಜಾರಿಸುತೆ
ಬೆಂಬಳಿಯೊಳಿಳಿವ ಮೂತ್ರವನಲ್ಲಿ ಜಾರಿಸುತೆ
ಕೆರಕಾಗಿ ಕೆರೆಕೆರೆದು ಕಿವಿಯನೊಳಗೊಂದುತಂ
ಪರಿದೊಗವ ಸಿಂಬುಳಂ ಶ್ಲೇಷ್ಮದೊಳ್ಮುಳುಗುತಂ
ಮಲವೆಂದು ತಾನರಿಯದೆಲ್ಲವುಂ ತಿನುತಿರ್ದು
ಪುಳುವೆಂಬುದೇನರಿಯದೆಲ್ಲವುಂ ತಿನುತಿರ್ದು
ನಡುವೆ ಬಾಲಗ್ರಹಂ ಪೊಡೆಯೆ ವಿಕೃತಿಗೊಂಡು
ನಡುವೆ ರೋಗಗಳಾಗೆ ಬೆದಬೆದನೆ ಬೆಂದು
ಇಂತು ಬಾಲ್ಯದ ನರಕದೊಳಗಾಳುತಿರ್ಪಲ್ಲಿ
ಸಂತತಂ ಘೋರದೊಳ್ತಿರುಗಿ ಬರುತಿರ್ಪಲ್ಲಿ
ನಿನ್ನ ನಾಮಂದದಿಂ ನೆನೆಯಲುಂಟೇ ದೇವ
ನಿನ್ನನಿಂತೆಂದರಿಯಲುಂಟೇ ಮಹಾದೇವ

ಬಳಿಕ ಯೌವ್ವನಮಾಗೆ ತಾಯ್ತಂದೆಗಳ್ಕಂಡು
ತಿಳಿದೊಂದು ಮದುವೆಯಂ ಮಾಡಲ್ಕಾನಂದಂದು
ಹಾಳೂರ ಕೋಳಮಂ ಕೊರಲೊಳಿಕ್ಕುವ ತೆರದಿ
ಕೇಳ ಹೆಳವಂಗೆ ಸಂಕಲೆಯ ಬಂಧಿಪ ತೆರದಿ
ಪಶುವಿನ ಕೊರಲೊಳೊಂದು ಪಾಶವಂ ಬಿಗಿವಂತೆ
ವಿಸುಕದಂತಲ್ಲೊಂದು ಎಳೆ ಮರವ ಬಿಗಿವಂತೆ
ದೃತೆಯಂ ತಂದೊರ್ಬಳಂ ಮದುವೆಯಂ ಮಾಡಿ
ಸೃತಿಕ್ಕೆ ಬಿಡಬಾರದಂತೆ ನೇಹಂಗೂಡಿ
ಆ ಯೌವ್ವನದ ಗರ್ವದಿಂ ಧನದ ಗರ್ವದಿಂ
ತಾಯುಳ್ಳ ಪಿತರುಳ್ಳ ರೂಪುಳ್ಳ ಗರ್ವದಿಂ
ದುರ್ವಿಕಾರಂ ಮನವನೆತ್ತಿಕ್ಕೆ ಪರಿಪರಿದು
ದುರ್ಬೋಧಗಂ ಕೂಡಿಕೊಂಡು ಸುತ್ತಂ ಸುಳಿದು
ಮದ್ದುಕುಣಿಕೆಯ ಕಾಯನಾವಗಂ ನಲಿಯುತ್ತೆ
ಹೆಡ್ಡತನದಿಂ ಪರಿದು ನಾಯ್ಹಾಲನುಂಬಂತೆ
ಒತ್ತರಿಸಿ ಪಿತ್ಥವದು ತಲೆಗೇರಿತೆಂಬಂತೆ
ಒತ್ತಂಬದಿಂ ಗ್ರಹ ವಿಕಾರವೆಡೆಗೊಂಡಂತೆ

ಲಲನೆಯರ ಸವಿನುಡಿಯು ಕರ್ಣಕಿನಿದಾಗುತಂ
ತಲೆ ಪುಳಿತ ನಾಯಂತೆ ಇರದೆ ಜೇಳಾಗುತಂ
ಕಿವಿಯು ಒಳಗಿರುತಿರ್ಪ ಗುಗ್ಗೆಯಂ ನೋಡದಲೆ
ಅವರ ಹಲ್ಲಿನೊಳಿರ್ಪ ಕಿನಿಚುವಂ ನೋಡದಲೆ
ನಾಸಿಕಂ ಸಿಂಬಳದ ಹಿರಿನಾಳವೆಂದಿರದೆ
ಪೇಸಿಕೆಯು ಮುಖವು ಬಚ್ಚಲ ನಾಳವೆಂದಿರದೆ
ನಳಿ ತೋಳ್ಗಳಸ್ಥಿಗಳ ದಂಡೆಗಳು ಯೆಂದಿರದೆ
ಲಲಿತ ಕಕ್ಷಂ ಬೆವರ ದುರ್ಗಂಧವೆಂದಿರದೆ
ಬಟ್ಟ ಮೊಲೆಗಳ್ಮಾಂಸದೊಟ್ಟಿಲ್ಗಳೆಂದಿರದೆ
ಪೊಟ್ಟೆ ಎಂಬುದು ಕರುಳ ಮೊಟ್ಟೆ ತಾನೆಂದಿರದೆ
ನಡು ಜಿಗುಪ್ಸಾರಸದ ನಟ್ಟ ನಡುವೆಂದಿರದೆ
ಎಡಬಲದ ಬರಿಗಳೆಲ್ವಿನ ಕಟ್ಟಡೆಂದಿರದೆ
ಪೊರಮಾರು ಮಲಮೂತ್ರದೊರತೆ ತಾನೆಂದಿರದೆ
ಎರಗಿದೇಂ ಪ್ರಾಯದೊಳು ಬೀಭತ್ಸವೆಂದಿರದೆ
ಒಂದು ಮೂತ್ರದ ಬಟ್ಟೆಯೊಂದಮೇಧ್ಯದ ಬಟ್ಟೆ
ಒಂದೆರಡರೊಳಗಲ್ಲಿ ಮತ್ತೆ ಕಷ್ಟದ ಬಟ್ಟೆ
ಪುಳುಗಳುಂ ರಸಿಕೆಯುಂ ಸುರಿತರ್ಪೊಡದು ಬಟ್ಟೆ
ಕಳೆದಿಂದ್ರಿಯಂ ಕೀವು ಸುರಿತರ್ಪೊಡದು ಬಟ್ಟೆ
ನರರ ನರಕದ ಬಟ್ಟೆಯುಂದರಿಯದಾನಿದಂ
ಪರಿಕಿಸದೆ ಕೊಂಡಾಡುತಿರ್ದೆನರೆ ಮರುಳಿದಂ
ಪುಳಿತ ಪೆಣನಂ ಕಡಿದು ತಿನುತಿರ್ಪ ಸಾಯಂತೆ
ಕಳಿತ ಮಾಂಸಕ್ಕಳುಪಿ ತಿಂಬ ಬಳ್ಳುವಿನಂತೆ
ಉಚ್ಚಿಷ್ಟದೊಳ್ಪ್ರಳ್ವಹ ಹಂದೆಯ ತೆರನಂತೆ
ಅಚ್ಚರಿಯು ಪೇಸಿಕೆಯೊಳಗೆ ಮುಳುಗುತಾನಿಂತೆ

ಸವೆದೆನೆಲೆ ಶಂಕರಾ ಶಶಿಧರಾ ಕರುಣಿಸಾ
ಶಿವನೆ ಸದಾಶಿವನೆ ಕಾಮಾರಿ ಕರುಣಿಸಾ
ಇಂತಪ್ಪ ಹೇಯದೋಳ್ನಿನ್ನ ನೆನೆಯಲುಂಟೆ
ಇಂತಪ್ಪ ಘೋರದೊಳಗಿರ್ದೆನಗೆ ನೀನುಂಟೆ
ಇಂತು ಸತಿಯರ ಮೋಹದೊಳಗೆ ಸಿಕ್ಕಿರುತಿರಲು
ಸಂತತಂ ಯೌವ್ವನದ ನರಕದೊಳು ಮುಳುಗಿರಲು

ಚೆನ್ನಂ ಚಿತ್ರೆಯುಂ ಕನ್ನೆಯರ್ಗಳಾಗಿ
ಹೊನ್ನಂ ವಿಳಾಸಮುಂ ವಿಷಯಕ್ಕೆ ಹಾಳಾಗಿ
ಸಂಗಮುಂ ಪ್ರಾಯಮುಂ ಹೇಯಕ್ಕೆ ಬರಿದಾಗಿ
ಅಂಗಂಗಳ್ಧಟಿಲ್ಲವಂಗಂಗೆ ಮಾರಾಗಿ
ಬಳಿಕ ವನಿತೆಯರಲ್ಲಿ ಕಸವ ಬಿಸುಡುವಂತೆ
ಹಳಿದಾದ ಹರಿಣೆಯುಂ ಪೇಸಿ ಪೊರಮಡಿಪಂತೆ
ನಡೆವೆಣನೆ ನುಡಿವೆಣನೆ ಬಾಳ್ವೆಣನೆ ಪೋಗೆಂದು
ಬಡಿಯುದಿರ್ಬಾಲಮಂ ಸುಡು ನಾಯೆ ಛೀ ಎಂದು
ಇಂತು ಸತಿಯರ್ಬಿಡಲು ಬಡತನವದಡಿಯಿಡಲು
ಸಂತತಂ ಕೆಳೆಯರ್ಪರಿದು ಪೋಗೆ ಮತಿಗೆಡಲು

ತಂದೆ ತಾಯುಂ ಸತ್ತು ಬಂಧು ಬಳಗಂ ಬಿಟ್ಟು
ಸಂದ ಪುರಜನವಕ್ಕಟಾ ಯೆನಲ್ಕಣ್ಗೆಟ್ಟು
ಮರುಳಂತೆ ಮರನಂತೆ ಬರಿ ಮನೆಗೆ ನಡೆತಂದು
ಎರವಾದರಂತೆ ಸುರ್ರನೆ ಸುಯ್ದು ಮಿಗೆ ನೊಂದು
ಅರುವೆಗಪ್ಪಡವುಟ್ಟು ಪೆಂಡತಿ ಯಿರಲ್ಕಂಡು
ಮರುಗಿ ಮುದವಳಿದು ಮನದಲ್ಲಿ ಧಾವತಿಗೊಂಡು
ಜೀವನೋಪಾಯವಂದಂದಿಗೇ ಸಾಲದಿರೆ
ಆವಾವ ತೆರದೊಳುಂ ಮನೆವಾಳ್ತೆಗಿಲ್ಲದಿರೆ
ಏನ ಹೇಳಲಿ ಬಹಳವಾದವು ಸುತರೆನುತೆ
ತನಗೆಯುಂ ಸತಿಸುತಾದಿಗಳಿಗಂ ಚಿಂತಿಸುತೆ
ಆರಂಬದೊಳ್ ನೋಡೆ ಅಲ್ಲಿಯಾಗದೆ ಮರುಗಿ
ದೂರಿಸುತೆ ವ್ಯವಹಾರದಿಂದೆ ತಿಟ್ಟನೆ ತಿರುಗಿ
ಸೇವಕಾ ವೃತ್ತಿಯುಂ ಮಾಡಲ್ಮನಂದಂದು
ಆವಾವ ದುಃಸ್ಥಿತಿಗೆ ಲಜ್ಜಿಸದೆ ವ್ಯೆಸಂದು
ಪತಿಯುಪ್ಪ ನಿನ್ನನರಿಯದೆ ನರರ್ಗಳಾಗಿ
ಮತಿಗೆಟ್ಟು ಧೃತಿಗುಂದಿ ಮರ್ತ್ಯರ್ಗೆ ಆಳಾಗಿ
ನಡುವಿರುಳ್ಪೋಗೆ ನಾಲ್ನಾಲ್ಗಾವುದಂ ಪೋಗಿ
ಎಡವುತಂ ತಾಗುತಂ ಲಘುವಾಗಿ ಮರುಳಾಗಿ
ಅಲ್ಲಿಯುಂ ಪಡೆಯದೆ ಮರುಗಿ ಕೊಕ್ಕುಳ್ಕುದಿದು
ಬಲ್ಲಂತೆ ತಿರುಗಿ ನೊಡುವೆನೆಂದು ಬಸವಳಿದು

ಎಂಟು ಗೇಣುದ್ದಮಂ ಗೇಣುದ್ದದೊಳ್ಕಿಲಿಸಿ
ಎಂಟು ಮಡಿ ಕಾರ್ಪಣ್ಯಮಂ ಮುಖದೊಳಳವಡಿಸಿ
ನಿಂದವರ್ಗಳಂ ಬೇಡಿ ನೆರೆದವರ್ಗಳಂ ಬೇಡಿ
ಬಂದವರ್ಗಳಂ ಬೇಡಿ ಬಲ್ಲವರ್ಗಳಂ ಬೇಡಿ
ತಾನುಳಿಯಲುಳಿದರೆಲ್ಲರನಾವಗಂ ಬೇಡಿ
ಏನೆಂಬೆನೆಲ್ಲಿಯುಂ ಪಡೆಯದೆ ಮೊಗಂ ಬಾಡಿ
ಕಳವಿನೊಳ್ಪಳಿಸಂದು ತಿರುಗಿ ತಳವೆಳಗಾಗಿ
ಅಳವಳಿಯುತಲ್ಲಿಯುಂ ಪಡೆಯದಾತುರನಾಗಿ
ಇಂತು ಮನೆವಾಳ್ತಿಗಂ ಕುದಿವ ಹರೆಯದಿ ದೇವ
ಎಂತುಮಂ ನಿನ್ನಲೇಳ್ಪಿರಗೆ ನಾಂ ಎಲೆ ದೇವ
ಎರಗದಂತಿರುತಮಿರೆ ಮುಪ್ಪು ಬಂದಡಸಲ್ಕೆ

ತೆರೆ ಪರಿದು ಕಾಯಮಂ ಪರ್ಬಲನುವಾಗಲ್ಕೆ
ಅದನೇನನೆಂದಪೇಂ ಪೇಸಿಕೆಯ ಪಸರಮಂ
ಅದನೆಂತು ಬಣ್ಣಿಪೇಂ ದುರ್ಭಾವ ವಿಸರಮಂ
ತೆರೆ ನೆಗೆಯೆ ಯಮಪುರದ ಸೋಪಾನವೆಂಬಂತೆ
ನರ ಉಬ್ಬಿ ಮೆಯ್ಯೊಳಗೆ ಬೀಳಲ್ವರಿಯುತಂತಂತೆ
ಬಾಗೆ ಬೆಂಪೋಗೆ ಪಲ್ತೊಲಗೆ ತಲೆಯಂತಲ್ಲಿ
ತೂಗೆ ನಮ್ಮೆಯ್ಗೆ ಕೀವಿ ನೀಗೆ ಕೇಳ್ವುದನಲ್ಲಿ
ತೋಳತೊವಲುಗಳೇಳ್ದು ನೀಳದಿಂ ಜೋಲುತಿರೆ
ಜಾಳಿಸುತೆ ಕಾಲುಡುಗಿ ಕೋಲೂರಿ ನಿಲ್ಲುತಿರೆ
ಕೆಮ್ಮಿ ಗುಹೆಗಟ್ಟೆ ಘಲ್ಲಿಸಿ ಕುಸುರಿ ಕುಕ್ಕುರಿಸಿ
ಕುಮ್ಮಿ ಕುಕ್ಕೆಯೊಳಳ್ದು ನೆರೆ ಮುದುಡಿ ಹೊಡಕರಿಸಿ
ಕಿವಿಯೊಳಂ ಕಣ್ಣೊಳಂ ಬಾಯೊಳಂ ಘ್ರಾಣದೊಳು
ತವೆ ಸುರಿವ ಶ್ಲೇಷ್ಮದಿಂ ನಾಂದು ನಿತ್ರಾಣದೊಳು
ಪಜ್ಜೆ ಪಜ್ಜೆಗೆ ಮುದುಡಿ ಬೀಳ್ದು ಮೂಗೂರುತಂ
ಲಜ್ಜೆ ನಾಚಿಕೆಯೆಂಬುದನೆಲ್ಲವ ನೀಗುತಂ
ಬೈಯ್ದೊಡಂ ಕೇಳದೆಡಹಿದೊಡಂ ಕಾಣದಿರೆ
ಐಯ್ದು ಸರ್ವೇಂದ್ರಿಯಂ ಚೇತರಿಸಲಾರದಿರೆ

ಇದ್ದಲ್ಲಿ ನಿಮ್ಮವಂ ನೆನೆಯೆ ತೆರಹಿಲ್ಲಿಲ್ಲ
ನಿದ್ರೆಯಿಂದರ್ಧಾಯು ತೀರುತ್ತಮಿರಲಲ್ಲಿ

ಪಿಡಿವ ಪುಲಿಫಣಿಗಳಿಂ ಅತ್ಯಂತ ಕಂಪಿಸುತೆ
ನಡುವೆ ರೋಗಂಗಳೊದಗಲು ಸತ್ತು ಪುಟ್ಟುತೆ
ಇರ್ಪಲ್ಲಿ ನಿಮ್ಮುವಂ ನೆನೆಯಲುಂಟೇ ದೇವ
ಸರ್ಪಭೂಷಣ ನಿನ್ನನರಿಯಲುಂಟೇ ದೇವ
ನೀನೆತ್ತ ನಾನೆತ್ತ ಸಂಸಾರದಿರವೆತ್ತ
ನೀನೆಂದರಿವ ಶಿವಜ್ಞಾನಕ್ಕೆ ತೆರಪೆತ್ತ
ಮಾಯೆಯೊಳಗಿರ್ಪರಾರ್ನಿನ್ನನರ್ಚಿಸುವರಾ
ಕಾಯದಿಚ್ಛೆಗೆ ನಡೆದು ನರಕದೊಳು ಬೀಳ್ವರಾ
ಬೇಡದೆತ್ತಣ ಮಾತು ಕರುಣಿಸಾ ಶಂಕರಾ
ನೋಡಿ ಕೈವಿಡಿದು ನಿನ್ನವನೆನಿಸು ಶಂಕರಾ
ಆವ ತೆರದಿಂ ನಿನ್ನ ನೆನೆವ ಪೊತ್ತಂ ಕಾಣೆ
ನಾವುದುಂ ಗತಿಯಿಲ್ಲ ಪೊರ್ದಿವೇಂ ನಿನ್ನುವನೆ
ಕೇಳಯ್ಯ ಸಂಸಾರದಿರವು ಅತಿ ಭೀಕರಂ
ಕೇಳೈ ಮಹಾದೇವಾ ಮಾಯದೋಷಾಕರಂ

ಇಂತು ಮುಪ್ಪಿನೊಳಿರಲು ಯಮಕಿಂಕರರ್ಬರಲು
ಸಂತತಂ ಯಮನವರ ಭಯದಿ ನಡುಗುತ್ತಿರಲು
ಮುಪ್ಪು ಮೀರುತ್ತಾಯು ತೀರುತ್ತಮಿರಲಲ್ಲಿ
ಒಪ್ಪವಳಿಯುತ್ತೆ ಧರಣಿಗೆ ಬೀಳ್ದು ಕೆಡುವಲ್ಲಿ
ಮೇಲೆ ಪೇರ್ಗೂರಿಕ್ಕಿ ನುಡಿವ ನಾಲಿಗೆ ಬೀಳೆ
ಮೇಲೆಸುರ್ಸೇದುವಾಗಳ್ಪ್ರಾಣಮುರಿಯಾಳೆ
ನೆಲದೊಳಿಕ್ಕಿದ ಬಳಿಕ ನೆಂಟರೆಲ್ಲರ್ನೆರದು
ಕೆಲ ಬಲದೊಳಿಷ್ಟರುಂ ಬಂಧುವರ್ಗಂ ನೆರೆದು
ಅಕ್ಕಟಾ ಗುಣಿ ಮಾನಿ ಬುದ್ಧಿವಂತಂ ನೋಡ
ಅಕ್ಕಟಾ ಈತಂಗೆ ಸಾವು ಬಂದಿತು ನೋಡ
ಎನುತಮಿರುತಿರಲಲ್ಲಿ ಮರಣ ಶೂಲಿಗಳೆತ್ತೆ
ತನತನಗೆ ಮರುಗಿ ಕಣ್ಗಳ ನೀರನುಣ್ಮುತ್ತೆ
ಇರೆ ಕಾಲ ಕೈಯ್ಯಜೀವಂಗಳುಂ ಪೋಗುತಿರೆ
ಇರೆ ಮೆಲ್ಲಮೆಲ್ಲನೆಲ್ಲಂ ತಣ್ಣಗಾಗುತಿರೆ
ಮೇಲುಸುಮಿರ್ಕ್ಕೇಳೆ ನುಡಿವ ನಾಲಿಗೆ ಬೀಳೆ
ಕಾಲನವರನುವಾಗೆ ಬಾಯೊಳ್ಸುರಿಯೆ ಲೋಳೆ

ಮೊಗಮೊೞ್ಗಡಿಸಿ ಗೂರು ಪೆರ್ಗ್ಗಿಡುತ್ತಮಿರೆ
ಬಗೆಗೆಟ್ಟು ಸತಿಪುತ್ರರೊಟ್ಟೈಲೊಱಲುತ್ತಮಿರೆ
ಪೋದನಿಕ್ಕಿಲ್ಲ ಕಿಱಿದುಸುರಱಿದುಮಿರ್ದಪುದು
ಪೋದನೆಳ್ಪರೆಯುಸಿತು ದಾನಮಿವಗಿರ್ದಪುದು
ಎಲೆಲೆಲೇ ಕರ್ಣಮಂತ್ರದ ಪೊೞ್ತು ತಪ್ಪದಿದು
ಎಲೆಲೆ ಸತ್ತಂ ಸತ್ತನೆನುತಮಿರೆ ನೆರವಿಯುದು
ಅಲ್ಲಿಯುಂ ಕೆಲಬರುತ್ಕ್ರಾಂತಿಯಂ ಕೊಂಬುವರು
ಅಲ್ಲಿ ಬಾಗೆಗೆ ಹೆಣನ ನೆರೆ ಜಗಳವಾಡುವರು
ಏನೆಂಬೆನೋ ಜಗದ ಮಾಯೆಯೊಂದಂದಮಂ
ನಾನಾ ವಿಧದ ಲಜ್ಜೆಗೆಟ್ಟ ಲಘು ವೃಂದಮಂ
ಇಂತಪ್ಪ ಸಮಯದೊಳ್ ಕಣ್ಮೇಲೆ ಮಱಳುತಿರೆ
ಅಂತಲ್ಲಿ ಜೀವಮಂ ಯಮದೂತರೆಳೆಯುತಿರೆ
ನೆಂಟರುಂ ನೋಡುತ್ತಿರೆ ಬಂಟರುಂ ನೋಡುತ್ತಿರೆ
ಬಡವರುಂ ನೋಡುತ್ತಿರೆ ಬಲ್ಲಿದರ್ನೋಡುತ್ತಿರೆ
ಪುತ್ರರುಂ ಪೆತ್ತರುಂ ಪೆಂಡಿರುಂ ನೋಡುತ್ತಿರೆ
ಆಸುವತ್ತ ಪೋಗಿ ಪೆಣನಿತ್ತ ಬಿದ್ದುದು ಕೆಡೆದು
ಬಿಸುಸುಯ್ದು ಮಿಗೆ ನೆಱವಿ ಬಡಿದಳಲ್ತೊಡಗಿದುದು

ಇಂತಾದ ಬಳಿಕ ನಾಂ ಮಾೞ್ಪುದಿನ್ನೊಂದುಂಟೆ
ಇಂತು ಬಱಿದೊರೆಪೋದ ಬಳಿಕ ಎಚ್ಚರು ಉಂಟೆ
ಬಳಿಕ ದೇವರ್ಗುಂಟೆ ಬಳಿಕ ಪಿರಿಯರ್ಗುಂಟೆ
ಬಳಿಕ ಪುಣ್ಯಕ್ಕುಂಟೆ ಬಳಿಕ ಧರ್ಮಕ್ಕುಂಟೆ
ಪುಟ್ಟಿದಂ ಸತ್ತನೆಡೆಯೊಳ್ಪುಡಿಗುದೇನಾಯ್ತು
ಮುಟ್ಟಲೀಕ್ಷಿಸಲೊಲ್ಲರೀ ದೇಹವಿಂತಾಯ್ತು
ನಿಮಿಷವಿಱಿಸದೆ ಕೊಂಡು ಪೋಗಿ ಸುಟ್ಟನೋಡ
ನಿಮಿಷಾರ್ಧದಿಂದಚಿರವೀ ದೇಹಮುಂ ನೋಡ
ಇಂತಪ್ಪ ಭವಮಾಲೆಯೊಳಗೆ ಬಂದೇಂ ದೇವ
ಇಂತಿಂತು ಸತ್ತು ಪುಟ್ಟುತ್ತಮಿರ್ದೆಂ ದೇವ
ಜನಿಯಿಸುವ ಕಷ್ಟವಿದು ಬರ್ದುಕುವ ನಿರೋಧವಿದು
ಅನುಗೆಟ್ಟು ಸಾವ ಸಂಕಟದೊಂದವಸ್ಥೆ ಇದು

ದೇವಾ ಇದಕ್ಕೊಂದು ಸುಖ ಉಂಟೆ ಲೇಸುಂಟೆ
ದೇವಾ ಇದಕ್ಕೊಂದು ಗತಿಯುಂಟೆ ಮತಿಯುಂಟೆ
ಆನೇಕೆ ಸಂಸಾರವೇಕೆ ಕೇಳಿಲೆ ತಂದೆ
ನೀನು ಎನಗೊಡ್ಡಿದ ಮಹೇಂದ್ರಜಾಲಂ ಕಂಡೆ
ರಾಜಶೇಖರ ಶರ್ವ ಭವ ಭವಾನೀಧವ
ಈ ಜನ್ಮದೊಳಗೆನಗೆ ಕರುಣಿಸಭವಾ ಭವಾ
ಎಂಭತ್ತುನಾಲ್ಕು ಲಕ್ಷದ ಯೋನಿಯಂ ಕಳೆದು
ಶಂಭುವೇ ಎಂತಕ್ಕೆ ಬಂದೆನಾನಿದನರಿದು
ಮತ್ತೆಯುಂ ಕರುಣಿಸುವುದೆನಗೆ ಕರುಣಾಕರಾ
ಮತ್ತೆಯುಂ ಕೃಪೆ ಮಾಳ್ಪುದೆನಗೆ ಶಶಿಶೇಖರಾ
ಮುಂದುಗೆಟ್ಟೆಂ ಮೂರ್ಖನಾಗಿರ್ದೆನಿನ್ನೆಗಂ
ಇಂದುಧರ ನಿಮ್ಮನರಿಯದೆ ಕೆಟ್ಟೆನಿನ್ನೆಗಂ
ವ್ಯರ್ಥವಾಗುತ್ತಮಿರುತಿರ್ದೆ ನಾನೆಲೆ ದೇವ
ಸ್ವಾರ್ಥವಿದು ನಿನ್ನ ನೆನೆಯದೆ ಕೆಟ್ಟೆನೆಲೆ ದೇವ
ನಾಡಮಾತಂ ಬಳಸುತಿರೆ ಪೊಳ್ತು ಪೋಗುತಿದೆ
ಕೂಡೆ ತೊಳಲುತ್ತಮಿರೆ ಪೊಳ್ತು ಪೋಗುತ್ತಲಿದೆ
ಅಂಜುತ್ತ ಅಳಲುತ್ತಮಿರೆ ಪೊಳ್ತು ಪೋಗುತ್ತಿದೆ
ರಂಜಿಸುತ ಬೋಧಿಸುತಮಿರೆ ಪೊಳ್ತು ಪೋಗುತ್ತಿದೆ
ಕೋಪಿಸುತ ಕಾಮಿಸುತ ಮಿಗೆ ಪೊಳ್ತು ಪೋಗುತ್ತಿದೆ
ತಾಪಿಸುತ ತಲ್ಲಣಿಸುತಿರೆ ಪೊಳ್ತು ಪೋಗುತ್ತಿದೆ

ನಿತ್ಯ ಲಿಂಗಾರ್ಚನೆಯೊಳಿರಿಸೆನ್ನನೆಲೆ ದೇವ
ಸತ್ಯ ಶರಣರ ನಡುವೆ ಸಲಿಸೆನ್ನನೆಲೆ ದೇವ
ಊರ್ಧ್ವರೇತಂ ವಿರೂಪಾಕ್ಷನೆಂಬುದು ನಿನಗೆ
ಸದ್ಧರ್ಮವಯ್ಯ ಕರುಣಿಪುದು ಕುರುಣಿಪುದೆನಗೆ
ಪುಣ್ಯಪಾಪಂಗಳಿಲ್ಲದ ನಿರ್ಮಳಂ ನೀನೆ
ಗಣ್ಯರಹಿತಂ ಸಕಲದೇವ ಕುಲಗುರು ನೀನೆ
ಸಿರಿಬಡತನಗಳಿಲ್ಲದ ಸದರ್ಥನುಂ ನೀನೆ
ಹರಿಬೊಮ್ಮರೆಚ್ಚರದನಾದಿಲಿಂಗಂ ನೀನೆ

ದೇಹವುಳ್ಳಲ್ಲಿ ಕಾಮದೊಳಿರ್ಪುದರಿದಲ್ಲ
ದೇಹವುಳ್ಳಲ್ಲಿ ಕೋಪದೊಳಿರ್ಪುದರಿದಲ್ಲ

ಕಾಯವುಳ್ಳಲ್ಲಿ ನಿಃಕಾಮಿ ಯೆನಿಸುವುದರಿದು
ಕಾಯವುಳ್ಳಲ್ಲಿ ನಿರ್ಮಾಯನೆನಿಸುವುದರಿದು
ದೇಹವುಳ್ಳಲ್ಲಿ ಸದ್ಗುರುವ ಪಡೆಯುವುದರಿದು
ದೇಹವುಳ್ಳಲ್ಲಿ ನಿನ್ನಡಿಯನರ್ಚಿಪುದರಿದು
ಇಂತಿವೆಲ್ಲಂ ನೀನೇ ಕೊಟ್ಟಲ್ಲದಿಲ್ಲಯ್ಯ
ಎಂತಾದೊಡಂ ನಿನ್ನ ಕೃಪೆ ಇಲ್ಲದಿಲ್ಲಯ್ಯ
ನೆನೆವುತ್ತ ನೋಡುತ್ತ ಅರ್ಚಿಸುತ್ತಿರಿಸಯ್ಯ
ಅನುದಿನಂ ನಿಜಭಕ್ತಿ ವಿಕಳನಾಗಿರಿಸಯ್ಯ

ತನುವಿಂಗೆ ರೋಗವಂ ಮಾಡುವುದನಿಷ್ಟವದು
ತನುಪರಿತ್ಯಾಗದೊಳ್ಮರೆಯಿಸೆ ಕನಿಷ್ಟವದು
ದೇಹವಂ ಬಿಡುವಲ್ಲಿ ನೆನೆಯಿಪುದು ಮಧ್ಯಮಂ
ದೇಹಂಬೆರಸು ಕೊಂಡು ಪೋಪುದತ್ಯುತ್ತಮಂ
ಮಧ್ಯಮೋತ್ತಮಗಳೊಳುತ್ತಮವನೆನಗೆ ಮಾಡಯ್ಯ
ಸಾಧ್ಯವಲ್ಲದುದಿಲ್ಲ ನೋಡಿ ಕರುಣಿಪುದೆನಗೆ
ದೇವ ಕರುಣಿಗಳರಸ ದೇವದಾನಿಗಳರಸ
ದೇವ ಮಾನಿಗಳರಸ ದೇವ ಬೋಳೆಯರರಸ

ಪಂಪಾಪುರದ ನಿಧಿಯೆ ಪಂಪಾಪುರದ ಸುಧೆಯೆ
ಪಂಪಾಪುರದ ಗತಿಯೆ ಪಂಪಾಪುರದ ಮತಿಯೆ
ಪಂಪಾಪುರಾಂಬುನಿಧಿವರ್ಧನ ವಿಮಲಚಂದ್ರ
ಪಂಪಾಪುರಾಬ್ಜವಿಕಸಿತವಿಮಲದಿವಸೇಂದ್ರ
ಕರುಣಿಪುದು ಕರುಣಿಪುದು ವಿರೂಪಾಕ್ಷ
ಕರುಣದಿಂದೀಕ್ಷಿಪುದು ಪಂಪಾ ವಿರೂಪಾಕ್ಷ
ಪ್ರತಿಪಾಲಿಪುದು ಗುರುವೆ ಪಂಪಾ ವಿರೂಪಾಕ್ಷ
ಶೃತಿಗಗೋಚರನಪ್ಪ ಪಂಪಾ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ವಿರೂಪಾಕ್ಷ
ಜಯ ಜಯ ವಿರೂಪಾಕ್ಷ ಜಯ ಜಯ ನಮೋಸ್ತು ತೇ

# ಚಂಡೇಶ ಪಿಳ್ಳೈಯ ರಗಳೆ.

**ಕಂದ॥** ಮಾತೆಪಿತರಹಿತನುಗ್ರನ ।
ಜಾತಂ ಚಂಡೇಶಪಿಳ್ಳೈಯುಂ ಮೆರೆದಂ ಧಾ ॥
ತ್ರೀತಳದೊಳ್ಭೂತೇಶಂ ।
ಖ್ಯಾತಿ ಮಿಗಲ್ಕೆಮ್ಮ ಹಂಪೆಯ ವಿರೂಪಾಕ್ಷಂ ॥

## ರಗಳೆ.

ಚೋಳದೇಶದೊಳೊಂದು ನಲ್ಲೂರದೊಪ್ಪುವುದು
ಭಾಳಲೋಚನನ ಭಕ್ತಿಯು ಭರಮನೊಪ್ಪುವುದು
ಅಲ್ಲಿ ಅಚ್ಯುತಭಟ್ಟನೆಂಬ ವಿಪ್ರಂ ನೋಡ
ವಲ್ಲಭಂ ಸಕಲ ಶಾಸ್ತ್ರಕ್ಕೆ ತಾನೇ ನೋಡ
ಅವರ್ಗರಸಿ ಸಾವಿತ್ರಿ ಎಂಬ ನಾಮದ ವನಿತೆ
ಅವರ ಸಂಪದವೆ ಪುರಕೆಲ್ಲ ಸಂಪದವನಿತೆ
ಧನದೊಳಂ ಧಾನ್ಯದೊಳಗಾವನುಂ ಸರಿ ಇಲ್ಲ
ಮನದಂತಿರಿಪ್ಪ ಬಂಧುಗಳಿಂ ಕೊರತೆ ಇಲ್ಲ

ಪುತ್ರನೋರ್ವನು ಇಲ್ಲದುಮ್ಮಳಂ ಪಿರಿದಾಗೆ
ಚಿತ್ತದೊಳ್ತನಯನಂ ಬೇಡಲುದ್ಯುತನಾಗೆ
ಆವೂರೊಳೆಲ್ಲರ್ಗೆ ಬೇಡಿತಂ ಕೊಡುತಿರ್ಪ
ದೇವನಣುಗಂ ಚಂಡಪಿಳ್ಳೆ ಪೆಸರಿಂದಿರ್ಪ
ಭೂಚರರ್ಬಯಸಿ ಬರಲಿಷ್ಟಸಿದ್ಧಿಯನೀವ
ಖೇಚರರ್ಬಯಸಿ ಬರೆ ಬೇಡಿತಂ ಮುನ್ನೀವ
ಗರುಡರುಂ ಗಂಧರ್ವರುಂ ಪೂಜಿಸುತ್ತಿರ್ಪ
ಸುರರಸುರರಾಗಳು ಬಯಸಿ ಪೂಜಿಸುತ್ತಿರ್ಪ
ಕಿನ್ನರರ್ಖೇಚರರ್ನೆರೆದರ್ಚಿಸುತ್ತಿರ್ಪ
ಪನ್ನಗರ್ಸಿದ್ಧರಾತುರದೊಳರ್ಚಿಸುತಿರ್ಪ
ಚಿನ್ನ ಡೋಳುಂಗೆಜ್ಜೆಗಾಲಿಂದಲೊಪ್ಪಿರ್ಪ
ಪನ್ನಗರ್ನೆರೆ ಸುತ್ತಿ ಮುತ್ತಿ ರಾಜಿಸುತಿರ್ಪ

ಆನೆಮೊಗದಿಂ ಕೆಯ್ಯಕೋಡಿಂದಮೊಪ್ಪಿರ್ಪ್ಪ
ನಾನಾ ವಿಳಾಸದಿಂ ಮಿಗೆ ರಂಜಿಸುತ್ತಿರ್ಪ್ಪ
ಹರಪುತ್ರನಲ್ಲಿಗೆಯ್ತಂದು ಹರುಷಂಬಟ್ಟು
ವರ ಪುತ್ರನಂ ಬೇಡಿ ಮಿಗೆ ಸಂತಸಂಬಟ್ಟು
ಇರೆ ವಿನಾಯಕನಲ್ಲಿ ಕರುಣದಿಂದಂ ಬಂದು
ವರ ವಿಪ್ರ ಕೊಟ್ಟನೇಳೋರ್ವ ಪುತ್ರನನೆಂದು
ಬೆಸಸೆ ಕಣ್ಬೆತ್ತಂತೆ ನಿಳಯಕ್ಕೆ ನಡೆತಂದು
ಶಶಿಮುಖಿಗೆ ಪೇಳುತುಂ ಹಿಗ್ಗಿ ನಲಿಯುತ್ತಂದು
ಬಸಿರೊಳಗೆ ಮೂಡಿತ್ತು ಗರ್ಭ ವಿಪ್ರನ ಸತಿಗೆ
ಮುಸುಡೊಳಗೆ ಮೂಡಿತ್ತು ಕಾಂತಿಯಾ ಕಾಮಿನಿಗೆ
ಯೊಂದೆರಡು ಮಾಸಕ್ಕೆ ನವಮಾಸವಾಗುತಿರೆ
ಕಂದನಂ ಪಡೆದಳಾ ತಂದೆಯುತ್ಸವಿಸುತಿರೆ

ಪಡೆಯೆ ಸಂತಸದಿಂದೆ ಜಾತಕರ್ಮಂ ಮಾಡಿ
ಮೃಡನೆ ಶರಣೆಂದೆನುತೆ ನಾಮಕರಣಂ ಮಾಡಿ
ಚಂಡೇಶಪಿಳ್ಳೆಯೆಂಬಿಭಮುಖನ ಪೆಸರಿಟ್ಟು
ತಂಡತಂಡದ ಸುಖನಿಕಾಯಮಂ ಮುಂತಿಟ್ಟು
ಇರೆ ಬೆಳೆದನೋರ್ವ ಹರುಷೋತ್ಸವಂ ನೆಲೆಗೊಳಿಸಿ
ಹರನೇಕ ನಿಷ್ಠೆ ಬಳೆವಂದದಿಂ ಘುಳುಘುಳಿಸಿ

ಬಳೆಯೆ ಬಳೆದುದು ದರಿದ್ರಂ ಬಾಲನೊಡನೊಡನೆ
ಹೊಳೆವ ಮಾಯೆಗೆ ಭಕ್ತಿ ಸೊಗಸದೆಂಬಂತೊಡನೆ
ಇಂದ್ರಿಯಕ್ಕಂ ಶಿವಂಗಂ ಸೇರದೆಂಬಂತೆ
ಚಂದ್ರಮಂಗಂ ತಮಕ್ಕಂ ಸೇರದೆಂಬಂತೆ
ಕೆಲಸಾರುತೆಲ್ಲ ಸಂಪತ್ತು ತೊಲಗುತ್ತಮಿರೆ
ಹೊಲದಲೆಲ್ಲಂ ಹೊಲದೊಳಲ್ಲಿ ಪೋಗುತ್ತಮಿರೆ
ಮನೆಯೊಳೆಲ್ಲಂ ಮನೆಯೊಳುಂ ಮಾಯವಾಗುತಿರೆ
ನೆನೆದುದೆಲ್ಲಂ ನೆನಹಿನೊಳ್ಬಚ್ಚೆಯಾಗುತಿರೆ

ಇಂತಾಗೆ ಪುರಜನಂ ಕಂಡೆಲೆಲೆ ವಿಪ್ರರೇ
ಎಂತಪ್ಪ ಕಂದನಂ ಪಡೆದಿರೆಲೆ ಭಟ್ಟರೇ
ಆವುದು ಮುಹೂರ್ತವೀತಂ ಪುಟ್ಟಲಿಂತಾಯ್ತು

ಏವೇಳ್ವೆವೀತನಂ ನೋಡುವರ್ಗರಿದಾಯ್ತು
ಸಾಕಿಪರ್ಗೀತನಂ ಕೊಟ್ಟು ಕಳೆವುದೆ ಲೇಸು
ಬೇಗವಿನ್ನಿಂತು ಮಾಡಲ್ಕೆ ನಿಮಗಂ ಲೇಸು

ಎನಲೆನಗೆ ಹೊನ್ನುವುಂ ಚಿನ್ನವುಂ ಕಂದನೇ
ಎನಗೆನ್ನ ಬಂಧುವುಂ ಬಳಗವುಂ ಕಂದನೇ
ಎನಗೆನ್ನ ಸಂಪದಂ ಸುಖಕರಂ ಕಂದನೇ
ಎನಗೆನ್ನ ಜೀವಮುಂ ಭಾವಮುಂ ಕಂದನೇ
ಮಗನಂ ಪೆರರ್ಗಿತ್ತು ಬಾಳ್ವ ಸಂಪದವೇಕೆ
ಮಗನುಳ್ಳ ಬಡತನಂ ಸಂಪದಕೆ ಸರಿ ಏಕೆ
ಎಂದೆನುತೆ ಮಗನುಮುಂ ಬಡತನಮುಮಂ ಬಿಡದೆ
ಅಂದಂದು ಜೀವಿಪ್ಪುದರಿದಾಗೆ ಧೃತಿಗೆಡದೆ
ಇರೆ ಪನ್ನಿರೇಳ್ವರಿಸವಾದುದಾ ಪುತ್ರಂಗೆ
ಪುರಹರನ ಪರಮ ಭಕ್ತ್ಯುನ್ನತ ಚರಿತ್ರಂಗೆ

ಆಗ ಪುರಜನವೆಲ್ಲ ಕಂಡೆಲೇ ವಿಪ್ರರೇ
ಈಗಳೊಂದನುಮಾನಮಂ ಪೇಳ್ವೆವಪ್ಪರೇ
ನೆರೆದನೀಗಳ್ನಿಮ್ಮ ಮಗನೀತನಿಂದೆಮ್ಮ
ಕರುಗಳಂ ಕಾಯಲ್ಕೆ ಬಕುತಿ ತಪ್ಪದು ನಿಮ್ಮ
ಒಂದು ಕರುವಿಂಗೊರ್ಬಳಂ ಧಾನ್ಯಂಗೊಂಡು
ಬಂದು ಜೀವಿಪ್ಪುದೆನಲಂತದಂ ಕೈಕೊಂಡು

ಕಂದ ನೀಂ ಕರುಗಾಯ್ವ ಚೆಂದವಾಯ್ತೆನುತೋವಿ
ಕಂದನಂ ನೋಡುತಂ ಕಣ್ಣ ನೀರಂ ತೀವಿ
ಕರುಗಾವುದಕ್ಕೆ ಪಡೆದೆನೆ ನಿನ್ನನೆಲೆ ಮಗನೆ
ಹೆರೆಸೂಡಿದನ ಕರುಣವಿಂತು ಬಡತನ ಮಗನೆ
ಎಂದಿಂತು ಶೋಕಿಸುತೆ ಕರುಮರಿಗಳಂ ಕೂಡಿ
ಹಿಂದೆ ಕಿರಿದಂತರಂ ಬಂದು ಮಗನಂ ನೋಡಿ
ಮಗನೆ ಕರುಗಳನೊಯ್ದು ಸುಯಿಧಾನನಾಗಯ್ಯ
ಮಗನೆ ಎನಗಂ ಪುಟ್ಟೆ ಈ ವಿಧಿಯನುಂಡಯ್ಯ
ಬಡತನಂ ಬೇರೆ ಕರುಗೆಟ್ಟೊಡಂತದು ಬೇರೆ
ಕಡು ದೂರಮಂ ಪೋಗದಿರು ಕಂದ ನೀನಾರೆ

ಪುಲಿ ಕರಡಿಯುಂಟು ಪದುಳಂ ಪೋಗೆಲೆ ಕಂದ
ಅಲಸದಿರು ನಿನಗೆ ಇದಿರಾಗಿ ಬರ್ಪೆಂ ಕಂದ
ಪೋಗೆನುತೆ ತಿರುಗಿ ನೋಡುತ್ತೆ ಬಂದಂ ಮನೆಗೆ
ಏಗೆಯ್ವೆನಿಂತು ವಿಧಿ ಮಾಡಿತೆನುತುಂ ತನಗೆ
ಉಮ್ಮಳಂ ಪಿರಿದಾಗೆ ಸುಯ್ವು ಸಿಗ್ಗಾಗುತುಂ
ದುಮ್ಮಾನವೆಯ್ದೆ ಬಡತನವನಂದೆಣಿಸುತುಂ
ಇರೆ ಪಡುವ ಜಾವದೊಳ್ಕರುಗಳನಿತಂ ಕೊಂಡು
ಬರೆ ಪುತ್ರನಂ ನೋಡಿ ಪಿರಿದು ಹರುಷಂಗೊಂಡು
ಲೇಸಾಯ್ತು ಮಗನಿಂತು ಬುದ್ಧಿಗಲ್ತಂ ನೋಡ
ಲೇಸಿನ್ನು ಬಡತನಕ್ಕಂಜೆನಂಜೇಂ ನೋಡ

ಎಂದಿಂತು ನಾಲ್ಕೆರಡು ದಿವಸಂಗಳಂ ಕಳೆದು
ಸಂದ ಗೋವೃಂದದಾಡುಂಬೊಲನುಮಂ ತಿಳಿದು
ಕಲಿಚಂಡಪಿಳ್ಳೆ ನುಡಿದಂ ತಂದೆಗಂದಿರದೆ
ಎಲೆಯಯ್ಯ ಕರುಗಳಂ ಕಾವುದೇನೊಂದರಿದೆ
ಹಸುಗಳಂ ತಂದುಕೊಡು ಕಾದಿಪ್ಪೆನೆಂದೆನಲ್
ಒಸೆದು ಪುತ್ರನನಪ್ಪಿ ನಡೆತಂದು ಭೋಂಕೆನಲ್
ಅಲ್ಲಲ್ಲಿ ಹಸುಗಳಂ ಕೂಡಿಸುತ್ತಂ ಹೊಡೆದು
ಮೆಲ್ಲಮೆಲ್ಲನೆ ನೂರು ಜೀವದನವಂ ಪಡೆದು
ಹಸುವಿಂಗೆ ಒಂದೊಂದು ಕೊಳಗ ಧಾನ್ಯಂ ಬಂದು
ಹಸಿವೋಡಿತೆನ್ನ ಮಗನಿಂದೆನ್ನ ಮನೆಗೆಂದು
ತಂದು ಹಸುವಂ ಕೂಡಿಕೊಟ್ಟು ಮಗನಂ ಕಳುಪೆ
ಬಂದು ಹುಲ್ಲುಳ್ಳ ಹೊಲದೊಳ್ ಗೋವುಗಳ ಕಳುಪೆ

ಇರ್ದಿರ್ದು ಚಂಡಪಿಳ್ಳೆಯ ಬಲದ ಕಣ್ಣೆತ್ತೆ
ಇರ್ದಿರ್ದು ಗಗನದೊಳ್ ಬೆಳಗು ತನ್ನಂ ಮುತ್ತೆ
ಇಳಿತಂದನೋರ್ವಂ ಮಹೇಶ್ವರಂ ಭೂತಳಕೆ
ಬೆಳಬೆಳಗುತಂ ಚಂಡಪಿಳ್ಳೆಯಿರ್ದಾ ಹೊಲಕೆ
ಬಂದು ಹಸುಳೆಯ ಶಿರದ ಮೇಲೆ ಹಸ್ತವನಿಟ್ಟು
ಸಂದ ಪಂಚಾಕ್ಷರಿಯನುಪದೇಶವಂ ಕೊಟ್ಟು
ಮಗನೆ ಇದನಾರ್ಗೆಯುಂ ತೋರದಿರು ಬೀರದಿರು

ಮಗನೆ ಶಿವನಿಂದೆಯುಂ ಕಾಣದಿರ್ಕೇಳದಿರು
ಎನೆ ದೇವ ಪಿತೃಮಾತೃವೊಳಗಾಗಿಯುಂ ಪೇಳೆ
ಎನಗೆ ಕಣ್ಣುಂ ಗತಿಯು ನಿಮ್ಮಾಜ್ಞೆಯುಂ ಪೇಳೆ
ನೆಂದೊಡಂತಲ್ಲಿ ಮಳಲೊಳ್ ಲಿಂಗಮುಂ ತೋರಿ
ಇಂದು ಈ ಪರಿಯರ್ಚಿಸೆಂದು ಸುಖಮುಂ ಸಾರಿ
ಮಾಯವಾದಂ ಮಹೇಶ್ವರನಲ್ಲಿ ಹೊಲದೊಳಗೆ

ಮಾಯೆ ಕಳಲುತ್ತಿರಲ್ಕಿತ್ತ ಬಾಲಕನೊಳಗೆ
ಜಾತಿಸೂತಕವಳಿದು ಜನನವಿರಹಿತನಾಗಿ
ನೂತನ ಶರೀರದಿಂ ಕೃತಕೃತ್ಯ ಮನನಾಗಿ
ಮುನ್ನಿನಂತಲ್ಲದಡಿಗಡಿಗೆ ಕಳೆಯೇರುತುಂ
ತನ್ನ ಮನದೊಳ್ ತಾನೆ ಹಿಗ್ಗಿ ಹೊರೆಯೇರುತುಂ

ಇರೆ ಜೀವದನವೆಲ್ಲ ಪುಲ್ಮೇಯೆ ಹರುಷದಿಂ
ಬರಲವಂ ಕೊಂಡು ಪುರದೊಳಯಿಂಕೆ ರಾಗದಿಂ
ಬಂದು ಸುಖದಿಂದಿರಲ್ ಹಸುಗಳೆಲ್ಲಂ ಮೆರೆಯೆ
ಎಂದಿನಂತಲ್ಲದಿರ್ಮಡಿ ಪಾಲ್ಗಳಂ ಕರೆಯೆ
ಕಂಡು ಪುರಜನವೆಲ್ಲ ಪರಸಿ ಹರುಷಂದಳೆದು
ಚಂಡಪಿಳ್ಳೆಯಗರ್ಡುಗೊರೆಯನಿತ್ತರ್ನಲಿದು
ಕೊಟ್ಟು ಸಂತೋಷದಿಂದಿರುತಿರಲನಂತರಂ

ಪುಟ್ಟಿದಂ ಪೂರ್ವಾಚಲಾಗ್ರದೋಳ್ ರವಿಕರಂ
ಬೆಳಗಾಗೆ ಗೋ ನಿಕರಮುಂ ಕೊಂಡು ಪೊರಮುಟ್ಟು
ಕಳೆದು ಪುರದಿಂ ಬಂದು ಹರುಷಮುಂ ಮುಂದಿಟ್ಟು
ಗೋವುಗಳನಲ್ಲಲ್ಲಿ ಮೇಯಲ್ಕೆ ಬೆಸನಿತ್ತು
ದೇವಂ ತನಗೆ ಕೊಟ್ಟ ಶಿವಮಂತ್ರಮುಂ ಪೊತ್ತು

ಆಹಾ ಎನಗೆ ನೀನೆ ಕರುಣಿಸಿದ ತಾಣಮಿದು
ಆಹಾ ಮಹೇಶ್ವರಂ ನಿಂದಿರ್ದ ತಾಣಮಿದು
ಎನುತಲ್ಲಿ ಪೊರಳುತುಂ ಕುಂಬಿಕ್ಕಿ ಕುಣಿವುತುಂ
ಮನದೊಳಗೆ ಗುರುಪದವನಚ್ಚೊತ್ತಿ ತಣಿವುತುಂ
ಜನನಮರಣಂಗಳಂ ರೂಹುಗೆಡಿಸಿದ ಗುರುವೆ

ಮನದೊಳಗೆ ಕಣ್ಣೊಳಗೆ ತೀವಿ ನೆಲಸಿದ ಗುರುವೆ
ಕರ್ಮವಂ ಕೆಡಿಸಿದ ಸದ್ಧರ್ಮಿ ನೀನೆಲೆ ಗುರುವೆ
ನಿರ್ಮಳ ಜ್ಞಾನದೊಳ್ ನೆಲಿಸಿದುತ್ತಮ ಗುರುವೆ
ಭವಭವಂಗಳ ಬಳಲ್ಕೆಯನಾರಿಸಿದ ಗುರುವೆ
ನವನವ ಪ್ರೇಮದಿಂದೊಳಕೊಂಡ ಘನ ಗುರುವೆ
ವರಗುರುವೆ ಸದ್ಗುರುವೆ ಸತ್ಯ ಸಂಪದ್ಗುರುವೆ
ಹರಿಬೊಮ್ಮರಾದ್ಯಂತವರಿಯದ ಮಹಾ ಗುರುವೆ

ಎಂದು ಸವಿನುಡಿಗಳಿಂ ಹೊಗಳುತ್ತೆ ಹೊಂಗುತ್ತೆ
ಮಂದೈಸಿ ಪಲ್ಲೈಸಿ ಪುಳುಕದಿಂ ಪೊಣ್ಮುತ್ತೆ
ಬಾಲಚೂತದ ನೆಳಲ ಪುಳಿನ ಸ್ಥಳದೊಳಂದು
ಬೋಳೈಸಿ ಕರೆದು ತಣಿಯದೆ ನೆನೆಯುತುಂ ಬಂದು
ಮಳಲಿಂದೆ ಶಿವಲಿಂಗಮಂ ಸಿಂಗರಂ ಮಾಡಿ
ಇಳಿವಶ್ರುಜಲದಿಂದೆ ಹಾರೈಸುತುಂ ನೋಡಿ
ಮುಂಡಾಡಿ ಮೋಹಿಸುತೆ ಮುದ್ದಿಸುತೆ ಬಿಗಿದಪ್ಪಿ
ಕೊಂಡಾಡಿ ಕೊನರುತ್ತೆ ಕೊಬ್ಬುತ್ತೆ ಕವಿದಪ್ಪಿ
ಕುಣಿಯುತ್ತೆ ಕಕ್ಕೆಯಕ್ಕೆಗಳ ಪೂವಂ ತಂದು
ತಣಿವಿಲ್ಲದರ್ಚಿಸುತೆ ನಡೆ ನೋಡುತುಂ ನಿಂದು
ಪೂಜಿಸುತೆ ಪೂಜಿಸುತೆ ಕಣ್ಮುಚ್ಚಿ ಕರಗುತುಂ
ನೋಜಿಗದ ನೇಹದಿಂ ನೆರೆ ಮುಟ್ಟಿ ಮರುಗುತುಂ ।
ಎಳ್ದೆಳ್ದು ಕುಳ್ಳಿರ್ದು ಕುಣಿಕುಣಿದು ನೋಡುತುಂ
ಬಿಳ್ದು ಭರವಿಡಿದು ಸುಖಜಲದೊಳಗೆ ಮೂಡುತುಂ
ಕೈಯೆತ್ತಿ ಕೂಗಿಟ್ಟು ಕರೆಕರೆದು ಹಿಗ್ಗುತುಂ
ಮೈಯುಕ್ಕಿ ಮುಡುಹಿಕ್ಕಿ ಕಡು ಹಿಗ್ಗಿ ಹೆಚ್ಚುತುಂ
ಶಶಿಧರಾ ಶಂಕರಾ ಬರ್ದುಕಿದೆಂ ಬರ್ದುಕಿದೆಂ
ಪಶುಪತಿಯೆ ಪುರಹರನೆ ಬರ್ದುಕಿದೆಂ ಬರ್ದುಕಿದೆಂ
ತರುಗಿರಿ ವನಂಗಳಿರ ಕಂಡಿರೇ ಪುಣ್ಯಮಂ
ಹರನೆನ್ನ ಕಯ್ಯೊಳರ್ಚಿಸಿಕೊಳ್ವ ಗಣ್ಯಮಂ
ಗಿಳಿಹಂಸೆ ಕೋಕಿಳವೆ ನೋಡಿರೇ ಸಂಪದವ
ನಳಿಕುಳಂಗಳಿರ ಕಂಡಿರೇ ಎನ್ನ ಸಂಪದವ

ಸಾಹಾ ಮಹೇಶ್ವರಾ ಆಹಾ ಮದೀಶ್ವರಾ
ಆಹಾ ಕೃಪಾವಾರಿನಿಧಿ ಶಂಭು ಶಂಕರಾ

ಎಂದು ಪಶುಪತಿಗಿಂತು ಹಲುಬಿ ಸುಖಮಂ ನೆನೆದು
ಬಂದು ಕೊಳಲೂದಿ ಕರೆದು ಗೋಕುಲಮನಂದು
ಕರೆಯೆ ಮೇವಂ ಮರೆದು ಭೋಂಕನಾಲಿಸಿ ಕೇಳ್ದು
ನೊರೆವಾಯ್ಗಳಲರ್ದ ಕಿವಿ ನಟ್ಟ ದಿಟ್ಟಿಯು ತಾಳ್ದು
ಬಾಲಮಂ ಮೇಲ್ಕೆತ್ತಿಕೊಂಡು ಭೋಂಕನೆ ಬರಲ್
ಹಾಲಕಾಯ್ಗಳಿರ ಬನ್ನಿರೆ ಎಂದೆನುತ್ತಿರಲ್
ತಂಡತಂಡದಿ ಬಂದು ನಿಂದಲ್ಲಿ ಸೇರುತ್ತೆ
ಚಂಡಪಿಳ್ಳೆಯು ಮೆಯ್ಯನಳ್ಕರಿಂ ನಕ್ಕುತ್ತೆ
ಹೊಂಕರಿಸುತೆಡೆಗಲಿಸಿಕೊಂಡು ಶಿವಲಿಂಗಮಂ
ಲೋಕಕ್ಕೆ ಪೊಸತಿದೆಂಬಂತೆ ಸರ್ವಾಂಗಮಂ
ಸಡಲಿಸುತ್ತಂ ಕರೆದವಲ್ಲಿ ಲಿಂಗದ ಮೇಲೆ
ವೃಡಭಕ್ತಿರಸಧಾರೆ ಎಂಬಂದದಿಂ ಮೇಲೆ
ಕಂಡೀಶ್ವರನ ಮುಂದೆ ಮೂಡಿರ್ದ ಲಿಂಗಕ್ಕೆ
ತಂಡದಿಂ ಸುರಭಿವಿಂಡೆಯ್ತಂದು ನೇಹಕ್ಕೆ
ಧರ್ಮಾರ್ಥಕಾಮಮೋಕ್ಷಂಗಳಂ ಕರೆವಂತೆ
ನಿರ್ಮಳದ ನಾಲ್ಕು ಮೊಲೆ ತೊರೆದು ಕರೆವುತ್ತಿಂತೆ
ಬಾಲಚಂದ್ರಂ ಮುಳುಗಿ ತೇಂಕಾಡುತಿರೆ ಕರೆದು
ನೀಲಗಳಮಲ್ಲಿ ಮಧುರತೆಯಾಗುತಿರೆ ಕರೆದು
ಶಿವಲಿಂಗಮಂ ಪುಣ್ಯ ಓಲೈಸೆ ಬಂದಂತೆ
ಶಿವನ ಜೂಟದ ಶಶಿಯು ಬೆಳ್ದಿಂಗಳಿಳಿವಂತೆ
ಕರೆಗೊರಲ ವೃಡನು ನೆರೆ ಗೋನಿಕರ ಪಾಲ್ಗೊಂಡು
ಆರಕೆವಟ್ಟಾನಂದಮಯನಂತದಂ ಕಂಡು
ಗೋವುಗಳನೊರ್ಮೆ ಶಿವಲಿಂಗಮುಮನೊರ್ಮೊರ್ಮೆ
ಭಾವಿಸುತ್ತಪ್ಪಿಕೊಳುತಾರುತ್ತ ಮೊರ್ಮೊರ್ಮೆ
ಗುಡಿಗಟ್ಟಿ ಕುಣಿವುತಂ ಮಡುಗಟ್ಟಿ ಕರಗುತಂ
ಗಡಿಗೆಟ್ಟ ಪುಳಕಂಗಳಿಂದೆ ಪುದಿದೇಳುತಂ

ಇಂತು ಶಿವಲಿಂಗಪೂಜಾರತಿಯೊಳಾಡುತುಂ
ಸಂತತಂ ಶಿವಭಕ್ತಿರಸದೊಳೋಲಾಡುತುಂ

ಇರಲಸ್ತಮಯುವಾಗೆ ಗೋನಿಕರವುಂ ಕೊಂಡು
ಚರಿತದಿಂದಂ ಬಂದು ಪುರದತ್ತ ನಡೆಗೊಂಡು
ಬಂದವರವರ ಮನೆಗೆ ಪಶುಗಳಂ ಕಳಿಪುತ್ತೆ
ನಿಂದು ಮೆಲ್ಲನೆ ಮನೆಯ ಪುಗುತಂದು ಬಾಳುತ್ತೆ
ಈ ತೆರದೊಳುಂ ಪಲವು ದಿವಸಂಗಳಾಗುತಿರೆ
ಈ ತೆರದೊಳವರವರ ಮನೆಯ ಪಶು ಕರೆಯದಿರೆ
ಜೀವದನದೊಡೆಯರೆಲ್ಲಂ ಮನೆಗೆ ನಡೆತಂದು

ಓವೊ ಅಚ್ಯುತಭಟ್ಟರೇ ಪರಿ ಇದೇನೆಂದು
ಕರೆಯರೊಂದಿನಿಸಿಲ್ಲ ಪಾಲ ಮಾತಿನ್ನೇಕೆ
ಅರಿದಾಯ್ತು ಚಂಡಪಿಳ್ಳೆಯ ಕಾಹು ತಾನೇಕೆ
ಯೊಂದೆರಡು ದಿನಮದಕ್ಕೇನೆಂದೆನುತ್ತಿರಲ್
ಸಂದಿಸುತ್ತಿಂತು ಪಾಲ್ಬಚ್ಚೆಯಾಗುತ್ತಿರಲ್
ಮರುಗದುರೆ ಮೊಣ್ಬವೆಮ್ಮಕ್ಕಳ್ಗೆ ಯರೆದಿಲ್ಲ ಯರೆದಿಲ್ಲ
ಕರುವಿಂಗೆ ಮೊದಲಾಗಿಯೊಂದು ಹನಿ ಹಾಲಿಲ್ಲ
ಪಶುವೆಮಗೆ ಪಾಲ್ನಿಮಗಿದೇನೆಂಬ ಪರಿಯಯ್ಯ
ಪೊಸತಿಮಗೆ ಚಂಡಪಿಳ್ಳೆಯ ಕಾಹು ಬೇಡಯ್ಯ

ಎನೆ ಕೇಳ್ದು ಪುತ್ರನಂ ಕರೆದು ಸಿಡಿಮಿಡಿಗೊಂಡು
ನಿನಗಿದೇಂ ಮಗನೆ ನಾವೆಂತಕ್ಕೆ ಕೂಳ್ಗಂಡು
ಬರ್ದುಕಿದೆವೆನುತ್ತಿರಲಿದೇನನುದ್ಯೋಗಿಸಿದೆ
ಮುದದಿಂದೆ ಪೇಳಯ್ಯ ಪಶುವನೆಂತಾಡಿಸಿದೆ
ಹುಲ್ಲುಂಟು ನೀರುಂಟು ಹಾಲಿಲ್ಲದೇಂ ಮಗನೆ
ಎಲ್ಲಿರ್ದೆ ಎಲ್ಲಿ ಕಾವುತ್ತಿರ್ದೆ ಪೇಳ್ಮಗನೆ
ಎಂದೊಡೀ ಭವಿಗಳ್ಗೆ ಪೇಳಲೇಕೆಂಬಂತೆ
ಇಂದುಧರಪೂಜೆಯುಂ ಬೀರೆ ನಾನೆಂಬಂತೆ
ಪಶುವಾರು ನೀವಾರಿದೇಕೆಂದು ಮುನಿವಂತೆ
ಪಶುಪತಿಯನರಿಯದವರೇನರಿವರೆಂಬಂತೆ

ಭಕ್ತಿಯಭಿಮಾನಿ ಪೂಜಾಮೌನಿ ಸುಮ್ಮನಿರೆ
ಯುಕ್ತಿಗೆಟ್ಟವರೆಲ್ಲ ವೊಲ್ದಂತೆ ನುಡಿವುತಿರೆ
ಅಂದು ಅಚ್ಚುತಭಟ್ಟರೆಲ್ಲರ್ಗೆ ಕೈಮುಗಿದು
ಇಂದು ನಿಮ್ಮಯ ಮೇಲೆ ತಪ್ಪಿಲ್ಲೆನುತ್ತಗಿದು
ಕೇಳಿರೇ ನೀವಿಂದುವೆನ್ನ ಮಾತಂ ಸಲಿಸಿ
ನಾಳೆ ಕರೆಯದೊಡೆ ಬಳಿಕಿವನ ಕಾಹಂ ಬಿಡಿಸಿ
ಎಂದವರ್ಗಳಂ ಕಳುಪಿ ಚಿಂತೆಯಂ ಪಟ್ಟಿರಲ್
ಕಂದನಂ ನುಡಿಯಲಾರದೆ ಮೂಗುವಟ್ಟಿರಲ್

ಬೆಳಗಾದುದೀಶಂ ಪ್ರಸನ್ನನೆಂದೆಂಬಂತೆ
ಬೆಳಗಾಯ್ತು ಚಂಡಪಿಳ್ಳೈಗೆ ಶುಭೋದಯದಂತೆ
ಆಗಳೆಳ್ದಿಂದಿನಂದದೆ ಪಶುಗಳಂ ಕೂಡಿ
ಪೋಗಲೆಂದಿರ್ದ ಮಗನಂ ಹರುಷದಿಂ ನೋಡಿ
ಏನೆಂದೊಡಂ ನುಡಿಯೆ ಸುಮ್ಮನಿರ್ದಪೆ ಮಗನೆ
ನೀನೇವೆ ಎಮ್ಮ ವಿಧಿ ಮಾಡುತ್ತಲಿರೆ ಮಗನೆ
ಎಲೆ ಮಗನೆ ಸುಯಿಧಾನದಿಂದೆ ಕಾವುದು ಕಂದ
ಎಲೆ ಎಮ್ಮ ಬಾಯಕುಟುಕಂ ಕಳೆಯದಿರ್ ಕಂದ
ಎಂದಾತನಂ ಕಳುಪಿ ಕಾಣದಂದದಿ ಪಿಂದೆ
ಹಿಂದುಗೊಂಡೊಯ್ಯನೊಯ್ಯನೆ ಪೋಗುತವ ಮುಂದೆ
ಒಂದು ಮರನೇರಿ ನೋಡುವೆನಿವಂ ಮಾಳ್ಪುದಂ
ಅಂದಂದು ಪಾಲ್ಬಚ್ಚೆಯಾಗಿ ಬರಿದಪ್ಪುದಂ
ಎಂದೆನುತೊಂದು ಮರದೊಳಗವಿತುಕೊಂಡಿರಲ್
ಬಂದನೆಂದಿನ ತೆರದೆ ಗೋವುಗಳ್ಬರುತಿರಲ್

ಹೊಡೆದನೈ ಹುಲ್ಲುಳ್ಳ ಹೊಲದೊಳಗೆ ಪಶುಗಳಂ
ನಡೆದನೈ ಪೂಜಿಸುವ ಠಾವಿಂಗೆ ನಿಶ್ಚಳಂ
ಪಾಡುತುಂ ಪೊಗಳುತುಂ ಮಳಲಲ್ಲಿ ಲಿಂಗವಂ
ಮಾಡುತುಂ ಮನಮುಬ್ಬುತುಂ ಭಕ್ತಪುಂಗವಂ
ಸಿಂಗರಿಸಿ ಕಾಡಪೂಗಳನೈದೆ ತಿರಿತಂದು
ಹಿಂಗದೊಲವಿಂ ಪೂಜೆಯಂ ಮಾಡಿ ನಡೆತಂದು
ಎನ್ನ ಶಶಿಮೌಳಿಯಭಿಷೇಕದರಸಿಯರಿರಾ

ಎನ್ನ ಶಂಕರನ ಪಂಚಾಮೃತಪ್ರಿಯರಿರಾ
ಅಮೃತರಸಪೂರ್ಣಸ್ತನಾಧಿಕನಿಧಿಗಳಿರಾ
ಆಮೃತಕರಧರವಾಹನಪ್ರಿಯಾವಳಿಗಳಿರಾ
ಬನ್ನಿರೇ ಎಂದು ಕರೆವಾ ಕೊಳಲದನಿವಿಡಿದು
ಮುನ್ನವೇ ಮೊಗವೆತ್ತಿಕೊಂಡು ಸಂದಣಿವಡೆದು
ಭೋರೆಂದು ಬರೆ ಕಾಣುತೊಂದೊಂದನುಂ ಕರೆಯೆ
ಹಾರಯಿಸಿ ಶಿವಲಿಂಗದ ಮೇಲೆ ನೆರೆ ಕರೆಯೆ
ಕರೆಯ ನೊರೆ ಶೀವೃತ್ತೆ ಹಾಲಹಳ್ಳಂ ಹರಿಯೆ
ನೆರೆ ಮನದ ಭಕ್ತಂಗೆ ಸುಖರಸಂಗಳ್ಸುರಿಯೆ

ಇತ್ತಲಾ ಮರದಿಂದಲಿಳಿದನಾ ಪಾತಕಂ
ಚಿತ್ತದೊಳ್ಭಕ್ತಿವೇಧಿಸದಾತ್ಮಘಾತಕಂ
ಈ ಪರಿಯಲೇ ಮಾಳ್ಪೆ ಲೇಸು ಲೇಸೆಲೆ ಮಗನೆ
ಈ ಪರಿಯಲೆನ್ನ ಗಂಟಲನರಿವರೇ ಮಗನೆ
ಎನುತೆನುತೆ ಶಿವಶಿವನೆ ಹರಹರ ಮಹಾದೇವ
ಮನದೊಳೆಳ್ಳನಿತು ಭಕ್ತಿಯು ಇರದ ದುರ್ಭಾವ
ನೆಯ್ತಂದು ಶಿವಲಿಂಗವುಂ ಮುಟ್ಟುತಿರೆ ಕಂಡು

ಸಯ್ತಿರದೆ ಚಂಡೇಶನುರಿದೆಳ್ದು ಕೋಲ್ಗೊಂಡು
ಎತ್ತಿದೊಡೆ ಪಿಡಿದಿರ್ದ ಕೋಲ್ಗೊಡಲಿಯಂತಿರಲ್
ಚಿತ್ತದೊಳ್ಮೆಚ್ಚಿ ಕರಿವದನನಿತ್ತಂತಿರಲ್
ಕೆಡೆಕೆಡೆ ಶಿವದ್ರೋಹಿ ಲಿಂಗವಂ ಮುಟ್ಟುವರೆ
ಫಡ ಕುನ್ನಿ ಭವಿನಾಯಿಯೊಡೆಯನಂ ಮುಟ್ಟುವರೆ
ಎನುತೆ ಹೊಡೆದಂ ಹೊಡೆದನಮ್ಮಮ್ಮ ಚಂಡೇಶ
ಮನವಾರಲಿತ್ತಲವತರಿಸುತ್ತ ಸರ್ವೇಶ
ನಾಗಲಿರದೆಯ್ತಂದು ವೈನೊಂದುದೇ ತಂದೆ
ಪೂಗೆ ಮೃದುತರವಪ್ಪ ತನುಗುಂದಿತೇ ತಂದೆ
ಪಾಪಕರ್ಮಂ ಮುಟ್ಟಿದಂ ಮುಟ್ಟಿದನೆ ದೇವ

ತಾಪತ್ರಯದ ಮರುಳ್ಕೈಮುಟ್ಟಿದನೆ ದೇವ
ಎಂದಲ್ಲಿ ಮೆಲ್ಲಮೆಲ್ಲನೆ ಮುಟ್ಟಿ ನೋಡುತಿರೆ
ಇಂದುಶೇಖರನೆ ನೊಂದೈ ತಂದೆ ಯೆನುತಮಿರೆ
ಇತ್ತಲೇರ್ವಡೆದ ಪಾರ್ವಂ ಮೆಲ್ಲನೆಚ್ಚತ್ತು
ಒತ್ತರಿಸಿದೇರಿಂದವೆಂತಕ್ಕೆ ಎಚ್ಚತ್ತು
ಕಂದಯ್ಯ ನೀನೆನ್ನನಿರಿವರೇ ಎನುತುಮಿರೆ
ನೊಂದು ಬಾಯಾರಿ ತಣ್ಣೀರ್ತಣಿ ಎನ್ನುತ್ತುಮಿರೆ
ಶಿವಶಿವ ಶಿವದ್ರೋಹಿ ಇನ್ನುಮಿಂದರ್ಪನೆನುತೆ
ಭವಿಪಾಪಿ ಪಾಪಿ ಪಾತಕ ಬೀಳು ಬೀಳೆನುತೆ
ತಲೆತೊಟ್ಟನುಡಿದುರುಳೆ ಕೊಯ್ದನಾ ತಂದೆಯುಂ
ನಲನರಿಯೆ ಪರಿಹರಿಸಿ ಕಳೆದನಾ ತಂದೆಯುಂ

ಕೊಯ್ದು ತಿರುಗಲ್ಕೆ ಪೊರಮಟ್ಟನಾ ಲಿಂಗದೊಳ್
ಅಯ್ದು ಮುಖವೀರೈದು ಭುಜವೆಸೆಯೆ ಲಿಂಗದೊಳ್
ಕೈಯ್ಯ ತಲೆ ಮೆಯ್ಯ ತಲೆ ಕಾಲಕಣ್ಣೆಂದೊಪ್ಪೆ
ಅಯ್ಯಯ್ಯ ನಿಂದಂ ವಿರೂಪಾಕ್ಷನಿಂತೊಪ್ಪೆ
ಇರಲು ಹೂಮಳೆ ಯೆರಗಿ ಸುರಿದುವಾ ಹೊಲದೊಳಗೆ
ತರತರದಿ ತನತನಗೆ ದುಂದುಭಿಕುಳಂ ಮೊಳಗೆ
ಕಹಳೆಗಳ್ಕರೆಯೆ ಶಂಖದ ನಾದಮುಣ್ಮುತಿರೆ
ಬಹು ವಿಧದ ರೂಪಿಂದೆ ಗಣಸಮಿತಿ ನೆರೆವುತಿರೆ
ನೋಡಯ್ಯ ನಂದೀಶ ನೋಡೇಕನಿಷ್ಠನಂ
ನೋಡುವಡೆ ಹರಿ ವಿರಿಂಚಿಗಳಿಂದ ಶ್ರೇಷ್ಠನಂ
ಕಡು ನಿಷ್ಠೆಯಿಂ ಹೊಲದೊಳಿಂತರ್ಚಿಸಿದರುಂಟೆ
ಪೊಡವಿಯೊಳ್ತಂದೆಯುಂ ಕೊಂದು ತೋರ್ದವರುಂಟೆ
ಎನ್ನ ಭಕ್ತರ್ಗೆ ತಾಯ್ತಂದೆಗಳ್ಬೇರುಂಟೆ
ಎನ್ನ ಭಕ್ತರ್ಗೆ ಗತಿಮತಿಯಾಸೆ ಬೇರುಂಟೆ
ಎನಗೆ ಬಂಧುಂ ಬಳಗವೆನ್ನ ಭಕ್ತರ್ನೋಡ
ಎನಗೆ ಸತಿಯುಂ ಸುತರುಮೆನ್ನ ಭಕ್ತರ್ನೋಡ

ಎಂದು ನಂದೀಶಂಗೆ ಪೇಳುತುಂ ಹಿಗ್ಗುತುಂ
ಬಂದ ಗಣ ವೃಂದಕ್ಕೆ ತೋರುತುಂ ತೊಳಗುತುಂ
ಆನೆ ನಿನಗೆ ತಾಯಿ ತಂದೆ ಚಂಡೇಶ ಕೇಳೆಂದು
ಆನುಂಡ ಶೇಷ ಪ್ರಸಾದವದು ನಿನಗೆಂದು
ಚಂಡೇಶಪಿಳ್ಳೆಯುಗ್ರೋಲ್ಲು ಬೀಳುಡೆ ಇತ್ತು
ಕೊಂಡಾಡಿ ಮುಂಡಾಡಿ ಬಾಯತಂಬುಲವಿತ್ತು
ನಿನ್ನ ನೀಕ್ಷಿಸಿದವರ್ಗಿನ್ನೊಂದು ಭಯವುಂಟೆ
ನಿನ್ನ ಕೈಮುಟ್ಟಿದಂಗಿನ್ನೊಂದು ಸಾವುಂಟೆ
ಎತ್ತವನನೆತ್ತೆಂದು ಕರುಣದಿಂದೆತ್ತಿಸುತೆ
ಚಿತ್ತಜಹರಂ ಕೃಪಾದೃಷ್ಟಿಯಿಂದೀಕ್ಷಿಸುತೆ
ಅಡಿದ ಹೊಲಂಬೆರಸಿ ನೆಗೆದನಾಕಾಶಕ್ಕೆ
ನೋಡಿದ ಮೃಗಂಬೆರಸಿ ನೆಗೆದನಾಕಾಶಕ್ಕೆ
ಕರೆದ ಹಸುಗಳ್ವೆರಸಿ ನೆಗೆದನಾಕಾಶಕ್ಕೆ
ಕರೆ ಗೊರಲನಿರಲೊಲವಿಂದೆ ಕೈಲಾಸಕ್ಕೆ
ಬಂದು ಚಂಡೇಶಂಗೆ ಗಣಪದವಿಯುಂ ಕೊಟ್ಟು
ನಿಂದ ಗಣಸಂತತಿಯ ನಡುವೆ ನೇಹಂಬಟ್ಟು
ಕೈಲಾಸದೊಳಗೆಲ್ಲ ಗುಡಿಗಳಂ ಕಟ್ಟಿಸುತೆ
ಶೈಲಜೆಗೆ ತೋರುತುಂ ಮೋಹದಿಂ ಮುದ್ದಿಸುತೆ
ತಾರಾದ್ರಿಯರಮನೆಯೊಳಪ್ರತಿಮನೊಪ್ಪಿದಂ
ಮಾರಮದಮಥನನಾನಂದಮಯನೊಪ್ಪಿದಂ
ಹರಿವಿರಿಂಚಾದ್ಯಮರಮುಕುಟಪದನೊಪ್ಪಿದಂ
ಶರಣಜನಹೃದಯಸರಸಿಜಭಾನುವೊಪ್ಪಿದಂ
ಭಕ್ತಸಂತಾನಜಲನಿಧಿಚಂದ್ರನೊಪ್ಪಿದಂ
ಭಕ್ತಕುಲಕಲ್ಪಕುಜವನಚೈತ್ರನೊಪ್ಪಿದಂ
ಭಾಳಾಕ್ಷನೊಪ್ಪಿದಂ ಭೂತೇಶನೊಪ್ಪಿದಂ
ಶೂಲಧರನೊಪ್ಪಿದಂ ಶಶಿಮೌಳಿಯೊಪ್ಪಿದಂ
ಶಿವನೊಪ್ಪಿದಂ ಸದಾಶಿವ ಶಂಭುವೊಪ್ಪಿದಂ
ಭವನೊಪ್ಪಿದಂ ಭರ್ಗನೊಪ್ಪಿರ್ದನೊಪ್ಪಿದಂ
ಎನ್ನ ನಿಧಿ ಎನ್ನ ಸುಧೆ ಎನ್ನ ಗುರುವೊಪ್ಪಿದಂ

ಎನ್ನರಸ ಹಂಪೆಯ ವಿರೂಪಾಕ್ಷನೊಪ್ಪಿದಂ ॥

ಕಂದ॥ ಈಶಂ ಪಿತನೆಂದರಿದು ನಿ ।
ಜೇಶನ ಬೆಸನಿಂದೆ ತನ್ನ ಪಿತನನರಿದ ಚಂ ॥
ಡೇಶನ ಸುತನೆಂದೆನಗೆ ಮ ।
ಹೇಶಂ ಕರುಣಿಸುಗೆ ಹಂಪೆಯ ವಿರೂಪಾಕ್ಷಂ ॥

# ಅಮರನೀತಿಯ ರಗಳೆ.

ಕಂದ॥ ಧರೆ ಪೊಗಳಲೊರೆದು ಕೂಗಿದ।
ಮರನೀತಿಗಳೆಂಬ ಪರಮ ಭಕ್ತನ ಕಥೆಯಂ।
ವಿರಚಿಸುವೆಂ ಭರದಿಂ ಸಾ।
ದರದಿಂ ಕೇಳಯ್ಯ ಹಂಪೆಯ ವಿರೂಪಾಕ್ಷಾ॥

## ರಗಳೆ.

ಶ್ರೀಸಕಲ ದೇಶದೊಳಗಧಿಕವೆನಿಸುವ ಚೋಳ
ದೇಶದೊಳಗೆಸೆದಿರ್ಪನೋರ್ವ ಭಕ್ತಂ ಕೇಳ
ಎಸೆವ ತಿರುನಲ್ಲೂರೊಳಿರ್ಪನಾನಂದದಿಂ
ಶಶಿಧರನ ಭಕ್ತನಿಕರದ ಭಾಗ್ಯದಂದದಿಂ
ತನ್ನ ಪೆಸರಮರನೀತಿಗಳೆಂಬುದೀ ಜಗಕ್ಕೆ
ತನ್ನ ಸಂಪದವು ಮಿಗಿಲೆನಿಪುದೀ ಕಲಿಯುಗಕ್ಕೆ

ಇಂತಿರ್ದು ಶಿವನನರ್ಚಿಸಲೆಂದು ಮನದಂದು
ಚಿಂತಿಸಿದನೊಂದು ತೆರನಂ ಚಿತ್ತದೊಳಗಂದು
ವಸ್ತ್ರಕ್ಕೆ ಸುಲಭವಪ್ಪುದು ಭಕ್ತಿ ದಾಸನಿಂ
ವಸ್ತ್ರವಿತ್ತೊಡೆ ಭಕ್ತಿಬಪ್ಪುದು ಮಹೇಶನಿಂ
ಎಂದು ತತ್ಸುತನನಾ ವ್ಯವಹಾರದೊಳಗಿರಿಸಿ
ಬಂದನೀಶ್ವರನಾಲಯಕ್ಕೆ ತಾನುರವಣಿಸಿ
ಬಂದು ಭಸಿತೋದ್ಧೂಳನಂ ಮಾಡಿ ನಲವಿಂದೆ
ನಿಂದು ಪ್ರದಕ್ಷಿಣಂ ಮಾಡಿ ಸಂತಸದಿಂದೆ
ರಂಗಮಂಟಪದೊಳ್ ನಮಸ್ಕಾರಮಂ ಮಾಡಿ
ಲಿಂಗಕ್ಕೆ ಪರಿಪರಿಯ ಪೂಜೆಗೆಂದನುಮಾಡಿ

ತರಿಸಿದ ಮಹಾ ಚೀನಿ ಎನಿಪ ವಸ್ತ್ರಾವಳಿಯ
ಹರುಷದಿಂದಂ ಲತಾವಳಿಯ ಪುಷ್ಪಾವಳಿಯ
ನೇತ್ರಾವಳಿಯ ಗಜಾವಳಿಯ ಸಿಂಹಾವಳಿಯ

ಚಿತ್ರಾವಳಿಯು ಸುರಾವಳಿಯು ಹಂಸಾವಳಿಯು
ಬಂದ ದಿಂಡುಗಳನೊಯ್ಯಾರದಿಂದಿರಿಸುತುಂ
ನಿಂದವಂ ನೋಡಿ ಮನದೊಂದಲಂಕರಿಸುತುಂ
ಅವರೊಳಗೆ ಮಿಗಿಲೆನಿಪ ವಸ್ತ್ರಂಗಳಂ ಕೊಂಡು
ನವ ಪುಷ್ಪನಿಕರದಿಂ ಪೊದೆದು ಪರಿಮಳವುಂಡು
ಮಘಮಘಿಪ ವಸ್ತ್ರಂಗಳಂ ತಂದು ತರದಿಂದೆ
ಒಗೆವೆರ್ಚಿ ಪೂಜೆಯಂ ಮಾಡುತುಂ ನಲವಿಂದೆ
ಬಿಳಿಯ ಪಟ್ಟಾವಳಿಯ ಪೊಸ ಸಪುರಮಂ ಪೊದಿಸಿ
ತೊಳಗುವ ದುಕೂಲಂಗಳಂ ತೆಗೆದು ಬಿಗಿದುಡಿಸಿ
ಚಂದನದ ಪರಿಮಳವನೊಯ್ಯನೊಯ್ಯನೆ ಪೂಸಿ
ಅಂದು ಕರಣಂಗಳಂ ಹರನತ್ತ ಕೈವೀಸಿ
ಇಂಡೆಯಂ ದಂಡೆಯಂ ವಸ್ತ್ರಂಗಳಿಂ ಕಟ್ಟಿ
ತಂಡತಂಡದ ಪೂಜೆಗಳ್ಚಿತ್ರವಂ ಮುಟ್ಟಿ
ಮನದೊಳಗೆ ತರ್ಕೈಸಿ ಮುಂಡಾಡಿ ಕೊಂಡಾಡಿ
ಮುನಿವುತುಂ ಜಿನುಗುತುಂ ಜೀವಿಸುತೆ ನಡೆ ನೋಡಿ
ಹರ್ಕೈಸಿ ಕುಸುಮಂತತಿಯಾಗೆನಯ್ಯೋ ಎನುತೆ
ಸೀರೆಗಳ ರೂಪಾರವಾಗೆನಯ್ಯೋ ಎನುತೆ
ರಸವೊಸರ್ವ ಗುಗ್ಗುಳದ ಹೊಸ ಕಂಪಿನಿಂ ಸುತ್ತಿ
ಮಿಸುಗುತಿರ್ಪ ಬೆಳಗಿನೊಸೆದಾರತಿಯನೆತ್ತಿ
ಸೊಗಯಿಸುವ ದೇವಾನ್ನ ದಿವ್ಯಾನ್ನದೊಳಗಿರ್ಪ
ಮಿಗಿಲೆನಿಸುವಮೃತಾನ್ನ ಷಡ್ರಸಂಗಳೊಳಿರ್ಪ
ಸವಿಗಳಂ ತಂದು ತಂದಾರಯ್ದಲಿಕ್ಕುತುಂ
ನವ ಪರಿಮಳಂಗಳಂ ಕೈಘಟ್ಟಿಗೀವುತುಂ
ಒಂದೆರಡು ಬಣ್ಣದೊರೆ ಬರ್ಪ ಬಿಳಿಯೆಲೆಗಳಂ
ತಂದು ಪೋಳಿಸಿದ ಪರಿಪರಿಯ ಭೋಗಂಗಳಂ
ಪಚ್ಚ ಕರ್ಪೂರದ ಪರಿಮಳದ ಹಳುಕಂಬೆರಸಿ
ಮೆಚ್ಚುತ್ತೆ ಶಿವಗಿತ್ತು ಮನದ ನೇಹಂಬೆರಸಿ
ಇಂತು ಶಂಕರನನರ್ಚಿಸುತಮುರನೀತಿಗಳ್
ಸಂತಸದೊಳರಲಿತ್ತ ಶಿವಭಕ್ತವಿತತಿಗಳ್

ಬಂದು ಶೀವಿತ್ತಲ್ಲಿ ರಂಗಮಂಟಪದೊಳಗೆ
ನಿಂದು ನೆರೆದಿತ್ತು ತೆರಹಿಲ್ಲೆನಿಸಿ ಪುರದೊಳಗೆ
ಉಗ್ರರುಂ ಶಾಂತರುಂ ಮೃದುಗಳುಂ ಮಧುರರುಂ
ವ್ಯಗ್ರರುಂ ನ್ಯಾಯನಿಷ್ಠುರರುಂ ಸಮರ್ಥರುಂ
ನೆರದಮರನೀತಿಯುಂ ಪರಸುತಿರ್ಪರ್ ಕೆಲರ್
ಪರಸಲೇಕೆಮಗೋಸುಗೀಯನೆಂಬರ್ಕೆಲರ್
ಆದಡೇನಿಂತಪ್ಪರುಂಟೇ ಎಂಬರ್ಕೆಲರ್
ಮಾದೇವನಿತ್ತೊಡರಿದಾವುದೆಂಬರ್ ಕೆಲರ್
ಇಂತು ನುಡಿವುತ್ತಿರ್ಪ ಗಣನಿಕರಮಂ ಕಂಡು
ಸಂತಸದೆ ಮೆಯ್ಯಿಕ್ಕಿ ನಿಲುತುಂ ಭಯಂಗೊಂಡು

ಆಹ ಎನ್ನಾಳ್ದರಪ್ರತಿಮಃ ಶರಣರ್ಬಂದ
ರಾಹ ಎನ್ನಾನೆಗಳ್ ಎನ್ನ ನಿಧಿಗಳ್ಬಂದ
ರೆಮ್ಮ ಶಂಕರನ ನೆನಹಂಗಳೊಲವಿಂ ಬಂದ
ರೆಮ್ಮ ಶಶಿಧರನ ಸದ್ಭಕ್ತರೆಲ್ಲರ್ಬಂದ
ರೆನುತೆ ಪುಳುಕಿಸುತೆ ನಯನಾಶ್ರುವಂ ಸುರಿಸುತ್ತೆ
ಮನವಾರೆ ಇದಿರ್ಗೊಂಡು ಕೈಗಳಂ ಮುಗಿವುತ್ತೆ
ಕೂಡೆ ಘನ ಸಿಂಹಾಸನವನಿಕ್ಕಿಯುರ್ಬುತ್ತೆ
ನೋಡಿ ದಳವೇರುತ್ತೆ ಕೊಂಡಾಡಿ ಕರಗುತ್ತೆ
ಸೆವದಿಂದೆ ಸೋಂಕುತುಂ ನುಡಿಸಿ ಮೈವೆರ್ಚುತುಂ
ಪವಣಿಲ್ಲದುತ್ಸಾಹದಿಂದುರ್ಕಿ ಸೊರ್ಕುತುಂ
ಬಂದ ಗಣಮಧ್ಯದೊಳ್ನಿಂದು ದಿಂಡಂಬಿಡಿಸಿ
ಸಂದಣಿಪ ಪಟ್ಟಾವಳಿಯನೊಪ್ಪದಿಂದಿರಿಸಿ

ಏನೇನನೆಳಸಿದರ್ಗೆ ಮ್ಮಡಿಯನೀವುತುಂ
ಮೌನದಿಂದಿರ್ದರ್ಗೆ ನಾಲ್ಮಡಿಯನೀವುತುಂ
ಆನಂದವಿರ್ಮಡಿಸಿ ನೂರ್ಮಡಿಯನೀವುತುಂ
ನಾನಾ ಮುಖಂಗಳಿಂ ಪೆರ್ಚಿ ಪಿರಿದೀವುತುಂ
ಪುಳಕಿಸುತ್ತೀವುತುಂ ಪುಟವೇಳುತೀವುತುಂ
ದಳವೇರುತೀವುತುಂ ತೊಳತೊಳಗುತೀವುತುಂ

ಕೊಂಡವರ್ತಲೆದೂಗಿ ಬೆರಗಾಗಲೀವುತುಂ
ಕಂಡವರಿದದ್ಭುತದ ದಾನವೆನಲೀವುತುಂ
ಕುಣಿದಾಡುತೀವುತುಂ ಮಣಿದಾಡುತೀವುತುಂ
ಎಣಿಕೆಗೆಟ್ಟೀವುತುಂ ಗಣಕುಲಕ್ಕೀವುತುಂ
ದೇವಾಂಗ ವಸ್ತ್ರಮುಂ ದೇವರ್ಗೆ ಈವುತುಂ
ಆವುದಾನೊಳ್ಳಿತಂ ಕೋವಣಕ್ಕೀವುತುಂ
ಅನ್ನಂ ಸುವರ್ಣಂ ಸುವಸ್ತ್ರಮುಮನೀವುತುಂ
ಎನ್ನನೀವೆಂ ಬೇಳ್ವರಿಲ್ಲೆಂದು ಸುಯ್ವುತುಂ
ಮನೆಯ ಮಕ್ಕಳ್ಗೆ ಸತಿಯರ್ಗೆಯುಡಲೀವುತುಂ
ನೆನೆದರ್ಗೆ ನುಡಿದರ್ಗೆ ಬೇಡಿದರ್ಗೀವುತುಂ
ಕೊಡಕಲಸಿಯುಂ ಕೊಡಿಸಿಯುಂ ಕೊಟ್ಟುವುಂ ದಣಿಯ
ಉಡಕಲಿಸಿಯುಂ ಉಡಿಸಿಯುಂ ತೊಡಿಸಿಯುಂ ದಣಿಯ

ಇಂತಿಂತು ಪಲಕೆಲವು ವತ್ಸರಂ ಮಾಡುತಿರೆ
ಅಂತಂತು ದಿನದಿನಕೆ ಮಿಗಿಲೆನಿಸಲೀವುತಿರೆ
ಇಲ್ಲಿ ಭಕ್ತರ್ಗೆ ಮಾಡಿತ್ತು ಕೈಲಾಸಕ್ಕೆ
ಪಲ್ಲವಿಸಿ ಪರ್ವಿ ಹರನಡಿಗಯ್ದುವನಿತಕ್ಕೆ
ಪೊದೆದ ಗಜಚರ್ಮವುಂ ಪಟ್ಟಾವಳಿಯದಾಗೆ
ಪುದಿದುಟ್ಟ ಪುಲಿದೊವಲ್ ದೇವಾಂಗ ತಾನಾಗೆ
ಹರನರಸಿಯುಟ್ಟುದುಂ ಪಟ್ಟಾವಳಿಯದಾಗೆ
ಹರನ ಗಣ ಉಟ್ಟು ಪೊದೆದಿರ್ದುವುಂ ತಾವಾಗೆ
ಕಾಣುತೆ ವಿರೂಪಾಕ್ಷನತಿ ಕೌತುಕಂಬಟ್ಟು
ಕ್ಷೋಣಿಯೊಳಗಿದು ಪೊಸತೆನುತ್ತೆ ಹರುಷಂಬಟ್ಟು

ಪೋಗಿ ನೋಡುವೆನಮರನೀತಿಗಳ ಭಕ್ತಿಯಂ
ರಾಗದಿಂದೆನ್ನವರ್ಗೀವ ನವ ಯುಕುತಿಯಂ
ಕಂಡೊರೆದು ತೂಗಿ ನೋಡುವೆನವನ ಭಕ್ತಿಯಂ
ಕೊಂಡು ಬರ್ಪೆಂ ಕರುಣದಿಂದಮರನೀತಿಯಂ

ಎಂದು ಶಂಕರನೊಂದು ವೇಷಮಂ ಕೆಯ್ಕೊಂಡು
ಅಂತು ಶತವೃದ್ಧಭಾವವನೊಪ್ಪಿ ಕೆಯ್ಕೊಂಡು

ಎಳಲ್ವಕಿವಿ ತೆರೆಪೊಗಂ ಜೊಲ್ವ ಪುರ್ವಿಂದೆಸೆಯೆ
ಸಲೆತ ಬೆನ್ ಲಾತಗೋಲ್ತುಡಿಯ ಕೋವಣವೆಸೆಯೆ
ನಡೆತಂದನಂದೊಲ್ದು ನೊಸಲಭಸಿತದಿನೊಪ್ಪೆ
ನಡೆತಂದನುರವಣಿಸಿ ಚೋಳದೇಶದೊಳೊಪ್ಪೆ

ಬಂದಮರನೀತಿಗಳ ಪುರವನೊಲವಿಂ ಪೊಕ್ಕು
ಸಂದ ಹೊಸವೀಥಿ ವೀಥಿಗಳೊಳ್ಮನಂ ಮಿಕ್ಕು
ಬರುತೆ ಮುಂದಣ ಶಿವಾಲಯದೊಳೆಸೆದಿರ್ದನಂ
ನೆರೆದ ಗಣತಿಂಥಿಣಿಯ ನಡುವೆ ಕುಳ್ಳಿರ್ದನಂ
ಬೆಳಪ ಚಂದ್ರಿಕೆಗಳೊಳಗಿರ್ಪ ಚಂದ್ರಮನಂತೆ
ತಳತಳಿಪ ದೀಪ್ತಿಗಳ ನಡುವಿರ್ಪ ರವಿಯಂತೆ
ಶಿವಭಕ್ತನಿವಹವೊಳಗಿರ್ಪಮರನೀತಿಯುಂ
ಭವನ ಸದ್ಭಕ್ತಿವರ್ಧನಕರ ಖ್ಯಾತಿಯುಂ
ಕಂಡು ಶಿವಭಕ್ತಸಂತತಿ ಇರಲ್ಮೃಗದಿದು
ತಂಡತಂಡದ ಸಂತಸಂ ಮಿಗಲ್ನಡೆತಂದು
ಮೆಲ್ಲಮೆಲ್ಲನೆ ಶಿವಾಲಯದೊಳಗಮೆಯ್ತಂದು
ಅಲ್ಲಿ ಸಂಭ್ರಮಿಪ ಶರಣರನೀಕ್ಷಿಸುತ್ತಂದು
ಗೋಂಟನೊಳ್ಕುಳ್ಳಿರ್ದು ನೋಡಿ ಮಿಗೆ ಮೆಚ್ಚುತುಂ
ನಾಂಟೆ ಶಿವಭಕ್ತಿ ಪಲ್ಲವಿಸಿ ಮೈವೆಚ್ಚುತುಂ

ಇರಲಮರನೀತಿ ಎಂದಿನ ಪರಿಯೊಳೀವುತುಂ
ಹರನ ಭಕ್ತರ್ಗೆ ಪಟ್ಟಾವಳಿಯನುಡಿಸುತುಂ
ಬೇಡಿದುದನಿತ್ತು ಸದ್ಭಕ್ತರಂ ತಣಿಪುತುಂ
ಕೂಡೆ ಗಣಸಂತತಿಗೆ ಇತ್ತಿತ್ತು ತಣಿಪುತುಂ
ಇಂತು ಮೂರುಂ ಜಾವ ಪರಿಯಂತ ಒಲಿದಿತ್ತು
ಸಂತತಂ ಶಿವನ ಭಕ್ತರ ಕರುಣಮಂ ಪೊತ್ತು
ಎಲ್ಲರಂ ತಣಿಪಿ ಕೆಲಬಲನುಮಂ ನೋಡುತುಂ
ಅಲ್ಲಿ ಗೊಂಟೆನೊಳಿರ್ದ ಭಕ್ತನಂ ಕಾಣುತುಂ
ಇತ್ತ ಬನ್ನಿರೆ ದೇವ ಎನುತೆ ಹತ್ತಿರೆ ಕರೆದು
ಪೊತ್ತು ಹೋದುದು ಸುಮ್ಮನೇಕಿರ್ದಪಿರಿ ಎಂದು

ಉಟ್ಟುದೊಂದರುವೆ ಪೊದ್ದುದೊಂದರುವೆ ನಿಮಗೆ
ಕಟ್ಟಿದುದು ಕೋಲತುದಿಯೊಳ್ಕೋವಣಂ ನಿಮಗೆ
ಅಯ್ಯೋ ಇದೇಕೆ ಪೊದೆಯಿರಿ ಪಟ್ಟೆವಾಳಿಯಂ
ಮೆಯ್ಯಾರೆಯುಟ್ಟು ಪೊದೆಯಿರಿ ಸುಖದ ಕೇಳಿಯಂ
ಎಂದೊಂದು ಸಪುರ ಸಮಕಟ್ಟುಮಂ ಮುಂದಿರಿಸಿ
ನಿಂದವಂ ನೋಡಿ ಮನದೊಳ್ನಗುತ ಗಹಗಹಿಸಿ

ಎಯ್ದುವೇ ದೇವ ನಗಲೇಕೆ ಪಿಂದೀವೆನೆನೆ
ಒಯ್ದು ನಿಮ್ಮರಸಿಯರ್ಗೀವುದಿದ ಕೊಳ್ಳಿ ಎನೆ
ತೆಗೆ ನಿನ್ನ ಸಂಪದವನೇಕೆ ತೋರುವೆ ಎಮಗೆ
ಮಗನೆ ಬಡವರ್ಗೆ ಉಡತಕ್ಕುವೇ ಪಿಂದೆಮಗೆ
ಉಟ್ಟು ಬಲ್ಲವೆಯಕ್ಕ ನಾವೇಕಿವೇಕಯ್ಯ
ಕೊಟ್ಟು ಬಲ್ಲೆವೆ ಶಿವನ ಭಕ್ತರ್ಗಿದೇಕಯ್ಯ
ಇರ್ದಿರ್ದು ಬಡವರಾದೆವು ಕೇಳಮರನೀತಿ
ಇರ್ದಿರ್ದು ವೃದ್ಧರಾದೆವು ಕೇಳಮರನೀತಿ
ಎಡೆಯಾಡಿಸುತ್ತೆ ಭಕ್ತರ್ಗೀವರಾವಲ್ಲ
ಮೃಡನ ಸದ್ಭಕ್ತರಂ ಬಳಲಿಸುವರಾವಲ್ಲ
ಇರ್ದೆಡೆಗೆ ದಿಂಡುಗಳನೊಯ್ದೀವರೆಮ್ಮವರ್
ಸಾರ್ದು ಶಿವಭಕ್ತರ್ಗೆ ಬೆಸಕೆಯ್ವರೆಮ್ಮವರ್
ಧನಧಾನ್ಯಮೆಂಬಿವಂ ಮನೆಗೀವರೆಮ್ಮವರ್
ವಿನುತ ರತ್ನಾವಳಿಗಳನೊಲಿದೀವರೆಮ್ಮವರ್
ಭಕ್ತರಂ ಬಿಡದರಿಸಿ ಕಾಯ್ದುಟ್ಟಿದುವು ಪದಂ
ಭಕ್ತರ್ಗೆ ಇತ್ತಿತ್ತು ನಿಂದುದೆಮ್ಮಯ ಪದಂ
ನಿಲೆ ಬಳಿಕ್ಕಾರುಮಂ ಹಾರದೆಲ್ಲವನುಳಿದು
ಸಲೆ ಸಂಚಳಿಸುವಲ್ಪಸೌಖ್ಯಂಗಳಂ ಕಳೆದು
ಶಿವಭಕ್ತರಂ ನೋಡುತಿರ್ಪೆವಂತಲ್ಲಲ್ಲಿ
ಶಿವನ ದಿವ್ಯ ಕ್ಷೇತ್ರಮಂ ನೋಡುತಲ್ಲಲ್ಲಿ
ಬರುತೆ ನಿಮ್ಮೂರ್ಗೆ ಬಂದೆವು ಮಗನೆ ಇವು ಬೇಡ
ಹರನ ಭಕ್ತರೆ ಸಾಲ್ವರೆಮಗವರೊಡನೆ ಬೇಡ

ಎಂದು ಮನದೊಳ್ ಹರುಷಮಂ ಮುಖದ ಕಟಿಕೆಯಂ
ತಂದು ಕೊಂಡಾಡುತಿರ್ದಂ ಮಹಾ ಕಟಕಿಯಂ

ಇರಲಮರನೀತಿಗಳ್ಬಿನ್ನಪವೆಲೇ ದೇವ
ಹರನ ಭಕ್ತರ್ಪಿರಿದು ಕರುಣಿಸುವರೆಲೆ ದೇವ
ಅರಸುವಲ್ಲಿಂ ಮುನ್ನ ಬಂದಿರ್ಪರೆಲೆ ದೇವ
ಮರೆಯಲೀಯದೆ ಕರುಣದಿಂ ಬರ್ಪರೆಲೆ ದೇವ
ಆನನಿತರವನದಂತಿರ್ಕೆ ಇಂದೆಲೆ ದೇವ
ಏನರಿಕೆ ಯೆಂಬುದಂ ಬೆಸಸುವುದು ಎಲೆ ದೇವ

ಎನಲಾವಿದೇನುಮಂ ಬೇಡಿ ಬಂದವರಲ್ಲ
ಮನದೊಳ್ಮನುಷ್ಯರನಪೇಕ್ಷೆಗೆಯ್ವವರಲ್ಲ
ಶರಣರ್ಗೆ ನೀ ಮಾಳ್ಪುದಂ ನೋಡಲಕ್ತಿಯಿಂ
ನಿರುತದಿಂ ಕೇಳ್ದು ಬಂದೆವು ನಿನ್ನ ವಾರ್ತೆಯಂ
ಇಲ್ಲಿ ಎಮಗೋರ್ವ ಭಕ್ತರ ಮನೆಯಲೌತಣಂ
ಇಲ್ಲಿ ಇರಿಸುವೆನಿಂತು ತೊಡಕಾಯ್ತು ಕೋವಣಂ
ಈ ಕೌಪನಿಂದು ಬಯ್ತಿಟ್ಟು ಕೊಡು ನೀನೆಂದು
ಲೋಕೇಶ್ವರಂ ಕುಡಲ್ಕಮರನೀತಿಗಳಂದು
ಕೊಂಡದಂ ತಮ್ಮ ಮಾನಿಸನ ಕೆಯ್ಯೊಳ್ ಕೊಡಲ್

ಕಂಡು ಮತ್ತೊರ್ಬರಂ ನಂಬದೆ ನಿನಗೆ ಕೊಡಲ್
ಬೇರೆಯೊರ್ಬನ ಕೈಯ್ಯೊಳಿರಿಸುವುದೆ ಇದು ಕರಂ
ಮೂರುಂ ಜಗಕ್ಕೆಯ್ದೆ ತಾನೆಯುನ್ನತತರಂ
ಎಮ್ಮ ಭಕ್ತಮುರ್ನ್ನಲಿತ್ತ ಭಕ್ತಿಯ ಕೌಪು
ಬೊಮ್ಮಾದಿಗಳ್ಬಯಸಿ ಹಡೆಯಲಾರದ ಕೌಪು
ಇದು ನೆನೆದುದಂ ಕುಡುವುದಿದು ಬಯಸಿತಂ ಕುಡುವು
ದಿದು ನುಡಿಯಿತಂ ಕೊಡುವುದಿದು ಬೇಡಿತಂ ಕೊಡುವು
ದಿದನಿನಿತು ಬೆಳ್ಪನಿತು ಹದುಳವಿರಿಸುವುದೆಂದು
ಸದಮಳ ಶಿವಂ ಪೋದನಾನಂದದಿಂದಂದು

ಇತ್ತಲಾ ಕೋವಣವನೊಂದು ದಿಂಡಿನೊಳಿರಿಸಿ
ಚಿತ್ತದೊಳ್ಕೌತುಕಂಬಡುತುಂ ನಮಸ್ಕರಿಸಿ
ಯಮರನೀತಿಗಳಾಗಳರಮನೆಗೆ ನಡೆತಂದು
ನಮಗಿಂದು ಕಟಕಿಯಾಡಿಸಿದನೀಶ್ವರನೆಂದು
ಚಿತ್ತಕ್ಕೆ ಹೊಲೆಯಿಲ್ಲದದ್ಭುತವಿದೇನೆಂದು
ಚಿತ್ತದೊಳ್ ಬಂದ ಭಕ್ತನ ಭಾವವೇನೆಂದು
ಭಕ್ತನಾಡಿದ ಮಾತು ಮನದೊಳಗೆ ನಟ್ಟಿರಲ್
ಯುಕ್ತಿ ಹೊದ್ದದ ಭಕ್ತನಂದಿರುಪ್ಪಟ್ಟಿರಲ್

ಶಿವನುದಯಮಂ ಸೂಚಿಸುವ ತೆರದೊಳೆಯ್ತಂದು
ರವಿಯುದಯವಾಗಲೆಲ್ಲಮರನೀತಿಗಳಂದು
ದೇವಾಲಯಕ್ಕಂದಿನಂದದಿಂ ನಡೆತಂದು
ದೇವರ್ಗೆ ಸಕಲ ವಸ್ತ್ರವ ಪೂಜೆಗೈತಂದು
ಪೊಡೆವಟ್ಟು ರಂಗಮಂಟಪದೊಳಗೆ ಕುಳ್ಳಿರ್ದು
ಮೃಡನ ಶರಣರ್ನೆರೆದು ಸಂತಸಂಬಡುತಿರ್ದು
ನಾಲ್ಕೆರಡು ಸಾವಿರಂ ಮುಂಗುಡಿಯ ಬರಲಲ್ಲಿ
ನಾಲ್ಕು ಭುಜವಾಗುತ್ತಲಮರನೀತಿಗಳಲ್ಲಿ
ಘುಳುಘುಳಿಸ ಗಣಸಂಕುಳದ ನಡುವೆ ಕುಳ್ಳಿರಲ್
ಗಳಗಳನೆ ಕಚ್ಚುಟದ ಭಕ್ತನೈತರುತಿರಲ್
ಅನಿಮಿತ್ತವಮರನೀತಿಯ ಬಲದ ಕಣ್ಣೆತ್ತೆ
ತನು ಹರುಷವೇರಿ ಸಾಲ್ಗೊಂಡು ಪುಳುಕವನೆತ್ತೆ
ಕುಳ್ಳಿರ್ದ ಶಿವನ ಸದ್ಭಕ್ತರಂ ದಾಂಟುತುಂ
ತಳ್ಳಂಕದಿಂದುರವಣಿಸಿ ಬಂದು ತೇಂಕುತುಂ

ಕೊಡು ಕೋವಣವನೆಮ್ಮ ನೆರವು ಪೋದಪುದತ್ತ
ತಡೆಯಬಾರದು ಎಮ್ಮ ಭಕ್ತರಿರ್ದಪರತ್ತ
ತಾ ತಾರೊ ಹೂಂ ತಾರೊ ತಡವೇಕಿದೇಕೆಂದೆನುತೆ
ಆತುರದ ಭಕ್ತನಂ ನೋಡಿ ಬೆರಗಾಗುತ್ತೆ
ಕಚ್ಚುಟಕ ತಕ್ಕುದಲ್ಲೈ ಇನಿತು ಸಂಭ್ರಮಂ
ಒಟ್ಟೈಸೈರಿಸು ದೇವ ಕೊಡುವೆನಾ ಕೌಪುಮಂ

ಎಂದು ಬಯ್ತಿಟ್ಟ ದಿಂಡಂ ತೆಗೆದು ನೋಡುತುಂ
ಅಂದಲ್ಲಿ ಕಾಣದೆ ಮನಂಗುಂದಿ ಬಾಡುತುಂ
ಎಲ್ಲ ದಿಂಡುಗಳೊಳಗೆ ಲೇಸಾಗಿ ನೋಡುತಿರೆ
ಎಲ್ಲಿಯುಂ ಶಿವನ ಕೌಪಿನ ಸುದ್ದಿ ಇಲ್ಲದಿರೆ
ಕಂಡು ಶಿವಭಕ್ತನುರಿದೆಳ್ದು ಬಸಿರುಂ ಪೊಸೆದು
ಕಂಡಿರೇಯಮರನೀತಿಗಳ ಪರಿಕರಮುರಿದು
ನಿನ್ನೆ ಕಚ್ಚಟವ ಬಯ್ತಿಟ್ಟ ಕೊಡು ನೀನೆಂದು
ತನ್ನ ಕೈಯ್ಯೊಳ್ಕೊಡಲ್ಕೊಂಡು ಕೆಟ್ಟಿತ್ತೆಂದು
ನುಡಿವ ಪರಿಯಂ ಕೇಳ್ದಿರೇ ಭಕ್ತಜನವೆಲ್ಲ
ಕಡೆಯಲೆನ್ನಂ ಹೊಲ್ಲಮೆನಲಾಗದಿನ್ನೆಲ್ಲಿ
ಎನಲಮರನೀತಿಗಳೆ ದೇವ ನಾಂ ಕೊಂಡೆನೇ
ತನಗೆ ತಾನೇ ಕೆಟ್ಟು ಪೋದುದಂ ಬಲ್ಲೆನೇ
ಇದಕೆ ನೀಮಿನಿತಾಸುರಂ ಮಾಡವೇಳ್ಕುಮೋ
ಇದೆ ಕೊಳ್ಳಿ ನಾಲ್ಕೈಯ್ದು ಸಮಕಟ್ಟು ಸಾಲ್ಗುಮೋ

ಎಂದು ಪಟ್ಟಾವಳಿಯ ಸಮಕಟ್ಟನೀವುತಿರೆ
ನಿಂದೊಡೆದು ಬಿದ್ದಿರ್ದು ನೆರೆದ ಸಭೆ ನಡುಗುತಿರೆ
ಎಲವೊ ಪಟ್ಟಾವಳಿಯ ಗಿಟ್ಟಾವಳಿಯ ಪವಣೆ
ಎಲವೊ ನೇತ್ರಾವಳಿಯ ಗೀತ್ರಾವಳಿಯ ಪವಣೆ
ಎನಗೆನ್ನ ಕೌಪು ಸಾಲ್ದುದು ಕುಡುಕುಡೆಂದೆನುತೆ
ನಿನಗದರ ಮಹಿಮೆಯರಿಯದುಸುರ್ದಪೆನೆಂದೆನುತೆ
ಇರಲರಿಯೆನೀನದರ ಕಚ್ಚಟದ ಮಹಿಮೆಯಂ
ಇರಿಸುವಲ್ಲಿಂ ಮುನ್ನ ಕಚ್ಚಟದ ಮಹಿಮೆಯಂ
ಮಹಿಮೆಯಲ್ಲಿದು ಬರಿಯ ಕಚ್ಚಟಂ ಕೊಡು ತಂದೆ
ಕುಹಕವೇಕೈ ಭಕ್ತರೊಡವೆಯಂ ಕುಡು ತಂದೆ
ಕುಡುವುದುಂ ಕೊಂಬುದುಂ ಸಿರಿವಂತ ಭಕ್ತರೊಳ್
ನುಡಿವುದೈ ನುಣ್ಣನೆಯ ಮಾತನಾ ಭಕ್ತರೊಳ್
ಎಮಗಿನಿತು ಪೇಳ್ವುದೇ ಸಿರಿಯ ಗರ್ವದ ನೆರವು
ನಿಮಗೆ ಗುಣವೇ ಕೊಂಡು ಕುಡಲಿಲ್ಲದಿರ್ಪಿರವು
ಏನೆಂದೊಡಂ ಸುಮ್ಮನಿರ್ದನಮರರನೀತಿ
ಏನೀಯೆಯೊರಲುತ್ತಲಿರ್ಕೆಂಬುದೇ ನೀತಿ

ಇನ್ನೊರ್ವೆರ್ ಬೇಡುವೆಂ ಕುಡದೆ ನಿಂದೊಡೆ ಬಳಿಕ
ಎನ್ನಸುವನೊಪ್ಪಿಸುವೆ ನಿನಗೆ ಸಂತಸ ಬಳಿಕ
ಮೆನ್ನನೆಮ್ಮಯ ಭಕ್ತರರಸಿಕೊಳ್ವವರುಂಟು
ನಿನ್ನ ಪವಣಲ್ಲ ಕೇಳ್ನಿನಗೆ ಬಲ್ಲಿದರುಂಟು
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲರ್ಸುಯ್ದು ಸಿಗ್ಗಾಗಿ

ಎನೆ ಶರಣರೆಲ್ಲಂದು ಕೂಡೆ ಮುಮ್ಮಳಿಗೊಂಡು
ತನತನಗೆ ನಲಿದು ಉಲಿವ ಭಕ್ತನ ಕಂಡು
ಭಕ್ತರ್ಗೆ ಮಾಡುವದನಿಂತು ಮಾಣಿಸಿದನೇ
ಭಕ್ತರೆಲ್ಲರ ಪಾಪವಂ ಕಟ್ಟಿಕೊಂಡನೇ
ಕಚ್ಚುಟಕೆ ಪಡಿಯ ದಿಂಡುಗಳನಿತ್ತೊಡೆಯೊಲ್ಲ
ನಚ್ಚರಿಯದೇನೆಂಬ ಪರಿಯನೀಶ್ವರ ಬಲ್ಲ
ನೆಂದೆಲ್ಲರೊಂದನಾಳೋಚಿಸಿದರಂದಿಂಗೆ
ಇಂದಮರನೀತಿ ಬರ್ದುಕಿದೊಡೆ ಸಾಲ್ಗೆಂದೆಮಗೆ
ಭಕ್ತನೇಕಗ್ರಾಹಿ ಕೌಪನಲ್ಲದೆಯೊಲ್ಲ
ಯುಕ್ತಿ ಕೊಳ್ಳದು ಹಿಡಿದ ಮುಷ್ಟಿಯುಂ ಬಿಡಲೊಲ್ಲ
ನಿದಕೆ ಸಾವಿರ ಹೊನ್ನದೊಂದು ಹೊಸ ಕೌಪುಮಂ
ಮುದದಿಂದಲಿತ್ತು ಭಕ್ತನ ಮನದ ಚಲಮುಮಂ
ಬಿಡಿಸುವೆವೆನುತ್ತೆಲ್ಲರೆಂದರಾ ಭಕ್ತಂಗೆ
ಮೃಡನ ಭಕ್ತರ್ನುಡಿದರಾ ಕಪಟ ಭಕ್ತಂಗೆ
ಎಮ್ಮ ಮಾತಂ ಸಲಿಸವೇಳ್ಕುಮಿಂದೆಲೆ ದೇವ
ಎಮ್ಮೆಲ್ಲರಂ ನೊಡವೇಳ್ಕುಮಿಂದೆಲೆ ದೇವ
ನಿನ್ನ ಕಚ್ಚುಟಕೆ ಪವಣಪ್ಪೊಂದು ಸಾವಿರದ
ಹೊನ್ನ ಕೌಪಂ ಕೊಂಡು ನಯದಿಂದಲೀ ನೆರೆದ
ಭಕ್ತರ್ಗೆ ಸಂತಸಂ ಮಾಡಬೇಕೆನುತಮಿರೆ
ಭಕ್ತನಳ್ಳಿರಿದೇಳೆ ನಿಂದ ಸಭೆ ನಡುಗುತಿರೆ

ಕೋಪಿಸುತೆ ಕಂಪಿಸುತೆ ಮಾಮಸಕದಿಂ ಮಸಗಿ
ಶಾಪಿಸುತೆ ತಾಪಿಸುತೆ ಮಿಗೆ ಮುಮ್ಮಲಂ ಮರುಗಿ

ಅಯ್ಯ ಭಕ್ತರಿರ ಮಿಗೆ ಲೋಗರಿಗೆ ಮುಗ್ಧರೇ
ಅಯ್ಯ ನಿಮ್ಮತ್ತಲಾಗಲು ಸೆರೆ ವಿದಗ್ಧರೇ
ಕುಡುವವರ ಪಕ್ಷಪಪ್ಪುದನೇಕೆಮಾಣಿರೇ
ಬಡವನುಮನಾಥನೆನಗೆನ್ನತ್ತಲಪ್ಪಿರೇ
ಅದು ನೋಟಕದ ಕಚ್ಚುಟವದೆಂತು ಬಗೆದಿರೇ
ಅದು ಪರುಷವೆನಗೆ ಚಿಂತಾಮಣಿವ್ರಜವೆನಗೆ
ಅದು ಕೋವಣವೆ ಸುರಭಿಗಳ್ಗೆ ದಾವಣಿ ಯೆನಗೆ
ಅದು ಕೋವಣವೆ ಕಲ್ಪಲತೆಯ ಕಾವಣವೆನಗೆ
ಕೋವಣವೆಯಭಿಮಾನಗೆಕ್ಕಲಾವಣವೆನಗೆ
ಪೊ ಪೋ ಪೋ ಅಂತದಕೆ ಹೊನ್ನ ಕಚ್ಚುಟವೆನಗೆ
ಕೊಡಲೆಂದು ಬರ್ಪಿರೇ ಕೈಕೊಳ್ಳದಿರ್ಪೆನೇ
ನಡುವೆ ಮಧ್ಯಸ್ಥರಾಗಿರ್ಪಿರೇನರಿಯೆನೇ
ಇವರನೇ ಕೈತೋರುತಿರ್ಪೆಯಮರನೀತಿ
ಇವರ ಕೈಯ್ಯೊಳು ಕೊಟ್ಟೆನೇ ಹೇಳಮರನೀತಿ
ಎನುತಲಟ್ಟಾಸುರಂ ಮಾಡುತಿರೆ ಬೆರಗಾಗಿ
ತನತನಗೆ ಭಕ್ತರೆಲ್ಲಂ ಸುಯ್ದು ಸಿಗ್ಗಾಗಿ
ಇವರೇಕೆ ನೀವೇಕೆ ಕೌಪೇಕಮರನೀತಿ
ಇವರನಿನ್ನೇನೆಂದೊಡಂ ನಮಗಪಖ್ಯಾತಿ
ಎಂಬ ನುಡಿಗೇಳ್ದಮರನಿತಿಗಳ್ಮಿಗೆ ನೊಂದು
ಇಂಬಿಲ್ಲ ನುಡಿಗೆಯನ್ಯಾಯನೆಮ್ಮದೆ ಯೆಂದು
ಕೊಟ್ಟನಿವರೊಂದು ಕೌಪಂ ಕೊಂಡೆನಾನಿದಂ
ಕೆಟ್ಟುದಪರಾಧಿಯಾನಿಂತಿದಕೆ ತಕ್ಕುದಂ
ಮಾಡುವರಿವರ್ಮಾಡಿಸಿಯೆ ಕೊಳ್ವೆ ನಾನೆಂದು
ಕಾಡುವರಿವರ್ಕಾಡಿಸಿಯೆ ಕೊಳ್ವೆ ನಾನೆಂದು
ನೀವೆಲ್ಲರುಂ ಬಳಲ್ದಿರಿ ಹಸಿದಿರೆಂದೆನುತೆ
ಆನವರ್ಮಾಡಿದಂತಾದಪ್ಪೆನೆಂದೆನುತೆ
ನುಡಿಯೆ ಭಕ್ತರ್ ಮರುಗಿದ ನಮ್ಮ ವಶವಲ್ಲವಿದು
ಮೃಡನೆ ಬಲ್ಲಂ ಮಿಕ್ಕವರ್ಗರಿಯಬಾರದಿದು

ಎನುತೆಲ್ಲರೇಳಲುದ್ಯುತರಾಗೆ ಶಂಕರಂ
ನೆನೆದನಿಂತಿವರೇಳಲಾಗದೆನುತೀಶ್ವರಂ

ಪೋಗದಿರಿ ನೀವೆಲ್ಲ ನಾನೊಂದನೆಂದಪೆಂ
ರಾಗದಿಂ ನೀವೆಂದ ಮಾಳ್ಕೆಯಿಂ ಬಂದಪೆಂ
ಕೋವಣವನೀತನಾವರ್ತದಿಂ ಕೊಡನದಂ
ನೀವೆಲ್ಲರುಂ ನೋಡಲೇಸುವನೊಡಂಬಡಂ
ಆತಂಗೆ ಛಲವಾದಡೆನಗೆ ಛಲವಪ್ಪುದೇ
ಆತನೊಳ್ಮಗುವಿನೊಳ್ಗುಣದೋಷವರಸುವುದೇ
ಬೇಡಿನ್ನದೇಕೆ ಭಕ್ತರ ವಿರೋಧವದೆಮಗೆ
ಕಾಡಲೇಕೀತನಂ ನೀವೆಲ್ಲರುಮನೆನಗೆ
ನಿಮ್ಮಯ ನಿರೋಧಮಂ ಮಾಣಿಸುವೆನಿನ್ನೊಂದು
ಎಮ್ಮ ಮಾರುಡೆ ಕೌಪು ಬೇರೆಯಿದೆ ಮತ್ತೊಂದು
ಇದರ ತೂಕಕ್ಕೆ ಸರಿ ತೂಕವಿತ್ತೊಡೆ ಸಾಲ್ಗು
ಆದರ ಹಂಬಲು ಬೇಡ ಭಕ್ತರ್ಗೆ ನೆರೆ ಸೋಲ್ಗು

ಎನೆ ಶರಣರೆಲ್ಲರು ಕೂಡೆ ಹರುಷಂದಳೆದು
ಮನದೊಳಗೆ ಗುಡಿಗಟ್ಟಿ ಸಂತೋಷಮಂ ತಳೆದು
ಅಮರನೀತಿಗಳನಾಲಿಂಗಿಸಿ ಸುಖಂ ಬಡೆದು
ನಿಮಗೆ ದೇವರ ಕರುಣಮುಂಟೆಂದು ಸುಖವಿಡಿದು
ತೀರಿತೆಂದೇ ಬಗೆದು ನೆಗೆದು ನಲಿದಾಡುತುಂ
ಮಾರಾರಿ ಮಾಡುವುದನರಿಯದೊಲೆದಾಡುತುಂ
ತರಿಸು ತರಿಸು ತ್ರಾಸನೆನುತೆ ಸಂಭ್ರಮಿಸುತ್ತೆ
ಹರನಿಂತು ಕರುಣಿಸಿದನೇ ಎಂದು ಹಿಗ್ಗುತ್ತೆ
ಇರೆ ಬಂದುದೊಂದು ಕಿರಿಯ ತ್ರಾಸುಮಂ ಪಿಡಿದು
ಇರಿಸಿ ಕೋವಣದ ಭಾರಕ್ಕೆ ಹಲ್ಲೆಗಳೊಡೆದು
ಶತಚೂರ್ಣಮಾಗೆ ಮತ್ತೊಂದು ಪಿರಿದಪ್ಪುದಂ
ಅತಿ ಭರದೆ ತಂದಿರಿಸಿ ಮಿಗೆ ಬಲ್ಲಿತಪ್ಪುದಂ
ಆದರೊಳಗೆ ಕಚ್ಚುಟವನಿರಿಸಲನುರಾಗದೊಳ್
ಅದು ನುಚ್ಚುನೂರಾಗೆ ಕಂಡಮರನೀತಿಗಳ್
ಬರಿಯ ಕೋವಣಮಲ್ಲ ಕಂಡೆನಿದರಂದಮಂ
ಹೊರಗೆ ನಡೆಯಿರೆ ತೋರ್ಪೆನಾ ಮಾಡುವಂದಮಂ
ಎಂದು ಶಿವರಾಜಾಂಗಣದ ಮುಂದೆ ಪೊಡಮಟ್ಟು

ತಂದೆರಡು ಮುಗಿಲ ಮುಟ್ಟುವ ಕಂಬಮಂ ನೆಟ್ಟು
ಶಿವಶಾಸನಸ್ತಂಭವಂ ತಂದು ನೆಡುವಂತೆ
ಭವನ ಭಕ್ತಿಯ ನೀಳ್ದ ನಿಷ್ಠೆಯಂ ನೆಡುವಂತೆ
ನಟ್ಟನಡುವೊಂದಸಿಯ ತೊಲೆಯನಡ್ಡಂನಿಲಿಸಿ
ಕಟ್ಟಿದಂ ಕಾರ್ಬೊನ್ನಸಂಕಲೆಗಳಂ ತರಿಸಿ
ಆದರ ತುದಿಯೊಳಗೆರಡು ಕೊಪ್ಪರಿಗೆಯಂದದಿಂ
ಹವಣಿಸುವ ಹಲ್ಲೆಯಂ ಲಂಬಿಸಲ್ಕಂದದಿಂ
ಇಂತು ಭಕ್ತಿಯನೆ ತೂಗುವ ತೊಲೆಯನಳವಡಿಸಿ
ಮುಂತೆ ನಿಚ್ಚಣಿಗೆಗಳನೊಂದೆರಡನಳವಡಿಸಿ
ಯಯ್ಯ ಬಾರೈ ಇರಿಸು ನಿನ್ನ ಕೋವಣಮುಮಂ
ಅಯ್ಯಯ್ಯ ನೋಡಲಿಕ್ಕೇನದರ ತೂಕಮಂ
ಎಂದು ನುಡಿಯಲ್ಕೆ ಮಿಗೆ ಮನದೊಳಗೆ ನಸುನಗುತೆ
ತಂದಿಕ್ಕಿದಂ ತ್ರಾಸಿನೊಳಗೆ ಕೌಪಂ ಸಗುತೆ
ಇಕ್ಕೆ ನೆಲನಂ ಹತ್ತಿತೊಂದೆಸೆಯ ಹಲ್ಲೆಯದು
ಮಿಕ್ಕು ನೆಗೆಯಿತ್ತು ತಾರಾಪಥವ ಮುತ್ತೊಂದು
ನೆಗೆಯೆ ನಿಚ್ಚಣಿಕೆಗಳನಿಟ್ಟು ನಲವಿಂದೇರೆ
ಜಗವೆಲ್ಲ ಮಿಗೆ ಪೊಸತು ಪೊಸತೆನುತಿರಲ್ಕೇರೆ

ಪಳಿಯ ಪಟ್ಟಾವಳಿಯ ದಿಂಡುಗಳನೊಟ್ಟುತಿರೆ
ತೊಳತೊಳಪ ದಿವ್ಯ ವಸ್ತ್ರಾವಳಿಯನೊಟ್ಟುತಿರೆ
ಹಲ್ಲೆ ಚಲಿಸದೆ ತೊಲಗದಲುಗದಲ್ಲಾಡದಿರೆ
ಅಲ್ಲಲ್ಲಿ ಪುರಜನಂ ಕಂಡು ಬೆರಗಾಗುತಿರೆ
ನೆರೆಯ ಬ್ಯವಹಾರಿಗಳ ವಸ್ತ್ರಮಂ ತಂದಿರಿಸಿ
ಪುರದೊಳಗೆವುಳ್ಳ ವಸ್ತ್ರವನೆಲ್ಲ ತಂದಿರಿಸಿ
ಅಳವಡಿಸಿ ಮೇಲೆ ಮೇಲನುವಾಗಲೊಟ್ಟುತಿರೆ
ತೊಲಗದತ್ತಿತ್ತ ಚಲಿಸದೆ ಹಲ್ಲೆ ಮಿಡುಕದಿರೆ
ಕಂಡಮರನೀತಿಗಳ ಮನೆಯೊಳುಳ್ಳರ್ಘಮಂ
ತಂಡತಂಡದ ರತ್ನಖಚಿತದಾಭರಣಮಂ
ಪೊತ್ತಡರೆ ತಂದು ಬೆಟ್ಟದ ತೆರದೊಳೊಟ್ಟುತಿರೆ
ಮತ್ತೆ ನೆಲದೊಳಗೆ ನೆಟ್ಟ ತೆರನಂತೆ ಚಲಿಸದಿರೆ

ಬೇಳಾಗಿ ಬೆಂಡಾಗಿ ಯಮರನೀತಿಗಳಂದು
ಹಾಳಾದ ಕಚ್ಚುಟವಿದೆಂತು ಸಾರಿತ್ತೆಂದು
ನೋಡಿ ಮನದೊಳಗೆ ತಲೆದೂಗಿ ಬೆರಗಾಗುತಿರೆ
ನೋಡುವ ಜನಂ ಕೌತುಕಂಬಟ್ಟು ಸುಯ್ಗರೆವುತಿರೆ

ಪುರಜನವ ಪರಿ ಜನವ ಸುಡಬಂದುದೀ ಕೌಪು
ನೆರೆದವರ ನಿಂದವರನಂಜಿಸಿತ್ತೀ ಕೌಪು
ಏನೇಳ್ವೆನಿದು ಮಾಯೆ ಯೆಂದು ನುಡಿವರ್ಕೆಲರ್
ದೇವನೊಲವಿಂ ಕಾಡಬಂದನೆಂಬರ್ಕೆಲರ್
ಆವುದರಿದಮರನೀತಿಗಳ್ಗೆ ಯೆಂಬರ್ಕೆಲರ್
ಈವನಂ ಕೆಡಿಸಿದಂ ಪಾಪಿ ಎಂಬರ್ಕೆಲರ್
ಇಂತು ಭಕ್ತರ್ಗಿತ್ತ ಫಲವಿದೆಂಬರ್ಕೆಲರ್
ಎಂತಪ್ಪುದಕಟ ಎನ್ನುತಿರ್ಪರ್ಕೆಲರ್
ಇಂತು ಜನವೆನುತಮಿರಲಮರನೀತಿಗಳಂದು
ಚಿಂತಿಸಿದನೊಂದ ಶಿವನೊಲ್ವ ತೆರನಂ ನಿಂದು
ಅರಿದೆನರಿದೆಂ ಯಿದಕೆ ಸರಿತೂಕಮಂ ಕಂಡೆ
ನರಿದೆನಿಂತಿದಕೆ ತಕ್ಕುಪಮಾನಮಂ ಕಂಡೆ
ನೀ ಭಕ್ತನೆಡೆಕೆಡೆಯು ಭಕ್ತನಲ್ಲಂ ನೋಡ
ಈ ಭಕ್ತನಂ ಮೆಚ್ಚಿಸುವೆನೀಗಳುಂ ನೋಡ

ಎಂದು ತನ್ನಯ ಸತಿಯುಮಂ ಪುತ್ರನಂ ಕರಿಸಿ
ಬಂದ ಮಗನಂ ನೋಡಿ ಬಿಗಿಯಪ್ಪಿ ಮಿಗೆ ಹರಿಸಿ
ಮಗನೆ ನೀ ಮಾಳ್ಪ ಬೆವಹಾರವದು ಸಾಲ್ಗಯ್ಯ
ಮಗನೆ ಕುಡುವುದು ಕೊಂಬುದುಂ ಪೂರ್ಣವಿಂದಯ್ಯ
ಕೇಳಯ್ಯ ಮಗನೆ ಭಕ್ತರ್ಗೆ ಬೆಸಕೆಯ್ವುದುಂ
ಶೂಲಿ ತಾನೇ ಕೊಂಡನೇನೆಂಬೆನಿಂತಿದಂ
ಕಚ್ಚುಟಕ್ಕಾಳಾದೆವಾವೆಲ್ಲರುಂ ಮಗನೆ
ಯೊಚ್ಚತಂಗೊಂಡ ಭಕ್ತಂ ನಮ್ಮನೆಲೆ ಮಗನೆ
ಅರ್ಥಿಯುಮನೊಪ್ಪಮುಂ ಕೆಡಿಸಿತ್ತು ಕೋವಣಂ
ಅರ್ಥಮುಮನೆಮ್ಮುಮಂ ಕೊಂಡುದೀ ಕೋವಣಂ
ಇನ್ನಂಜಲಾಗದೆಲೆ ಕಂದ ಕಲಿಯಾಗೆನುತೆ

ತನ್ನ ಕೆಯ್ಯುಟ್ಟಿ ಭಸಿತಮನೆಯುದ್ಧೂಳಿಸುತೆ
ರುದ್ರಾಕ್ಷಿಗಳನಿಕ್ಕಿ ಹೊಸ ದುಕೂಲಮನುಡಿಸಿ
ರುದ್ರನೇ ಬಲ್ಲನೆಂದೆನುತೆ ಮಗನಂ ನಡಿಸಿ
ಮಗನ ಕೈವಿಡಿದು ನಿಚ್ಚಣಿಕೆಗೇರಿಸುತಮಿರೆ
ಮಗನೇಕೆ ಯಾನಿದ್ದೇನೆಂದು ಸತಿ ನುಡಿವುತಿರೆ
ಮಗನೊಳುಂ ನಿನ್ನೊಳುಂ ತೀರ್ಪುದೇ ಯಿದು ನೋಡ
ಜಗಕೆ ವೈಚಿತ್ರ್ಯಮಾಗದೆ ಪೋಗದಿದು ನೋಡ
ಎನುತೆ ತನ್ನಯ ಕುಮಾರನನೇರಿಸುತ್ತಿರಲ್
ಜನವರಿದದೆಲ್ಲಮಂ ಮನದಿ ಮರುಗುತ್ತಿರಲ್

ಇರ್ದಿರ್ದು ಕಚ್ಚುಟಮನೇಕೆ ತಂದಂ ಭಕ್ತ
ನಿರ್ದಿರ್ದು ಈ ಪುರಕೆ ಮೃತ್ಯುವಾದಂ ಭಕ್ತ
ನಿಂತಪ್ಪ ಕಂದನಂ ಕಚ್ಚುಟಕೆ ಮಾರಿದಂ
ಎಂತಪ್ಪುದೋ ಅಮರನೀತಿ ಕಲಿಯೇರಿಸಿದ
ನೆನುತಿರಲ್ಪುತ್ರನಂ ಹಲ್ಲೆಯೊಳಗಿರಿಸಲ್ಕೆ
ತೊನೆದು ಹತ್ತಿದ ಹಲ್ಲೆ ಮೇಲಿನಸು ನೆಗೆಯಲ್ಕೆ
ಕಂಡಮರನೀತಿಯು ಬು ಬು ಬೂ ಯೆಂದು ಬೊಬ್ಬಿರದು
ಕೊಂಡೆನಿನ್ನೇನು ಸತ್ಯದ ಕೋಂಟೆಯುಂ ಕವರ್ದು
ಎನುತೆ ಬಾಹಪ್ಪಳಿಸಿ ಕುಣಿವುತ್ತಲಿಳಿತಂದು
ನಿನಗೆ ಸಂತೋಷಮೇ ಭಕ್ತಯ್ಯ ಪೇಳೆಂದು
ನುಡಿಯೆ ಭಕ್ತ ಕೇಳಿದೇಕೆ ಇಷ್ಟಾಸುರಂ
ಬಡವರ್ಗೆ ತಕ್ಕುದಲ್ಲಯ್ಯ ನಿನ್ನಾಸುರಂ
ಕೊಂಡುದಂ ಕೊಡುವುದಕ್ಕಿನಿತು ಸಂಕಟಮುದಕೆ
ಕೊಂಡುದೇ ಇಲ್ಲೆಂದು ನುಡಿಯೆ ಸಾಕಾಯ್ತೆಮಗೆ
ಮಗನನೇರಿಸು ಯೆಂದು ಪೇಳ್ದೆವೇ ನೀನರಿಯೆ
ಮಗುವುತನದಾಟಮಲ್ಲವೆ ಹೇಳ್ಪುದೆಲ್ಲರಿಯೆ
ಮಗನುಮಂ ವನಿತೆಯುಂ ನೀನುಮೇರಿದೊಡೇನು
ಜಗವುಮೀ ನೆರೆದ ಜನರೆಲ್ಲರೇರಿದೊಡೇನು
ಎಮಗೆಮ್ಮ ಕೌಪಿಂಗೆ ಸರಿಯಾಗೆ ಸಾಲ್ಗೆನಲ್
ಎಮಗೆ ನಿಮ್ಮೊಡನೆ ತರ್ಕಮದೇತಕೆಂದೆನಲ್

ಇವರ ನುಡಿ ಪೊಸತೆವುಗೆನುತ್ತೆ ತಮ್ಮರಸಿಯಂ
ಶಿವನೊಲ್ದು ಮೆಚ್ಚಿಕೊಂಡರೆನಿಜ್ಜಣಿಗೆಯಂ
ಏರಲರಿಯದೊಡೆ ತಾನೆತ್ತಿಕೊಂಡೇರುತುಂ
ಮೀರಿ ಶಂಕರನ ಸದ್ಭಕ್ತಿಯಂ ತೋರುತುಂ
ವನಜವಂ ಕಚ್ಚುಟಕೆ ತೂಗಲಿಡುವಂದದಿಂ
ಕನಕಲತೆಯಂ ಕಚ್ಚುಟಕೆ ತೂಗುವಂದದಿಂ
ತ್ರಾಸಿನೊಳಗಿರಿಸಿದಂ ಚನ್ನ ಸುಕುಮಾರಿಯಂ
ಲೇಸೆನುತೆ ಜಗವೆಲ್ಲ ಕೊಂಡಾಡೆ ಧೀರೆಯಂ
ಇರಿಸೆ ಮುನ್ನಿಂದ ವುನ್ನತವಾದುದಾ ಹಲ್ಲೆ
ಹರಿಸದಿಂದಮರನೀತಿಗಳ್ ಮನದೊಳು ಗೆಲ್ಲೆ
ಆರುತಂ ಬೊಬ್ಬಿಡುತ್ತಿಳತಂದು ನೋಡುತುಂ
ತೋರವಾಗುತೆ ಚತುರ್ಭುಜನಾಗಲಾಡುತುಂ
ಹರಿಸದಿ ವಿಭೂತಿಯಂ ಉದ್ಧೂಳನಂ ಮಾಡಿ
ಸಿರವುರಂ ಹಸ್ತದೊಳ್ ರುದ್ರಾಕ್ಷಿಯಂ ಸೂಡಿ
ಚಂದದ ದುಕೂಲವಂ ತೆಗೆದುಟ್ಟು ಬಿಗಿದುಟ್ಟು
ನಿಂದ ಚೋಳಾದಿಗಳ್ ಕೈಮುಗಿಯೆ ಪೊರಮಟ್ಟು
ನಡೆತಂದು ರಂಗಮಂಟಪದ ನಡುವುಂ ನಿಂದು
ಮೃಡನೆ ಯುವಧಾರೆನ್ನ ತಂದೆ ಕೈಕೊಳ್ಳೆಂದು
ಪಟ್ಟಾವಳಿಯ ಪೂಜೆ ಪೂರ್ಣವೆ ಯಿಂದೆನಲ್
ಕಟ್ಟುಗಟ್ಟೆತೆ ಭಕ್ತಕುಲದ ಬರವಿಂದೆನಲ್
ಅಮರನೀತಿಯ ಭಕ್ತಿ ಕೆಯ್ಗಂದಿತೇ ದೇವ
ಅಮರನೀತಿಯ ಭಕ್ತಿ ಕಹಿಯಾದುದೆಲೆ ದೇವ
ಶಿವನನರ್ಚಿಸಿದಕ್ಕೆ ಫಲವಾಯ್ತೆ ಯೆಲೆ ತಂದೆ
ಇವರ ಕೋವಣವಿಂದು ಪೊಳ್ತುಮಾಡಿತೆ ತಂದೆ
ಎಂದೆನುತೆ ಬೀಳ್ಕೊಂಡು ತಿರುಗಿ ಬಂದಂ ಬಂದ
ಅಂದಾಹ ಭಕ್ತರ್ಗೆ ಭಾಷೆಗೊಡುತುಂ ನಿಂದ

ಎಲೆ ಗಣಂಗಳಿರ ಬಿನ್ನಪವನವಧರಿಸುವುದು
ಸಲೆ ನಿಮ್ಮಡಿಂಗರಿಗನೆಂಬುದಂ ಸಲಿಸುವುದು
ಸಲಹಿದಿರಿ ನೀವೆನ್ನನಿನಿತು ದಿನವಳ್ಕರಿಂ

ಸಲೆ ಭಕ್ತಿವಂತನಾದೇಂ ನಿಮ್ಮ ದೂಸರಿಂ
ನಿಮ್ಮ ಪದರಜವೆ ಬಾಯ್ವಣ್ಣೆಯಾದುದ ಕೇಳಿ
ನಿಮ್ಮ ಪಾದವೆ ತೊಟ್ಟಿಲಾಗಿ ಬೆಳೆದೇಂ ಕೇಳಿ
ನಿಮ್ಮ ಬರವೇ ಬೆಸನವಾಗಿರ್ಪೆ ನಾನಯ್ಯ
ನಿಮ್ಮ ಬರವೇ ಹರಣವಾಗಿರ್ಪುದೆನಗಯ್ಯ
ನಿಮ್ಮ ಗೋಷ್ಠಿಯ ಸುಖವನಾರ್ಪಡೆವರೆಲೆ ದೇವ
ಬೊಮ್ಮಾದಿಗಳ್ ಬಯಸಿ ಬಾಯೊರೆವರೆಲೆ ದೇವ
ಇಂತಪ್ಪ ಭಾಗ್ಯಮಂ ತಪ್ಪಿಸಿದನೀ ಭಕ್ತ
ನಿಂತಪ್ಪ ಸಮಸುಖವನಡಗಿಸಿದನೀ ಭಕ್ತ
ಅಧಿಕವಾಯಿತ್ತು ಭಕ್ತನ ಕೌಪಿನೊಳಿಗಂ
ಪದಮಲಂ ಸದ್ಭಕ್ತ ಸತ್ಯನಿಧಿಯೊಳಿಗಂ
ಸಲ್ವೆನಿವರೊಡನೊಕ್ಕಲಪ್ಪೆನಿನ್ನಿರಲಿಲ್ಲ
ಒಲ್ವರೆನ್ನಂ ಪರಸಿ ಕಳಿಪುವುದು ನೀವೆಲ್ಲ
ನಿನ್ನೊಂದನವಧರಿಪುದೆಲೆಲೆಯಪ್ರತಿಮರಿರ
ಎನ್ನ ಶಿಶುವಿನ ನುಡಿ ತೊದಳ್ನುಡಿಯನೆಲೆ ಧೀರರಿರ
ಇನಿತು ದಿನವಾಸಿತ್ತೆನೆಂಬುದೆನಗುಳ್ಳೊಡಂ
ಎನಗೆ ಸತಿಯರ್ಗೆಂದು ಮನದೊಳಗೆ ಬಗೆದೊಡಂ
ಆನೊರ್ಬನೆನ್ನ ಸಿರಿ ಎಂದು ಬಗೆದಿರ್ದೊಡಂ
ಆನೊಂದು ರೂಹೆಂದು ಮನದೊಳಗೆ ಹೊಳೆದೊಡಂ
ಶ್ರೀಗುರುವಿನಾಜ್ಞೆಯಿಂದಲ್ಲದಾಂ ನಡೆದೊಡಂ
ನಾಗಭೂಷಣನ ಭಕ್ತರನೆಳಸದಿರ್ದೊಡಂ
ಮುಂದೆ ಬಂದೊಡ್ಡಿರ್ದುದಿಂತೆನಗಿದೇ ದಿಬ್ಯ
ಇಂದುಧರ ಮೂರ್ತಿಗಳು ನೋಳ್ಪುದಿದೇ ದಿಬ್ಯ

ಎನುತೆ ಬರ್ಪಮರಸೀತಿಗಳ ಬರವಂ ಕಂಡು
ಅನುವಾಗಿ ಕಚ್ಚುಟದ ಭಕ್ತಂ ಮನಂಗೊಂಡು
ತರತರದ ಪುಳಕಮಂ ಮೆಯ್ಗರೆದು ನಿಲಿಸುತುಂ
ಇರಲಾರದೇಳ್ವ ಜಡೆಗಳನೊತ್ತಿ ನಿಲಿಸುತುಂ
ಪೊರಮಡುವ ಬಿಸಿಗಣ್ಣನಳವಡಿಸಿ ಮುಚ್ಚುತುಂ
ನೆರೆ ನೆಗೆವ ತಿಸುಳಮುಮನಲ್ಲಿ ತರ್ಗೊತ್ತುತುಂ

ಒತ್ತರಿಪ ಮೂರ್ತಿಯಂ ಚಿತ್ರದೊಳ್ ನಿಲಿಸುತುಂ
ಬಿತ್ತರಿಪ ಚೋಹದೊಳಗುರೆ ಜಗಳವಾಡುತುಂ
ಬಸವನಂ ಹತ್ತೊತ್ತಿ ತೊಡೆಯೊಳಡಂಗಿಸುತೆ
ಬಸವಲ್ಲದೊತ್ತರಿಪ ಕರುಣಮಂ ತಳ್ಗಿಸುತೆ
ಇರಲಮರನೀತಿಗಳ್ನಲಿವುತಲ್ಲಿಗೆ ಬಂದು
ಹರಭಕ್ತ ಕೇಳಯ್ಯ ಎನ್ನ ಬಿನ್ನಪವೆಂದು
ಅಯ್ಯ ನಿನ್ನಯ ಕಚ್ಚುಟಕ್ಕೆ ಸರಿತೂಕಮಂ
ಕೆಯ್ಯ ಮೇಲೆ ತೋರ್ಪೆನವಧರಿಸು ಸತ್ಯಮಂ
ನೋಡು ನೋಡೆಂದು ಭಕ್ತಿಯನಡರುವಂದದಿಂ
ನೋಡು ನೋಡೆಂದು ನಿಷ್ಠೆಯನೇರುವಂದದಿಂ
ಆಡದೇರಿ ನಿಚ್ಚಣಿಗೆಯಂ ಮೇಲೆಯವತರಿಸಿ
ವೃಡನ ಶರಣರ್ಗೆ ಕೆಯ್ಮುಗಿದು ಹರನಂ ಸ್ಮರಿಸಿ
ಶಿವನ ಭಕ್ತಿಯ ತೋಲಾಪುರುಷಮುಮನಡರ್ವಂತೆ
ಶಿವಮುಹೂರ್ತದ ಘಳಿಗೆವಟ್ಟಲೊಳ್ಮೊಗುವಂತೆ
ಹತ್ತೆ ಸಾರುತ್ತಮರನೀತಿಗಳ್ಮೋಹಿಸಲ್
ಇತ್ತಲೀಶ್ವರನ ಚೋಹಂ ಸಡಿಲಿ ರೂಹಿಸಲ್

ಒಂದು ದೆಸೆಯ ತ್ರಾಸನಮರನೀತಿಗಳೇರೆ
ಯೊಂದು ದೆಸೆಯಾ ತ್ರಾಸನೆಮ್ಮ ಶಂಕರನೇರೆ
ಸಮತೂಕವಾಯಿತ್ತು ಶಂಕರನ ಭಕ್ತಿಯ ತ್ರಾಸು
ಸಮವಾಯ್ತು ದೇವಭಕ್ತರ ತೂಕದಾ ತ್ರಾಸು
ಅಲ್ಲಿ ವೃಷಭಧ್ವಜಮುಮಿಲ್ಲಿ ಭಕ್ತಿಧ್ವಜಂ
ಅಲ್ಲಿ ವರ ದಶಭುಜಮಿಲ್ಲಿ ವರಷಡ್ಭುಜಂ
ಅಲ್ಲಿ ಶಿವಶಂಕರಮುಮಿಲ್ಲಿ ವರ ಕಿಂಕರಂ
ಅಲ್ಲಿ ಕರುಣಾಕರಮುಮಿಲ್ಲಿ ಭಕ್ತ್ಯಾತುರಂ
ಅಲ್ಲಿ ಶಶಿಶೇಖರಮುಮಿಲ್ಲಿ ಸುಖಶೇಖರಂ
ಅಲ್ಲಿ ಗಿರಿಜಾವರಮುಮಿಲ್ಲಿ ಸುಕೃತಾಕರಂ
ಇಂತೊಪ್ಪುತಿರ್ದವಿರ್ದೆಸೆಗಳಾ ತ್ರಾಸುಗಳ್
ಸಂತತಂ ಧರೆ ಪೊಗಳಲೀಶ್ವರನ ಲೇಸುಗಳ್

ಸುರಿದವಿರ್ಬರ ಮೇಲೆ ಪೂಮಳೆಗಳೊಪ್ಪದಿಂ
ಪರಿದವೇಣ್ದೆಸೆಗೆ ಭೇರೀರವಂ ಕೊರ್ವಿನಿಂ
ಮಂಗಳ ಮೃದಂಗ ತೂರ್ಯತ್ರಯಂಗಳ್ಗಿಗಳೆ
ಸಂಗಡಿಸಿ ಚಂಡ ಕೀರ್ತಿಗಳಳ್ಕರಿಂ ಪೊಗಳೆ
ಭಕ್ತಜನಸುರಧೇನು ಭಕ್ತವತ್ಸಳನೆಂದು
ಭಕ್ತಜನಕಲ್ಪತರು ಭಕ್ತಬಾಂಧವನೆಂದು
ಬಿರಿದೆತ್ತಿ ಕರೆವ ಕಹಳೆಗಳ ಘನ ರವದೊಳಗೆ
ಆರರೆ ಕೋಟಾಕೋಟಿ ರವಿಕಿರಣದಿಂ ತೊಳಗೆ
ಆ ಸಮಯದೊಳ್ ದೇವಗಣವೃಂದವೈತಂದು
ಭಾಸುರದ ಪೊಸ ವಿಮಾನಂಗಳಿಂದೈತಂದು
ಅಲ್ಲಿ ನಂದೀಶನಂ ನೋಡಿ ಸರ್ವೇಶ್ವರಂ
ಸಲ್ಲೀಲೆವೆತ್ತೆಂದನಂದು ಸಕಲೇಶ್ವರಂ
ಕೇಳಯ್ಯ ನಂದೀಶ ಧಾರಿಣಿಗೆ ಕೌತುಕಂ
ಹೇಳಲಳವಲ್ಲ ಎಮಗೊಳಗಾಗಿ ಕೌತುಕಂ
ಎನಗೆ ಸಮತೂಕಮಂ ತೂಗಿ ನಿಂದವರುಂಟೆ
ಎನಗೆ ಧನಸತಿಸುತರನಿಕ್ಕಿ ತೂಗಿದರುಂಟೆ
ಎನ್ನ ಘಾಸಿಗೆ ನಿಲುವಡಮರನೀತಿಯೆ ನಿಲುವ
ಎನ್ನ ವೇಷವನೊಲಿವಡಮರ ನೀತಿಯೆ ವೊಲಿವ
ಇಳೆಗೆ ಪಟ್ಟಾವಳಿಯನುಡಿಸಿದವರಿಂತುಂಟೆ
ತಿಳಿವಡೆನ್ನಯ ಪೂಜೆಗಳವಡಿಸಿದವರುಂಟೆ
ಎನ್ನ ತೂಕಕ್ಕೆ ಕಟ್ಟಣೆ ಯಪ್ಪರಿಂತುಂಟೆ
ಎನ್ನೊರೆಗೆ ಸರಿಮಚ್ಚನಾಗಿ ತೋರಿದರುಂಟೆ
ದಾವುರೆ ಅಮರನೀತಿ ಪೂತುರೆ ಅಮರನೀತಿ
ದೇವುರೆ ಅಮರನೀತಿ ಭಾಪುರೆ ಅಮರನೀತಿ
ಎಂದು ನಂದೀಶಂಗೆ ಹೇಳುತುಂ ಹಿಗ್ಗುತುಂ
ಬಂದ ಗಣವೃಂದಕ್ಕೆ ನಲವಿಂದೆ ತೋರುತುಂ
ತನ್ನುಮಂ ಭಕ್ತನಂ ಸರಿಸರಿಯೆಂದು ತೋರುತುಂ
ಇನ್ನಿದೆನ್ನಂ ಬರೆ ಶಿವನೊಲಿದು ಸಾರಿದಂ
ಎಂಬಂತೆ ಸಮತೂಕದಿಂದಿರ್ದನೀಶ್ವರಂ

ಅಂಬರಜನಕ್ಕೆ ತೋರಲ್ಕೊಲ್ದು ಶಂಕರಂ
ಅಮರನೀತಿಗೆ ವಿಮಾನಂ ಬೇಡ ನಂದೀಶ
ಸಮತೂಕವಾಗಿರ್ದುದೇ ಸಾಲ್ಗುನಂದೀಶ
ಇಲ್ಲಿ ಮರ್ತ್ಯಕ್ಕೆ ಸಮವೆಂಬುದಂ ತೋರುವೆಂ
ಅಲ್ಲಿ ಕೈಲಾಸಕ್ಕೆ ಒಲ್ಮೆಯಿಂ ಸಾರುವೆಂ
ಎನುತೆ ಸಮತೂಕದ ತ್ರಾಸುಸಹಿತಂ ನೆಗೆದು
ಜನವೆಲ್ಲವುಂ ನೋಡೆ ಲೋಕಂಗಳಂ ಕಳೆದು
ಬಂದು ಕೈಲಾಸಮಂ ಪೊಕ್ಕು ಸಂತೋಷದಿಂ
ನಿಂದು ಗುಡಿಗಟ್ಟಿಸುತ್ತೊಲವಿಂದೆ ರಾಗದಿಂ
ಅಮರನೀತಿಗೆ ಸತಿಗೆ ತನಯಂಗೆ ಕರುಣದಿಂ
ಕ್ರಮದಿಂದ ಗಣಪದವನಿತ್ತು ಸಂತೋಷದಿಂ
ಮತ್ತೆ ಮತ್ತವರನಾನಂದದಿಂ ನೋಡುತುಂ
ಮತ್ತೆ ತಣಿಯದೆ ನೋಡಿ ನೋಡಿ ಕೊಂಡಾಡುತುಂ
ಕೈಲಾಸದರಮನೆಯೊಳಿಂದುಧರನೊಪ್ಪಿದಂ
ಶೈಲಜೆಗೆ ತೋರುತುಂ ಪುರಮಥನನೊಪ್ಪಿದಂ
ದೇವಗಣವೃಂದದೊಳಗಿಂದುಧರನೊಪ್ಪಿದಂ
ದೇವಗಣನಿವಹದೊಳಗಪ್ರತಿಮನೊಪ್ಪಿದಂ
ಅಹಾ ಶಿವನೊಪ್ಪಿದಂ ಅಹಾ ಹರನೊಪ್ಪಿದಂ
ಅಹಾ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

**ಕಂದ ||** ಧರೆ ಪೊಗಳೆ ಕಾಣಿಯುಂ ಬೀ
ಸರವಾಗದ ತೆರದಿ ಭಕ್ತಿಯುಂ ತೂಗುತ ನೀ ||
ನೊರೆದಮರನೀತಿಗಳ ಕಿಂ
ಕರ ನಾಂ ಕರುಣಿಪುದು ಹಂಪೆಯ ವಿರೂಪಾಕ್ಷಾ ||

# ಹರಿಹರನ ರಗಳೆಗಳು.

## ಭಾಗ ೮.

## ಬಾಹೂರ ಬೊಮ್ಮಯ್ಯನ ರಗಳೆ.

ಕಂದ|| ಸಾಹಸ ನಿಧಿಯೆನಿಪ ವೃಷಭ ।
ವಾಹನ ಫಣಿರಾಜಕಂಕಣಂ ರಾಜಧರಂ ।
ಬಾಹೂರ ಬೊಮ್ಮತಂದೆಯ ।
ನಾಹಾ ಮೆರೆದಂ ಪುರಾರಿ ಹಂಪೆಯ ರಾಯಂ ॥

### ರಗಳೆ.

### ಪ್ರಥಮಸ್ಥಲ.

ಶ್ರೀ ಮೇರುವಿಂಗೆ ದಕ್ಷಿಣ ದಿಶಾಭಾಗದೊಳ್
ಭೂಮಿಗೆ ವಿಚಿತ್ರವೆಂದೆನಿಪುದತಿರಾಗದೊಳ್
ಹೆಸರ ಕಲ್ಯಾಣಪುರವಾ ಪುರಪ್ರಾಂತದೊಳ್
ಎಸೆವುದಂತೊಂದು ಯೋಜನದ ಪ್ರಮಾಣದೊಳ್
ಶಿವನ ತೋಳ್ತೊಡೆಯ ಪೆಸರಿಟ್ಟರಂದೊಪ್ಪದಿಂ
ಭುವನದೊಳ್ಬಾಹೂರೆನಿಪ್ಪೊಂದು ನಾಮದಿಂ

ಒಪ್ಪುವಾ ಪುರದೊಳೋರ್ವಂ ಶರಣನಿರುತಿರ್ಪ
ನಪ್ರತಿಮನತುಳಬಳನಭವನಾಜ್ಞೆಯೊಳಿರ್ಪ
ಆತನ ಪೆಸರ್ಬೊಮ್ಮತಂದೆ ಎಂಬುದು ಜಗಕೆ
ನೂತನಂ ತನ್ನ ಚಾರಿತ್ರವೀ ಕಲಿಯುಗಕೆ
ನೇಮಸ್ತನುತ್ತಮ ಸ್ನೇಹಿ ಪರಮಧ್ಯಾನಿ
ಕಾಮಹರನಚಲಭಕ್ತಿಯ ಭಾವದಭಿಮಾನಿ
ಆರ್ತಪರನತಿಕರುಣಿ ನಿರ್ಮಳಂ ನಿಶ್ಚಳಂ
ಸ್ವಾರ್ತವೆನಿಸುವ ಶಿವನ ಭಕ್ತಿಭರದುಜ್ವಳಂ
ಮಾಹೇಶ್ವರರ್ಬಂದಡಿದಿರಾಗಿ ಮೆಯ್ಯಿಕ್ಕಿ

ಆಹಾ ಎನುತೆದ್ದು ಗಣಪದಕೆ ಮೆಯ್ಯಿಕ್ಕಿ
ನಿಂದು ಕೈಮುಗಿದೆನ್ನ ಪುಣ್ಯಾವೈಯ್ತಂದುದೇ
ಇಂದುಧರನತುಳ ಸುಖವೊಲಿದು ಕವಿತಂದುದೇ
ಎನ್ನ ಭಾಗ್ಯದ ಬೆಳಸು ವಿಪುಳ ಫಳವಾದುದೇ
ಎನ್ನ ಹೆಂಪಿನ ಹೆಚ್ಚುಸುಧೆಯುಮಿದಿರಾದುದೇ
ಶಿವನ ಸಂತತಿ ಕರುಣದಿಂದ ನಡೆತಂದುದೇ
ಶಿವನ ಬಳಗಂ ಭಕ್ತಿಯಿಂ ಕುಡಲ್ಬಂದುದೇ
ಎಂದು ಬಿಜಯಂಗೈಸಿ ತಂದು ಮಿಗೆ ಸಡಗರಿಸಿ
ಸಂದಣಿಪ ಹರುಷದಿಂದುಚ್ಚಾಸನದೊಳಿರಿಸಿ
ಪುಳಕತತಿ ಪೊಣ್ಮುತಿರೆ ಚರಣಂಗಳಂ ತೊಳೆದು
ನಲಿದು ಪಾದೋದಕಂಗಳನೊಲುಮೆಯಿಂ ತಳೆದು
ಭಾಳದೊಳಗೊಲಿದೊತ್ತಿ ಕಂಗಳೊಳಗೊಲಿದೊತ್ತಿ
ಮೇಲೆನಿಪ ಉತ್ತಮಾಂಗದೊಳು ಉರದೊಳಗೊತ್ತಿ
ಆನಂದದಿಂದವಾರೋಗಿಸಲ್ಕಿಕ್ಕುತಂ
ನಾನಾ ಸುಖಂಗಳಂ ತರದಿಂದೆ ಸಾರ್ಚುತಂ
ಹೊನ್ನ ರನ್ನದ ತೊಡವು ನವ್ಯ ವಸ್ತ್ರವನಿತ್ತು
ಮನ್ನಿಸುತ್ತವರಂಘ್ರಿಗಳನಲ್ತಿಯಿಂ ಪೊತ್ತು
ಕಳಿಪುವಂ ಶರಣತತಿ ಪರಸುತಿರೆ ರಾಗದಿಂ
ಇಳಿಪುವಂ ಸಂಸಾರಭಾರಮಂ ಬೇಗದಿಂ

ಇಂತಪ್ಪ ಬಾಹೂರ ಬೊಮ್ಮತಂದೆಗೆ ಕರಂ
ಕಂತುಮದಮರ್ದನನ ನೇಮವೊಂದತಿಭರಂ
ಮಿಗೆ ಪೋಪನಲ್ಲಿಯುಂ ಸೋಮವಾರದೊಳತ್ತ
ಬಗೆ ಮಿಗಲ್ಕಲ್ಯಾಣಪುರದ ಪುರಹರನತ್ತ
ಒಲವಿಂ ತ್ರಿಪುರಾಂತಕ ಪ್ರಭುವನೀಕ್ಷಿಸುತೆ
ಕಲಿಮಲಿನ ಕುಲವನಂದಂದಿಗೆ ಶೋಷಿಸುತೆ
ಇದು ನಿಯಮವಾಗಿರ್ಪುದಾ ಪರಮ ಭಕ್ತಂಗೆ
ಸದಮಳ ಸದಾಶಿವ ಶಿವಾರ್ಚನಾಸಕ್ತಂಗೆ

ಇರಲೊಂದು ಸೋಮವಾರದೊಳಂದು ಪೊರಮಟ್ಟು
ಪುರಹರನ ಧ್ಯಾನಮಂ ಮನದೊಳಗೆ ಮುಂದಿಟ್ಟು

ಬಾಹೂರನೊಪ್ಪದಿಂ ಕಳೆದು ಮಿಗೆ ನಡೆಗೊಂಡು
ಸಾಹಸಾಭರಣನತಿ ನಿಷ್ಠೆಯಿಂ ಕೆಳೆಗೊಂಡು
ಮೇಲೆ ಝಲ್ಲರಿ ನೆಗೆಯಲುನ್ನತಾಸನವೇರಿ
ಕಾಲಾಳ್ತುರಂಗ ಬಲವೊಡನೆ ಬರುತಿರೆ ಮೀರಿ
ಬರುತಿರ್ದನಪ್ರತಿಮಶಿವಭಕ್ತಿಭೂಷಣಂ
ಬರುತಿರ್ದನಮ್ಮಮ್ಮ ಸಂಸಾರಶೋಷಣಂ
ಬಂದು ಕಲ್ಯಾಣಪುರಮಂ ರಾಗದಿಂ ಪೊಕ್ಕು
ಸಂದ ಪುರವೀಥಿಯಂ ನೋಡುತೆ ಮನಂ ಮಿಕ್ಕು

ಬರುತಿರಲ್ಕೊಂದೊಂದು ಬಿಳಿಯ ಜೋಳದ ರಾ
ನರರ ಜೀವನವ ರಕ್ಷಿಸುತಿಪ್ಪ ಹೊಸ ರಾಶಿ
ಇರಲದಂ ಮುಂದುಗೊಂಡೊರ್ವನಾ ವ್ಯವಹಾರಿ ·
ಕರೆವುತಂ ಮಾರುಗೊಂಬವರನತ್ಯುಪಕಾರಿ
ಎಲೆಲೆ ಶಂಕರಗಂಡನಂ ಕೊಳ್ಳಿರೇ ಎನುತೆ
ಸಲೆ ಬರ್ದುಕಿರೇಯಮೃತಮಯ ಧಾನ್ಯವೆಂದೆನುತೆ
ಇರ್ಪಲ್ಲಿ ಬೊಮ್ಮಿತಂದೆಗಳೊಲಿದು ನೋಡುತಂ
ಬರ್ಪಲ್ಲಿಯೋರ್ವ ಸವಣಂ ಕಟಕಿಯಾಡುತಂ
ಜೋಳದ ಪೆಸರು ಶಂಕರನ ನಾಮವೆಂತಾಯ್ತು
ಆಳಿಗೊಂಬರನರಿಯರಕಟ ಶಂಕರನಾಯ್ತು
ಇದಕ್ಕೆ ಪ್ರತ್ಯಕ್ಷಮಂ ತೋರಬಲ್ಲವರುಂಟೆ
ಅದಿರದೀ ಜೋಳಮುಮನೋ ಎನಿಸುವವರುಂಟೆ
ಎಂಬ ನುಡಿಗೇಳ್ದು ಭೋಂಕನೆ ದಂಡಿಗೆಯನಿಳಿದು
ಅಂಬಕತ್ರಯನ ಸುತನತಿ ಕೋಪಮಂ ತಳೆದು
ಎಂತೊ ಆರುಹತ ಕುನ್ನಿ ಬೊಗಳುತಿರ್ದಪೆ ಎನುತೆ
ಮುಂತಿರ್ದ ಭಕ್ತಾಳಿಗವಧರಿಪುದೆಂದೆನುತೆ ।
ಪುರಜನಂಗಳು ನೆರೆದು ನೋಡುತ್ತಮಿರಲಲ್ಲಿ
ಪರ ಸಮಯಿಗಳು ಸರಿಯಲನು ಮಾಡುತಿರಲಲ್ಲಿ
ಮರೆದು ನುಡಿದಾರುಹತನೆದೆ ಬಿಕ್ಕಿ ಬಿರಿವುತಿರೆ
ಹೆರೆ ಸೂಡಿದನ ಭಕ್ತರೆಲ್ಲ ವೈವೆಚ್ಚುತ್ತಿರೆ
ರಾಶಿಯಂ ಬಲವಂದು ಭಾಷೆಗುಡುತಂ ನಿಂದು

ಸೂಸದಚ್ಚರುವಿನೊಳಗಿಂಗೆ ಶಿವನಂ ತಂದು
ಪರಮ ಗುರುವೇ ಶಂಕರಾ ಶಂಕರಾಯೆಂದು
ಕರೆಯೆ ಜೋಳದ ರಾಸಿಯೊಳಗಣಿಂದಂತೊಂದು
ಪ್ರಣಮಮಯಮೆಂಬುದಂ ಧರೆಗೆ ಕೇಳಿಸುವಂತೆ
ತ್ರಿಣಯನುಂ ಭಕ್ತನೆಂದುದನುದ್ಧರಿಸುವಂತೆ
ಹರುಷದಿಂದೋ ಯೆಂಬ ದನಿ ಮೂವಡ್ಡಿಸಿ ಮೀರೆ
ನೆರೆದ ನೆರವಿಗೆ ಶರಣನಲ್ಲಿ ನಂಬುಗೆ ಯೇರೆ
ಇರಲಮ್ಮದೋಡಿದಂ ಸವಣನೆಂಬುವನಂದು
ಶರಣರೆಲ್ಲಕ್ಕರಿಂ ಕೊಂಡಾಡುತಂ ಬಂದು
ಕಲ್ಯಾಣಪುರದೊಳಗೆ ಭರದಿಂದೆ ಮೆರೆಯಿಸುತೆ
ಕಲ್ಯಾಣಪುರುಷನಂ ಪರಸುತಂ ರಾಗಿಸುತೆ

ಇರ್ದ ಗಣತತಿವೆರಸಿ ಹರುಷದಿಂ ನಡೆತಂದು
ಸಾರ್ದು ಶಿವನಿಳಯಮಂ ಪ್ರೇಮದಿಂ ಪುಗುತಂದು
ತ್ರಿಪುರಾಂತಕ ಪ್ರಭುವನಾನಂದದಿಂ ಕಂಡು
ಕಪಟರಹಿತಂ ನಿತ್ಯನೇಮಕ್ಕೆ ನೆಲೆಗೊಂಡು
ಶಿವಭಕ್ತಿ ತನ್ನಂ ಬಲಂಗೊಂಡು ಬಲವಂದು
ಶಿವನಿಷ್ಠೆ ಕೈಯಿಕ್ಕಿ ಮೆಯ್ಯಿಕ್ಕುತಂ ನಿಂದು
ಆಗಮಸ್ಥಾನದೊಳು ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಆನಂದಜಲದೊಡನೆ ದರುಶನಂ ಮಾಡುತಂ
ನಾನಾ ಪುಳಕದೊಡನೆ ಪರುಶನಂ ಮಾಡುತಂ
ಸತ್ಕೃತಾರ್ಥತೆಯೊಡನೆ ಪಾದೋದಕಂಗೊಂಡು
ಅಕ್ಕರಿಂದಚಲ ಪ್ರಸಾದಮಂ ಕೈಕೊಂಡು
ತಾಳಮಂ ಕೊಂಡು ನಾದಪ್ರಿಯನ ನೆರೆ ಪಾಡಿ
ಆಳಾಪದಿಂ ಪುರಾತನರ ಗೀತಂ ಪಾಡಿ
ನಿಂದಿರ್ದು ಕೈಮುಗಿದು ನೋಡಿ ಬಿನ್ನೈಸುತಂ
ಇಂದುಧರನಾಜ್ಞೆಯಿಂ ನಿಂದು ಬಿನ್ನೈಸುತಂ
ದೇವ ನೀ ನೆನೆಯಿಸಲ್ನೆನೆವೆನೆಲೆ ಶಂಕರಾ
ದೇವ ನೀ ನುಡಿಯಿಸಲ್ನುಡಿವೆನೆಲೆ ಶಶಿಧರಾ
ದೇವ ನೀ ನಡೆಯಿಸಲ್ನಡೆವುತಿರ್ಪೆಂ ಶಿವನೆ

ದೇವ ನೀನೆಂತಿರಿಸಿದಂತಿರ್ಪೆನೆಲೆ ಭವನೆ
ದೇವ ನೀನಾಡಿಸುತಿರ್ಪ ಜಂತ್ರದ ರೂಪು
ದೇವ ಎನಗಾವಗಂ ನಿಮ್ಮ ಕರುಣದ ರೂಪು
ಎಂದು ಬಿನ್ನೈಸುತಂ ಭರ್ಗನಂ ಬೀಳ್ಕೊಂಡು
ಇಂದುಧರನಲ್ಲಿ ಕಾರುಣ್ಯಮಂ ಕೆಳೆಗೊಂಡು
ತಿರುಗಿದಂ ಬಾಹೂರ ಕಡೆಗೆ ಕಟ್ಟಭಿಮಾನಿ
ಹರನ ಪುರಹರನ ಶಶಿಧರನ ಪರಮಧ್ಯಾನಿ

ಶರಣತತಿಯೊಡನೊಡನೆ ಗುಡಿಗಟ್ಟಿ ಬರುತಮಿರೆ
ಪುರಜನಂ ಪರಿಜನಂ ನೋಡಿ ಬೆರಗಾಗುತಿರೆ
ಪರದೈವಸಂತಾನತಿಮಿರಭಾಸ್ಕರನೆಂಬ
ಪರಸಮಯವಿಪಿನಕುಲದಾವಪಾವಕನೆಂಬ
ಬಿರಿದೆತ್ತಿ ಕಹಳೆಗಳ್ದೆಸೆದೆಸೆಗೆ ಕರೆವುತಿರೆ
ಉರವಣಿಸಿ ನಡೆತಂದನಪ್ರತಿಮನೊಪ್ಪುತಿರೆ
ಬಂದು ಬಾಹೂರನತಿ ಸಂಭ್ರಮದೊಳಂ ಪೊಕ್ಕು
ಸಂದಣಿಪ ಗಣಪದವ ರಜದಿಂ ಮನಂ ಮಿಕ್ಕು
ಶರಣರಂ ನೋಡುತಂ ನಲಿದು ಕೊಂಡಾಡುತಂ
ಹರುಷದಿಂ ಮೂಡುತಂ ಶಿವನೊಳೋಲಾಡುತಂ
ಪರಮಸುಖವೇರುತಂ ಪುಳಕವಂ ಹೇರುತಂ
ಕರುಣಮಂ ತೋರುತಂ ತೃಪ್ತಿಯಂ ಬೀರುತಂ
ಶರಣತತಿ ಹಾರೈಸೆ ಶಿವಭಕ್ತಿ ತೀರೈಸೆ
ಹರಭಕ್ತಿ ಪೂರೈಸೆ ಪರಮಸುಖ ಕೋರೈಸೆ
ಎಸೆದಿರ್ದನಮ್ಮಮ್ಮ ಬಾಹೂರ ಬೊಮ್ಮಯ್ಯ
ಅಸಮನಯನನ ಸುತಂ ಬಾಹೂರ ಬೊಮ್ಮಯ್ಯ
ಅದರೆ ಕಲಿ ಬಾಹೂರ ಬೊಮ್ಮಯ್ಯನೆಮ್ಮಯ್ಯ
ಶರಣಜನಸಂತೋಷಿ ಬಾಹೂರ ಬೊಮ್ಮಯ್ಯ
ಇಂತು ಸುಖದಿಂದೆ ಬಾಹೂರೊಳೊಪ್ಪುತ್ತಮಿರೆ
ಸಂತತಂ ಶರಣತತಿ ಪೊಗಳುತ್ತಮಿರುತಮಿರೆ

**ಪ್ರಥಮಸ್ಥಲ ಸಂಪೂರ್ಣ.**

# ದ್ವಿತೀಯಸ್ಥಲ.

ವೃತ್ತ॥

ಜೋಳಂ ಶಂಕರನೆಂದೊಡೋ ಎನಿಸಿದ್ವೈ ಬಾಹೂರ ಬೊಮ್ಮಯ್ಯ ಭೂ।
ಪಾಳೋನ್ಮದ್ವಿಭಸಿಂಹನೆಂದೆನಿಸಿದ್ವೈ ಬಾಹೂರ ಬೊಮ್ಮಯ್ಯ ನೀಂ।
ತ್ರೈಳೋಕ್ಯಕ್ಕಧಿಕತ್ವವೆಂದೆನಿಸಿದ್ವೈ ಬಾಹೂರ ಬೊಮ್ಮಯ್ಯ ಕೇಳ್।
ಭಾಳಾಕ್ಷಂಗೆ ಭುಜಾಸ್ಯನೆಂದೆನಿಸಿದ್ವೈ ಬಾಹೂರ ಬೊಮ್ಮಯ್ಯನೇ॥

**ಗದ್ಯಃ**— ಎಂದು ಕೊಂಡಾಡುತಿರ್ಪ ಮಾಹೇಶ್ವರರ ನಡುವೆ ಬಾಹೂರ ಬೊಮ್ಮಯ್ಯಂ ಸಾಹಸಾಭರಣಂ ಗಂಗಾಧರನ ಗಂಭೀರ ದಂತೆ ರಾಜಶೇಖರನ ತೇಜದಂತೆ ಕಪರ್ದಿಯ ಕೀರ್ತಿಯಂತೆ ಕಾಮ ಹರನ ಕಾಯ್ಪಿನಂತೆ ಪುರಹರನ ಪ್ರತಾಪದಂತೆ ಕಾಲಹರನ ಲೀಲೆ ಯಂತೆ ಪಂಚಮುಖನ ಸಂತಾನದಂತೆ ಕುಳ್ಳಿರ್ದು ಬೇರ್ವರಿವ ಶಿವ ಭಕ್ತಿಗೆಡೆಗೊಟ್ಟು ಅಂಕುರಿಪ ಶಿವಜ್ಞಾನಕ್ಕೆ ಮನಂಗೊಟ್ಟು ಪಲ್ಲವಿಪ ಶಿವಸ್ನೇಹಕ್ಕಿಂಬಾಗಿ ಬಳ್ಳಿವರಿವ ನಿಷ್ಠೆಗಡರ್ಪಾಗಿ ಪುಣ್ಯದಂತೆ ಜಂಗಮ ಪ್ರಕರದ ಸಂಗಡ ಸುಖಂ ಪಿಂಗದ ಲಿಂಗ ಸ್ನೇಹಿ ಮಂಗಳಾತ್ಮಕಂ ಸತ್ಯ ಶರಣರ ಸೂಳ್ನುಡಿ ಕಿವಿಯ ಸವಿ ರೂಪು ಕಂಗಳ ಕೌತುಕಂ ಸೋಂಕು ತನುಪುಳುಕಂಗಳ ಪ್ರಸಾದ ಪರಿಮಳಂ ಘ್ರಾಣೋತ್ಸಾಹಿ ಶಿವಸ್ತೋತ್ರ ನಾಲಗೆಯ ರಾಜ್ಯಂ ಘನಮೂರ್ತಿ ಮನೋಹರಮಾಗಿ ಸಾತ್ವಿಕ ಭಕ್ತಿ ರಸತರಂಗಿಣಿ ಸಮಾನುರಾಗಚಿತ್ತಪ್ರಭೂತಪ್ರಮೋದಪ್ರತಾಪಗಾತ್ರಚಿತ್ತ ನಾಗಿ ಕೆಲವುಂ ದಿನ ಒಲವಿನಿಂದಿರ್ಪಲ್ಲಿ ಪನ್ನಗಧರಂ ನಿನ್ನಂ ಮರೆದಪ ಬನ್ನಿಮೆಂದತ್ಯಾದರದಿಂ ಕರೆವಂತೆ ಸೋಮವಾರಂ ಬರೆ.

ಸುಪ್ರಭಾತ ಸಮಯದೊಳೆಳ್ದು ಭಸ್ಮೋದ್ಧೂಳಿತಾವಯವನುಂ ರುದ್ರಾಕ್ಷಿ ಮಾಲಾಲಿಂಗಿತ ಸರ್ವಾಂಗನುಂ ಧವಳಾಂಬರ ಪರಿವಸ ನನುಂ ನಿರ್ಮಳೋತ್ತರೀಯವಿಶೇಷನುಂ ನವ್ಯಾಭರಣಭೂಷಣನುಂ ಹಸ್ತ ಪ್ರಬದ್ಧತಾಳಯುಗಳನವಯವಭ್ಯಾಸಾಲಿಂಗಿತಸರ್ವಾಂಗನುಂ ಉಭಯ ಪಕ್ಷವಿಳಸಿತಪದಾತಿಬಲನುಂ ಪರಿವೃತಶಿವಭಕ್ತಪ್ರಕರನುಂ ತ್ರಿಪುರಾಂತಕ ಶ್ರೀಪಾದಪದ್ಮಾವಲೋಕನಾಸಕ್ತಚಿತ್ತನಾಗಿ ಗಜಾಸುರನ ವಿಜಯಕ್ಕೆ

ಪೊರಮಡುವ ರುದ್ರನಂತೆ ಬಾಹೂರಂ ಪೊರಮಟ್ಟು ಕಿರಿದಂತರಮುಂ ನಡೆತಂದು ಕಲ್ಯಾಣಮಂ ಪೊಕ್ಕು ರಾಜವೀಧಿಯೊಳ್ನಡೆತರ್ಪಾಗಳ್ಮುಂದೆ.

ಪೆರ್ಮಾಡಿ ರಾಯನ ಪಟ್ಟದಾನೆ ಸಪ್ತಮದಾವಸ್ಥೆಯಿಂ ಮುಂದುಗಾಣದೆ ಕರ್ಣತಟದಿಂದೊರತೊಗುವ ಮದಗಂಧಕ್ಕೆಳಸಿದಳಿಕುಳಂ ಕರಿಮುರಿವೋಗೆ ಅಗ್ರಪಲ್ಲವದಿಂ ಪೊಯ್ದುಕೊಳುತ್ತಂ ಮದಜಲವನುಗುಳ್ವ ಕಡು ಸುಯ್ಲ್ಲ ಬಳಿವಿಡಿದು ಪಸರಿಸಿ ಪೊರಮಟ್ಟ ಸೀಕರನಿಕರಂ ವಡಬಾನಳನ ವಿಸ್ಫುಲಿಂಗದಂತೆ ಸೋಂಕಿದುದೆಲ್ಲವುಂ ಭುಗಿಲನುರುಪೆ ಪುಷ್ಕರಾಗ್ರದಿಂ ಘೂತ್ಕರಿಸುತ್ತಂ ಕೈಕೊಂಡ ರೂಪಂ ಕೋಡೊಳಿಟ್ಟೀ ತೆರದೊಳರಿವೆನೆಂಬುದಂ ತೋರ್ಪಂತೆ ಕೊಂಬಿನ ಮೊನೆಯೊಳುಂ ಬರಿಕೆಯ್ಯನೇರಿ ತೂಗಾಡುತಂ ತನ್ನ ನೆಳಲಂ ಪ್ರತಿದಂತಿಯೆಂದು ಕಟ್ಟುತ್ತೆರಗಿ ನಾಡೆ ನೀಡಿ ನಟ್ಟ ದಾಡೆಯಿಂ ಬೆಟ್ಟದ ತೋರ ಹೆಂಟೆಯಂ ಎತ್ತಿ ನಿಟ್ಟಿಸಿ ನೋಡುತಂ ಕಾಲೊಳ್ಬಂಧಿಸಿದ ಮಾಲೆಯ ನಿಗಳಂಗಳುಂ ಘುಲಘುಲಿಸೆ ಜಾಣಿಂ ಸೆಳೆದುಣ್ಮಿ ಪೊಣ್ಮಿ ಘಳಿಲನೆ ಕಂಪಿಸಿ ನಿಟ್ಟೋಡಿಯಾಡಿಗೊಂಡು ಪರಿದು ಪಿರಿಯ ಕರುಮಾಡಮಂ ಮದದ ಬೆಂಕಿಯಿಂ ಹೊತ್ತಿ ಹೊಗೆಯೇರಿ ಮನ್ನಣೆಯ ಮಂದ್ಯವಾಳಕ್ಕೆ ಮುಂದಡಿಯನಿಟ್ಟು ದನಿದೋರುವ ಜೋದರಂ ಬರಲಿತ್ತು ಭೋಂಕನೆ ಪಿಡಿದು ಹಸ್ತದೊಳೆತ್ತಿ ಪ್ರತಿಮಾನದೊಳ್ಪೊಪ್ಪುದಿಪ್ಪೆ ನಲ್ಪೊಯ್ದಿಟ್ಟಣಿಸಿ ತಲೆಯೊಳೊಟ್ಟಿಕೊಳುತ್ತಂ ಸಿಡಿದೊರಲುತೋಡಿದವನನರೆಯಟ್ಟಿ ಮೆಟ್ಟಿ ಸೀಳುತಂ ಅಳವಿಗೆ ಬಂದಾರೆಕಾರರನರಿದು ಸಣ್ಣಿಸುತ್ತಂ ಮುಂಡಿಸಿ ತೊನೆವುತ್ತಂ ಅಡ್ಡ ನಿಲುತ್ತಂ ವಿಸಟಂಬರಿವುತಂ ತೋರಿ ತಪ್ಪುತವ್ವಳಿಸಿ ನಿಲುತಂ ಮುಸಗಿ ಪೊರೆವುತಂ ಸುತ್ತಿ ಕೆಕ್ಕಳಿಸುತಂ ಹೊತ್ತು ಹೊಗೆವುತಂ ಮುರಿವುತಂ ಮಥನದ ಕಾಳಕೂಟಂ ಕುಂಜರಪತಿಯ ರೂಪುಗೊಂಡಂತುರವಣಿಸಿ ಬರ್ಪ ಸಿಂದೂರದ ಮುಂದೆ ಮಂದಿಗೊಡುವದೇಡೆಕಾರರುಂ ಜೂಣಿಯ ಪಡಿಯರತೊರ್ಲಗು ತೊಲಗು ಸಾರು ಸಾರೆಂದಿಟ್ಟಣಿಸಿ ಮುಟ್ಟಿ ಬಂದ ಕಳಕಳಮಂ ಕಟ್ಟಿದಿರೊಳ್ಕೇಳ್ದು.

ಅಮ್ಮಮ್ಮ ಮಾರಾರಿಯ ಕೂರಸಿ ದಿಟ್ಟಿಮೂರನ ಕಟ್ಟಿದಲಗು ಪಶುಪತಿಯ ಪಾಶುಪತಾಸ್ತ್ರವೆನಿಸಿ ಬಾಹೂರ ಬೊಮ್ಮಯ್ಯಂ ಸಿಂಹ ವಿಕ್ರಮಂ ಗಜಾಸುರಾಂತಕನ ಕುವರಂ ಕೆಲಬಲದ ಮಾಹೇಶ್ವರರನಂಜದಿ

ರಂಜದಿರೆಂದೊಂದೆರಡಡಿಯನಿದಿರಾಗಿ ನಡೆದು ಜಡಿದು ನುಡಿದು ಸಡಿ ಫಡಸಾವವನ ಮನೆಯಾನೆಗೆ ಶಾಶ್ವತನ ಮನೆಯಾನೆ ತೊಲಗುವದಲ್ಲಂ ತೆಗೆ ತೆಗೆ ನಿಲ್ಲು ನಿಲ್ಲಿತ್ತ ಬಾರದಿರೆನ್ನಾಣೆಯೆಂದೆತ್ತಿ ಹಸ್ತನಿವಾರಣೆಯಿಂದಂ ಹೂಂಕರಿಸಿ ನಡೆತರ್ಪ ಮದದಾನೆ ಭೋಂಕನೆ ನಿಂದು ತಾಳವಟ್ಟಮಂ ತೂಗದೊಡಲನೊಲೆಯದಗ್ರಪಲ್ಲವಮನಲುಗದೆ ಸುಂಡಿಲಂ ಭಂಡಾರಿಸಿ ದಂತೆ ಕಂಡರಿಸಿದಂತೆ ನಟ್ಟು ನಿಂದಾರೆಕಾರರಿರಿದೊಡಂ ಮಾವುತರಾ ರ್ದೊಡಂ ನೆರದ ನೆರವಿ ಬೊಬ್ಬಿಟ್ಟೊಡಂ ಮಣ್ಣಾನೆಯಂತೆ ಮಿಡುಕ ದಿರೆ ಕಂಡು ಕಂಡು ಭಯಂಗೊಂಡು ನೋಡುತಿರ್ಪ ಪಸಾಯಿತರು ಪರಿದು ಬಂದರಸಂಗೆ ಮೆಯ್ಯಿಕ್ಕಿನಿಂದು.

ಎಲೆ ದೇವಾ ನಮ್ಮ ಪಟ್ಟದಾನೆ ಮದಂಗೊಂಡು ಸೂರ್ಯವೀಧಿ ಯೊಳಟ್ಟುತ್ತಂ ತುಳಿವುತ್ತಂ ಬರ್ಪಲ್ಲಿ ಬಾಹೂರ ಬೊಮ್ಮಯ್ಯನೆಂದೆಂಬ ಹರಭಕ್ತಂ ತೊಲಗದಂಜದ್ಯೆಯ್ತಂದು ಸಾವವನ ಮನೆಯಾನೆಗೆ ಶಾಶ್ವ ತನ ಮನೆಯಾನೆ ಓಸರಿಸುವದಲ್ಲೆಂದಾಜ್ಞಾಪಿಸೆ ಮತ್ತ ಗಜವತ್ತಿತ್ತ ಮಿಸುಕದೆ ನಿಂದಿರ್ದಪುದೆಂದು ಬಿನ್ನವಿಸಿದ ಬಿನ್ನಪದೊಡನೆ ಪೆರ್ಮಾಡಿ ರಾಯನಿರ್ದ ಪರಿಯೊಳಿದ್ದು ಕಾಲ್ನಡೆಯೊಳೈತಂದು ಮುಂದಿರ್ದಾನೆ ಯುಮಂ ಕಟ್ಟಿದಿರೊಳಿರ್ದ ಬೊಮ್ಮಯ್ಯಗಳುಮಂ ಕಂಡು.

ಎಲೆ ಭಕ್ತಾ ನೀಂ ಶಾಶ್ವತನ ಮನೆಯಾನೆಯಾದೊಡೇಂ ಎನ್ನಾನೆ ಯೊಡನೆ ಕೈಯಿಕ್ಕಿ ಗೆಲ್ದೆಯಲ್ಲದೆ ಮಂತ್ರದಿಂ ಮಾಯದಿಂ ಗತಿಸ್ತಂಭವಂ ಮಾಳ್ಪುದಿದು ಕುಟಿಲಮಲ್ಲದೆ ದಿಟಮಲ್ತು ಇಂತೆಂದು ನುಡಿದ ಭೂಪ ತಿಯ ಮೊಗಮಂ ನೋಡಿ ಮುಗುಳ್ನಗೆ ನಗುತ್ತಂ ಧೈರ್ಯನಿಧಿ ಮಾಯಾ ಮದಹರಣಂ ಬಾಹೂರು ಬೊಮ್ಮಯ್ಯಂ ಅರಸಂಗಿಂತೆಂದಂ ಕೇಳಲೆ ಪುರುಳನರಿಯದರಸುಮರುಳೆ ಗಣನಾಥರ ಮುಂದಿಂದ್ರನೈರಾವತಂ ವಭ್ರುಚ್ಛಾಯೆ ಅಗ್ನಿಯ ಪುಂಡರೀಕಂ ನೀರೊಳಗಣ ತಾವರೆ ಯಮನ ವಾಹನಂ ಮನೆಯ ಮಹಿಷಂ ನೈಋತ್ಯನ ಕುಮುದಂ ನೀಲೋತ್ಪಲಂ ವರುಣನಂಜನಂ ಕಣ್ಣ ಕಾಡಿಗೆ ಪವನನ ಪುಷ್ಪದತ್ತಂ ಕೆಯ್ಯಪೂಮಾಲೆ ಕುಬೇರನ ಸಾರ್ವಭೌಮಂ ಮಣ್ಣಾನೆ ಧನದಮಿತ್ರನ ಸುಪ್ರತೀಕಂ ಸ್ಥಾಣು ವಶವರ್ತಿ ಎನಿಪ ಕಟ್ಟುಬ್ಬಟೆಯ ತೇಜದ ಘನ ಮಹಿಮರಪ್ಪೆಮ್ಮೊಡನೆ ನಿನ್ನಾನೆ ಕೆಯ್ಯಿಕ್ಕುವದುಂಟುಂಟದೇ ಮಾಣ್ಬುದೆಂದಾಕ್ಷೇಪಿಸಿನುಡಿದು ತನ್ನ

ಕೆಯ್ಯೊಳ್ ಸಿಂಗದ ಕಂಗಳಂ ಆರ್ದ ತಾಳವಮಂ ಕೊಡಲೆತ್ತಲಾರದೆ ತಾಳ ವಟ್ಟಲಂ ಮೇಲಾಗಿ ಕೀಳಿಟ್ಟು ಕಾಲೂರಿ ದರಿಣಿಯ ಮೇಲೆ ಕೆಡೆಯಲಾ ಶ್ಚರ್ಯಂ ಬಟ್ಟು ಸತ್ಯ ಶರಣನ ಚರಣದೋಳ್ ಧೊಪ್ಪನೆ ಬಿದ್ದು ದೇವಾ ಮಾತನರಿಯದ ಮೂರ್ಖಂಗೆ ಭಕ್ತಿಯರಿಯದ ಯುಕ್ತಿ ಹೀನಂಗೆ ನಿಸ್ಸೀ ಮರನರಿಯದ ನಿರ್ದೇಹಂಗೆ ಸಿರಿಮರುಳ್ಪತ್ತಿದ ನಿರ್ಭಾಗ್ಯಂಗೆ ಕರುಣಿ ಪುದೆಂದು ಕಾರ್ಪಣ್ಯ ಮುಖನಾಗಿ ಇರ್ದ ಧರಣೀಶನಂ ಶರಣರನುಮ ತದಿಂ ಕರುಣಿಸಿ ನೋಡಿ ಸತ್ಪಾನೆಗಾಯುಮನಿತ್ತು ತಾಳವಮಂ ತನ್ನತ್ತ ತೆಗೆದುಕೊಂಡು ಶಶಿಧರನ ಬಿಸಿಗಣ್ಣ ವಿಭವಂ ದಾರಿದ್ರವಿದ್ರಾವಣನ ಭದ್ರ ಗಜಂ ಶಂಕರನ ಬಿಂಕದ ಭಕ್ತಿಯ ಭಾವಕನೆನಿಪ ಬಾಹೂರ ಬೊಮ್ಮ ಯ್ಯನಂ ಪೇರ್ಮಾಡಿರಾಯನೋಲೈಸಿ ಬರೆ ಪುರಜನಂ ಕೈಯೆತ್ತೆ ಪರ ಸಮಯಂ ಪರಿದೋಡೆ ರಭಸದಿಂ ನಡೆತಂದು ಕಪಟರಹಿತಂ ತ್ರಿಪು ರಾಂತಕನಂ ಬಲವಂದು ಕಂಡು ಚಿತ್ತಂ ಸಂತಸಗೊಂಡು ಮನಂ ಮುಟ್ಟಿ ಭಾವಂ ಬಲಿದು ಪಾದೋದಕಂಗೊಂಡು ಪುಣ್ಯಂ ನೆಲಿಸಿ ಪ್ರಸಾ ದಮಂ ಧರಿಸಿ ನಿತ್ಯನೇಮಂ ಮಾಡಿ ಸತ್ಯಸೇವ್ಯನಂ ಬೀಳ್ಕೊಂಡು ಕಲ್ಯಾಣಪುರಮಂ ಪೊರಮಟ್ಟು ಪೇರ್ಮಾಡಿರಾಯನಂ ಮರಳಿ ಕಳುಪೆ

ಬಾಹೂರತ್ತಲಭಿಮುಖನಾಗಿ ಪದಾತಿ ಬಲಂ ಪಡಿಸಣಿಸೆ ನಿಸ್ಸಾಳ ಧ್ವನಿಯುಣ್ಮೆ ಕಹಳಾರವಂ ಪೊಣ್ಮೆ ಬಾಹೂರಂ ಪೊಕ್ಕು ಮನಂಮಿಕ್ಕು ಪರಮ ಸುಖದಿಂದಿರೆ ಬೊಮ್ಮಯ್ಯನುಂ ಜೋಳವಂ ಶಂಕರನೆಂದೋ ಎನಿಸಿದ ಪೇರ್ಮಾಡಿ ರಾಯನ ಪಟ್ಟದಾನೆಗೆ ತೊಲಗದೆ ಕರಿಗೆ ಹರ ಣಮಂ ಕೊಟ್ಟನೆಂಬ ಸುಕೀರ್ತಿ ಜಗಮಂ ಸುತ್ತೆ ಕೇಳ್ದ ಶರಣರ್ ತಮ ತಮಗೆ ಜಂಗಮವಾರ್ಧಿ ಮೇರೆದಪ್ಪಿದಂತೆ ಕವಿತರೆ ಕಂಡು ಹರುಷಂ ಗೊಂಡು ಬಂದ ಶರಣರನಿದಿರ್ಗೊಂಡು ಅತ್ಯಾದರದಿಂ ಮಿಗಿಲನಾರಾ ಧಿಸಿ ಬಾಹೂರ ಬೊಮ್ಮಯ್ಯ ಶಿವಭಕ್ತಪ್ರೇಮಾವಲೋಕನ ನವ್ಯಕೋಶ ಹೃತ್ಕಮಲ ಸಂಸ್ಪರ್ಶ ಶಿವದಾಸಂ ಸುಖಜಲಭರಿತಾಕ್ಷಪುಟ ಗದ್ಗದ ಮಯಂ ಶಿಥಿಲಾಕ್ಷರವಚೋವಿಳಾಸ ಪುಳಕಾಭರಣಂ ಸರ್ವಾಂಗನಾಗುತ್ತಂ ಮಿರೆಯಿರೆ.

**ದ್ವಿತೀಯ ಸ್ಥಲಂ ಸಂಪೂರ್ಣ.**

## ತೃತೀಯಸ್ಥಲ.

ವೃತ್ತ॥

ಗಿರಿಜಾವಲ್ಲಭನಕ್ಕರಿಂ ಕರೆದಪಂ ಕೈಲಾಸ ಶೈಲಕ್ಕೆ ನೀ ।
ನಿರದೇಳೆಂದರುಪಲ್ಕೆ ಬರ್ಪ ತೆರದಿಂ ಸೂರ್ಯೋದಯಂ ಮುಂಬರಲ್ ।
ಪರದೈವಾಭ್ರಮಹಾಬಲಂ ಬಲಯುತಂ ಬಾಹೂರ ಬೊಮ್ಮಯ್ಯನಾ ।
ದರದಿಂದಂ ನಲವೇರಿ ಮೀರಿ ಪೊರಮಟ್ಟಂ ಶೈವ ಸಾರೋದಯಂ ॥

### ರಗಳೆ.

ಇಂತು ಪೊರಮಟ್ಟು ಶಿವಭಕ್ತರೊಳ್ ನುಡಿಯುತಂ
ಕಂತುಮದಮರ್ದನನ ಕರುಣಮಂ ಪಡೆಯುತಂ
ಪಾಡುತ ಪುರಾತನರ ಗೀತದೊಳ್ ಬಾಳುತಂ
ಆಡುವ ಗಣಂಗಳೊಡನೊಡನೆ ಪುಟವೇಳುತಂ
ಶರಣರಂ ಸೋಂಕಿ ಪುಳುಕಿತಗಾತ್ರನಾಗುತಂ
ಪರಮಸುಖಸಂಪತ್ತಿಯಿಂ ತೇಗಿ ಬಾಗುತಂ
ನಡೆತಂದು ಕಲ್ಯಾಣಪುರದ ಹೊರಬನದೊಳಗೆ
ಮೃಡನ ಸುತನಾನಂದದಿಂದ ಬರುತಿರಲೊಳಗೆ
ರವಿಯಸ್ತಗಿರಿಯ ಮೇಲತಿನಿರ್ಮಳಾಂಗದಿಂ
ತವತವಗೆ ಕಿರಣತತಿಯುಡುಗುತಿರೆ ತವಕದಿಂ
ಆಗಳಾ ವನದೊಳಗೆ ಮುಗಿವ ನಳಿನಂಗಳಿಂ
ರಾಗದಿಂದಲರ್ವ ನವಕುಸುಮಷಂಡಂಗಳಿಂ
ಸೊಗಯಿಸುವ ಗಗನಮನಗಲ್ವ ಪೊಣರ್ವಕ್ಕಿಯಂ
ಅಗಲದಂತೊಪ್ಪುವ ಚಕೋರಕುಲದಿಕ್ಕೆಯಂ
ಉದಯಿಸುವ ಪೂರ್ಣಶಶಿಬಿಂಬಸಂಪತ್ತಿಯಂ
ಒದವಿ ತೀವುವ ಚಂದ್ರಿಕಾಮಧುರವೃತ್ತಿಯಂ
ನೋಡುತಂ ಕಲ್ಯಾಣಪುರವನೊಲವಿಂ ಪೊಕ್ಕು
ನೋಡಲಿದಿರಿರ್ದ ಪುರವೀಧಿಗೆ ಮನಂಮಿಕ್ಕು

ಬರುತಿರ್ದನಿತ್ತಲತ್ತಲು ಶಿವಾಲಯದೊಳಗೆ
ಅದುರೆ ತ್ರಿಪುರಾಂತಕಪ್ರಭುವಿನೋಲಗದೊಳಗೆ

ಶಿವಭಕ್ತಸಂತಾನವಿರಲೊಂದು ದೆಸೆಯಲ್ಲಿ
ಕವಿಗಮುಕಿವಾದಿವಾಗ್ಮಿಗಳೊಂದು ದೆಸೆಯಲ್ಲಿ
ಸರಸ ಗಾಯಕರ ಪಂಙ್ತಿಗಳೊಂದು ದೆಸೆಯಲ್ಲಿ
ನೆರೆದರಸುಮಕ್ಕಳೋಲಗ ಒಂದು ದೆಸೆಯಲ್ಲಿ
ಮುಗ್ಧೆ ಮಧ್ಯಪ್ರಗಲ್ಭೆಯರೊಪ್ಪಿ ಕುಳ್ಳಿರಲು
ಸ್ನಿಗ್ಧಸಾಹಿತ್ಯಜನವಲ್ಲಲ್ಲಿ ಕುಳ್ಳಿರಲು
ಬಲ್ಲಿದರ್ಬೇವಹಾರಿಗಳ ತಂಡವಿರಲಲ್ಲಿ
ಎಲ್ಲಾ ಜನಂ ನೆರೆದು ತಿಂಥಿಣಿಸುತಿರಲಲ್ಲಿ
ಹೆಸರು ಕಲ್ಯಾಣದೇವಿಯರೆಂದು ವೊಪ್ಪುತಿರೆ
ಎಸೆಯಲಾಕೆಯ ಮನೋವಲ್ಲಭಂ ನೋಡುತಿರೆ
ಸತ್ಯಸುಖಮಯನಪ್ಪ ಶಿವಭಕ್ತನಾಕೆಯೊಳು
ಅತ್ಯಂತ ನೋಹದಿಂ ಮನಹಿಂಗದಾಕೆಯೊಳು
ನೆಲಸಿರ್ಪ ನೇಹದಿಂ ನೋಡುತಿರಲಲ್ಲಿಯೊಳು
ನಲವಿಂದಲಖಿಳ ಜನ ನೋಡುತಿರಲೊಪ್ಪದೊಳು
ಮಾರ್ತೊಳಪ ಚಂದ್ರಮಂಡಲವೆಂತಂತೆ
ನೀರ್ತೆಗೆದ ರತ್ನಾಕರನ ಕಾಂತಿಯಂತಂತೆ
ಇದೋಲಗದ ರಂಗಮಂಟಪದ ಮಧ್ಯದೊಳು
ಸಾರ್ದ ಸಂಗೀತ ತಂತ್ರಂ ಬೆಳೆವ ಸಮಯದೊಳು
ನೀಲಪಟವೆಸೆವ ಜವನಿಕೆ ನಡುವೆ ನೆರೆ ನಿಲಲು
ತಾಳದೋಲ್ಲಯಗತಿಗಳುಗ್ಗಡಣೆಯೆಸೆದಿರಲು
ದೇವ ಚಿತ್ರೈಸೆನಿಪ್ಪವಧಾರವೆಸೆವುತಿರೆ
ಯಾವುಜದ ನುಣ್ಪಿನ ಠಣತ್ಕಾರ ಉಣ್ಮುತಿರೆ
ಮೃದು ಮೃದಂಗದ ಧಿಮಿಧಿಮಿ ಪ್ರಣಾದಂ ಮಸಗೆ
ಒದವಿ ಕರಡೆಯ ಕಟಕ ಧಟ್ಟೆಂಬ ರವ ಮೊಳಗೆ
ಕಹಳಾರವಂ ತಾರಮಧುರಮಂದ್ರವನುಗುಳೆ
ಬಹು ವಿಧದ ಗತಿಗೆ ಕೌಸಾಳ ಝಲ್ಲೆನಲುಗುಳೆ
ಸುಗತಿಗಳ ನಡುವೆ ಪುಷ್ಪಾಂಜಲಿಯ ನೀಡುತಿರೆ
ಬಗೆ ಮಿಗಲು ಹರನೋಲಗಂ ಬಳಸಿ ನೋಡುತಿರೆ

ತೊಲತೊಲಗು ತೊಲಗೆಂಬ ಧ್ವನಿ ಹುಟ್ಟಿದುದು ನಡುವೆ
ಕೆಲಸಾರು ಸಾರೆಂಬ ರವ ಹುಟ್ಟಿದುದು ನಡುವೆ

ಬಾಹೂರಬೊಮ್ಮಯ್ಯನೀ ಬಂದನೆಂದೆಂಬ
ಸಾಹಸಾಭರಣನೀ ಬಂದಪಂ ಸಾರೆಂಬ
ಉರುವಣೆಯ ಪಡಿಯರರ್ವುರ್ಗಂದೆ ಬರುತಿರೆ ಕಂಡು
ಪಿರಿದು ರಭಸಂಗಳಾಗಲ್ಕೆ ಬೊಬ್ಬುಳಿಗೊಂಡು
ಗಿಳಿ ತುಂಬಿ ಕೋಗಿಲೆಯ ಹಿಂಡು ಕೆದರಿದ ತೆರದಿ
ಕಳಹಂಸೆ ಕೇಕಿ ಕೋಕಾಳಿ ಹೆದರಿದ ತೆರದಿ
ಎಲ್ಲಾ ಜನಂ ಕೆದರಿ ಚಲ್ಲೆ ತಾನೈತಂದು
ಸಲ್ಲೀಲೆಯಿಂದೆ ಶಂಕರನನಪ್ಪುತ್ತಂದು
ಪಾದೋದಕಂ ಪ್ರಸಾದಂಗಳಂ ಕೈಕೊಂಡು
ಆದರಂ ಮಿಗೆ ಶೈವಸಂಪದವನೆಡೆಗೊಂಡು
ಇರುತಿರಲ್ಭೋಗಮಂಟಪದೊಳಗೆ ನಿಲಲಲ್ಲಿ
ಹರನ ಮುಂದಣ ಪಾತ್ರವೇಕಾಡದೆನಲಲ್ಲಿ

ಕೇಳುತೆ ಸುಖಪ್ರಿಯಂ ಸುಖವಳಿದು ನೆರೆ ನೊಂದು
ಆಳನಟ್ಟಿಳಲಿಂದ ಮುಳಿದು ನುಡಿದಪನಂದು
ಎಲೆ ಭಕ್ತ ಶಿವಭಕ್ತ ಜನದ ಸುಖಮಂ ಕೆಡಿಸಿ
ನೆಲೆಗೊಂಡ ನೃತ್ಯಮಂ ನೋಳ್ಪ ಭರವಂ ನಿಲಿಸಿ
ಓಲಗದ ಸುಖಲತೆಯನುಡಿಗಿ ಕುಡಿಯಂ ಕುಯ್ದು
ಆಲೋಕಿಸುವ ಜನದ ಕಣ್ಗೆ ಕಸವಂ ಹೊಯ್ದು
ಇನ್ನಾಡವೇಳ್ದೊಡಂ ಪಾತ್ರವೇಕಾಡುವುದು
ಮುನ್ನೊಪ್ಪುವೀ ನೃತ್ಯವೇಕೆ ಹಸನಾದಪುದು
ಹೊಸೆದ ಹೂ ನವ ಪರಿಮಳಂಗುಡಲ್ಬಲ್ಲುದೇ
ಬಿಸಿಲೊಳ್ಳೈದಿಲ್ವಿಕಾಸಮನೈದಬಲ್ಲುದೇ
ಇಂತು ಸುಖಮಂ ಕೆಡಿಸಿ ನೀ ಮಾಡಿತೇನಿಲ್ಲಿ
ಕಂತುಹರನಲ್ಲಿ ಪಡೆದರ್ಥವೇನಿಂತಿಲ್ಲಿ
ಎನೆ ಕೇಳ್ದು ಬಾಹೂರಬೊಮ್ಮಿತಂದೆಗಳಂದು
ಮನದೊಳಗೆ ಮುಯ್ದು ಭಕ್ತನನೀಕ್ಷಿಸುತೆ ನಿಂದು
ದೇವ ಎನ್ನಂ ದೂರಿ ತೋರವೇಳ್ಪುದು ನಿನಗೆ
ದೇವ ಬೆಸಸುವುದು ಬೆಸಸುವುದಂಜಲೇಕೆನಗೆ

ಎಂದಡೆ ಸುಖಪ್ರಿಯಂ ಬೊಮ್ಮಯ್ಯನಂ ನೋಡಿ
ನಿಂದು ಮಾತಾಡಿದಂ ಕಟಕಿಗಳನುರೆ ಕೂಡಿ
ಬಗೆವೆಚ್ಚಿ ಜೋಳವಂ ನುಡಿಯಿಸಿದೆನೆಂದೆಂಬ
ಜಗಪತಿಯ ಆನೆಯಂ ಗಂಡುಗೆಡಿಸಿದೆನೆಂಬ
ಗರ್ವವೆಮ್ಮೊಡನೇಕೆ ಬಾಹೂರಬೊಮ್ಮಯ್ಯ
ಉರ್ವಿನಿಂಯಾಡುವಡೆ ವೇಳ್ದಪೆಂ ಕೇಳಯ್ಯ

ಎನುತೆ ತನ್ನಯ ಕೆಯ್ಯೊಳಕ್ಕರೆಯಿಂ ಪಿಡಿದಿರ್ದ
ಮನಸಿಜನ ಕೆಯ್ಯಿಂದ ಸೆಳೆದುಕೊಂಡಂತಿರ್ದ
ಇಕ್ಷುದಂಡಮನಲ್ಲಿ ಹರುಷದಿಂದಂ ನೋಡಿ
ತ್ರ್ಯಕ್ಷನಣುಗನೆನಿಪ್ಪಬೊಮ್ಮಯ್ಯನಂ ನೋಡಿ
ಈ ಕಬ್ಬನೀ ನಂದಿಗಾರ್ಪೈಸೆ ಕೊಡೆ ಬಳಿಕ
ಈ ಕೇಳಿಕೆಯನಳಿದು ಮುಳಿಸು ತಿರುಗುಗು ಬಳಿಕ
ನಿನ್ನ ಸಾಮರ್ಥ್ಯವಂ ನೋಡುವೆಂ ನಾನೆಂದು
ನಿನ್ನುಬ್ಬಟೆಯ ಭಕ್ತಿಯಂ ಕಾಣ್ಬೆ ನಾನೆಂದು
ಎನಲಿಕ್ಷುದಂಡಮಂ ಕಳೆದುಕೊಂಡಂ ಧೀರ
ನನುಮಾನವಿಲ್ಲದಪ್ರತಿಮನುನ್ನತ ವೀರ
ನಲ್ಲಿ ನಂದಿಯ ಮುಂದೆ ಕುಳ್ಳಿರುತ್ತಮ್ಮಮ್ಮ
ಬಲ್ಲಿದಂ ಭಾಷೆಗುಡುತಿರ್ದನೊಲಿದಮ್ಮಮ್ಮ
ಒಂದು ಕಬ್ಬೇನುದುವದೆ ನಂದೀಶ ದೇವಂಗೆ
ಮಂದರಂ ಕೈಲಾಸಮೇರುಸಮಕಾಯಂಗೆ
ಇಲ್ಲಿ ಕಲ್ಯಾಣದ ಬಹಿರ್ನಂದನದೊಳಗೆ ಬೆಳೆವ
ಎಲ್ಲ ರಸಪ್ರಸರಮಧುರಂಗಳಂ ತವೆ ತಳೆದ
ಕಬ್ಬಿನಿತುಮಂ ತರಿಸಿ ಆರೈಸಲಿಕ್ಕಿಸುವೆ
ಉರ್ವಿ ಬೆರಗಾಗಲೆನ್ನೊಡನೊಡನೆ ನಡೆಯಿಸುವೆ
ಈನೂರ ಕೆರೆಯಗ್ಗಣಿಯನೊಲಿದು ಕುಡಿಯಿಸುವೆ
ದೇವಾಲಯಮುಮಂ ಪ್ರದಕ್ಷಿಣಂ ಬರಿಯಿಸುವೆ
ಮುಂತೆ ಹಳೆಯಂತೆ ಹರನಿಳಯದೊಳು ಕುಳ್ಳಿರಿಪೆ
ಇಂತಿದಂ ಜನವೆಲ್ಲ ನೋಡುತಿರೆ ಮಾಡಿದಪೆ
ಮಾಡದೊಡೆ ಮರ್ತ್ಯದೊಳಗಿಹೆನೆಂಬ ಮಾತಿಲ್ಲ

ಮಾಡುವೆಂ ಮಾಡುವೆಂ ಮಾಡುವೆಂ ಪುಸಿಯಲ್ಲ
ಅವಧರಿಪುದೀಶ್ವರನ ಭಕ್ತಾಳಿ ಭಾಷೆಯುಂ
ಶಿವನೊಲಿದು ಕರುಣಿಸುವ ಸಾಮರ್ಥ್ಯರಾಶಿಯುಂ

ಎಂದು ನುಡಿವುತ್ತಮಿರೆ ತಮತಮಗೆ ಹರಿತಂದು
ಬಂದು ಪಟ್ಟಣದ ಹೊರವೊಳಲ ಬನದೊಳು ನಿಂದು
ಪೊಂಗೊಟ್ಟ ಕಬ್ಬನಿತುವಂ ಚೇಣಿಯುಂ ಕೊಂಡು
ಅಂಗವಿಸಿಯುಡುಕ ತೊಡಗಿತ್ತಲ್ಲಿ ಸಾಲ್ಗೊಂಡು
ಬರಲಲ್ಲಿ ಹರನ ರಾಜಾಂಗಣದೊಳಗೆ ನೋಡೆ
ತರದಿಂದ ಸಣ್ಣ ತಟ್ಟಿಗಳ ಹಾಸುತೆ ಕೂಡೆ
ತೊಳಗುವದಣಿಂಬಂಗಳಂ ಮೇಗೆ ಮಿಗೆ ಹಾಸಿ
ಅಳಿಗಳರಸುವ ಸುಪ್ರಸವಕುಲಮುಮಂ ಹಾಸಿ
ಇಕ್ಷುದಂಡದ ಮೊದಲತುದಿಗಳಂ ಕಳೆವುತಂ
ಪ್ರಕ್ಷಾಲನಂ ಮಾಡಿ ತಂದು ತಂದಿಳುಪುತಂ
ಇರಲೊಂದೆರಳ್ಪಟ್ಟದಂತೆ ಕಬ್ಬುಗಳೊಟ್ಟಿ
ಅರುಣೋದಯಂ ಬಂದು ಪೂರ್ವಾದ್ರಿಯಂ ಮುಟ್ಟಿ
ನಂದೀಶ್ವರಂ ಕಬ್ಬನಾರೈಸುವಂದಮುಂ
ಇಂದು ನೋಡುವೆನಿಳೆಗೆ ಪೊಸತೆನಿಪ ಛಂದಮುಂ
ಎಂಬಂತೆ ರವಿಯುದಯುವಾಗುತಿರೆ ಬೆಳಗುತಂ
ಇಂಬಿನಿಂ ಬಾಹೂರ ಬೊಮ್ಮಯ್ಯನದ್ಭುತಂ
ತ್ರಿಪುರಾಂತಕಪ್ರಭುವಿನಲ್ಲಿ ನೇಮಂ ಮಾಡಿ
ವಿಪುಳವರಕಾರುಣ್ಯವರಶಂಭುವಂ ನೋಡಿ
ದೇವ ನಿಶ್ಚಿಂತಸಜ್ಜನಜನಾಧೀನನೇ
ದೇವ ನಿಜಪದಭಕ್ತಿಯುಕ್ತರಾಧೀನನೇ
ದೇವ ಶಿವಯೋಗಿಗಳ ಮಾನಸಧ್ಯಾನವೇ
ದೇವ ಸದ್ಭಕ್ತಕುಲಹೃತ್ಕಮಲಭಾನುವೇ
ದೇವ ನಿರ್ಗುಣತತ್ವಸುಗುಣಸ್ವರೂಪನೇ
ದೇವ ಭೀಕರತರಪಿನಾಕೈಕಚಾಪನೇ
ದೇವ ತ್ರಿಶೂಲ ಡಮರುಗ ವಿಮಲ ಹಸ್ತನೇ
ದೇವ ಭಕ್ತಾವರಣಶರಣಕರಣಸ್ತನೇ

ದೇವ ಪುಣ್ಯಪ್ರಕರಸೇವಿತಪದಾಬ್ಜನೇ
ದೇವ ಮೌಲಿನ್ಯಸ್ತವಿಸ್ತರಪದಾಬ್ಜನೇ
ದೇವ ವೃಷಭೇಂದ್ರಂಗೆ ಕರುಣಿಸೆಲೆ ಶಂಕರಾ
ದೇಶ ನಂದೀಶಂಗೆ ಬೆಸಸೆಲೆ ಕೃಪಾಕರಾ
ಎಂದು ಬಿನ್ನೈಸುತಿರೆ ಶಿವನ ಸಿರಿ ಮುಡಿಯಿಂದ
ಒಂದರಲ್ಸರಿಯೆ ಕಾಣುತ್ತ ಸಂತಸದಿಂದ
ಪರಿತಂದು ಪಾದೋದಕ ಪ್ರಸಾದಂಗೊಂಡು
ತಿರುಗಿ ವೃಷಭೇಂದ್ರನಲ್ಲಿಗೆ ಬಂದು ಕೈಕೊಂಡು
ಇದೆ ರುದ್ರನಾದೇಶವವಧರಿಸು ನಂದೀಶ
ಇದೆ ಶಿವನ ಕಾರುಣ್ಯವೇಳಯ್ಯ ನಂದೀಶ
ಸಕಲಮಂ ರಕ್ಷಿಸುವ ಶಿವಧರ್ಮಮೂರ್ತಿಯೇ
ಮಕರಧ್ವಜಾರಿಯ ಮಹಾಪುಣ್ಯಕೀರ್ತಿಯೇ
ಶಂಕರನ ದೃಷ್ಟಿವಿಾರಿಯ ನೇಮದಚಲಿತನೆ
ಶಂಕರನ ತೊಡೆಮುಡಕ್ಕಳವಡುವ ಸನ್ನುತನೆ
ಅಸಮನಯನನ ಸರ್ವಸಾಮರ್ಥ್ಯಸನ್ನಿಭನೆ
ಮುಸುಟಿಯಾ ಚಾಂಡರಾಯನ ಮನೋವಲ್ಲಭನೆ
ಬಾರಯ್ಯ ನಂದೀಶ ಬಾರಯ್ಯ ವೃಷಭೇಂದ್ರ
ಬಾರಯ್ಯ ಪುಣ್ಯಮಯ ಬಾರ ನಿರ್ಮಳಚಂದ್ರ

ಎಂಬ ನುಡಿ ವೃಷಭರಾಜನ ಚಿತ್ತದೊಳ್ಪೆರಸೆ
ತ್ರ್ಯಂಬಕಧ್ಯಾನಮುಮನೊತ್ತರಿಸುತಂಕುರಿಸೆ
ಯುಳಲ್ವ ಕಿವಿಗಳನೆತ್ತಿ ಧ್ವನಿಯನಾರೈವುತಂ
ಹೊಳೆವ ಶಿವಲಿಂಗಮಂ ನೋಡಿ ಹಾರೈಸುತಂ
ಕೆಲಕೊಮ್ಮೆ ಬಲಕೊಮ್ಮೆ ವದನಮಂ ತಿರುಪುತಂ
ನಲವಿಂದೆ ಶಂಕರಂಗಾನತನುಮಾಗುತಂ
ಸರಸರನೆ ಹಿಂಬೆರಕನ್ನೈಯ್ತಂದು ಬೇಗದಂ
ಪೊರಮಡಲ್ಕನುವಾಗುತಂ ನಿಂದು ರಾಗದಿಂ
ಹೊಳೆವಪರಭಾಗಮಂ ಸಂಗನತ್ತಲ್ತೋರಿ
ಬಾಗಿಲಂ ಕಳೆದು ಬೆಳೆದಂ ನೋಡಲಮ್ಮಮ್ಮ
ಮೇಗೆ ತಾರಾಪಥವ ಮೀರುತಿರಲಮ್ಮಮ್ಮ

ಹೊಳೆವ ಚಂದ್ರಿಕೆಗೆ ಕಿವಿ ಕಾಲ್ಮೊಗಂ ಮೂಡಿತೋ
ಕೈಲಾಸಗಿರಿ ಬಸವನಂಗದೊಳ್ಮೂಡಿತೋ
ಸಕಲ ಲೋಕದ ಸುಕೃತನಿಧಿ ಸೀಮೆಗೊಂಡುದೋ
ಅಕಳಂಕ ಶಿವಕೀರ್ತಿ ಮೂರ್ತಿಯಂ ತಳೆದುದೋ
ಎಂಬಂತೆ ನಿಂದ ನಂದಿಯ ಮೂರ್ತಿಯಂ ಕಂಡು
ಅಂಬರದೊಳಂಬಿಲ್ಲೆನಿಪ್ಪ ರೂಪಂ ಕಂಡು

ಬಾಹೂರ ಬೊಮ್ಮಯ್ಯನಕ್ಕರಿಂ ಮೆಯ್ಯಿಕ್ಕಿ
ಸಾಹಸಾಭರಣನಾನಂದದಿಂ ಮೆಯ್ಯಿಕ್ಕಿ
ಅತಿಶಯದ ಘನಮೂರ್ತಿಯಂ ತಳೆದಡೆಂತಯ್ಯ
ಶೃತಿತತಿಗಳ್ಬೆದದಂತಿರ್ದಡೆನಗೆಂತಯ್ಯ
ಎನ್ನ ಕಣ್ಣಿಂ ಮನಂ ನೋಡಿ ನೆನೆವಂದದಿಂ
ಎನ್ನ ಚಿತ್ತಂ ಧರಿಯಿಸಿರಲಾರ್ಪ ಛಂದದಿಂ
ಕರುಣಿಸಲ್ವೇಳ್ಪುದೆಲೆ ಸಕಲಧರ್ಮಾವರಣ
ಹರನ ಚರಣಾವಲೋಕ ಪ್ರೇಮತರಕರಣ
ಎನಲೆಲ್ಲರಾಲೋಕಿಪ ಪ್ರಮಾಣದೊಳಿರಲು
ಘನಮೂರ್ತಿಯಂ ಮಾಣ್ದು ಸೂಕ್ಷ್ಮತನುವಿನೊಳಿರಲು
ಕಂಡು ಬಾಹೂರ ಬೊಮ್ಮಯ್ಯನಾಹಾ ಎಂದು
ತಂಡ ತಂಡದ ಪುಳಕದಿಂದ ಮೂಡಲ್ಬಂದು
ವರ ಚರಣಮಂ ಪತ್ತಿ ಹಾರೈಪ ಶರಣರಂ
ಖುರ ಮುಖವನಪ್ಪಿ ಪುಳುಕಿಸುತಿರ್ಪ ಶರಣರಂ
ನಾಲದಂಡದ ನೆಳಲೊಳಣಿಯುರದೊಳಿರ್ಪರಂ
ಲಾಲಾ ಜಲಂಗಳಿಂ ನಾಂದು ಸುಖಮಿರ್ಪರಂ
ಕರ್ಣ ಪಲ್ಲವದ ನೆಳಲೊಳು ಕುಣಿವುತಿರ್ಪರಂ
ಪೂರ್ಣ ಮಧುರ ಶ್ವಾಸದಿಂ ತಣಿಯುತಿರ್ಪರಂ
ನಿರ್ಮಳ ಕಕುಭಸ್ಥಾನಮಂ ನೋಡಿ ಪೊಗಳ್ವರಂ
ಕೂರ್ಮೆಯಿಂ ವದನಮಂ ಮುಂಡಾಡುತಿರ್ಪರಂ
ನಾಡೆ ಭಕ್ತಾಳಿಯುಂ ಪಾರಿ ನಿಂದಂತಿರಲ್
ಕೂಡೆ ಶರಣರಕಾಂತ ಕಲ್ಪ ಕುಜಪಂತಿರಲ್

ಕುಣಿವುತಂ ಬಾಹೂರ ಬೊಮ್ಮಯ್ಯನೆಯ್ತಂದು
ತ್ರಿಣಯನ ಸುವಾಹನಕೆ ಮೆಯಿಕ್ಕುತಂ ನಿಂದು
ದೇವ ಆರೋಗಿಸುವುದಿಕ್ಷುದಂಡಂಗಳಂ
ದೇವ ಕೈಕೊಂಬುದೀ ಸವಿಯ ತಂಡಂಗಳಂ
ಎನಲಲ್ಲಿ ನಂದೀಶ್ವರಂ ಸುಮ್ಮನಿರುತಿರಲ್
ಮನದೊಳಗೆ ಶಿವಲಿಂಗಮಂ ಭಾವಿಸುತ್ತಿರಲ್
ಅರಿದೆನರಿದೇಂ ದೇವ ನಿನ್ನೊಳೊಂದುತ್ತಮಂ
ಅರಿದೆನಭವ ಪ್ರಸಾದಾಸಕ್ತಚಿತ್ತಮಂ
ಎನುತಿಕ್ಷುವೆಲ್ಲವಂ ಲಿಂಗಾರ್ಪಿತಂ ಮಾಡೆ
ಜನವೆಲ್ಲ ಕೌತುಕವಿದೆಂದು ಭರದಿಂ ನೋಡೆ
ಬಳಿಕ ಕೈಕೊಂಡನಾ ನೆರೆದ ಕಬ್ಬೆಲ್ಲವಂ
ಇಳೆ ಬಣ್ಣಿಸುತ್ತಮಿರಲಿಕ್ಷುಗಳನೆಲ್ಲಮಂ
ಉಶ್ವಾಸದೊಳ್ಮಾಯವಾಯ್ತು ಕಬ್ಬಿನ ರಾಶಿ
ನಿಶ್ವಾಸದೊಳ್ ತೆರಳುತಿರ್ದುದಾ ವಾರಾಶಿ

ಆಗಳಾ ಭಕ್ತರೆಲ್ಲರ್ ಕುಣಿದು ಕೊಂಡಾಡೆ
ಮೇಗೆ ದೇವರ್ಕಳೆಲ್ಲರ್ ಕೂಡೆ ನಲಿದಾಡೆ
ದೇವಮಾಯವಧಾರು ಧರೆ ಬಳುಂಕದ ತೆರದಿ
ದೇವ ಉಪ್ಪರ ಉಡುಪ್ರತತಿ ಉದುರದ ತೆರದಿ
ಎಂದು ಬೋಳೈಸುತಂ ಮುಂದೆ ಭಕ್ತಂ ನಡೆಯೆ
ಹಿಂದೆ ಬಸವಂ ಭಕ್ತನೊಡನೆ ನಲವಿಂ ನಡೆಯೆ
ಬಸವನೊಡನೊಡನೆ ಶಿವಭಕ್ತಸಂತತಿ ನಡೆಯೆ
ಎಸೆವ ಭಕ್ತರ ಹಿಂದೆ ಪುರ ಜನಂಗಳ್ ನಡೆಯೆ
ಸುರರುತ್ಸವಂಬಡೆಯೆ ಪರದೈವರೆದೆಯೊಡೆಯೆ
ಶರಣತತಿಗಳ್ನಡೆಯೆ ಪರಸಮಯಿಗಳ್ಕಿಡೆಯೆ
ನಡೆದನಣುಗಂ ತಟಾಕದ ತಟಕೆ ಒಲುಮೆಯಿಂ
ವೃಷವಾಹನಂ ಬಂದು ಮೊಗವಿಕ್ಕಿ ನಲ್ಮೆಯಿಂ
ದೇವ ನೀಂ ಕೈಕೊಂಬಡಂಬುಧಿಗಳ್ಬಿಯ್ದುವವೆ
ದೇವ ನಿಮ್ಮಸುರನಾನುವ ದೇವ ಕುಲಮೊಳವೆ
ತೆರೆಯುಳಿದು ಜಲವುಳಿವ ತೆರದಿಂದೆ ಕೈಕೊಂಡು

ಮೆರೆವುದೆನ್ನಯ ಭಾಷೆಯುಂ ಸ್ವಾಮಿ ಬಗೆಗೊಂಡು
ಎನುತಮಿರಲಗ್ಗಣಿಯಃನಾದರಿಸಿ ತಿರುಗುತಂ
ಮನಸಿಜಾರಿಯ ಭಕ್ತನೊಡನೊಡನೆ ಒದಗುತಂ
ಬಂದು ಶಿವನಿಳಯಮಂ ಬಲವರಿಸಿ ಬರಲಲ್ಲಿ
ತಂದು ಶಿವರಂಗಮಂಟಪದೊಳಗೆ ಇರಿಸಿದಂ

ದೇವ ಮೆರೆಯಿಸಿದಕ್ಕೆ ಕರುಹವೇಳ್ಪುದು ತಂದೆ
ದೇವ ಸಮ್ಮುಖವನೋಸರಿಸಿರ್ಪುದೆಲೆ ತಂದೆ
ಎನುತಡ್ಡವಾಗಿರಿಸಿ ಬಾಹೂರ ಬೊಮ್ಮಯ್ಯ
ಸನಘನಪ್ರತಿಮನಾ ಬಾಹೂರ ಬೊಮ್ಮಯ್ಯ
ಆಗಲು ಸುಖಪ್ರಿಯನ ವದನಮಂ ನೆರೆ ನೋಡಿ
ರಾಗದಿಂ ಭಕ್ತಸಂಕುಳಂ ಕೊಂಡಾಡೆ
ಪೇರ್ಮಾಡಿರಾಯನತಿ ಕೌತುಕಂಬಡುತಮಿರೆ
ಕೂರ್ಮೆಯಿಂ ಶರಣತತಿ ಗುಡಿಗಟ್ಟಿ ಕುಣಿವುತಿರೆ
ಪೂಮಳೆಗಳೊಳಗೆ ದುಂದುಭಿಕುಳಧ್ವನಿಯೊಳಗೆ
ಏಮಾತೊ ಬಿರುದೆತ್ತಿ ಕರೆವ ಕಹಳೆಗಳೊಳಗೆ
ಬಂದ ಪುಷ್ಪಕವನಾನಂದದಿಂದೇರುತಂ
ಇಂದುಧರ ಶರಣೆನುತೆ ಗಗನಕ್ಕೆ ಮೀರುತಂ
ಬಂದು ನಂದೀಶ್ವರನ ಬಾಗಿಲೊಳು ನಲ್ಮೆಯಿಂ
ನಿಂದು ಪುಷ್ಪಕವನಿಳಿದಂತಲ್ಲಿ ಒಲ್ಮೆಯಿಂ
ಸದಮಳಶಶಿಪ್ರಭೆಯನಿಳಿಕೈದ ಚರಣಕ್ಕೆ
ಉದಯಾರ್ಕಬಿಂಬಮಂ ಕರೆವ ಪದಕಮಲಕ್ಕೆ
ಹರಿಯರಸಿ ಕಾಣಲಾರದ ಪಾದಯುಗಳಕ್ಕೆ
ಶರಣತತಿ ಸ್ಪರುಶನಂ ಮಾಳ್ಪಂಘ್ರಿ ಯುಗಳಕ್ಕೆ
ಮುನಿಗಳ ಮನಂ ಬಯಸಿ ಬಾಯೊರೆವ ಚರಣಕ್ಕೆ
ಮನುಗಳಂತರ್ಧಾನದೊಳು ನೆನೆವ ಚರಣಕ್ಕೆ
ನಿತ್ಯನ ನಿರಾಶ್ರಯನ ನಿರುಪಮನ ಚರಣಕ್ಕೆ
ಅತ್ಯತಿಷ್ಠದ್ದಶಾಂಗುಲನ ಪದಕಮಲಕ್ಕೆ
ಮೆಯ್ಯಿಕ್ಕಿ ಸೈಗೆಡೆಯೆ ಬಾಹೂರ ಬೊಮ್ಮಯ್ಯ
ಒಯ್ಯನೆತ್ತಿದನು ಹರಿಕಮಲಜರ ಮುತ್ತಯ್ಯ

ಎತ್ತಿ ಮೂರ್ಧ್ನಿಘ್ರಾಣವಂ ಮಾಡಿ ಶಂಕರಂ
ಮತ್ತಲ್ಲಿ ನಂದೀಶನಂ ನೋಡಿ ಶಶಿಧರಂ

ಕೇಳು ನಂದೀಶ ಇಂತಪ್ಪ ಭಕ್ತರುಮುಂಟೆ
ಜೋಳವಂ ಧರಣಿಯೊಳಗೋ ಎನಿಸಿದವರುಂಟೆ
ಮದ್ದಾನೆಯುಂ ನಿಲಿಸಿ ಕೊಂದು ನೋಡಿದರುಂಟೆ
ಮದವಳಿಯೆ ಮತ್ತೆ ಹರಣಂಗೊಟ್ಟಿರಿಂತುಂಟೆ
ಬಸವನಂ ಕಬ್ಬಿಂದೆ ತುಷ್ಟಿವಡಿಸಿದರುಂಟೆ
ಎಸೆಯುಲಗ್ಗಣಿಗೊಳಿಸಿ ಬಲವರಿಸಿದವರುಂಟೆ
ಭಾಪುರೇ ಮದ್ಭಕ್ತ ಬಾಹೂರ ಬೊಮ್ಮಯ್ಯ
ಭಾಪು ಮಝುಭಾಪುರೇ ಬಾಹೂರ ಬೊಮ್ಮಯ್ಯ
ಎಂದು ಕೊಂಡಾಡುತಂ ಗಣಪದವನೊಲಿದಿತ್ತು
ಮುಂದಿರ್ದ ಪಾರ್ವತಿಗೆ ತೋರಿ ಸುಖಮಂ ಪೊತ್ತು
ನತಜನಸುಖಾವರುಷ ಹರುಷಮಯನೊಪ್ಪಿದಂ
ಶ್ರುತಿಮಸ್ತಕನ್ಯಸ್ತ ಚರಣತಳನೊಪ್ಪಿದಂ
ಜಲಶಯನನಯನಮಂಡಿತಪಾದನೊಪ್ಪಿದಂ
ಜಲಜಭವ ಪಂಚಮಶಿರೋಹಸ್ತನೊಪ್ಪಿದಂ
ಸ್ಮರಕಾಲಪುರಜಲಂಧರ ಮಥನನೊಪ್ಪಿದಂ
ಪರಮಗುರು ಹಂಪೆಯ ವಿರೂಪಾಕ್ಷನೊಪ್ಪಿದಂ

**ಕಂದ॥** ಬಾಹೂರು ಬೊಮ್ಮಿತಂದೆಯ
ನಾಹಾ ನೆರೆ ಮೆರೆದ ಶಂಭುನಿಜ ಭಕ್ತಿಯನು ।
ತ್ಸಾಹದೊಳಿನಗೀಗೆ ನತ
ವ್ಯೂಹದಯಾವಾರ್ಧಿ ಹಂಪೆಯ ವಿರೂಪಾಕ್ಷಂ ॥

# ತೆಲುಗು ಜೊಮ್ಮಯ್ಯನ ರಗಳೆ.

ಕಂದ॥ ಗಿರಿಜಾ ವಲ್ಲಭನಂಬರ।
ಪುರಮಥನಂ ದೇವ ಹಂಪೆಯ ವಿರೂಪಾಕ್ಷಂ।
ಕರುಣಂ ಮಿಗೆ ಮೆರೆದಂ ಸಾ।
ದರದಿಂದಂ ತೆಲುಗುಜೊಮ್ಮಿತಂದೆಯು ನಿಳೆಯೊಳ್॥

## ಪ್ರಥಮಸ್ಥಲ.

### ರಗಳೆ.

ಧರೆಗೆಸೆವ ಕಲ್ಯಾಣವೆಂಬ ಪಟ್ಟಣದೊಳಗೆ
ಹರಭಕ್ತನೋರ್ವನಿರ್ಪಂ ಭಕ್ತಿ ತೊಳತೊಳಗೆ
ನಾಮಂ ತನಗೆ ಜೊಮ್ಮಿತಂದೆ ಎಂದೊಪ್ಪಿರಲ್।
ಭೀಮನಾಥಂಗತಿ ಪ್ರೇಮತರಮಾಗಿರಲ್॥
ಮನ್ನೆಯಂ ಸಾವಂತಪತಿಭಕ್ತಿಭೂಷಣಂ।
ಅನ್ನೆಯಂ ಹೊದ್ದಬಾರದ ಸುಖನಿವೇಷಣಂ
ಏಕನಿಷ್ಠಂ ಶಿವನನಲ್ಲದೊಲ್ಲದ ಮಾನಿ
ಲೌಕಿಕವನೆಳ್ಳಿನಿತವನುಸರಿಸದಭಿಮಾನಿ
ಸತ್ಯನಚಲಂ ಮಹೋತ್ಸಾಹಿ ಕಲಿ ನಿಷ್ಕಾಮಿ
ನಿತ್ಯಲಿಂಗಾರ್ಚನಾನಿರತನಭವಪ್ರೇಮಿ
ನಿಂದೆಯಂ ಸೈರಿಸದ ನಿತ್ಯತರ ಗುರುಮೂರ್ತಿ
ಇಂದುಧರನ ಪ್ರತಾಪಾರಂಭ ವರಕೀರ್ತಿ
ಉರಿಯಂತೆ ಸಿಡಿಲಂತೆ ಶಿವದೂಷಕಾವಳಿಗೆ
ಸಿರಿಯಂತೆ ಸುಖದಂತೆ ಹರನ ಶರಣಾವಳಿಗೆ
ಭವಿಗಳಂ ಪುಳುವಿಂದೆ ಕಷ್ಟಮಾಗಿಯೆ ಕಂಡು
ಶಿವಭಕ್ತರಂ ಬಂಧುಬಳಗವೆಂದೇ ಕಂಡು

ಇಂತಿರಲ್ ಭೀಮನಾಥಂ ಕನಸಿನೊಳ್ ಬಂದು
ಸಂತತಂ ಮಿಗೆ ಜಂಗಮಾಕಾರದೊಳ್ನಿಂದು

ಎಲೆ ಮಗನೆ ಜೊಮ್ಮಯ್ಯ ನಿನಗೊಂದನರುಪುವೆಂ
ನಲವಿಂದೆ ಸೂಕ್ಷ್ಮಧರ್ಮವನೊಲಿದು ತಿಳುಪುವೆಂ
ಈ ಪಟ್ಟಣದ ಕೆಲದ ಹತ್ತು ಯೋಜನದೊಳಗೆ
ಶಾಪಹತರಾಗಿ ಮೃಗವಾಗಿ ಕಾನನದೊಳಗೆ
ಕಾರಣಿಕ ಋಷಿಯರಿರ್ಪರವರನಟ್ಟುವುದು
ಆರೈದು ಮೃಗದ ಜನನದ ಬೇಂಟೆಯಾಡುವುದು
ಮಾಯೆಯಂ ಕಳೆದು ಕೈಲಾಸಕ್ಕೆ ಕಳಿಪುವುದು
ಕಾಯಮಂ ಹೊತ್ತಿರ್ಪ ಭಾರಮಂ ಇಳಿಪುವುದು
ಎಂದು ಕರುಣಿಸಿ ಹರಂ ಶಿವಲಿಂಗದೊಳ್ಪುಗಲ್
ಅಂದು ಜೊಮ್ಮಯ್ಯಂಗೆ ಪುಳುಕಂಗಳ್ಮಿಗೆ ಮಿಗಲ್

ಎಳ್ದು ಕಣ್ದೆರೆದು ಹರುಷಂ ಮಿಕ್ಕು ಹಾರೈಸಿ
ಬಾಳ್ದು ಶಿವನಂ ಕಂಡ ಸುಖದೊಳಗೆ ಪೂರೈಸಿ
ಹರನಾಜ್ಞೆಯಿಂ ಮೃಗದ ಬೇಂಟೆಯಾಡುತ್ತಿರ್ದು
ಪರಮ ಋಷಿಗಳ ಕರ್ಮವಂ ಮಾಣಿಸುತ್ತಿರ್ದು
ಭಕ್ತರ್ಗೆ ಮಾಡಲಿಲ್ಲೆಂದುಮ್ಮಳಂ ಪುಟ್ಟಿ
ಯುಕ್ತಿಯಿಂ ಸೇವಕಾವೃತ್ತಿಗೆ ಮನಂ ಮುಟ್ಟಿ
ಬಂದು ಪೆರ್ಮಾಡಿರಾಯನನಕ್ಕರಿಂ ಕಂಡು
ಒಂದು ತಿಂಗಳ್ಗೆ ಸಾವಿರ ಹೊನ್ನನೆಡೆಗೊಂಡು
ಶರಣರ್ಗೆ ಮಾಡುತಂ ಭಕ್ತಿಯಂ ಸೂಡುತಂ
ಪರಮ ಹರುಷಂ ಮಿಕ್ಕು ಸುಖದೊಳೋಲಾಡುತಂ
ಜೋಳವಾಳಿಯೊಳಿರ್ಪನಾ ಧರಾನಾಥಂಗೆ
ವೇಳೆಯಾಳನೊಳಿರ್ಪನಾ ಭೀಮನಾಥಂಗೆ
ಪೇರ್ಮಾಡಿರಾಯಂಗೆ ಪೊಡಮಡಂ ಲೆಕ್ಕಿಸಂ
ಅಮ್ಮಮ್ಮ ಶಂಕರಧ್ಯಾನೈಕಮಾನಸಂ
ಓಲೈಸಬಂದಡೆಂದುಂ ಮರೆದು ಕುಳ್ಳಿರಂ
ಆಲೋಕಿಸಂ ದಿಟಂ ಕೈಕೊಳ್ಳನೊಬ್ಬರಂ
ಪುರುಷ ಸಿಂಹವನಾಳ್ವ ಮಾತಂಗಪತಿಯಂತೆ
ಅರಸ ಪೇರ್ಮಾಡಿರಾಯಂ ಭೀತಿಯಿಂದಿಂತೆ
ಪೋಗೆನಲ್ಕಮ್ಮದವನಂ ನೋಡಿ ನಡುಗುವಂ

ಬೇಗದಿಂದಂ ಕರೆಯಿಸಲ್ಕಮ್ಮದಂಜುವಂ
ತನ್ನಿಚ್ಛೆಯೋಳ್ಬಂದು ತನ್ನಿಚ್ಛೆಯೊಳ್ಪೋಗಿ
ಮನ್ನಣೆಯ ಶಿವನ ತೇಜದ ಕಣಿಯು ಕರುವಾಗಿ.

ಇರಲಿತ್ತ ಪೇರ್ಮಾಡಿರಾಯನೊಲುಮೆಯ ಕಾಂತೆ
ಪರಮ ಶಿವಲಿಂಗಾರ್ಚನಾನಿರತೆ ಗುಣಶಾಂತೆ
ತನಗೆ ಲಕುಮಾದೇವಿಯೆಂಬ ಪೆಸರೊಪ್ಪಿರಲ್
ಮನಸಿಜಾರಿಯನಕ್ಕರಿಂದರ್ಚಿಸುತ್ತಿರಲ್
ಜೊಮ್ಮಯ್ಯನೇಕ ನಿಷ್ಠೆಯನಚಲ ಬಲುಹಮಂ
ಜೊಮ್ಮಣ್ಣನೆಸೆವ ಶಿವಭಕ್ತಿಯುತ್ಸಾಹಮಂ
ಪುರಹರನ ಪುರಮುಪ್ರತಾಪದುರುವಣೆಯುಮಂ
ಹರನ ತೇಜಂ ನೆಲಸಿ ನಿಂದ ಸಂದಣಿಯುಮಂ
ಕೇಳ್ದು ಸಂತೋಷದಿಂ ಪರಮ ಹರುಷಂಗಳಂ
ತಾಳ್ದು ಹೊಸ ಹೊಸ ಪರಿಯ ವಸ್ತ್ರಸಂತತಿಗಳಂ
ಚಂದನಂ ಕರ್ಪೂರವಗಿಲು ಧೂಪಂಗಳಂ
ಮಂದೈಸಿ ಕಂಪಿಡುವ ಸಾಧು ಕಸ್ತುರಿಗಳಂ
ಅಂದಂದು ಬಂದೆಸೆವ ಪೊಚ್ಚ ಪೊಸ ಪೂಗಳಂ
ಇಂದುಧರನಣುಗಂಗೆ ಪರಿಪರಿಯ ಪೂಗಳಂ
ಕಳಿಪುತಿರೆ ಕೈಕೊಂಡು ಜೊಮ್ಮಣ್ಣನಳ್ತಿಯಿಂ
ಪುಳುಕಿಸುತೆ ಪೊಡಮಡುತೆ ಶಿವಭಕ್ತಿಗೊಲ್ಮೆಯಿಂ
ಶಿವ ಸೋದರರದ ತೆರದಿ ಬಂದು ಕೃತ್ಯದೊಳಿರಲ್
ಶಿವನನರ್ಚಿಸುತೆ ಕೆಲವುಂ ದಿವಸವಿರುತಿರಲ್

ಇರ್ದು ಜೊಮ್ಮಯ್ಯಂಗಳೊಂದು ದಿನ ಉದಯದೊಳ್
ಸಾರ್ದು ಮೊಗಪ್ರಕ್ಷಾಲನಂ ಮಾಡಿ ಹರುಷದೊಳ್
ಅಗಮುಸ್ಥಾನದೊಳ್ ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಸೆಜ್ಜೆಯುರಮನೆಯೊಳೊಪ್ಪುವ ಭೀಮನಾಥನಂ
ಸಜ್ಜನಪ್ರೇಮಿ ತನ್ನಯ ಪ್ರಾಣನಾಥನಂ
ಬಾರಯ್ಯ ಬಾರೆನ್ನ ಭಕ್ತಜನಬಂಧುವೇ

ಬಾರಯ್ಯ ಬಾರರಸ ಬಾರೆನ್ನ ಗತಿಮತಿಯೆ
ಬಾರ ನಂಬಿದರೊಲವೆ ಬಾರ ಶರಣರ ಬಲವೆ
ಬಾರ ಪುಣ್ಯದ ಫಲವೆ ಬಾರ ಮುಕ್ತಿಯ ನಿಲವೆ
ಎಂದೆಂದು ಬೋಳೈಸಿ ಕರೆದು ಬಿಜಯಂಗೈಸಿ
ಮಂದೈಪ ಹರುಷದಿಂದೊಲಿದೊಲಿದು ಹಾರೈಸಿ
ಛಂದದಿಂ ಪಾಡುತಂ ಮಜ್ಜನಕ್ಕೆರೆದೆರೆದು
ಚಂದನವನಿತ್ತಿತ್ತು ನೋಡಿ ಸುಖದೋಳ್ನೆನೆದು
ಪುಳಕಿಸುತೆ ಸಿಂಹಾಸನಕ್ಕೆ ಬಿಜಯಂಗೈಸಿ
ಎಳಸುವಚ್ಚರಳ್ಗಳಂ ಸಿರಿ ಮುಡಿಯೊಳಗೆ ಸೂಡಿ
ನವಧೂಪ ಧೂಮ್ರದಿಂದೊಸರ್ವ ಪರಿಮಳವಿತ್ತು
ನವ ಕಾಂತಿಗಳನೇಳಿಪಾರತಿಗಳಂ ಪೊತ್ತು
ಕಂಪೆಸೆವ ಅಮೃತಾನ್ನದಾರೋಗಣೆಯನಿತ್ತು
ಕಂಪಿಡುವ ವೀಳೆಯಮನಸಮನಯನಂಗಿತ್ತು
ಸೊಂಪೇರಿ ಶಿವನೇಕನಿಷ್ಠೆಯಂ ಮುಂದಿಟ್ಟು
ಸಾದರಂ ಭೀಮನಾಥನ ಕೃಪೆಯ ಮುಂದಿಟ್ಟು
ಮನೆಯಿಂದ ಪೊರಮಟ್ಟು ಉನ್ನತಾಸನವೇರಿ
ಘನಮಹಿಮೆಯಂ ಮನದೊಳೆಡೆಗೊಂಡು ನಲವೇರಿ
ನಡೆತರುತ್ತರಮನೆಯ ಮುಂದೆ ಭರದಿಂದಿಳಿದು
ಮೃಡನೆ ಶರಣೆಂದೆನ್ನುತೆ ಬಾಗಿಲ್ಗಳಂ ಕಳಿದು
ಎಡಬಲದ ರಾಜಪುತ್ರರು ನಡನಡುಗುತಿರೆ
ನಡೆತಂದನಾ ವಿಭೂತಿಯ ವೀರನಮ್ಮಮ್ಮ
ನಡೆತಂದನಲ್ಲಿ ಸುರಗಿಯ ಸುಭಟನಮ್ಮಮ್ಮ

ಬರುತಿರಲ್ಮುಂದೊಂದು ಪಿರಿಯ ಮಾಳಿಗೆಯೊಳಗೆ
ಅರಸನಾ ವಿಷ್ಣುವಂ ಪೂಜಿಸುತ್ತಿರಲೊಳಗೆ
ಪೊರಗೆ ನಿಂದಿರ್ದನಾ ಜೊಮ್ಮಣ್ಣನತಿಬಳಂ
ತೆರಹಿಲ್ಲದಚ್ಚ ಕಲಿ ನೆರೆ ಮನದ ನಿಶ್ಚಳಂ
ನಿಂದರಲ್ಕೆಲದೊಳೋರ್ವಂ ಪುರಾಣಿಕನಲ್ಲಿ
ಸಂದಣಿಸಿ ವೈಷ್ಣವ ಪುರಾಣ ಓದುತ್ತಲ್ಲಿ
ಕಟ್ಟಕ ಪುರಾಣಮಂ ದಿಟ್ಟತನದಿಂ ಪಿಡಿದು

ಕೆಟ್ಟ ಇಟ್ಟಿಯು ಭಂಡನೆನಿಪ ಪಾರ್ವಂ ಪಿಡಿದು
ಆಕಾಶಗಂಗೆ ಮುನ್ನುಳ್ಳುದುದನಟವಟಿಸಿ
ಲೋಕಾಯತಂ ಹುಸಿಯನುಚ್ಚರಿಸಲಳವಡಿಸಿ
ವಿಷ್ಣುಪದವೆಂದು ಗಗನದ ನಾಮವಲ್ಲಿರ್ದು
ವಿಷ್ಣುಪದಿಯಾದಳೆಂಬರ್ಥಮುಮನರಿದಿರ್ದು
ವಂಚಿಸಿ ಶಿವದ್ರೋಹಿ ಕಾಳ್ಗೆಡೆವುತಿರುತಮಿರೆ
ಪಂಚಮುಖನಿಂದೆಯಂ ಮಾಡುತ್ತಮಿರುತಮಿರೆ

ಕೇಳ್ದು ಜೊಮ್ಮಣ್ಣನೆಂತೆಂತದೆಂತೊಮ್ಮೊಮ್ಮೆ
ಆಳ್ದನೇ ಧರಿಯಿಸಿದನಿದನಾಡಲಾನಮ್ಮೆ
ಎಲೆಲೆಲೆ ಶಿವದ್ರೋಹಿ ಇಂತು ಪುಸಿ ನುಡಿವರೇ
ಎಲೆ ಪಾಪಿ ಪಾಪಿ ಪಾತಕ ಇಂತು ಬೊಗುಳ್ವರೇ
ಎನುತ ಅಲಗಿಂ ಧೊಪ್ಪನಿರಿದನಾ ದ್ರೋಹಿಯಂ
ತನುವನಿರ್ವ್ಯಗಾಣೆ ನರಕರಂಬಾಹಿಯಂ
ಇರಿದು ಭೋಂಕನೆ ಸೆಳೆಯೆ ಬೀಳ್ದನಾ ವಿದ್ರೂಪಿ
ಒರಗಿ ನೆತ್ತರವ ಕಾರುತ್ತಿರ್ದ ಕಡು ಪಾಪಿ
ಬಲುಗರವು ಹೊಡೆದಂತೆ ಬೆರೆತನಾ ಪಾತಕಂ
ಹಲುಗಚ್ಚಿ ಹೆಣನಾದನೆಂತಾತ್ಮಘಾತಕಂ
ಅಂತಾ ಶಿವದ್ರೋಹಿಯಂ ತೀರ್ಚಿ ಪೊರಮಟ್ಟು
ಕಂತುಮದಮರ್ದನನ ತೇಜಮಂ ಮುಂದಿಟ್ಟು
ಶಿವನಿಂತು ಕೇಳಿಸಿದನೇ ತನ್ನ ನಿಂದೆಯಂ
ಆವನದಲ್ಲಲ್ಲ ತಪ್ಪಂ ಬರ್ಪುದೆನ್ನಯಂ

ಎನುತೆ ಘೂರ್ಮಿಸುತೆ ನಿಜನಿಳಯಕ್ಕೆ ನಡೆತಂದು
ಮನಸಿಜಾರಿಯ ಶರಣರಂ ಕರೆಯಿಸುತ್ತಂದು
ಎಲ್ಲರಂ ನೆರಪಿ ಗಣತಿಂಥಿಣಿಗೆ ಮೊಯ್ಯಿಕ್ಕಿ
ಎಲ್ಲಾ ಗಣಂಗಳಂ ಬಲವಂದು ಮೊಯ್ಯಿಕ್ಕಿ
ನಿಂದಿರ್ದು ಕೈಮುಗಿದು ಕಣ್ಣನೀರ್ಕಡಲಾಗೆ
ಸಂಗಣಿಸಿ ದುಃಖವೀರ್ಮಡಿಸಿ ನೂರ್ಮಡಿಯಾಗೆ
ಬಿನ್ನೈಸಿದಂ ಜೊಮ್ಮಿತಂದೆಯನುರಾಗದಿಂ

ಬಿನ್ನೈಸಿದಂ ನಿಂದೆ ಕೇಳ್ದ ಕಡುಗೋಪದಿಂ
ಅವಧರಿಸುದಾನಿಂದು ಮಾಡಿದಪರಾಧವಂ
ಕಿವಿಯಿಂದಲಿಂದಾದ ಗುರುತರ ಸಿರೋಧವಂ
ಶಿವನಿಂದೆಯಂ ಕೇಳ್ದ ಪಾಪಿಗೇನೆಂತಯ್ಯ
ಭವಿಯನೋಲೈಸಿದಪರಾಧಿಗೇನೆಂತಯ್ಯ
ಹರನಿಂದೆಗೇಳಲೇಕೋಲಗಿಸಲೇಕೆನಗೆ
ಹರಭಕ್ತರಲ್ಲದರ ಸಂಗಡವದೇಕೆನಗೆ
ನಿಂದಿಸಿದ ವಿಪ್ರನಂ ಕೊಂದೆ ಎನಗೈದದದು
ಇಂದವನ ವಂಶವಂ ನಟ್ಟು ಹರಗುವೆನೆಂದು
ಪೇಳಿರೇ ಇದಕೆ ಪರಿಹಾರವಂ ಭಕ್ತರಿರ
ಎಂದು ಬಿನ್ನೈಸೆ ಭಕ್ತರ್ಬಂದು ತರ್ಕೈಸೆ
ಇಂದುಧರನಾಜ್ಞೆ ನಿಮಗುಂಟೆಂದು ಹಾರೈಸೆ
ಪಾಪಿಯಂ ಪರಿಹರಿಸಿದಪ್ರತಿಮ ಜೊಮ್ಮಯ್ಯ
ಪಾಪಕರನಂ ದ್ರೋಹಿಯಂ ತೀರ್ಚಿದಮ್ಮಯ್ಯ
ಶಿವನಿಂದೆಯಂ ಗೈದನಂ ಕೊಂದೆನಿನ್ನೇನಯ್ಯ
ಶಿವಭಕ್ತ ನಿನಗೊಂದು ತಪ್ಪುಂಟೆ ಬೊಮ್ಮಯ್ಯ
ಎಂದು ಬೆಸಸಿದ ಭಕ್ತರಾಜ್ಞೆಯಂ ಕೈಕೊಂಡು
ಬಂದ ಭಕ್ತಾಳಿಯಂ ಭಯದಿಂ ಬಲಂಗೊಂಡು
ಗಣಪರ್ವದಿಂ ಕೇಳ್ದ ನಿಂದೆಯಂ ನೀಗುತಂ
ತಣಿವಂತೆ ಶರಣತತಿಗಿತ್ತು ಸುಖಿಯಾಗುತಂ
ಭೀಮನಾಥನೊಳಚಲಿತ ಪ್ರಸಾದಂಬಡೆದು
ಶರಣಸಂಗಂ ತನಗೆ ಪಿರಿದು ತುಷ್ಟಿಯನೀಯೆ
ನಿರುಪಮಾನಂದಸುಖಜಲದಿ ತೆರೆ ಮೇಲ್ವಾಯೆ
ತನ್ನ ನಿಳಯದೊಳು ಜೊಮ್ಮಯ್ಯನೊಪ್ಪುತ್ತಮಿರೆ

**ಪ್ರಥಮ ಸ್ಥಲಂ ಸಮಾಪ್ತ.**

# ದ್ವಿತೀಯ ಸ್ಥಲಂ.

**ಕಂದ**॥ ಹರನಿಂದೆಗೈದನಂ ಸಂ
ಹರಿಸಿ ಹರಜ್ಞಾನಿ ಕ್ಷರನ ತೇಜೋಭರಣಂ।
ಹರನಣುಗಂ ಹರನಾಜ್ಞಾ
ಧರನಚಲಂ ಜೊಮ್ಮಿತಂದೆಯಿಪ್ಪವಸರದೊಳ್॥

**ಗದ್ಯ**:— ಹರನಿಂದೆಗೈದ ಶಿವದ್ರೋಹಿಯಂ ತೀರ್ಚಿ ಏಕನಿಷ್ಠೆಯಿಂ ಹರನೊಲವಂ ತೊಡರ್ಚಿ ಪರಿಚ್ಛೇದವನೊಡರ್ಚಿ ನಿರ್ಮಲ ಶೀಲಂ ಕರ್ಮ ವಿಧ್ವಂಸಿ ಜೊಮ್ಮಿತಂದೆ ಸತ್ಯಶರಣರ ನಡುವೆ ನಿತ್ಯನಾಗಿರಲಿತ್ತ ಪೇರ್ಮಾಡಿರಾಯಂ ಪುರಾಣಭಟ್ಟಂಗೆ ಮನಂ ಪಗೆಯಾದುದಂ ಪುಸಿ ನುಡಿ ವಿಷವಾದುದಂ ಶಿವನಿಂದೆಯೇ ಕೊಂದುದೆಂದರಿಯದೆ ಪರಿಚಾರಕರಂ ಕರೆದು ಪಾರ್ವನೇಕೆ ಪುರಾಣವಂ ಪೇಳದುಸುರದಿರ್ದಪನೆಂದು ಕೇಳಲೋರ್ವರುಂ ಪೇಳಲಮ್ಮದೆ ಸುಮ್ಮನಿರೆ ಮತ್ತೆ ಮತ್ತಾಕ್ರಮಿಸಿ ಜೊಮ್ಮಿತಂದೆಗಳ್ಕೊಂದರೆಂದು ಪೇಳಲಂಜಿ ಕೈಸನ್ನೆ ಬಾಯಿಸನ್ನೆಯಿಂ ಕೇಳೆ ತೋರ್ಪಾಗಳಾತ್ಮನರ್ಚಿಸುವ ವಿಷ್ಣು ಪ್ರತಿಮೆ ತನ್ನದೆಸೆಯಿಂದಾದ ಶಿವನಿಂದೆಯಂ ಕೇಳ್ದು ಕಣ್ಣನೀರಿಕ್ಕುತಿರಲದಂ ಕಂಡಿದೇನುತ್ಪಾತವೆಂದರಸಂ ಭೋಂಕನೆ ಪೊರಮಟ್ಟು ನಡೆತರುತ್ತೆ ಕಾಳ್ಪುರಾಣ ಒಂದೆಸೆ ತಾನೊಂದೆಯಾಗಿ ಕರುಳು ಕುಪ್ಪಳಿಸುತ್ತಿರ್ದ ನಿತ್ಯನರಕಿಯಂ ಕಂಡು ಮುಖದ ಕಾಯ್ಪಿಂ ಕಂಗಳ ಕಾಂತಿಯಿಂ ಮನದ ಕೌತುಕದಿಂ ಚಿತ್ತದ ನಿರೋಧದಿಂ ತಲೆದೂಗುತ್ತಂ ಪೇರ್ಮಾಡಿರಾಯಂ ಸಿಂಹಾಸನಾರೂಢನುಂ ಕೋಪಾರೂಢನುಮಾಗಿ ಶೋಭಿತ ಮಕುಟವರ್ಧನುಂ ಪರಿವೃತರಾಜ ಪುತ್ರರುಂ ಪರಿವೇಷ್ಟಿತಮಂತ್ರಿವರ್ಗನುಮಾಗಿ ವಾದಪಿಪ್ರನಿಕಾಯನುಂ ಪ್ರಣುತ ಕವಿಜನ ನಿಕಾಯನುಂ ಕೋಪಾಗ್ನಿಕಣಕಲಿತಸಜೇಕ್ಷಣನುಮಾಗಿ ಪೇರ್ಮಾಡಿರಾಯಂ ಪಡಿಯರರಿಂ ಜೊಮ್ಮಯ್ಯನಂ ಮತ್ತೆಮತ್ತೆ ಕರೆಯ ಕಳಿಪುತಿರಲಿತ್ತಲಾತನ ಧರ್ಮಪತ್ನಿ ಶಿವಲಿಂಗಾರ್ಚನಾನಿರತೆ ಜಂಗಮಸ್ನೇಹಿ ಸತ್ಯಭಕ್ತೆ ಲಕುಮಾದೇವಿ ಶಿವನಿಂದೆ ವಿಪ್ರವಧೆನಿಮಿತ್ತವರಸಂ ಜೊಮ್ಮಣ್ಣಂಗೆ ಮುನಿದು ಕರೆಯಲ್ಕಳುಪಿ ಕುಪಿತನಾಗಿರ್ದಪನೆಂಬ ಕಠಿಣವಾರ್ತೆಯಂ ಕರ್ಣಪರಂಪರೆಯಿಂ ಲಕುಮಾದೇವಿ ಕೇಳ್ದು ಹರಹರ ಹರನೇ ಬಲ್ಲಂ

ಶಿವಭಕ್ತ್ರಂಗಳಿವಿಲ್ಲದ ಚಿನ್ಹಂ ಅಡ್ಡಮಾಗಲದು ಮುನ್ನೊಂದುಂ ಪೊಡ ಮಡದ ಜೊಮ್ಮಣ್ಣನಿಂದು ಪೊಡಮಡೆ ತನಗೆ ಪೊಡಮಟ್ಟನೆಂದ ರಸಂ ಮನ್ನಿಸುವನೆಂಬ ಬಗೆಯಿಂ ತನ್ನ ಪ್ರಾಣಲಿಂಗವಂ ಸಿಂಗರಿಸಿ ಮಾಣಿಕ್ಯದ ಸಿಂಹಾಸನವೆರಸರಸನರಿಯದಂತೆ ಶಿವಭಕ್ತೆಯರು ಸಹಿತೆ ಲಕುಮಾದೇವಿ ಪಿಡಿದಿರ್ಪ ಸಮಯದೊಳು

ಇತ್ತಲ್ಮುಂದೆ ಬರ್ಪರಸಾಳ್ಗಳಿಂ ಪಿಂದೆ ಬರ್ಪ ಪುರಜನದಿಂ ಕೆಲ ಬಲದೋಳ್ಬರ್ಪ ಭಕ್ತನಿಕರದ ನಡುವೆ ವಿಭೂತಿಯ ಕಾಂತಿ ನಳನಳಿಸೆ ರುದ್ರಾಕ್ಷೆಯ ಉಲಿಪು ಘಲುಘಲಿಸೆ ಕೆಯ್ಯಲಗಿನ ಬೆಳಗು ಬಳ್ವರಿಯೆ ಕಲಿಯುಗ ವೀರಭದ್ರಂ ಪರಸಮಯ ಪರಿಚ್ಛೇದಿ ಪರವಾದಿ ಕೋಲಾ ಹಲಂ ಜೊಮ್ಮಿತಂದೆ ಒರೆವುಚ್ಚಿದ ತ್ರಿಶೂಲದಂತೆ ತೊಡರ್ಚಿದ ಫಾಳ ಲೋಚನದಂತೆ ಘುಳುಘುಳಿಸಿ ನಡೆತಂದು ಸಭಾನಿಳಯಮಂ ಪುಗು ತರುತಂ ಮೇಲಂ ನೋಡಿ ತೊಳತೊಳಪ ಲಿಂಗವಂ ಫಳಿಲನೆ ಕಂಡು ನಿಜಭಕ್ತಿಯ ಭರದಿಂ ಪೊಡಮಡಲ್ಕೈಯೆತ್ತುತ್ತೊಲ್ಲದೆ ನಿಂದು ಭವಿಯ ಪಿಂದಿರಲೇಕೆ ಪೊಡಮಡಿಸಿಕೊಳಲೊಲಿವರೇ ಕೆಲಕ್ಕೆ ಬಿಜಯಂಗೈವು ದೆಂದೆತ್ತಿದ ಹಸ್ತಮಂ ಮತ್ತೊಂದೆಸೆಗೆ ಸನ್ನೆದೋರೆ ಶಿವಲಿಂಗಂ ಸಿಂಹಾಸ ನಮಂ ಬಿಟ್ಟು ಭಕ್ತನ ಕೆಯ್ಯೊಡನೆ ಸರನೆ ತಿರುಗಿ ಪಸಕ್ಕೆ ಬಂದು ಕೆಲಸಾರ್ದು ಗಗನಾಸನಮಂ ಕೈಕೊಂಡಿರೆ ಬಳಿಕ್ಕೆ ಪೊಡಮಟ್ಟು ಸಂತ ಸಂಬಟ್ಟು ದೇವದೇವ ಸುಕುಮಾರಲಿಂಗ ಸರ್ವಾಭಿಮಾನಿ ಬಿಸಿಲು ಗಾಳಿ ಯೊಳಿರ್ಪರೇ ಸೆಜ್ಜೆಗೆ ಬಿಜಯಂಗೈವುದೆಂದು ಬಿನ್ನೈಸಿ ಬಿಜಯಂಗೈಸಿ ನಿರ್ಮಳ ಚಿತ್ತಂ ಜೊಮ್ಮಯ್ಯಂ ಸಭೆಯಂ ಲೆಕ್ಕಿಸದೆ ನಿಂದಿರ್ದರವಂ ನೋಡಿ ಮೊದಲೊಳೆ ವಿಷ್ಣುಪ್ರತಿಮೆ ಕಣ್ಣ ನೀರಿಕ್ಕಿತಂ ತತ್ಪದವಂ ನೋಡೆ ನೋಡೆ ಶಿವಲಿಂಗವಂ ಕೈಸನ್ನೆಯಿಂ ಬರಿಸಿದ ಸಾಮರ್ಥ್ಯಮಂ ಬಿಜಯಂಗೈಸಿದ ಸ್ನೇಹಮಂ ನಿಂದ ನಿಲವಂ ಬಗೆಯದ ಬಲ್ಪುಮಂ ಲೆಕ್ಕಿ ಸದ ಗರ್ವತೆಯಂ ಕೈಕೊಳ್ಳದ ಕಡುನಿಷ್ಠೆಯಂ ಕಂಡು ಭೂಪಂಗೆ ಕೋಪವಳಿದು ನಂಬುಗೆ ಬೆಳೆದು ಭೀತಿಯುದ್ಭವಿಸಿ

ಏನಯ್ಯ ಜೊಮ್ಮಯ್ಯ ನಿರಪರಾಧಿ ಪುರಾಣಭಟ್ಟನಂ ಕೊಂದು ದಕ್ಕೆ ಕಾರಣವೇನೆನೆ ಕೇಳರಸ ನಿನಗೆ ವಿಚಾರವಿಲ್ಲ ಪುರಾಣಭಟ್ಟನಂ ಕೊಲ್ಲೆ ಶಿವನಿಂದೆಯಂ ಮಾಡಿ ಪುಸಿ ನುಡಿದ ದ್ರೋಹಿಯಂ ಕೊಂದೆ ನಿನ್ನುಂ ತಣಿಯೆನೆಂದು ಪೇಳ್ದ ಜೊಮ್ಮಿತಂದೆಯಂ ಪೇರ್ವಮಾಡಿರಾಯಂ

ಕಂಡೀ ಭಕ್ತನಂ ಪರೀಕ್ಷಿಸಿ ನೋಳ್ಪೆನೆಂದಿನ್ನು ಪ್ರತ್ಯಕ್ಷಂ ಕಂಡರೆ ಬಿಡುವೆ
ನಲ್ಲದೊಡೆ ದಂಡಿಸುವೆನೆಂದು ನೆನದೆಲೆ ಜೊಮ್ಮಯ್ಯ ಪುರಾಣಭಟ್ಟಂ
ಪುಸಿ ನುಡಿದುದಕ್ಕೆ ಪ್ರಮಾಣವಾವುದು ವಿಶ್ವರೂಪ ವಿಷ್ಣುಪುರಾಣವು
ನೋದಲಸತ್ಯಮೆಂದುದಕ್ಕೆ ಪ್ರತ್ಯಕ್ಷಮಂ ಉಳಿಕೆ ವಾಗ್ವಿಡಂಬವಂ ನಮ್ಮೊ
ಡನಾಡಲಾಗದು ಸದ್ಭಕ್ತಿಯುಳ್ಳೊಡೆ ತೋರ್ಪುದೆಂದು ಪೆರ್ಮಾಡಿರಾಯಂ
ನುಡಿಯೆ ಜೊಮ್ಮಯ್ಯಂ ಕೇಳ್ದು ಎಲೆಲೆ ಮರುಳರಸೇ ಹರಭಕ್ತರೊಳ
ಸತ್ಯಮುಂಟೇ ದೂಷಕಂ ನರಕಕ್ಕಿಳಿಯಲ್ಪುಸಿ ನುಡಿ ಇಂತಿದಕ್ಕೆ ಪ್ರತ್ಯಕ್ಷ
ಮೀಗಳಾ ಪೆಣನಂ ಮುಸುಂಕಿಟ್ಟು ತೆಗೆಯಲ್ಪುಳುವಿನ ರಾಶಿಯಾಗದಿ
ರ್ದೊಡವನಲ್ಲ ನಾನಪರಾಧಿ ಎನ್ನಂ ಶಿಕ್ಷಿಸುದೆನಲರಸನೊಡಂ
ಬಟ್ಟು ಜೊಮ್ಮಣ್ಣಂಗೆ ಕೈಗೊಟ್ಟು ಗಳಗಳನೆ ನಡೆತಂದು ಭಕ್ತ ನೀಂ
ತೋರ್ಪುದಂ ತೋರಾ ಎನಲ್ಪರಮಶಿವನಿಷ್ಠಾ ನಿಧಿ ಓಸರಿಸದ ಭಾಷೆ
ವಂತಂ ಜೊಮ್ಮಯ್ಯನಲಗಂ ಕೀಳ್ತಲೆ ದೇವ ಭೀಮನಾಥ ನಿನಗೆ ಕಟ್ಟಿ
ದೊರೆಯುನಪಧಾರವಧಾರೆನ್ನ ಬಿನ್ನಪವ ಪರಸಮಯ ದ್ವೇಷದಿಂದಿರಿ
ದೊಡಂ ಭಕ್ತನೆಂಬ ಗರ್ವದಿಂ ಭವಿಯ ಕೊಂದಡಂ ಪೇಳ್ದ ಪುರಾಣ
ವಪ್ಪುದಲ್ಲೆಂಬ ಸಂದೇಹದಿಂ ಮುಡಿಪಿರ್ದೊಡಂ ನಿನ್ನ ಮೇಲೆ ಸ್ನೇಹ
ವಿಲ್ಲದಂ ನ್ಯಾಯದಿಂ ಪ್ರಾಣಿಯ ನೋಯಿಸಿರ್ದಡಂ ನೀನೇ ಸಾಕ್ಷಿ
ಇದೇ ದಿಬ್ಯವೆಂದು ಭಾಷೆಗೊಡುತ್ತಂ ಬಂದು ದೂಷಕನ ಪೆಣಂ ಕಾಣ
ಲಾಗದೆಂಬಂತೆ ಭೋಂಕನೆ ಪಚಡದಿಂ ಮುಸುಂಕಿಕ್ಕಿ ತೆಗೆಲಮ್ಮಮ್ಮ
ನಿಂದಕನವಯವಂ ಕಲಸಿ ಪುಸಿಯ ಪುಂಜಂ ಬಳಸಿ ಬೆಳೆದಂತೆ ನಿಂದೆಯ
ಗುಡ್ಡೆ ನಿಮಿರ್ದಂತೆ ಪಾಪದ ಬೀಜ ಒಬ್ಬುಳಿಸಿದಂತೆ ದೋಷದ ಹುತ್ತ
ನೆಗೆದಂತೆ ಪುಳುವಿನ ರಾಶಿ ವಿಲಿವಿಲಿಸುತ್ತಿರದಂ ಕಂಡು ಕಣ್ಮುಚ್ಚಿಕೊಂಡು
ತೆಗೆತೆಗೆ ಎಂದು ಹೇಸಿ ಪಾಪಕ್ಕೆ ಹೇಡೈಸಿ ಪುಳುವೆಲ್ಲಂ ಪೊರಕ್ಕೆ ಚಲ್ಲಿಸಿ
ಪರಿತಂದು ಜೊಮ್ಮಯ್ಯನ ಪದತಳಕ್ಕೆರಗಿ ನಿಮ್ಮಂ ಪರೀಕ್ಷಿಸಿದ ಪಾಪಿಗೆ
ಕರುಣಿಪುದೆಂದು ಪೆರ್ಮಾಡಿರಾಯಂ ನಿಂದು ಕೈಮುಗಿದು ನಿಶ್ಚಳ
ಭಕ್ತನಂ ಭದ್ರಾಸನದ ಮೇಲಕ್ಕೆ ಬಿಜಯಂಗೈಸಿ ಚರಣಯುಗಳಕ್ಕೆ ಇಚ್ಛಾರ್ಥ
ಸಿರ ಪೊಂಗಳಂ ಕಾಣ್ಕೆ ಇತ್ತು ಕೊಂಡಾಡುತಿರ್ಪ ಸಮಯದೊಳ್

ಸದ್ಭಕ್ತೆ ಲಕುಮಾದೇವಿಯರಾರಾಧಿಸಿ ಕಳುಪಿದ ಪೊನ್ನ ಪೊಟ್ಟ
ಣವಂ ಹಾರೈಸಿಕೊಂಡು ರನ್ನದ ತೊಡಿಗೆಗಳಂ ಹರುಷದಿಂ ತೊಟ್ಟು
ದಿವ್ಯ ವಸ್ತ್ರಮನುಟ್ಟು ಸಿಂಹಾಸನದೊಳೊಪ್ಪುತ್ತಿರ್ಪ ನಿಸ್ಸೀಮನಂ ಕಂಡ

ಹರನಾ ತ್ರಿಶೂಲದಿಂದಿರಿವೆತ್ತಿ ನೆಗೆಪುತಂ
ಒಳಹೊಕ್ಕು ಬರುತಿರಲು ನಾರಾಯಣಂ ಕಂಡು
ಇಳಿಪುವೇಂ ಪಾತ್ರೆಯನೆನುತ್ತಂ ಮನಂಗೊಂಡು
ತನ್ನ ಶಿರದರುಣಜಲವುಂ ಪಾತ್ರೆಯೊಳ್ಕರೆಯೆ
ತನ್ನಿಂದ ನೂರ್ಮಡಿಸಿ ಪಾತ್ರೆ ಬೆಳದತಿ ಮೆರೆಯೆ
ಅಂಗದೋಳ್ಸಾರವರತಡಿಗೆರಗೆ ನೋಡುತಂ
ಅಂಗಜಹರಂ ಕರುಣದಿಂದೆ ಪಿಡಿದೆತ್ತುತಂ
ನಡೆದನೆಂದೀ ಷುರಾಣಂ ನೆರೆದು ಸಾರುತಿರೆ
ಒಡೆಯನೀಶ್ವರನೆಂದು ಸೊಡರ್ವಿಡಿದು ತೋರುತಿರೆ
ಅದರಿಂದ ಪಂಪಾವಿರೂಪಾಕ್ಷನೇ ಘನಂ
ಮದನಹರನೆಮ್ಮಯ್ಯ ವಿರೂಪಾಕ್ಷನೇ ಘನಂ

ಮತ್ತಂ ವಿಚಾರಿಪೊಡೆ ಹರಿ ಸಹಸ್ರಾಬ್ಜದಿಂ
ದತ್ತಿತ್ತ ಚಲಿಸದರ್ಚಿಸುತವಿರೆ ಸತ್ಯದಿಂ
ದೊಂದು ಹೂ ಕುಂದಿದಡೆ ತನ್ನ ನಯನಾಬ್ಜವುಂ
ತಂದಿಕ್ಕಿ ಹೋದ ಹೂವಿಂಗೆ ಹೊಸ ಕಮಳವುಂ
ಚಕ್ರವುಂ ಹರನಿತ್ತನಂದಿಂದ ಮೊದಲಾಗಿ
ಚಕ್ರಧರನಾದನೀ ಭೂತಳಕೆ ಪೆಸರಾಗಿ
ಇಂತೆಮ್ಮ ಪಂಪಾ ವಿರೂಪಾಕ್ಷನೇ ಘನಂ
ಅಂತ್ಯಕಾಲದಿ ರುದ್ರಭೂಮಿಗೊಯ್ಯೆಂದೆಂಬ
ಭ್ರಾಂತೇಕೆ ರುದ್ರಗಣಂಗಳಿಗಿಕ್ಕಿ ಮುನ್ನೆಂಬ
ಪಿತೃಕೃತ್ಯದಲಿ ವಿಶ್ವೇದೇವ ಮೊದಲೆಂತೆಂಬ
ಪಿತೃತೃಪ್ತಿ ರುದ್ರಪಾದದತ್ತಮೆಂತೆಂಬ
ಉಪನಯನ ವೈವಾಹಕಂ ನಂದಿಮುಖವೆಂಬ
ಸುಪಥವದು ಸರ್ವಕ್ಕೆ ಶಾಶ್ವತಂ ಶಿವನೆಂಬ
ಇಂತು ಸರ್ವೋರ್ವಿಯೊಳು ಶಿವ ಸಮಯವೇ ಘನಂ
ಇಂತು ತ್ರಿಪುರಾಂತಕನ ಸಾಮರ್ಥ್ಯವೇ ಘನಂ

ದೇವಾಲಯದೊಳು ಹರಿ ಪರಿವಾರವಾಗಿರ್ಪ
ನಾನಾರ್ಥದಿಂ ಹರನ ಕಿಂಕರಂ ತಾನಪ್ಪ
ಅವನಿಯೊಳ್ಗಳಿ ದಿವ್ಯ ಉಳಿದ ದೇವರೊಳಿಲ್ಲ

ಶಿವಸಮಯವೇ ಶರಣು ಪರಸಮಯಿಗಳಿಗೆಲ್ಲ
ಎಲ್ಲ ದೇವರ್ಗೆ ತಂತಮ್ಮ ಶಿರದೊಳು ಪೂಜೆ
ಇಲ್ಲಿ ಮದನಾರಿಗರರೆ ಲಿಂಗದೊಳು ಪೂಜೆ
ಇಂತುಂ ವಿರೂಪಾಕ್ಷನೆ ದೇವರೊಳ್ ಘನಂ
ಎಂತುಂ ಮಹಾದೇವ ವೇದದೋಳ್ ಘನಂ

ಮಾತೆ ಪಾರ್ವತಿ ತಂದೆ ಶಿವನಲ್ಲದಿನ್ನಿಲ್ಲ
ಏತಕ್ಕೆ ಬರಿದೆ ಗಳಹಲ್ಬೇಡ ಮತ್ತಿಲ್ಲ
ಅದಕೆ ಕರುಪೆಲ್ಲರ್ಗೆ ಲಿಂಗಾಂಕಿತಂ ನೋಡ
ಅದಕೆ ಕುರುಹೆಲ್ಲರ್ಗೆ ಶಕ್ತ್ಯಂತಿಕಂ ನೋಡ
ಹಲವು ಮಾತೇಕೆ ವಶವೆ ಶಿವನುನ್ನತಂ
ಎಲೆಲೆ ವೇದಾಗಮಪ್ರತತಿಗತ್ಯೂರ್ಜಿತಂ
ವೇದದೊಳು ಶಾಸ್ತ್ರದೊಳು ನಾದಮಯನೇ ಘನಂ
ವಾದದೊಳು ವಚನದೊಳು ವೇದಮಯನೇ ಘನಂ
ಆಗಮ ಪುರಾಣದೊಳು ನಾಗಕಟಿಕನೇ ಘನಂ
ಚಾಗದೊಳು ಚರಿತದೊಳು ಚಂದ್ರಧರನೇ ಘನಂ
ಮಂತ್ರದೊಳು ತಂತ್ರದೊಳು ಮಂತ್ರಮಯನೇ ಘನಂ
ಯಂತ್ರದೊಳು ಯಾಗದೊಳು ಸ್ವಾತಂತ್ರನೇ ಘನಂ
ಅಂತಿಂತುವೆಂತುವುಂ ವಿರೂಪಾಕ್ಷನೆ ಘನಂ
ಕಂತುಹರನೆಮ್ಮಯ ವಿರೂಪಾಕ್ಷನೆ ಘನಂ

ಎಂದಿಂತು ಪೇಳ್ದಪೆಂ ಮಹಿಮಾವಲಂಬಮಂ
ಇಂದುಧರ ನಿಮ್ಮ ಘನಸಂದೋಹಸಾಮರ್ಥ್ಯಮಂ
ಹರಿ ಬೊಮ್ಮರರಸಿ ಕಾಣರು ದೇವ ಎನ್ನಳವೆ
ನೆರೆದ ವೇದಪ್ರಕರವರಿಯವೆನಲೆನ್ನಳವೆ
ಸ್ತುತಿಯಿಸುವ ನೆವದಿಂದ ನಿಂದಿಸಿದನೆನಬೇಡ
ಮತಿಯ ಪವಣಿಂಗೆಯಾಂ ಮಹಿಮನೆಂದೆನಬೇಡ
ಆದಡೆನ್ನಯ ತಪ್ಪನೊಪ್ಪವಿಡುವುದು ತಂದೆ
ಆದಿಯ ಪುರಾತನರ ತೊತ್ತೆಂಬುದೆಲೆ ತಂದೆ
ದೇವ ದೇವರ ಗತಿಯೆ ದೇವ ದೇವರ ಮತಿಯೆ
ದೇವ ದೇವರ ಮತಿಯೆ ದೇವ ದೇವರ ಪತಿಯೆ

ರಕ್ಷಿಸು ವಿರೂಪಾಕ್ಷ ಶಿಕ್ಷಿಸು ವಿರೂಪಾಕ್ಷ
ಲಾಲಿಸು ವಿರೂಪಾಕ್ಷ ಪಾಲಿಸು ವಿರೂಪಾಕ್ಷ
ದಯೆಗೆಯ್ ವಿರೂಪಾಕ್ಷ ಭಯಹರ ವಿರೂಪಾಕ್ಷ
ಜಯಜಯ ವಿರೂಪಾಕ್ಷ ಜಯತು ಜಯ ನಮಸ್ತೇಸ್ತುನಮಃ

**ಕಂದಃ—**

ಆವನ ಸತಿ ಜಗ ಪಾವನ ।
ಆವನ ವಾಹನದಿ ಜಗವು ಜೀವಿಸುತಿರ್ಪುದು ।
ಆವನ ಕಣ್ಣಿಂ ಕಾಂಬುದು ।
ದೇವ ವಿರೂಪಾಕ್ಷಗಲ್ಲದಿತರರ್ಗುಂಟೇ ।

---

# ವೀರಭದ್ರ ದೇವರ ರಗಳೆ

**ಕಂದಃ—**

ಪಿರಿದುಂ ಬಗೆಯದೆ ದಕ್ಷಾ
ಧ್ವರಮಂ ನಿರ್ಧೂಮಧಾಮಮಂ ಮಾಡಿ ಸುಧಾ
ಕರಧರನ ವಿರೂಪಾಕ್ಷನ
ಚರಣವನೈತಂದು ವೀರಭದ್ರಂಕಂಡಂ

### ರಗಳೆ

ಶ್ರೀರಜತಗಿರಿಯೊಳುಪ್ಪುವ ಸಭಾನಿಳಯದೊಳು
ಮಾರಾರಿ ಹಂಪೆಯ ವಿರೂಪಾಕ್ಷನೊಪ್ಪದೊಳು
ಭೂತೇಶನಪ್ರತಿಮರೂಪನೊಪ್ಪುತ್ತಿರ್ದ
ನಾತನೊಡ್ಡೋಲಗವನೇನೆಂಬೆನೆಸೆದಿರ್ದ

ಲಕ್ಷ್ಮೀಸರಸ್ವತಿಗಳಂದೊಸೆದು ಚಾಮರವಿಕ್ಕೆ
ಸುಕರದಿಂದ್ರಾಣಿ ನಲಿದು ಸೀಗುರಿಯಿಕ್ಕೆ
ರಂಭೆಯೂರ್ವಶಿತಿಲೋತ್ತಮೆ ಮಂಜುಘೋಷೆಯರು
ಶಂಭುವಿನ ಕೆಲಬಲದೊಳುಪ್ಪುವತಿವೀರೆಯರು
ತರದಿಂದೀ ವಾರವನಿತೆಯರ್ಕುಳ್ಳಿರಲು

ಸುರನಾರಿಯರ್ಸವುಚಿತಾಸನದೊಳೊಪ್ಪಿರಲು
ಕರಿವದನನುಂ ತಾರಕಾರಿಯುಂ ಬಂದಿರಲು
ಸರಸಿಜಭವಂ ಸರಸಿಜೋದರಂ ಬಂದಿರಲು
ಕೆಲಬಲದೊಳೊಪ್ಪದಿಂ ಅಮರಗಣನಾಯಕರು
ಛಲಿಗಳಪ್ರತಿಮರತಿರಥರುಗ್ರನಾಯಕರು
ಸಚರಾಚರವನಳಿವ ಮಾಡುವಾ ನಾಯಕರು
ಅಚಲರಭವರ್ತಮತಮಗೆ ಮುಖ್ಯರತಿಶಯರು
ಕಂತುಹರನಾಪ್ತಪರಿವಾರವೆಂದೆನಿಸಿರ್ಪ
ಸಂತತಂ ಪರಮಂಗೆ ಪರಮ ಬಂಧುಗಳಪ್ಪ
ನೆನೆವ ಮನವೀವ ಕೈವಿಡಿವ ಕೈದುಗಳೆನಿಪ
ತನಿನೇಹದಿಂ ನೆರೆವ ಕಡು ಬಾಕುಳಿಗಳೆನಿಪ
ಪುರವಂ ಕ್ಷಣಾರ್ಧದೊಳ್ಸುಟ್ಟ ಶರಣರ್ಕೆಲರು
ಶರಭರೂಪಾಗಿ ತಲೆದಂದ ಶರಣರ್ಕೆಲರು
ಲೀಲೆಯಿಂ ಮನಸಿಜನನುರುಪಿದರ್ಕೆಲರಲ್ಲಿ
ಕಾಲನಂ ಕೋಪದಿಂ ಸುಟ್ಟವರ್ಕೆಲರಲ್ಲಿ
ಸಿಡಿಲ ಬಳಗಮನೊಂದುಗೂಡಿ ಗಡಣಿಸಿದಂತೆ
ವೃಡನತಿಬಲಂ ಬೇರೆ ಬೇರೆ ರೂಪಾದಂತೆ
ಕೆಲರೆ ಸಾಲೋಕ್ಯದರ್ಕೆಲರೆ ಸಾಮೀಪ್ಯದರ್
ಕೆಲರೆ ಸಾರೂಪ್ಯದರ್ಕೆಲರೆ ಸಾಯುಜ್ಯದರ್
ಹೊಗಳಲೆನ್ನಳವೆ ಗುರು ವಿರುಪಾಕ್ಷನಣುಗರಂ
ಜಗೆಗಗೋಚರವೆನಿಪ ಶಿವಲಿಂಗಸೊಬಗರಂ
ಇಂತೆಸೆವ ನಂದೀಶ್ವರಾದಿ ಗಣತತಿ ಬಂದು
ಕಂತುಹರನಿಕ್ಕೆಲದೊಳೆಸೆಯೆ ನಲವಿಂ ನಿಂದು
ಭೃಗುವು ದೂರ್ವಾಸದಧೀಚಿಕಶ್ಯಪರೆಂಬ
ಮಿಗೆ ಭಗೀರಥ ಜಹ್ನು ಜಮದಗ್ನಿ ಶುಕರೆಂಬ
ಜೈಮಿನಿವಶಿಷ್ಠಮಾರ್ಕಂಡೇಯರೆಂದೆಂಬ
ರೋಮಜನು ಜಾಬಾಲ ಗಾರ್ಗ್ಯ ಗೌತಮರೆಂಬ
ತರದಳೊಪ್ಪುವ ರಾಜರುಷಿ ದೇವರುಷಿಗಳಿಂ
ಪರಮ ಕಾರಣಿಕರೆನಿಪಾ ಬ್ರಹ್ಮರುಷಿಗಳಿಂ

ಸುರಪ ಶಿಖಿಯಮ ನೈಋತಾಪ್ಪತಿಗಳೆಂಬರಿಂ
ನರವಾಹನೀಶಾನರೆಂಬ ದಿಕ್ಪಾಲರಿಂ
ಇರೆ ಸುರರು ದನುಜ ವಿದ್ಯಾಧರರ ವೀಧಿಗಳು
ನೆರೆದ ಗಂಧರ್ವರ ಫಣೀಶ್ವರರ ಪಂಙ್ತಿಗಳು
ಮೆರೆಯಲಜಕೋಟಿ ಪಂಕಜನಾಭ ಕೋಟಿಗಳು
ತುರುಗಿ ರವಿಕೋಟಿಗಳು ಶೀತಾಂಶುಕೋಟಿಗಳು
ಎಸೆವುತಿರೆ ಸಾಲಿಟ್ಟ ಮಕುಟಂಗಳೊಂದು ದೆಸೆ
ಒಸೆದೊಸೆದು ಕೈಮುಗಿವ ಯಕ್ಷತತಿಯೊಂದು ದೆಸೆ
ಕಿವಿಗುಡುವದೆಮಗೆಂಬ ನಾದಂಗಳೊಂದು ದೆಸೆ
ತವಕದಿಂ ತುತಿಯಿಸುವ ವೇದಂಗಳೊಂದು ದೆಸೆ
ಧರೆ ಜಲಂ ಸಪ್ತಾರ್ಚಿ ವಾಯುವಾಕಾಶದಿಂ
ಖರಕಿರಣ ಹಿಮಕಿರಣ ಆತ್ಮಸಂತಾನದಿಂ
ಬೆಸವೇಳ್ದುದಂ ಬಯಸುವಣಿಮಾದಿ ನಿಕರದಿಂ
ಬೆಸಸು ಬೆಸಸೆಮಗೆಂದೆಂಬ ಸಾಮರ್ಥ್ಯವೊತ್ತದಿಂ
ಪವಣಿಸುವಡರಿದೆನುತಿರ್ಪ ಶಾಸ್ತ್ರಂಗಳಿಂ
ತಮ ತಮಗೆ ಹೊಗಳುತೊಪ್ಪುವ ಪುರಾಣಂಗಳಿಂ
ಮೌನದಿಂ ನಿಂದಿರ್ಪ ತರ್ಕಸಂದೋಹದಿಂ
ಧ್ಯಾನಿಸುತ್ತಿರ್ಪ ಸಕಲಾಗಮವ್ಯೂಹದಿಂ
ಹತ್ತೆ ಸಾರ್ದೋಲಗಿಪ ಚೆಲ್ವುಗಳ ವೊತ್ತದಿಂ
ಮುತ್ತಿ ಬಂದೋಲಗಿಪ ಸಂಪನ್ನಿಕಾಯದಿಂ
ತರತರಂಗೊಂಡಿರ್ಪ ಪುಣ್ಯ ಸಂತಾನದಿಂ
ನೆರೆನೆರೆದು ಬರುತಿರ್ಪ ಬಯಕೆಗಳ ವೊತ್ತದಿಂ
ನಲಿದು ಬಂದೋಲಗಿಪ ಸಕಲ ಸುಖನಿಕರದಿಂ
ಸಲೆ ಕೈಮುಗಿಯುತಿರ್ಪ ವೀರಗಣನಿವಹದಿಂ
ಕಡೆ ಕಡೆಯೊಳೋಲಗಿಪ ಜಸವೆಣ್ಗಳಿಕ್ಕೆಯಿಂ
ಬಿಡದೆ ತೋಳ್ಗಳನೋಲಗಿರ್ಪ ಜಯತತಿಗಳಿಂ
ಚರಣಮಂ ಪಿಡಿದಿರ್ಪ ಮಂಗಳದ ಪಂಙ್ತಿಯಿಂ
ಹರವರಿಯೊಳುರಿವ ತೇಜಂಗಳಿಕ್ಕೆಯಿಂ
ಕಡೆಗಂಗಳಂ ಬಯಸುತಿರ್ಪ ಕಾರುಣ್ಯದಿಂ

ವೃಡನ ವರವಂ ಪಾರ್ದು ನಿಂದಿರ್ಪ ಭಾಗ್ಯದಿಂ
ಎನಗೆ ತನಗೆನುತಿರ್ಪ ಭೋಗಂಗಳೊಗ್ಗಿನಿಂ
ತನತನಗೆ ನಲಿವ ಗಣಪದವಿಗಳಗುರ್ವಿನಿಂ
ನಿರ್ವಿಕಾರದೊಳಿರ್ಪ ಶಾಂತಿಗಳ ಕೊರ್ವಿನಿಂ
ಶರ್ವನಂ ಬಯುಸುತಿರುತಿರ್ಪ ಮಂಗಳದಗುರ್ವಿನಿಂ
ಬೆಳಗನುಗುಳುತ್ತಿರ್ದ ಕಾಂತಿಗಳ ಬಳಗದಿಂ
ತಿಳಿಯುಲೆಂದಿರ್ದಖಿಳ ವಿದ್ಯಾಸಮೂಹದಿಂ
ಸಾರೆ ಬಂದೋಲಗಿಸಲೆಂದಿರ್ದ ನೃತ್ಯದಿಂ
ಕಾರುಣ್ಯಮಂ ಬಯಸಿ ನಿಂದಿರ್ದ ಸತ್ಯದಿಂ

ಇಂತು ಸಕಲೈಶ್ವರ್ಯದುನ್ನತವನೊಳಕೊಂಡ
ನಂತಂತೆ ಹೊಗಳಲಾರದ ಘನವನೊಳಕೊಂಡ
ದೆಂತೆಂತು ಉಪಮೆಗಗ್ಗಳವಾದುದಾಸ್ಥಾನ
ವಂತಂತೆ ಮೆರೆದುದು ವಿರೂಪಾಕ್ಷನಾಸ್ಥಾನ

ವಾ ಸಮಯದೊಳು ದಂಡಧರರೆಂಬ ಭಟರಲ್ಲಿ
ವಾಸವನೆ ನುಡಿ ಬೇಡ ಸಂತವಿರು ನೀನಿಲ್ಲಿ
ಕಾಯ್ಪನುಡುಗಗ್ನಿ ಹೆರೆಸಾರ್ಕಾಲ ಕೌಣಪನೆ
ಸೈಪಿನೊಳಿರಬ್ಧಿಪತಿ ಸುಳಿಯದಿರ್ಮಾರುತನೆ
ತೆರಹುಗುಡು ಗಂಧರ್ವರಾಜ ಕಿನ್ನರಪತಿಗೆ
ಬರಿದೆ ಗಳಪದಿರುಎಲವೋ ಬೊಮ್ಮನಿನ್ನುತಿಗೆ
ಬಿನ್ನವಿಸು ಮನ್ನಣೆಯ ವನಜಾಕ್ಷ ಕೈಮುಗಿದು
ನಿನ್ನ ಹೆಡೆಗಳನುಡುಗಿ ನಿಲ್ಲಹಿಪ ಹೆರೆ ತೆಗೆದು
ಕಳಕಳವಿದೇಕೆ ಮಾಣ್ಮಾಣು ಹೋ ಹೋ ಎನುತೆ
ಅಳವಲ್ಲ ಸಂತೈಸಬಾರದಾಹಾ ಎನುತೆ
ಇವನಾವ ಬೊಮ್ಮಾಂಡದಬ್ಜಜಂ ಹೇಳೆಂದು
ಇವನಾವ ಬೊಮ್ಮಾಂಡದಬ್ಜೋದರನುಮೆಂದು
ಆವಾವ ಸ್ವರ್ಗಂಗಳಿಂದ್ರರ್ಕಳಿವರೆಂದು
ಆವಾವ ಲೋಕದವರೀ ಮಹಾ ನೃಪರೆಂದು

ಇಂತು ಪಡಿಯರರ್ತವ್ಮೊಳ್ನುಡಿವ ಸಮಯದೊಳು
ಮುಂತೆ ತುಂಬುರನಾರದರ್ಮಧ್ಯ ರಂಗದೊಳು

ನವವೀಣೆಯಂ ಬಹುಸುಗತಿ ಸುಸ್ವರಂಬಡೆಯೆ
ವಿವಿಧ ರಾಗಂಗಳನ್ನ ಶಕ್ತಿಗಳ್ತಡೆಯೆ
ಕೆಯ್ಯ ಮನವಾದ ತೆರದಿಂ ಬಾರಿಸುತ್ತಮಿರೆ
ಸುಯ್ಗಳಂ ಮರೆದೋಲಗಂ ನಾಡೆ ಕೇಳುತಿರೆ
ಇಂತು ತುಂಬುರನಾರದರ್ವಿರೂಪಾಕ್ಷನಂ
ಸಂತಸದೊಳೋಲಾಡಿಸುತ್ತ ವಿಷಮಾಕ್ಷನಂ
ಕೇಳಿಸಿದ ನಂತರಂ ಕಿನ್ನರರ್ಸವಿಗೂಡಿ
ಮೇಳೈಸುತಾರೈಸಿ ಸಭೆಗೆ ಹರುಷಂ ಮೂಡೆ
ಮನದೊಳಗೆ ಕಾಂತಿಯಂ ಸರಿಗೆದೆಗವಂದದಿಂ
ಕೊನೆ ಮಿಂಚಿನೋಳ್ಶಾಂತಿಲತೆ ಹುಟ್ಟಿದಂದದಿಂ
ಬೋಳೈಸಿ ರಾಗಂಗಳಂ ಕರೆವ ಮಾಳ್ಕೆಯಿಂ
ಮೇಳೈಸಿ ನೆರೆದ ಸಭೆ ಕರುವಿಟ್ಟ ಮಾಳ್ಕೆಯಿಂ
ಕಿವಿಯೊಡ್ಡಿ ಕೇಳುತಿರೆ ಚಿತ್ತಮಂ ಮಿಗೆ ಸಲಿಸಿ
ಕಿವಿಯು ಬಳಸಂದುವಿಂದ್ರಿಯಚಯಂ ತಲ್ಲಣಿಸಿ
ಸಭೆಯೊಂದೆ ಮನವಾದ ಮಾಳ್ಕೆಯಿಂ ಕೇಳುತಿರೆ
ಆಭವನಂ ಸುಖದ ಮರಹಲ್ಲಲ್ಲಿ ನೆರೆವುತಿರೆ
ಅಂತು ಮುನ್ನಿನ ಪರಿಯೊಳಿರ್ದುದಾ ದೇವಸಭೆ
ಅಂತಿರ್ದುದಾಗಳಿವೆ ಮಿಡುಕದಾ ಪರಮ ಸಭೆ
ಇಂತು ಸಭೆಯಂ ಸುಖದ ಸ್ವೈರಗಿನೊಳಗಿಟ್ಟು
ಸಂತಸದಿ ನಾದರಸದೊಳ್ಚಿತ್ತಮಂ ಸಲಿಸಿ
ರಾಗದಿಂ ಕಿನ್ನರರ್ಪಾಡಿ ತಂದುಂ ಮೆರೆಯೆ
ರಾಗಂಗಳಂದಮೃತನಾದಂಗಳಂ ಕರೆಯೆ
ತನತನಗೆಸೆವ ಮಧ್ಯಮಾದಿ ಭೂಪಾಳಂಗ
ಳನು ರಾಗದೋದೆ ದೇಶಾಕ್ಷಿ ಪಲಮಂಜರಿಗ
ಳಾದಿಯಾಗಿರ್ದ ಬಹು ರಾಗಂಗಳಲ್ಲಲ್ಲಿ
ನಾದದಿಂ ಕೇಳಿಸೆ ಹರಂ ಸುಖದೊಳಿರಲಲ್ಲಿ
ನಾದದುನ್ಮತ್ತಮಾದುದು ದೇವ ಸಭೆಯೆಲ್ಲ
ನಾದಮೂರ್ತಿ ಎನಿಸಿದನಂದು ಗಿರಿಜೆಯ ನಲ್ಲ
ಏನೆಂಬೆನೋಲಗಂ ಜೊಮ್ಮಿನೊಳಗಿರ್ದಂತೆ

ಜೇನ ಸರಿ ಮಳೆಗೆ ನಾಡೆ ನಾಂದಿರ್ದಂತೆ
ರಾಗರಸದೊಳಗೆ ಮುಳುಗಿರ್ದುದೊಡ್ಡೋಲಗಂ
ರಾಗದಿಂದಿರ್ದನಭವಂ ಸುಖದ ಮೂಲಿಗಂ

ಇರಲಿತ್ತ ಹಂಸೆ ಚಕ್ರಂ ಸುಖದೊಳೊಲಿದಿರ್ಪ
ಸರಸಿಗೆ ಬಕಂ ನೋಡಲೆಂದು ಮೆಲ್ಲನೆ ಬರ್ಪ
ತೆರದಿಂದೆ ಬಂದು ದಕ್ಷಂ ಸಭೆಯ ನಡುವೆ ನಿಲೆ
ಕರೆಗೊರಲನವನನೀಕ್ಷಿಸದೆ ಸುಖದಿಂದೆ ನಿಲೆ
ಮರೆದು ಕೇಳುತ್ತಮಿರೆ ಮನ್ನಿಸನಳಿಯನೆಂದು
ಪೊರಮಟ್ಟನಲ್ಲಿಂದೆ ಮುಳಿದು ನಿಂದಿಸುತಂದು
ಪರಮಾಣು ಮೇರುವಿನ ಹೆಂಪಿಂಗೆ ಮುಳಿವಂತೆ
ಸರಸಿ ಸಾಗರದ ಗಾಂಭೀರ್ಯಕ್ಕೆ ಮುಳಿವಂತೆ
ತರಗೆಲೆ ದವಾನಲನ ಕಾಯ್ಪಿಂಗೆ ಮುಳಿವಂತೆ
ಗರುಕೆ ಕಲ್ಪದ್ರುಮದ ಸಂಪದಕೆ ಮುಳಿವಂತೆ
ಇರದೆ ಮಿಂಚುಂಬುಳು ದಿನೇಶಂಗೆ ಮುಳಿವಂತೆ
ಪುರಹರಂಗಕಟಕಟ ದಕ್ಷ ಮುಳಿಯುತ್ತಿಂತೆ
ಬರುತೆಂದನೆನ್ನನಪಮಾನಂಗೆಡಿಸಿದಂತವನ
ನಿರದೆ ಭಂಗಿಸುವೆ ನಾನ್ಯೈದೆ ಹೆರೆಸೂಡಿದನ
ನೆಂದು ತನ್ನಾಶ್ರಮಕೆ ಗಳಗಳನೆ ನಡೆತಂದು
ನೊಂದು ನುಡಿದಂ ವಿಶ್ವಕರ್ಮಂಗೆ ನೀನೊಂದು
ಯಾಗಮಂಟಪವನೆತ್ತೆಂದು ಪೇಳ್ವನಿತಕ್ಕೆ

ಬೇಗದಿಂ ನೆಗೆದುದಾಗಳೆ ಭೂಮಿವಳೆಯಕ್ಕೆ
ಭೂಮಿಗೆ ವಿಚಿತ್ರವಾದುದು ಮಂಟಪಂ ನೋಡ
ಹೋಮಕುಂಡಂ ಸುಡುವ ಮುಳ್ಳೆಳ್ಳುಗಳ್ಕೂಡೆ
ನಡುವೆ ಯೂಪಸ್ತಂಭವಿಂಬಿನಿಂ ಮೆರೆವುತಿರೆ
ಕೊಡದಿಂದ ತಮ ತಮಗೆ ನವಘೃತವನಡುಕುತಿರೆ
ಕರೆಸಿದಂ ಪೆಣ್ಮಕ್ಕಳಳಿಯಂದಿರಂ ಕೂಡೆ
ಬರಿಸಿದಂ ಹರಿಯಜಪುರಂದರರುಮಂ ಕೂಡೆ
ಧಿಗಧೀಶರಂ ತ್ರಿದಶರಂ ದಿವ್ಯ ಮುನಿಗಳಂ

ಜಗದೊಳುಳ್ಳರಸುಮಕ್ಕಳನೆಸೆವ ಮನುಗಳಂ
ದ್ವಿಜಮುಖ್ಯರಂ ಬರಿಸಿ ನಿಜವರ್ಗಮಂ ತರಿಸಿ
ದ್ವಿಜರಾಜನಂ ರವಿಯುಮಂ ವಸುಗಳಂ ಬರಿಸಿ
ಪುರಹರಂ ಗಿರಿಜೆ ಗಣನಾಯಕರು ಹೊರಗಾಗೆ
ನೆರಪಿದಂ ಪಾತಕಜನವನವನಿ ಬೆರಗಾಗೆ
ಹೊರಗೆ ಕಾಪಿಟ್ಟು ಶಕ್ರಾದಿ ದಿಕ್ಪಾಲರಂ
ನೆರೆ ಪೇಳ್ದು ತಾನಲ್ಲಿ ಕೂಡೆ ಭೂಪಾಲರಂ
ಬಂದು ದಕ್ಷಂ ಬ್ರಹ್ಮಸಭೆಗೆ ಕೈಮುಗಿದೆನಗೆ
ಒಂದು ಯಾಗವನೊಡರ್ಚುವುದಕ್ಕೆ ನಿಮನಿಮಗೆ
ಕರುಣಿಪುದನುಜ್ಞೆಯಂ ಕೊಡುವುದೆಂದೆನುತಮಿರೆ

ವರಮುನಿ ದಧೀಚಿ ನುಡಿದಂ ಸಭೆಯ ನಡುಗುತಿರೆ
ಉಸುರಿಲ್ಲದೊಡಲಂತೆ ರವಿ ಪುಗದ ನಭದಂತೆ
ಶಶಿಯಿಲ್ಲದಿರುಳಂತೆ ಹವಿ ಪುಗದ ಮುಖದಂತೆ
ಹರನಿಲ್ಲದೊಪ್ಪದೀ ಯಾಗವನುರಾಗದಿಂ
ಕರೆದು ಬಿಜಯಂಗೈಸಿ ತರ್ಪುದತಿವೇಗದಿಂ
ಎನೆ ದಕ್ಷನುರಿಯೊಳಗೆ ತುಪ್ಪವಂ ಹೊಯ್ದಂತೆ
ಮುನಿದು ಭುಗಿಲೆನುತೆ ನುಡಿವರ ಸಭೆಯ ಮುಂತೆ
ಹರನೀ ಸಭೆಯ ನಡುವೆ ಕುಳ್ಳಿರಲು ಯೋಗ್ಯನೇ
ಗೊರವನಂ ಪೆಸಗೊಳ್ಳಿರಿಲ್ಲಿಗೆ ಸಭಾಗ್ಯನೇ
ಸುರರಸ್ಥಿಮಾಲೆಯಂ ಕೊರಲೊಳಿಟ್ಟಿರ್ಪನಂ
ಕರೆವರೇ ಭೀ ಪುಲಿಯ ತೊವಲನುಟ್ಟಿರ್ಪನಂ
ಮರೆದು ಮಗಳಂ ಕೊಟ್ಟೊಡನಿತಂದಾ ಧೂರ್ತ
ಮರೆವನಪ್ಪನೆ ಪಿತಗನಿನ್ನೆಮಗೆ ಬೇಡಾತ
ನುಡುಗು ಹೋ ಮುನಿಪತಿ ನಿನಗೀವೊಂದು ಮಾತೆಂದು
ನುಡಿಯಲ್ದಧೀಚಿಗಂಕುರಿಸೆ ಕೋಪವದಂದು

ಇಟ್ಟೊರಸಿ ಕಳೆಯಲ್ಬಗೆದನವನ ಜನ್ಮಮಂ
ನೆಟ್ಟು ಹರಗಲ್ಬಗೆದನವನ ಕುಲವೆಲ್ಲಮಂ
ನೋಡಿದವನಾಗತ ಜ್ಞಾನದಿಂದಂ ನಿಂದು .

ಮಾಡುವವನೊಬ್ಬನುಂಟೆಂದು ಸ್ಮರಿಸಿ ನಿಂದು
ಕೇಳಿಲೆಪೊ ದಕ್ಷ ನೀನಂಜದೆನ್ನಯ ಮುಂದೆ .
ಭಾಳಾಕ್ಷನಂ ಸ್ವಾಮಿಯುಂ ದೇವನಂ ಕುಂದೆ
ನುಡಿಯುದಕ್ಕೇನದಕ್ಕೇನೆಲವೊ ಕುಳ್ಳಿರ್ದು
ಉದುಕುಳಿಗಳಂ ದಿಟಂ ಗಡ ದೈವವೆಂದಿರ್ದು
ಕುನ್ನಿಗಳನೇ ನೆಚ್ಚಿ ಜನ್ನಮಂ ತೊಡಗಿದೈ
ಇನ್ನೇನು ಹಸನಾಯ್ತು ಹರಣಮಂ ನೀಗಿದೈ
ಇವನ ನುಡಿಯುಂ ಕೇಳ್ದು ಮರುಮಾತು ಕುಡದವರ್ಗೆ
ಶಿವಭಕ್ತಿಯಾಗದಿರ್ಕೆಂದುಮಿಂತೀ ದ್ವಿಜರ್ಗೆ
ಈ ಪಾತಕನ ಮುಖಂ ಕಡೆಮುಟ್ಟದಿರ್ಕೆಂದು
ಶಾಪಮಂ ಕೊಡು ಕೇಳ್ದರಿಲ್ಲಿ ಎಮಗೇನೆಂದು
ಅಗಳ್ಮಹಾ ಮುನಿ ದಧೀಚಿಯೊಡನೆದ್ದವರು
ರಾಗದಿಂದರುವರುಂ ಶಾಪವರ್ಜಿತರವರು
ಉಪಮನ್ಯು ದೇವಲನಗಸ್ತ್ಯ ಗೌತಮರೆಂದು
ಕುಪಿತದಿಂದಂ ಒರೆ ವಶಿಷ್ಠನುಂ ಭೃಗುವಂದು
ನಡೆದಂ ದಧೀಚಿಮುನಿ ತನ್ನಾಶ್ರಮಕ್ಕೆಂದು
ನೃಪನರಸಿಗರುಪಲಿತ್ತಂ ನಾರದಂ ಬಂದು

ತಂದೆ ಮಾಡುವ ಜನ್ನಮಂ ನೋಡಲೆಂದಗಜೆ
ಇಂದುಮೌಳಿಗೆ ಬಿನ್ನಪಂ ಮಾಡಲಾ ಗಿರಿಜೆ
ಬೇಡಮಂ ಬಗೆಯನಲ್ಲೆಲೆ ಗೌರಿ ಹೋಗದಿರು
ನಾಡೆ ಮೂರ್ಖಂ ಜರಿವನೆಲೆ ಭಕ್ತೆ ಹೋಗದಿರು
ಬೇಡೆಂದು ಬೆಸಸುತಿರೆ ಕೇಳದೆ ಮಹಾದೇವಿ
ಕೂಡೆ ಕರಿಸಿದಳಮೃತಕರಮುಖಿಯರಂ ದೇವಿ
ಕರೆಯಿಸಲ್ಬಂದರ್ವಿದಗ್ಧೆಯರ್ಮುಗ್ಧೆಯರ್
ಪುರನರಸಿಯೊಡನೈದೆ ಬಂದರತಿ ನೀರೆಯರ್
ನೆರೆದು ಬಂದರ್ನಲಿದು ಕನ್ನೆಯರ್ ಚನ್ನೆಯರ್
ಹರುಷದಿಂ ಸಲೆ ನಲಿದು ಬಂದರಾ ನೀರೆಯರ್
ಕಳಹಂಸಯಾನದಿಂ ನಡೆದು ಬಂದರ್ಸತಿಯ
ರಳಿಕುಂತಳೆಯರಲ್ಲಿ ರತಿಯ ರೂಪಾನ್ವಿತೆಯ

ಪತಿರಹಿತನರಸಿಯೊಡನೈತಂದರೊಪ್ಪದಿಂ
ಅತಿಶಯದಿ ಮಿಗೆ ಸಿಂಗರಂ ಮಾಡಿ ಬೇಗದಿಂ
ಅಸಮಾಕ್ಷನರಸಿ ಚಿತ್ತೈಸೆ ಮಿಗೆ ಹರುಷದಿಂ
ಒಸೆದು ಬಿಜಯಂಗೈವುವೆನೆ ದೇವಿ ರಾಗದಿಂ
ನಂದಿಕೇಶ್ವರನ ಬೆನ್ನೊಳು ಸುಖಾಸನವಿತ್ತು
ಇಂದುಮುಖಿ ಕೆಲಬಲದ ಸತಿಯರ್ಗೆ ಮೊಗವಿತ್ತು
ನಡೆವಾಗಳಬಲೆಯರುಘೇ ಚಾಂಗು ಬೊಲ್ಲೆಂದು
ನಡುವೆ ಸಂದಣಿ ರಂಬೆ ಹೆರಸಾರ್ದು ಬಾರೆಂದು
ಕೆಲಬಲದಿ ನಡುವೆ ನಡೆವೂರ್ವಸಿಗಳೆಂದೆಂಬ
ಎಲೆಲೆ ಖೇಚರಿಯೆಂದುದೇವಿಯವಧಾರೆಂಬ
ಚಮರಮಂ ಸೈತಿಕ್ಕು ಲಕ್ಷ್ಮಿ ಸೈತಿರುಯೆಂಬ
ಅಮರ್ದು ಶಚಿ ನೀ ನೋಡಿ ಸೀಗುರಿಯನಿಕ್ಕೆಂಬ
ಸಸಿನೆತ್ತು ಬೆಳುಗೊಡೆಗಳಂ ಚಂದ್ರವಧುವೆಂಬ
ಒಸೆದು ಬರ ತಿರ್ಪ ಕಿನ್ನರಿಯರಂ ಪಾಡೆಂಬ
ಕಳಕಳ ನಿನಾದಂಗಳೊಪ್ಪೆ ಸತಿಯರ ನಡುವೆ
ಸುಳಿವ ಗಂಧರ್ವ ಲಲನ ಕೋಟಿಗಳ ನಡುವೆ
ನಡೆತಂದಳಿಂದುವಿನ ಬೀಡು ಪೊರಮಟ್ಟಂತೆ
ನಡೆತಂದಳೆಳೆವಳ್ಳಿ ಬನವೊಲ್ದು ಬರ್ಪಂತೆ
ಸಕಲ ದೇವತೆಗಳಧಿದೇವತೆಯು ಬರುತಿರ್ದ
ಅಕಳಂಕ ಚಂದ್ರಧರನರ್ಧಾಂಗಿ ಬರುತಿರ್ದ
ಇಂತು ಬರೆವರೆ ಕಾಣಲಾಯ್ತು ದಕ್ಷನ ನಾಡು
ಮುಂತೆ ಬರೆವರೆ ಮುಂದೆ ಸಂದುದಾತನ ಬೀಡು

ಬಂದು ಪಟ್ಟಣವಂ ವಿಳಾಸದಿಂ ಪುಗುತಿರಲ್
ಮುಂದೆ ಇದಿರ್ಗೊಂಬರಿಲ್ಲದೇನೆನುತ್ತಲಂದು
ಒಡನೈದಿಬರ್ಪ ಸಂಗಡದ ಸತಿಯರ್ವೆರಸಿ
ನಡೆತಂದು ನಂದಿಯಿಂದಿಳಿದು ಪುರಹರನರಸಿ
ರಾಹುವಿನ ಮುಂದೆ ಶಶಿಕಳೆ ಬಂದು ನಿಲುವಂತೆ
ಸಾಹಸದ ದಳ್ಳುರಿಯ ಮುಂದೆ ಲತೆ ನಿಲ್ವಂತೆ
ತಂದೆ ದಕ್ಷನ ಮುಂದೆ ರುದ್ರಾಣಿ ನಿಲುತಿರಲ್

ಮುಂದುಗಾಣದ ಕೋಪಿ ನೋಡದೆ ತಿರುಗುತಿರಲ್
ಎತ್ತಲಾ ದೇವಿ ಬಂದತ್ತತ್ತ ತಿರುಗುತಿರೆ
ಸುತ್ತಿಬರೆ ದಕ್ಷನತಿ ವಿಮುಖನಾಗುತ್ತಮಿರೆ
ಮಗಳೆಂಬ ಸಲುಗೆಯಿಂದಂ ಮುಂದೆ ನಿಲುತಮಿರೆ
ಬಗೆಯುದಗಜೆಯುನವಂ ಬಯ್ಯೆ ಸಭೆ ಕೇಳುತಿರೆ
ಹೇಳಬಾರದು ನರಕಿ ಪಾಪಿ ಸುಡು ನುಡಿಗಳಿಂ
ಭಾಳಾಕ್ಷನಂ ನಿಂದಿಸಿದನೊಲ್ಪು ಪರಿಗಳಿಂ
ತನ್ನನೇನೆಂದೊಡಂ ತಾನದಕೆ ಸೈರಿಸಿದ
ಳನ್ಯಾಯದಿಂ ಶಿವನನೆಂದೊಡೆ ದೇವಿ ಕೋಪಿಸಿದ
ಳೊಳಗೊಳಗಳಲ್ದಳ್ಬಳಲ್ದಳ್ಮಹಾದೇವಿ
ಹಳವಳಿಸಿ ಕಣ್ಗೆಟ್ಟು ಕರಗುತಿರ್ಪಳ್ದೇವಿ
ಸುಯ್ಯೊಡನೆ ಕಿಡಿ ಪೊರಮಡುತ್ತಮಿರೆ ಸುಯ್ಯುತುಂ
ಕೆಯ್ಯಂ ಮೊಗದೊಳಿಟ್ಟು ತಲೆವಾಗಿ ಸುಯ್ಯುತುಂ
ಮೆಲ್ಲನೆಚ್ಚತ್ತು ಚಿಂತಿಸಿ ಕುಪಿತೆ ನೋಡಿದಳ್
ಸಲ್ಲಲಿತೆ ತನ್ನ ಮನದೊಳಗೆ ಮಾತಾಡಿದಳ್
ಸೈರಿಪೆನೆ ಹರಣಮೊಡೆಯನ ನಿಂದೆಗೈದಪನ
ಧಾರುಣಿಗಕೀರ್ತಿ ಪಿತೃವಧೆಗಿಂತು ಸಿಲ್ಕಿದೆನೆ
ಹರನಿಂದೆಗೈದನಂ ಕೊಲ್ವುದಿಲ್ಲಾ ಸಾವು
ಅರವರಿಸಲಾಗದಿಂತನುಮಾನವಿಂತೇವು
ಎನುತಿರಲ್ಕೋಪ ಉಬ್ಬರಿಸಿ ತನುವಂ ಮೀರಿ
ವನಿತೆ ಕಣ್ಣಂ ಮುಚ್ಚಿ ನೆನೆದಭವನಂ ನೀರೆ
ಒಳಗಣಾತ್ಮಜ್ಯೋತಿಯಿಂದೆ ತನ್ನಯ ಮುಸುಕೆ
ಬೆಳಗಾದಳಾ ಸಭೆಯ ಕಣ್ಗೆ ತಮಮಂ ಮುಸುಕೆ

ಆಗಳಾ ಸಭೆ ಮರುಗಿ ಕೌತುಕಂಬಡುತಮಿರೆ
ಮೇಗರಿವವರ್ಕೆಲಪೊರ್ಲ್ಲದೆಂದನುತಮಿರೆ
ಪೂಗಿಡುವಿನಲ್ಲಿ ಬೇಗೆಯನಿಕ್ಕಿದಂತಾಗೆ
ಪೂಗಣೆಯನಡಸಿ ದಳ್ಳುರಿ ಮುಸುಕಿದಂತಾಗೆ
ಮಲ್ಲಿಗೆಯ ಬಿರಿಮುಗುಳನುರಿ ಕೊಂಡ ತೆರನಾಗೆ
ಅಲ್ಲಲ್ಲಿ ಪುರಜನಂ ಬಿಸುಸುಯ್ದು ಬೆರಗಾಗೆ

ಒಡೆವಂದ ಕೆಳದಿಯರ್ಧರೆಯೊಳಸುವಂ ಹೊಸೆದು
ಮೃಡನರಸಿಯುಂಗಾಣದಡಿಗಡಿಗೆ ಬಸವಳಿದು
ಬಳಿಸಂದವರ್ಕೆಲರ್ಬಳಲುತಿರ್ಪರ್ಕೆಲರ್
ಕರಗುತಿರ್ಪರ್ಕೆಲರ್ ಕೊರಗುತಿರ್ಪರ್ಕೆಲರ್
ಕೆಲರೇನುಮರಿಯದಂತಲ್ಲಿ ಬರೆದಂತೆ ನಿಲೆ
ಕೆಲರೊಲ್ದ ಪರಿಗಳಿಂದೊದರೆ ಕಳವಳಿಸಿ ನಿಲೆ
ತನಗೆಂತು ಜೀವಿಸುವ ಪರಿಯೆನುತ್ತಂತಂತು
ನೆನೆನೆನೆದಳಲ್ದು ಬಿಸುಸುಯ್ಯುತಂತಿರಲ್ಕಂತು
ಇತ್ತಲಂಬಿಕೆ ತನ್ನ ಕೋಪದೊಳ್ತಾನೆ ಸಲೆ
ಅತ್ತಲಭವಂ ಮನಂ ಮರುಗಿ ದುಗುಡದೊಳು ನಿಲೆ

ತಾನೆ ಕೈಲಾಸಸುಖವೆಲ್ಲವಂ ಮರೆದಿರ್ದ
ಏನುಮುಮ್ಮಳಿಸಿ ದುರ್ಮನದಿಂದಿರುತ್ತಿರ್ದ
ನಂದೀಶನಂ ಕರೆದಿದೇನು ಸೋಜಿಗವಯ್ಯ
ಇಂದುಮುಖಿ ಬೇಡೆಂದಡೋದ ಫಲದಿಂದಯ್ಯ
ಸೊಗಸದೀ ಕಿನ್ನರರ ಗೀತವಿಂದೇಕಯ್ಯ
ಬಗೆವುಗದು ನೀವಿಲ್ಲಿ ನುಡಿವ ಮಾತೇಕಯ್ಯ
ಅನಿಮಿತ್ತವಿಂತಿದೇಕಾಗುತಿರ್ದಪುದಯ್ಯ
ವನಿತೆ ಬೇಡೆನೆ ಪೋದಳೇನಪ್ಪುದೆಂತಯ್ಯ
ಎನುತಿರಲ್ನಂದಿಕೇಶ್ವರನಲ್ಲಿ ಬರುತಿರ್ದ
ನನಸುಯ್ಯನೆಂದಿನಂತಲ್ಲದೈತರುತಿರ್ದ
ನೆಳಲ್ದ ಕಿವಿ ಬರಿವೊಗಂ ಬಳಲ್ದ ತನು ದುಮ್ಮಾನ
ವಳಲ್ದ ಮನದುತ್ತಮಂ ಕಳಲ್ದಂಗದಿಂ ಧ್ಯಾನ
ವೀಶನಂ ಮುಟ್ಟಿ ನೆನಹವೇ ಜೀವವಾಗಿ ಬರೆ
ಭಾಸುರ ವಿಳಾಸವೆಲ್ಲವನೊಕ್ಕು ತಾನೆ ಬರೆ
ದೇವಿ ಇಲ್ಲಿರುವಿಲ್ಲೇನಯ್ಯದೇನೆನಲು
ದೇವ ಬಿನ್ನಪವೆಂದೊಡಭವನಾಲಿಸುತಿರಲು
ತಂದೆಯೆಂದಗಜೆ ದಕ್ಷನ ಮುಂದೆ ಪೋಗಿ ನಿಲೆ
ನಿಂದಿಸಿದನೀಶ ನಿಮ್ಮಂ ದಕ್ಷನದನಬಲೆ
ಕೇಳಲಾರದೆ ತನಗೆ ತಾಂ ಕೋಪಿಸಿದಳೆಂಬ

ಫಾಳಲೋಚನೆ ನಿಮ್ಮ ನಿಜಕೆ ಸಂದಳುವೆಂಬ
ನುಡಿಯೊಡನೆ ಮಸಗಿ ಘುಡುಘುಡಿಸುತಿರ್ದುದು ಕೋಪ
ವೆಡೆಗೊಂಡುದಿಂದುಧರನೊಳಗೆಲ್ಲವನುತಾಪ
ಮಾಗಳಾ ನಂದೀಶನಂ ಪತ್ತಿದುದು ಮೌನ
ಮಾಗಳ್ಗಣಂಗಳಿಗೆ ಮುತ್ತಿದುದು ದುಮ್ಮಾನ
ವಲ್ಲಿ ಭಿತ್ತಿಯ ಚಿತ್ರ ಕಳೆಗುಂದಿ ತಾನಿರ್ದು
ವಲ್ಲಿ ಪುತ್ಥಳಿಗಳೆಲ್ಲಂ ಸೊಂಪುಗೆಟ್ಟಿರ್ದು
ವಲ್ಲಿಯೋದುವ ಶುಕಾಳಿ ಮೂಗುವಟ್ಟಿರ್ದು
ವಲ್ಲಿ ಸಲಹಿದ ಹಂಸೆಮಾಲೆ ನಸೆಗೆಟ್ಟಿರ್ದು
ವಲ್ಲಿ ಬೆಳಸಿದ ಲತಾವಳಿ ತಾನು ಕೊರಗುತಿರೆ
ಅಲ್ಲಿಯೋವಿದ ಜನಂ ಜವ್ವನಂಗೆಡುತಮಿರೆ
ಭೋಗಂಗಳೊರ್ದೆಸೆಗೆ ಭಾಗಂಗಳೊರ್ದೆಸೆಗೆ
ರಾಗಂಗಳೊರ್ದೆಸೆಗೆ ಯಾಗಮುವದೊಂದೆಸೆಗೆ
ಸಂಪದವನೊರ್ದೆಸೆಗೆ ಭೂವನಿತೆಯೊರ್ದೆಸೆಗೆ
ಸೊಂಪುಗಳದೊಂದೆಸೆಗೆ ಲಾವಣ್ಯದೊಂದೆಸೆಗೆ
ತಮತಮಗೆ ಸುಯ್ಯುತಂ ಮರುಗಿ ಮೊರೆಯಿಡುತಿರಲು
ಶಿವನಂತರಂಗದಿಂ ಕೋಪವಡರುತ್ತಿರಲು

ನಂದೀಶನರಿದು ಭಯದಿಂದೆ ಹಿಮ್ಮೆಟ್ಟುತಿರೆ
ನಿಂದ ಗಣಸಂಕುಳಂ ಹೆರೆಸಾರ್ದು ನಡುಗುತಿರೆ
ಕುಪಿತನಾದಂ ದೇವನಿನ್ನಾರೊ ಜೀವಿಪರು
ವಿಪರೀತವೇನಪ್ಪುದಿದನಾರೊ ಭಾವಿಪರು
ಮುಳಿದೊಡೆ ಮಹಾಪ್ರಳಯಗೊಬ್ಬುಳಿವವರಿಲ್ಲ
ತಿಳಿವೊಡರಿದುಗ್ರನಿರ್ದಿರವ ತಾನೇ ಬಲ್ಲ
ನೆನುತೆಲ್ಲರಂಜಿ ಕಣ್ಮುಚ್ಚೆ ಪರಮೇಶ್ವರಂ
ನೆನೆಯಲರಿದೆನಿಪ ರೂಪಿನೊಳಿರ್ದನೀಶ್ವರಂ
ಇರೆ ದೇಹದೊಳು ಸುತ್ತಿ ಹೊತ್ತಿ ಹೊಗೆದುದು ಕೋಪ
ಉರ್ವಣಿಸುತೊಳಗೊಳಗೆ ಕುಂಭಕ್ಕಿರ್ದುದು ಕೋಪ
ವಡಿಸಿ ನೆಗೆದುದು ಭಾಳಲೋಚನದ ಕೆಲದಿಂದೆ
ಘುಡಿಘುಡಿಸಿತದು ಮಸಗಿತದು ಬೆಮರನೆವದಿಂದೆ

ಕೋಪವೆಲ್ಲಂ ನೆರೆದು ಬಂದೊಂದೆಡೆಗೆ ಬಂದು
ರೂಪಾಗಲನುಗೆಯ್ಯಲದರ ಮಧ್ಯದೊಳೊಂದು
ನೋಡಬಾರದ ಥಳಥಳಿಪ್ಪ ತೇಜೋಮೂರ್ತಿ
ಕೂಡೆ ಪುಟ್ಟುತ್ತಿರ್ದುದಭವನಘಟನ ಮೂರ್ತಿ

ಭುಗಿಭುಗಿಲ್ಭುಗಿಲ್ಛಿಟಿಲ್ಛಿಟಿಲ್ಭುಗಿಲ್
ಭುಗಿಲ್ಛಿಟಿಲ್ಧಗಧಗಿಲ್ಧಂಧಗಿಲ್ಧಂಧಗಿಲ್
ಧಗಿಲೆಂಬ ನುಡಿಗೆ ಧರಣೀತಳಂ ಬಿರಿಯುತಿರೆ
ಭುಗಿಲೆಂಬ ರಭಸಕಂಬರತಳಂ ಸಿಡಿವುತಿರೆ
ಹರಿ ಬೊಮ್ಮರೆರ್ದೆ ಬಿರಿಯೆ ಕುಲನಗಂಗಳ್ಕುಸಿಯೆ
ಪರಸಮಯಿಗಳ್ ಜರಿಯೆ ಜಲಧಿ ಕುಕ್ಕುಳ್ಕುದಿಯೆ
ರವಿಂಥಂ ದೆಸೆಗೆಡಲ್ ಗಣಪತಿಗುಹರ್ಬೆದರೆ
ಭುವನಂ ಕಿವುಡುವಡಲ್ ಗಣಸಮಿತಿಗಳ್ಕೆದರೆ
ಗಗನದೋಳ್ಪರ ಸಿಡಿಲ್ಮೂರ್ತಿಗೊಂಡೊಗೆವಂತೆ
ಮಿಗೆ ಭಾಳಲೋಚನಂ ರೂಪುಗೊಂಡೊಗೆವಂತೆ
ಕಾಳಕೂಟದ ನಗದೊಳೊಗೆದ ಕೇಸರಿಯಂತೆ
ಕಾಲಾಗ್ನಿಯಿಂದೆ ದಳ್ಳುರಿ ಭುಗಿಲನೊಗೆವಂತೆ
ಬೆಳಗು ಮೂಲೋಕಮೋಳ್ತುಳುಕೋಗೆ ಕಡುಪಿಂದೆ
ಘಳಿಲನೊಗೆದಂ ವೀರಭದ್ರಂ ನಿಟಿಲತಟದಿಂದೆ

ಏಕಜಡೆಲಿಂಗಂ ಶಿರೋಮಾಲೆಗಳ್ತೊಳಗೆ
ಭೀಕರಮೆನಿಪ್ಪ ಕೆಂಗಣ್ಮೀಸೆಗಳ್ಬೆಳಗೆ
ಕುಂಡಲಂ ಕೋರೆದಾಡೆಗಳೊಪ್ಪಿ ತೋರುತಿರೆ
ಚಂಡಾಂಶು ವೀರಫಳಕಂ ತೊಡರ್ವೆರೆವುತಿರೆ
ನಿಂದಂ ರಜತಗಿರಿಗೆ ಕೈಕಾಲ್ಗಳೊಗೆದಂತೆ
ಮಂದರಂ ಮುಸಗೆ ಕೋಪದಿ ರೂಪುಗೊಂಡಂತೆ
ನೋಡಿರೇ ಭಾಳನ ಮನಂ ಹೆತ್ತ ಶಿಶುವಿಂಗೆ
ಮಾಡಿದರ್ಜಾತಕರ್ಮನಾಗಳಾತಂಗೆ
ನಾಮಕರಣಂ ವೀರಭದ್ರನೆಂಬುದು ತನಗೆ
ನೇಮಿಸಿತು ಬಾಯ್ವೆಣ್ಣೆ ಬ್ರಹ್ಮಾಂಡವದು ತನಗೆ

ತೊಟ್ಟಿಲುಂ ತುಂಬಿದಾಕಾಶವಾದುದು ನೋಡ
ಕಟ್ಟಿದ ಗುಣಂ ಪ್ರತಾಪ ಯಶಸ್ಸುಗಳ್ನೋಡ
ತೂಗುವ ಪ್ರಳಯ ಕೋಲಾಹಲ ಗಣಾಧಿಪರ್
ಜೋಗುಳಂ ಪಾಡುವರ್ವೀರಸಿರಿಮಾರಿಯರ್
ಬಾಲಾಭರಣವೆ ಬೊಬ್ಬಿಡುವ ತಲೆಗಳ ಮಾಲೆ
ಬಾಲತ್ವದಾಟವದು ಮಖನಸುರುಪುವ ಲೀಲೆ
ಎಂದೊಡವನೆಂತು ಪೊಗಳ್ವೆನಿನ್ನು ವೀರಮಂ
ಇಂದುಮೌಲಿಯ ಸಕಲ ಸಾಮರ್ಥ್ಯಸಾರಮಂ
ನೋಡ ನೋಡಲ್ಪೆಳ್ದನೆಲೆಲೆ ಬ್ರಹ್ಮಾಂಡಮಂ
ಕೂಡೆ ಬೆಳದಂ ಬೆಳೆವನವಂ ಬ್ರಹ್ಮಾಂಡಮಂ
ಮೀರಿ ನೋಡಿದರೆ ಮತ್ತಾ ಪರಿಗಳಂ ಕಳೆದ
ನೂರ್ಮಡಿಸಿ ಮಿಗೆ ಶಂಭು ತಲೆದೂಗುತಿರೆ ಬೆಳೆದ
ಉಳ್ಳ ಕೋಪಂ ವೀರಭದ್ರನಂ ನೆಲೆಗೊಂಡು
ಉಳ್ಳಿತುಳಿದುದು ಶಾಂತಿ ಶಂಕರನನೆಡೆಗೊಂಡು
ತನಗೆ ಶಿಸು ದಕ್ಷಯಾಗಕ್ಕೆ ಪುಟ್ಟಿದ ಮಾರಿ
ತನಗೆ ಚಿಣ್ಣಂ ಕಾಲನೆಂಬವಗ ಉರಿಮಾರಿ
ಇಂತೆಸವ ತೀವ್ರದ ಮಹಾವೀರನಂ ಕಂಡು
ಚಿಂತಿಸಿದನೀಶ್ವರಂ ತನ್ನೊಳ್ಬಯಂಗೊಂಡು
ಏಕೆ ಕೋಪಿಸಿದನಿವನೇಕೆ ಹಟ್ಟಿದನೆಂದು
ಲೋಕೇಶ್ವರಂ ನಾಡೆ ಕೌತುಕಮನಾಳ್ದಂದು
ತಲೆದೂಗಿ ವೀರಭದ್ರನ ವದನಮಂ ನೋಡಿ
ನಲಿದು ಮನದೊಳಗೆ ತಾಪಿರಿದನೊಲವಿಂ ಕೂಡಿ
ಕರೆದು ಬೆಸಸಿದನಭವನಾ ವೀರಭದ್ರಂಗೆ
ಪರಸಮಯಸಂತಾನತಿಮಿರಮಾರ್ತಂಡಂಗೆ

ಕುರಿದಕ್ಷನಂ ಪಿಡಿದು ಜನ್ನಮಂ ಸುಟ್ಟುರುಪಿ
ತರಿದಿಕ್ಕು ಮಾರಾಂತರಂ ಕಾಲನೋಳ್ಕಿರಪಿ
ಎಂದು ಬೆಸಸಲ್ ಭದ್ರಕಾಳಿಯೊಡನೈತರಲ್
ಅಂದು ಕೋಟಾಕೋಟಿ ರೋಮಜರ್ನಡೆತರಲ್
ಉರದ ಬಾಯವರಲ್ಲಿ ಕರದ ಕಣ್ಣವರಲ್ಲಿ

ತಿರದ ಕಾಲವರಲ್ಲಿ ಚರಣಮುಖದವರಲ್ಲಿ
ಬೆನ್ನಬಾಯರ್ಕೆಲರ್ ಕುಡಿದಾಡೆಯರ್ಕೆಲರ್
ಕೆನ್ನೆಯುಗುರರ್ಕೆಲರ್ ಕಡು ನಿಡಿಯುವರ್ಕೆಲರ್
ಗಗನದೊಳ್ನಡೆಯುತಂ ಕಡಲಂ ಕಲಂಕುತಂ
ದಿಗಿಭವಂ ಕೆಡಪುತಂ ಪೊಡವಿಯಂ ಹಿಳಿಯುತಂ
ರವಿರಥವನೆಡಹುತಂ ರಾತ್ರಿ ಘನನರೆವೃತಂ
ಪವನನಂ ಪಿಡಿಯುತಂ ಭಗಣಮನೋಡಚುತಂ

ಪೊರಮಟ್ಟುದಲ್ಲಿ ವಸುಮತಿಯು ಬೆಸನಾದಂತೆ
ಪೊರಮಟ್ಟುದುಗ್ರಗಣತತಿ ಗಗನ ಬಿದ್ದಂತೆ
ದುಂದುಭಿಗಳಲ್ಲಲ್ಲಿ ಬೆಳ್ಗೊಡೆಗಳೆತ್ತಿ ಒರೆ
ಸಂದಣಿಸಿ ಕೈದುಗಳ್ಬೆಳಗನುಗುಳುತ್ತ ವಿರೆ
ಈಬಂದನೆಲೆಲೆ ಭಾಳೇಕ್ಷಣನ ಸುತನೆಂಬ
ಈಬಂದನಪ್ರತಿಮನತುಳ ಬಲನೆಂದೆಂಬ
ಬಿರುದಪ್ಪಿಯ ಕಹಳೆರವಂ ದೆಸೆಗೆ ಪರಿಯುತಿರೆ
ತುರುಗಿದನಲಧ್ವಜಂ ಗಗನದೋಳ್ಕುಣಿವುತಿರೆ
ಮುಸಗಿ ಕಾಳಾನಲನ ಹೊಂಬೀಡ ಬಿಟ್ಟಂತೆ
ವಸುಧೆಗುಚ್ಚುಸದ ನಂಜಿನ ಬನಂ ನಡೆವಂತೆ
ಅಚ್ಚರಿಯ ವೀರಭದ್ರನ ಬೀಡು ನಡೆಯುತಿರೆ
ಮುಚ್ಚರಿಪ ದಕ್ಷಪುರವಲ್ಲಿ ನಸುಪೋರುತಿರೆ

ಕಂಡು ಕೈವೀಸಿದಂ ವೀರಭದ್ರಂ ಹಾದಿ
ಗೊಂಡು ಹರಿದುದು ಬೊಬ್ಬಿಡುತೆ ಸಕಲ ಭೂತಾದಿ
ಗಣನಿಕರವೈದಿ ಕೋಂಟೆಯಂ ಮುತ್ತಿ
ಸೆಣಸಿ ಬಿಡದಾಯ್ದುಮಲದುರಿಯ ಹಳವಿಗೆ ಎತ್ತಿ
ಬೊಬ್ಬಿಡಲು ಯಾಗಮಂಟಪವದಿರ್ದ ಸಭೆ ಕೆದರಿ
ಬೆಬ್ಬಳಿಸಿ ದಕ್ಷನ್ಪುರವಿದೇನೆನುತೊದರೆ
ಹೋಗಿಂದ್ರ ಹೋಗಗ್ನಿ ಹೋಗಿ ದಿಕ್ಪಾಲರಿರ
ಹೋಗು ಮುರಹರ ನೂಂಕಿ ನಡೆಯಿ ಭೂಪಾಲರಿರ
ಎಂದು ಚತುರಂಗ ಬಲಮಂ ಪೇಳ್ದನಾ ದಕ್ಷ

ನೆಂದು ಘುಡುಘುಡಿಸಿ ಬರುತಿರ್ದುದು ಸರೋಜಾಕ್ಷ
ನಾದಿಯಾಗಿರ್ದಮರರೊಂದೆಸೆಯೊಳೊಡ್ಡಿದರ್
ವಾದದಿಂ ದಿಕ್ಪಾಲರೊಂದೆಸೆಯೊಳೊಡ್ಡಿದರ್
ತೊಡಗಿತ್ತು ಚೂಣಿಕಾಳಗವಲ್ಲಿ ತನತನಗೆ
ನಡೆದು ನೂಂಕಿತ್ತು ಮೂದಲಿಸುತಂ ತನತನಗೆ
ಬೆರಸಿ ಏರಿತ್ತು ಶಿವದ್ರೋಹಿ ದಕ್ಷನ ಬಲಂ
ಹರಿಯಜದಿಶಾಧಿಪರ್ನೂಂಕಿತಾಗಳೆ ನೆಲಂ

ಕವಿದಿಕ್ಕಿದಂತಾಗೆ ವೀರಭದ್ರಂ ಬಂದು
ಸಲಿಸುವೆಂ ಇವರಸುವ ಬಾಳಬಾಯ್ಗೂಟಕೆಂದು
ಬರಸಿಡಿಲಬಳಗದಂತಿರ್ದ ಗಣತತಿ ಸಹಿತ
ಎರಗಿದಂ ಭೂಮಿತಳವದಿರ ಬಿರಿಯಲ್ಕಹಿತ
ಬಲವರಿಯಲ್ಕೈತಂದು ದಿಕ್ಕರಿಗಳಂ ಸೀಳ್ದು
ಬಸಸಿ ದುವ್ವಾಳಿಸುವ ತುರಗಕುಲವಂ ಪೋಳ್ದು
ನೆರೆದ ರಥನಿಕರವುಂ ನುಚ್ಚುನೂರಂ ಮಾಡಿ
ಪರಿವ ಪದಾತಿಗಳನರಿದು ಸಣ್ಣಂ ಮಾಡಿ
ಸಂಗರ ಧರೆಯೊಳಮಮ ಹೊಕ್ಕೊಕ್ಕಿಲಿಕ್ಕುತಿರೆ
ಸಂಗಡಿಸಿ ನಾರದಮುನಿಯ ಲೀಲೆ ಪೆರ್ಚುತಿರೆ
ರಣದೊಳಗೆ ಮಾರಿಗೆಯರೋಚಕಮದಾಗುತಿರೆ
ತಣಿಯುಂಡು ಕಾಲಂಗೆ ಕೊಕ್ಕರಿಕೆ ಪುಟ್ಟುತಿರೆ
ಇಂತಿಂತು ವೀರಭದ್ರಂ ತವಿಸುತಿರಲಂದು
ಮುಂತೆ ಹೊಯ್ಯಲ್ಗುಡುತ್ತಂ ಒಬ್ಬನೈತಂದು

ಎಲೆ ದಕ್ಷ ನೀನೇಕೆ ಜನ್ಮವೇಕೆಲೆ ಪಾಪಿ
ನಿಲಲರಿದು ಕೇಳೆಲವೊ ಮುಂದುಗಾಣದ ಕೋಪಿ
ದೇವಿಯೂಳಿಗವಿಂದುಧರನ ಕಿವಿದಾಗಿತ್ತು
ದೇವನಣುಗಂ ಬಂದನಮರಾಳಿ ಬೆರಗಿತ್ತು
ಇಂದಿರಂ ಸರಿದನಜನುಂ ಮೈಗರೆದನಂತಲ್ಲಿ
ನೊಂದು ಹರಿ ಹರಣನಾಗಿಯೆ ಬೀಳ್ದನಂತಲ್ಲಿ
ಹಿಡಿವಡೆದವರ್ಕೆಲರ್ ಪುತ್ತೇರಿದರ್ಕೆಲರ್

ಮಡಿವರಧಟರ್ಕೆಲಬೆಸತ್ತಲಿದ್ದರ್ಕೆಲರ್
ಹುಲ್ಲಕಚ್ಚಿದರ್ಕೆಲಬರ್ ಅಯ್ಯೊ ದಲವರ್ಕೆಲರ್
ಪಲ್ಗಿರಿವವರ್ಕೆಲರ್ನಿರೊಕ್ಕವರ್ಕೆಲರ್
ಬಂದುದಭವನ ದಾಳಿ ಕೊಂದುದೇಳಿಂ ನಿಲ್ಲಿ
ಬೆಂದು ಹೋದುದು ನಿನ್ನ ಯಾಗವೆನುತಂತಲ್ಲಿ
ಎನುತಿಲ್ಪುರದ ಬಾಗಿಲ್ವಾಡಮಂ ಸುಡುತೆ
ತನತನಗೆ ಕೇರಿಕೇರಿಯೊಳ್ಕೈದೆ ಕಿಚ್ಚಿಡುತೆ
ನೆರೆ ಬೀದಿವರಿಯಿತ್ತ ಒದೆದೆತ್ತಿ ಕೆಡಪುತಂ
ಮರೆಯೊಗಲ್ಕಯ್ಯುತಂ ಮಲೆತರಂ ಸೀಳುತಂ
ಕಿತ್ತು ಬರಸೆಳೆಯುತಂ ತಲೆಯಿಂಡೆಯಾಡುತಂ
ನೆತ್ತರಂ ಸೂಸುತಂ ಮಿಳಿಮ ತಲೆಯೊತ್ತುತಂ
ಉರಿದರಿಯುತಂ ಬಂದು ವೀರಭದ್ರಂ ಕಂಡು
ಹರುಷಮಂ ಪುಟ್ಟಿಸುತೆ ಬಿರುದಗಣಮೈತಂದು
ಮುತ್ತಿದರ್ಪಾತಕಂ ಸವೆದ ಮಖಸಾಲೆಯಂ
ಸುತ್ತಿದರದೇನೆಂಬೆನವರೊಂದು ಲೀಲೆಯಂ
ಮಂಟಪನನೆತ್ತವ ದ್ವಿಜಸಭೆಯನೇಳಿಪರ್
ಕಂಟಿಸದೆ ಪತ್ತುವರ್ಗಜಬಜಂ ಮಾಡುವರ್
ಕಂಭಮಂ ತರಿಯುತೆ ಕಗಂಗಳಂ ಮುರಿವುತಂ
ಇಂಬಿನಿಂ ಕುಣಿಯುತಂ ಮಿಗೆ ಪುಟಂ ನೆಗೆವುತಂ
ಕೊಂಡದೊಳಗುಲಿಯುತಂ ನಿಂದುರುಗಿ ನೋಡುತಂ
ಕೆಂಡವಂ ಕೆದರುತಂ ಮುಂದೆ ಜರಿದಾಡುತಂ
ತೊನೆದು ಕೈಪರೆಗುಟ್ಟಿ ತೋಳೆತ್ತಿ ಪಾಡುತಂ
ಮನಿಗಳಂ ಹುರಿಗುಟ್ಟಿ ಹೊತ್ತುಗಳನಟ್ಟುತಂ
ಎಳ್ಳುರಂಸಿಗಳನೆಲ್ಲ ಮೇಲೆ ಚೆಲ್ಲುತಂ
ಮುಳ್ಳಿಲ್ಲವಂ ಸುರರ ಮೋರೆಯೊಳಗೆಳೆವುತಂ
ಇಂತು ಮುಂಗುಡಿಯ ಭೂತಂ ಮಸಗುತಿರಲಂದು
ಪಿಂತೈದಿ ಕಲಿ ವೀರಭದ್ರಂ ಮುಳಿದು ಬಂದು
ಉರಿಯ ನಾಲಿಗೆಗಳಂ ಕಿಕ್ಕಿತ್ತಿ ಬಿಸುಡುತಂ
ಸಿರಿಗಿ ಪೂಷನ ಹಲ್ಗಳುದುರೆ ಮುಳಿದೊದೆವುತಂ

ವಾಣಿಯಂ ಮೂಗರಿದು ಮಿಗೆ ಮುಂದುಗೆಡಿಸುತಂ
ಮಾಣದಲ್ಲಿದಿರಾಂತರಂ ನಿಂದು ತವಿಸುತಂ
ಬರೆ ಕಂಡು ಸುರಸಮಿತಿ ಮರುಗಿ ಮುಮ್ಮಳಿಗೊಂಡು
ನೆರೆದು ಗಗನದೊಳೆಲ್ಲರುಂ ವಿಸ್ಮಯಂಗೊಂಡು
ಏಕೆ ತೊಡಗಿದನಿವಂ ಜನ್ನವುಂ ಮರುಳಾಗಿ
ಏಕೆ ಬಂದಳ್ಗಿರಿಜೆ ದಕ್ಷಂಗೆ ಹಗೆಯಾಗಿ
ಬೆಟ್ಟೇರಿ ಮೃತ್ಯುವಂ ಕರೆದುಕೊಂಡಂ ಪಾಪಿ
ಇಟ್ಟಣಿಸಿದುದು ತನಗೆ ಸಾವು ಕೆಟ್ಟಂ ಪಾಪಿ
ಮುನ್ನವೆ ದಧೀಚಿಮುನಿ ಮುನಿದು ಶಾಪಂಗೊಟ್ಟ
ಇನ್ನೇನೊ ಅಕಟಕಟ ಪಾಪಿ ದಕ್ಷಂ ಕೆಟ್ಟ
ಎನುತಮಮರರಳುತಿರೆ ಘುಡುಘುಡುಸುತಂ ಮಸಗಿ
ಮುನಿದು ಬಂದುರವಣಿಸಿ ಸಿಡಿಲೆರಗುವಂತೆರಗಿ
ಕೆಡೆಕೆಡೆ ಶಿವದ್ರೋಹಿ ಎನುತೆ ತಲೆಯಂ ಹೊಡೆದು
ಉಡುಗುಡುಗು ಗರ್ವವನೆನುತ್ತೆ ತಲೆಯಂ ಕಡಿದು
ಒಡೆದು ತಂದಾ ತಲೆಯನುರಿವ ಕೆಂಡದೊಳಿಕ್ಕಿ
ಇದ ತಳೆದುಕೊಳ್ಳಾಹುತಿಯನಗ್ನಿ ಎನುತಿಕ್ಕಲುಂ
ನುಡಿಯುತಂ ಹಿಡಿಹಿಡಿ ಸುರಾವಳಿಯನೆನುತಮಿರೆ
ಮೃಡನಿತ್ತ ಬೆಸನಲ್ಲಿ ಮನಕೆ ತೋರುತ್ತಮಿರೆ

ನಡನಡುಗಿ ಕೆಡೆದಿರ್ದ ಕುರಿಯ ತಲೆಯಂ ತಂದು
ಒಡಲ ಮೇಲಿಟ್ಟು ಜೀವಂಗೊಟ್ಟು ಕಲಿ ನಿಂದು
ದಕ್ಷನಂ ಹಿಡಿದು ಕೋಡಗಂಗಟ್ಟಿ ಕುಟ್ಟುತಂ
ತ್ರ್ಯಕ್ಷನಣುಗಂ ಸುರರನವನೊಡನೆ ಕಟ್ಟುತಂ
ತಿರಿಗಿ ಬಂದಂ ಭೂತಗಣದಲ್ಲಿ ಕುಣಿದಾಡಿ
ಹರಭಕ್ತರೆಲ್ಲರುಂ ಹರುಷದಿಂ ತೂಗಾಡೆ
ಬರುತಿರಲ್ಮುಂದೆ ರಣರಂಗ ರಣರಣಕದೊಳ್
ಮರುಳಪಡೆ ಎದ್ದುದೇನೆಂಬೆ ನೊಂದಣಕದೊಳ್

ಮೂಳೆಗಳ ತುಪ್ಪವಂ ತಲೆಯೋಡಿನೊಳು ಹೊಯ್ದು
ತಾಳಿಜದ ಖಂಡವುಂ ಮೆಲ್ಲಿತಪ್ಪವನಾಯ್ದು

ಮಿದುಳ ತೆಗೆ ತೆಗೆದು ರಾಶಿಗೊಳಂ ಹೊಯ್ದು
ಮುದದಿಂದೆ ತಮತಮಗೆ ಮರುಳ್ಗಳೆಲ್ಲಂ ನೆರೆದು
ಬೊಟ್ಟಿಟ್ಟು ನೆತ್ತರಂ ಕರುಳಮಾಲೆಯನಿಕ್ಕಿ
ಅಟ್ಟೆಗಳನೇರಿಕೊಂಡಲ್ಲಲ್ಲಿ ನೈಯಿಕ್ಕಿ
ಮಾಮಾರಿ ಮಾಂಕಾಳಿಗಳ್ತಿಯಿಂ ಪೊಡಮಟ್ಟು
ಕಾಮಾಕ್ಷಿ ಚಾಮುಂಡಿಗಳ್ತಿಯಿಂ ಪೊಡಮಟ್ಟು
ಮೂಳೆದುಪ್ಪವನೆತ್ತಿ ತವಕದಿಂ ಕುಡಿಕುಡಿದು
ಕಾಳಿಜದ ಖಂಡಮಂ ಸವಿಸವಿದು ಚಪ್ಪರಿದು
ತೇಗಿ ಬಾಳೆನ್ಮಯ್ಯ ವೀರಭದ್ರನೆ ಎನುತೆ
ಕೂಗಾಡಿ ಪರಮಾಯು ವೀರಭದ್ರಂಗೆನುತೆ
ಹೊದ್ದಿ ಕುಳ್ಳಿರ್ದರ್ ಮಿಗೆ ಸವಿಸವಿದು ನಿಗುರುತಂ
ಜದ್ದನಿಕ್ಕಿದನಿಂದು ಎಮಗೆ ಶೂಲಿಯ ಸುತಂ
ಎಂದು ಕುಣಿದಾಡುತಂ ಮರುಳ ಪಡೆ ಹರಸುತಿರೆ
ನಿಂದದಂ ನೋಡಿ ವೀರಭದ್ರಂ ಹರಸುತಿರೆ

ದಕ್ಷಮುಖವಿಪಿನಕುಲದಾವಪಾವಕನೆಂಬ
ದಕ್ಷಮುಖಜೀಮೂತಕುಳ ಮಹಾಬಲನೆಂಬ
ಬಿರುದೆತ್ತಿ ಕರೆವ ಕಹಳೆಗಳ ಘನಧ್ವನಿಯೊಳಗೆ
ನಡೆತಂದನಪ್ರತಿಮ ವೀರಭದ್ರಂ ಮುಂದೆ
ಗುಡಿಗಟ್ಟಿತಲ್ಲಿ ಕೈಲಾಸದೊಳ್ಸಲವಿಂದೆ
ಇದಿರ್ವಂದು ಹರನ ಗಣನಾಥರ್ಕಳಿದಿರ್ಗೊಂಡು
ಒಡಗೂಡಿ ಕೈಲಾಸದೊಳಗೆ ಬರುತಿರಲಂದು
ಕಡು ನೀರೆಯರ್ನೆರೆದು ಕರುಮಾಡದೊಳ್ನಿಂದು
ನೋಡಿ ನಲವಿಂ ವೀರಭದ್ರಂಗೆ ಕೈಮುಗಿದು
ಕೂಡೆ ಗಣಸಂತತಿಗೆ ಎರಗಿ ಹರುಷದೊಳಂದು
ಹಿಂದೆ ಬರ್ಪವನಾವವಂ ದಕ್ಷನೆಂಬವನ
ಇಂದುಧರನಂ ದೇವಿಯುಂ ನಿಂದೆಗೈದಪನ
ತಲೆಯೊಂದು ಪರಿ ದೇಹವೊಂದು ಪರಿಯವನವ್ವ
ಛಲವೇಕೆ ತನೇಕೆ ಲಜ್ಜೆಯಿಲ್ಲದನವ್ವ
ಬೇಕು ಬೇಕೇ ಮುಖಕೆ ದೇವನಂ ನಿಂದಿಪುದು

ಬೇಕು ಬೇಕೇ ಮುಖಕೆ ಯಾಗವಂ ಮಾಡಿಪುದು
ನಡೆತಪ್ಪರಮರರೀತಕೆ ಖಳನೊಳೊಡನಾಟ
ಒಡನಾಡಿಯರನೀತ ಮಾಡಿತ್ತವನ ಕೂಟ
ವೆಂದು ಪುರನಾರಿಯರ್ಕೈಕೊಯ್ಯು ನಗ ತಮಿರೆ
ನಿಂದು ನೆಲೆನೆಲೆಗಳೊಳ್ನೋಟವುಂ ಬೀರುತಿರೆ
ನಡೆತಂದು ಗಿರಿಜೇಶನರಮನೆಯನೋಳಪೊಕ್ಕು
ಬಿಡದೆ ಪೈವೆಚ್ಚುತೆ ನಲವಿಂ ಮನಂಮಿಕ್ಕು
ವೀರಭದ್ರಂ ಬಂದು ದೂರದಿಂ ಪಶುಪತಿಗೆ
ಮಾರಮದಮಥನಂಗೆ ಕಾರುಣ್ಯವಾರಿಧಿಗೆ
ನೆನೆವರ ನಿಧಾನಕ್ಕೆ ಭಕ್ತಜನಸುರತರುಗೆ
ಮುನಿಜನಧ್ಯಾನಗಮ್ಯಂಗೆ ಜಗದ್ಗುರುವಿಂಗೆ
ಶರಣಜನಜನಕಂಗೆ ಶರಣಾಬ್ಧಿಚಂದ್ರಂಗೆ
ಪರಮಾತ್ಮರೂಪಂಗೆ ಪಂಚೇಷುನಾಶಂಗೆ
ದುಷ್ಟಜನಶಿಕ್ಷಂಗೆ ಶಿಷ್ಟಜನರಕ್ಷಂಗೆ
ಸೃಷ್ಟಿಸ್ಥಿತಿಪ್ರಳಯಕೃಷ್ಟಂಗನಷ್ಟಂಗೆ
ವೇದಾರ್ಥರೂಪಂಗೆ ವಾದಕ್ಕತರ್ಕ್ಯಂಗೆ
ವೇದಾಂಗವೇದ್ಯಂಗೆ ನಾದಪ್ರಮೋದಂಗೆ
ವೈಯಿಕ್ಕಿ ನಿಂದಂ ವಿರೂಪಾಕ್ಷಲಿಂಗಂಗೆ
ಕೈಯೆತ್ತಿ ಪೊಡಮಟ್ಟನೆಮ್ಮ ಶಿವಲಿಂಗಂಗೆ

ಇದೆ ದೇವ ಬಿನ್ನಪಂ ಖಳದಕ್ಷಸಂತಾನ
ಇದೆ ದೇವ ಬಿನ್ನಪಂ ದೋಷಿ ಸುರಸಂತಾನ
ಇದೆ ಚಕ್ರವಿದೆ ಕುಲಿಶವಿದೆ ಕಾಲದಂಡವಿದೆ
ಇದೆ ಬೊಮ್ಮನಸ್ತ್ರವಿದೆ ಸಕಲ ಋಷಿವೃಂದವಿದೆ
ಇಂತೆಂದು ವೀರಭದ್ರಂ ಬಿನ್ನವಿಸಲಂದು
ಮುಂತೆ ವೈಯಿಕ್ಕಿ ಕೈಮುಗಿದು ದಕ್ಷಂ ನಿಂದು
ದೇವ ಸರ್ವಾಪರಾಧಿಯನೆನ್ನನೀಕ್ಷಿಪುದು
ದೇವ ಮುಂದರಿಯದಜ್ಞಂಗೆನಗೆ ಕರುಣಿಪುದು
ಶಿಶು ತಪ್ಪ ಮಾಡಿದರೆ ಕೊಂದರೊಳರೇ ದೇವ
ಪಶು ತಪ್ಪ ಮಾಡಿದರೆ ಕೊಂದರೊಳರೇ ದೇವ

ಶಿಶುಮಾನೆ ಪಶುಮಾನೆ ತಂದೆ ಪಶುಪತಿ ನೀನೆ
ಶಶಿಧರನೆ ವಿಷಧರನೆ ದಯದಿವೀಕ್ಷಿಸು ನೀನೆ
ಕರುಣಿಪುದನಾಥಂಗೆ ಕರುಣಿಸುದು ಭೀತಂಗೆ
ಕರುಣಿಸುವುದೆಲೆ ದೇವ ಗರ್ವದಿಂ ಬೆಂದಂಗೆ
ಎಂದು ದಕ್ಷಂ ಕೃಪಾಭಾವದಿಂದೊರಲುತಿರೆ
ಇಂದುಧರನಭಯವಿತ್ತಂ ಸುರರ್ಪೊಗಳುತಿರೆ

ಶತಯಜ್ಞದೊಂದು ಫಲವಂ ವೀರಭದ್ರನಿಂ
ಹತನಾದ ದಕ್ಷಂಗೆ ಕೊಡಿಸಿದಂ ರುದ್ರನಿಂ
ಏನೆಂಬೆನುಬ್ಬಟೆಯ ಕರುಣೆ ಸುರರಂ ನೋಡಿ
ತಾನೆಂದನಂತವರ್ಗಭಯಕರವಂ ನೀಡಿ
ಎನ್ನವರ್ಗಳಿಲ್ಲದಲ್ಲಿಗೆ ಪೋಗದಿರಿ ಎಂದು
ಎನ್ನವರನರಿದಡ್ಡಮೊಗವಾಗದಿರಿ ಎಂದು
ಮರೆದು ಡಂಭಕರೆಂಬರಂ ಬೆರಸದಿರಿಮೆಂದು
ಮರಹಿಲ್ಲದೆನ್ನನಾಗಳ್ನೆನೆಯುತಿರಿ ಎಂದು
ಅಂದಮರಸಂತತಿಗೆ ಕಾರುಣ್ಯವಂ ಮಾಡಿ
ಮುಂದಿರ್ದ ವೀರಭದ್ರನನಕ್ಕರಿಂ ನೋಡಿ
ತೆಗೆದು ತಳ್ಕೈಸುತಂ ಬಾಯ್ತಂಬುಲವಿತ್ತು
ಸೊಗಯಿಪ ಕುಮಾರಂಗೆ ಬೀಳುಡೆಯನೊಲಿದಿತ್ತು
ಕೊಂಡಾಡಿ ವೀರಭದ್ರನನೆಲ್ಲರುಂ ನೋಡೆ
ಮುಂಡಾಡಿದಂ ಭಕ್ತತತ ಹರುಷದೋಳ್ಕೂಡೆ
ದಕ್ಷಾದಿಸುರರನಂತವರವರ ಲೋಕಕ್ಕೆ
ಆ ಕ್ಷಣಂ ತಾನೆ ಕಳುಹಿದನವರ ಲೋಕಕ್ಕೆ
ಮಂದಿರದೊಳೆಸವ ಗಣನಾಯಕರೊಳೊಪ್ಪಿದಂ
ಇಂದುಧರನತುಳ ಬಳನಪ್ರತಿಮನೊಪ್ಪಿದಂ
ಅತನುಹರನನುಮಿತ್ರ ಬಂಧವಿಂತೊಪ್ಪಿದಂ
ಅತಿದಾನಿಯತಿ ಕರುಣಿಯತಿಶಯದೊಳೊಪ್ಪಿದಂ
ಹಂಪೆಯ ವಿರೂಪಾಕ್ಷನನವರತಲೊಪ್ಪಿದಂ

ಕಂದ॥ ನಂದೀಶಾದಿ ಗಣೇಶರೊ ॥
ಳಂದದಘಟಿಂ ನೆರೆದ ವೀರಭದ್ರನ ಶಿಶುವಾ॥
ನೆಂದು ಕೃಪೆಯೀವುತಿರ್ಕೆನ ।
ಗೆಂದುಂ ಶಶಿಮೌಳಿ ಹಂಪೆಯ ವಿರೂಪಾಕ್ಷಂ ॥

## ಕವಿ ಗುರುಬಸವಕೃತ.

# ಅವಧೂತಗೀತೆ.

(ಚೌಪದಿ)

ಸ್ವಸ್ತಿ ಸಮಸ್ತ ಜಗಂ ನಿಜರೂಪ
ಭಕ್ತಮನೋಮಂದಿರ ಚಿದ್ದೀಪ
ನಿತ್ಯಂ ಗುರುಬಸವೇಶ ಪರಾಪ
ಕೀರ್ತನ್ನೊಳು ನೆಲಸಿರು ನಿರ್ಲೇಪ ॥೧॥

ಗುರು ಬಸವೇಶ ಸಮಗ್ರ ಪರೇಶ
ಶರಣ ಮನಸ್ಸರಸಿರುಹನಿವಾಸ
ಪರಮ ನಿರಂತರ ಸುಖಪರಿತೋಷ
ವರತರ ಸಲಹೆನ್ನನು ಭವನಾಶ ॥೨॥

ಸಹಜ ಸಮಗ್ರದ್ವಯ ಸುಖತುಷ್ಟಿ
ವಿಹಿತ ಷಡಂಗ ಶಿವಾಂಗಿಕ ಶಿಷ್ಟಿ
ಗಹನಕಡರಿ ಪರಸಮರಸ ಪುಷ್ಟಿ
ಯೆಹಗಿರಲಹಗನುಭವಗುರುದೃಷ್ಟಿ ॥೩॥

ವಡಬ ಜಡಂ ಗುಣಮುಹಿಸಂತಾನ
ಸುಡುವ ವಿಷಂ ಪೀಯೂಷ ಸಮಾನ
ಪೊಡೆವ ಸಿಡಿಲ್ಮಂಜುಳ ವರಗಾನ
ಮೃಡಗುರು ಕರುಣ ಕಟಾಕ್ಷದ ಭಾನ ॥೪॥

ಕಚಟ ತಪೋಚ್ಚಾರಣೆಯನು ಮಾಡೆ
ವಿಚಲಿಸಲಹುದೆ ಸಮಗ್ರವ ಕೂಡೆ
ಉಚಿತ ರಹಸ್ಯವನಲ್ಲದನಾಡೆ
ಪ್ರಚುರವೆನಿಸಿ ಗಾದೆಗಳೊಳಗಾಡೆ ॥೫॥

ನೀ ಪರಮಾತ್ಮನಖಂಡಿತನಾಗಿ
ವ್ಯಾಪಿಸುತಿಹೆ ಮಿಥ್ಯಾಸುಖಕಾಗಿ
ಯ್ಯೆ ಪರಮ ಸುಧಾಂಬುಧಿ ತೃಷೆಗಾಗಿ
ಕೂಪೋದಕ ಪೀರ್ದುದು ಗಡ ಪೋಗಿ ||೬||

ಕರಣಾಲಯ ಸಜ್ಜನ ಗಡ ತನಗೆ
ಕಿರಣೋದಕ ಬಳಸಲು ಗಡ ಮನೆಗೆ
ಸ್ಮರಶಾಸ್ತ್ರಾನುಗ್ರಹ ಗಡ ಮುನಿಗೆ
ಸುರಧನುವಾಯುಧ ಗಡ ರಣವೊನೆಗೆ ||೭||

ನಿನ್ನಾಯತ ನಿನಗನುಗುಣವಾಗಿ
ದುರ್ನೀತಿಯ ಬಿಡದಿಹೆ ನುಗ್ಗಾಗಿ
ಬನ್ನ ಬಟ್ಟು ಜೀವಿಸುವಂತಾಗಿ
ಮನ್ನಿಸುವನೆ ಯಮರಾಟ್ ನಿನಗಾಗಿ ||೮||

ತಳುವದೆ ಸಲೆಸಂಸ್ಕೃತಿಯನು ಪಳಿಯೆ
ಹೊಳೆವುದು ತನುಸಂಸ್ಕೃತಿಯದನಳಿಯೆ
ಉಳಿದ ಮನಸಂಸ್ಕೃತಿಯದ ಕಳೆಯೆ
ಬೆಳಗುತಿಹನು ಪರಮನು ಸಂದಳಿಯೆ ||೯||

ಉಗ್ಗರಿಸುತಲಾಹುತಿಗೊಳುವಂತೆ
ನುಗ್ಗಾಗಿಯು ಬಿಡೆ ವಿಷಯವ ಮುಂತೆ
ಹಿಗ್ಗುವೆ ನೀ ತೋರಿಕೆಗೋರಂತೆ
ತಗ್ಗುವೆ ತತ್ಕ್ಷಣದೊಳಗಂತಂತೆ ||೧೦||

ನೀನೊರ್ವನು ಹಲಬರ ಹೋರಾಟ
ಜ್ಞಾನೋತ್ತರಮಾರ್ಗಕೆ ಜಂಜಾಟ
ವಾನರಕೊದಗಿದ ತೊನಚಿಯ ಕಾಟ
ತಾನದರಿಂ ದಿನದಿನ ಕುಚ್ಚಾಟ ||೧೧||

ಅದಕಿದು ನೀಚವಿದಕ್ಕದು ನೀಚ
ತುದಿಗೈದಿಸಲದಕದು ಸಂಕೋಚ
ಹದನಿದು ತಿಳಿ ಸಂಸ್ಕೃತಿನಾರಾಚ
ವಿಧಿ ಗಹಗಹಿಸಲು ಸುಖವೆ ವಿಮೋಚ ||೧೨||

ಆಯುವಿಹುದು ಕಾಲಾಖ್ಯವ ತಾಳಿ
ಹಾಯೆನುತಿಹೆ ತಿಥಿವಾರವ ಕೇಳಿ
ದಾಯಗೆಡಲು ತಿಳಿಯದೆ ಮತಿಹೂಳಿ
ಮಾಯಕೆ ಸುಖಸುತ್ತಿಹೆ ಕಾಕೋಳಿ ||೧೩||

ಶುನಿಮಸ್ತಕ ಮಕ್ಷುಕ ರತಿಯಾಗಿ
ವಿನಯದಿ ಪಿಡಿಯಲದುಂ ಕನಸಾಗಿ
ತನು ಸಂಸೃತಿಗುಪಮಾನಮದಾಗಿ
ಕನಲದಿರ್ದದಕೆ ಜಡಾತ್ಮಕನಾಗಿ ||೧೪||

ಕನಸಿನೊಳಗೆ ಸಂಸಾರದ ಸಂಗ
ಕನಸಿಂದೆಚ್ಚರೆ ಬಿಡುಗದರಂಗ
ನೆನೆದಡೆ ಭವಸಾಗರದುತ್ತುಂಗ
ತನುಪೂರ್ವಕಮಾದೊಡೆ ಸುಖಭಂಗ ||೧೫||

ತೋರಿಕೆ ಮಾತ್ರವೆನಿಪ ಸಂಸೃತಿಯು
ಮೀರದೆ ಬಹು ಕಂಟಕ ಸಂದಣಿಯು
ಹೆರುಹತನುಕರಣೇಂದ್ರಿಯುವಳಿಯು
ನೆರಿದವಂ ಸುಖದಿಂದಿರಲರಿಯ ||೧೬||

ಎಹಗಹುದೈ ವೈಭವ ಈಷಣದ
ಕುಹಕದನಾರ್ಜಲ್ಲರು ಸಿರಿಗರದ
ಅಹಹ ವೃಥಾ ಮೋಹಿಸಿ ಸಂಶಯದ
ಸಿಹಿಗೆಳತಟಗೊಳುವರೆ ಕೃತ್ರಿಮದ ||೧೭||

ಭವಣಿಯ ಮೇಲೆ ಬಳಾರಿಯ ತೂಳ
ಹವಣಿಸಿದಂತೆ ಶರೀರದ ಮೇಳ
ತವೆ ಸಂಸೃತಿ ಬಹು ಕರ್ಮದ ಕೋಳ
ಶಿವಶಿವ ತನುಮಾಯಿತಿಂತುರಿದೇಳ ||೧೮||

ಅನವರತಂ ಗುರುಚರಣವ ಕೂರ್ತು
ನೆನೆಯದಿರಲು ಕಾಲಂಗವ ತುತ್ತು
ತನುಕರ್ಮವ ತನುವಿಂಗುಣಲಿತ್ತು
ತನಗೆ ದಿನಂಗಳಿವುದು ತಾ ಹೊತ್ತು ೧೯

ತಟತಟ ತಾನೆನಿಸುವ ಸಂಸಾರ
ಘಟಿಸಿ ವಿಜೃಂಭಿಸುತಿಹ ಭವಭಾರ
ದಿಟವುಸಿಗಳ ಮಧ್ಯದ ಕುವಿಚಾರ
ನಟಿಸಿದನವಗೆ ತನು ನೆರೆ ನಿರ್ಧಾರ ॥೨೦॥

ಹಸುಗಳೆಯುದೆ ಸೊಣಗನು ಮತಿಗೆಟ್ಟು
ಮುಸುರೆಯ ಮಡಿಕೆಯೊಳಗೆ ಮೊಗವಿಟ್ಟು
ದೆಸೆಗಾಣದೆ ಬಾಧೆಗೆ ತನುಗೊಟ್ಟು
ಪೆಸಗೊಳಲಿದು ಸಂಸಾರದ ಗುಟ್ಟು ॥೨೧॥

ಎನಿತರುವಿರಲಹಮೆನುತಿಹ ಖಳನು
ಮನುಜನೆಯುವ ಸಾಕ್ಷಾನ್ನರಖರನು
ಜನರೊಳಗವನೊರ್ವನೆ ಪಾತಕನು
ತನುಭೇದದೊಲನ್ನವ ತಿನುತಿಹನು ॥೨೨॥

ತನು ಸವೆಸವೆದು ಮನಃಕವಲಿರಿದು
ದಿನಚರಿಯುದ ಕೋಟಲೆಯೊಳಗೊಡದು
ಜಿನುಗುತ್ತಿಹನಜ್ಞನು ಕುದಿಕುದಿದು
ಕನಸಿನ ತೋರಿಕೆಯಂ ನೆನೆನೆನೆದು ॥೨೩॥

ಮನುಜನ ಮತಿಯೊಳಗಿಲ್ಲ ವಿರಕ್ತಿ
ಇನಿತುಳ್ಳೊಡೆ ಹೊರಗಿಹುದದು ಹತ್ತಿ
ಜಿನುಗುತಿಹುದು ಮನದೊಳು ದುರ್ವರ್ತಿ
ಜನಿಸುತಿಹುದು ಪರದೊಳು ದುಃಕೀರ್ತಿ ॥೨೪॥

ಪರಿಮಳ ಕಾವ್ಯರಸಂ ರುಚಿಗಾನ
ಸುರುಚಿರಲಾಸ್ಯಸುಪುಷ್ಪವಿಧಾನ
ಪರಿಕಿಸಲಿವರನು ಸಂಗುದಿ ದಿನ
ಪರಿಹಕದಿನ ಭಕದಿಂದವನೂನ ॥೨೫॥

ಜಡ ಭೌತಿಕ ದೇಹೇಂದ್ರಿಯದಾಟ
ಬಿಡೆ ಸಂಸಾರವಿಷಯದೊಳಗೂಟ
ಷಡರಿವಿಕಾರ ಗುಣಂಗಳ ನೋಟ
ತಡೆಯುದೆ ನಿರಯಾವಧಿ ನಿಟ್ಟೋಟ ॥೨೬॥

ತಟತಟ ತನುತಾಪದಿನುದರಾರ್ಥಂ
ಕಟಪಟ ವಚನ ವೃಥಾ ವಾದಾರ್ಥಂ
ಚಿಟಪಿಟ ಮನಸಿನಿಸುಂ ಲೋಭಾರ್ಥಂ
ದಿಟದಿಟ ಮುಕ್ತಿಗೆಮೋಹಗದು ಸ್ವಾರ್ಥಂ ॥೨೭॥

ಅನೃತವಹ ಗೃಹದೊಳು ತಪದಾಟ
ಮನಕನುಗುಣವಾಗದು ಹಾರಾಟ
ತನಗಿನಿತರ ತಾತ್ಪರ್ಯದ ಮಾಟ
ಇನಿಸಾದೊಡೆ ನೆಲೆಯುಂ ಬಿಟ್ಟಾಟ ॥೨೮॥

ತಟತಟಿಯುಹ ಲಾಲಸೆಯನು ಸೂಡಿ
ಪಟಪಟನೈದಿ ಪರರ ತಾ ಬೇಡಿ
ದಿಟರುಸಿಗಳ ಮನದೊಳಗೆಡೆಮಾಡಿ
ಕಟ ಮನುಜರು ಬಳಲ್ವರು ಸುಖಕಾಡಿ ॥೨೯॥

ಸಿಡಿಲೆರಗಿದ ಪರಿಯುಂತಾರ್ಭಡಿಸಿ
ಕೊಡಹುತ ಗಾದೆಗಳಂ ಗಡಬಡಿಸಿ
ನುಡಿನಡೆಯೊಳು ಮದಮತ್ಸರ ಜನಿಸಿ
ಘುಡುಘುಡಿಸುವನಜ್ಞನು ಭವವೆರಸಿ ॥೩೦॥

ಮನವಿದು ತನುವಿನುಪಾಧಿಕವಾಗಿ
ತನುವಿಷಯೇಂದ್ರಿಯಗಳಿಗತಿ ಬೇಗಿ
ದಿನದಿನ ವಿಷಯೋಪಾಧಿಕವಾಗಿ
ತನಗೆ ಭವಂಗರವವು ತಾವು ಕೂಗಿ ॥೩೧॥

ಮನಕನುಗುಣವಾಗದು ನೆನೆದಂತೆ
ತನುವಿಷಯದ ಬಗೆಗಳು ತಾವು ಸಂತೆ
ತನಗಿದರಿಂ ಸುಖವಿರದೋರಂತೆ
ಜನನಲಯಸ್ಥಿತಿಗಳು ತಾವು ಮುಂತೆ ॥೩೨॥

ಅವತರಿಸಿಯೆ ಹಸುತೃಷೆ ಸಮವಾಗಿ
ತವೆ ಸತಿ ಸುತರನುರಾಗಕೆ ಬೇಗಿ
ಭವಣೆಬಡುವನಿಹಪರಗಳಿಗಾಗಿ
ಭವಬಡುವರು ಮನುಜರು ಸುಖಕಾಗಿ ॥೩೩॥

ಎಲೆಯುಲುಗಲು ತರತರಿಸುವ ನರನು
ಗೆಲುವನದೆಂತು ಮಹಾ ಸಮರವನು
ನಿಲಹಿಡಿಯದೆ ಮನಸಿಗೆ ಬೆದರಿಹನು
ಸುಲಭದಿತ ಪವನದೆಂತಾನುವನು ||೩೪||

ಎಲೆಲೆ ಮನಸ್ಥಿರಕರಪರವಾಗಿ
ಅಲುಗಲದೆಂಬಂಧನವಹುದಾಗಿ
ಹಲವೆಣಿಕೆಯ ಮಾಡುವೆ ಸುಖಕಾಗಿ
ಸಲೆ ಗುರುವಚನದ ಬಲುಹುಂಟಾಗಿ ||೩೫||

ಮನವಿದು ನೆನೆದಂತಾಚರಿಸುವನು
ತನು ತಾನೆಂದುಳುಮೆಯ ಮರೆದವನು
ತನಗಿತರವ ಕಲ್ಪಿಸಿ ಬರಿದಹನು
ಜನಿಮೃತಿಗಳಿಗಂಗವ ಕೊಟ್ಟವನು ||೩೬||

ಅದುಕಾರಣ ವಿಷಯೇಂದ್ರಿಯಗಳನು
ಬೆದರಿಸಿ ಗುರುಚರಣದ ಸಂಗವನು
ಮುದವದಿರದೆ ಮಾಡುತ ಭವಗಳನು
ಸದೆಬಡೆದಮಲಾತ್ಮನ ಕೂಡಿದನು ||೩೭||

ಮನವಿದು ಸಯ್ಯಮದಿಂ ಪೀಯೂಷ
ಬಿನಯವ ಮಾಡಲದೆಂ ಭವನಾಶ
ತನಗೊದವಿದ ಮನದಿಂದುದ್ದೇಶ
ಜನಿಸದಿರಲು ತನಗತಿ ಪರಿತೋಷ ||೩೮||

ಕ್ಷಿತಿಯೊಳಗತಿ ಮತದಿಂ ಮಿಗೆ ಕೂಡೆ
ಹಿತವಂತರನರಸುತ್ತಿಹ ಪೀಡೆ
ಮೃತಭಾವನೆ ಮನದಿಂದೆದ್ದೋಡೆ
ಹಿತವರಹಾ ಸರ್ವರುಮಂ ಕೂಡೆ ||೩೯||

ಬೇಸರದೆ ನುಡಿವಂವದಿಯೆಂದು
ಈಸಾಡುವೆ ಸಂಸಾರದೊಳೆಂದು

ಆಸುರದಿಂ ಭವಭವದೊಳು ಬಂದು
ಹೇಸಲು ಬೇಕದರಿಂ ನೀನೊಂದು ||೪೦||

ಸಾವಿರ ಶತದೋಷಂಗಳೊಳಿಡಿದು
ಭಾವಿಸಲೊಂದು ಮಹಾಗುಣವಿಹುದು
ಆವವನೇಹಗಾಚರಿಸುವನೊಲಿದು
ತಾ ವಿಹರಿಸುತಿಪ್ಪುದು ತನು ಮಣಿದು ||೪೧||

ಹಸು ತೃಷೆ ಸಂಸಾರಿಕ ವೇಷವನು
ಬಿಸುಡುತ ದಿಗ್ವಿಜಯವ ಮಾಡಿದನು
ವಿಷಮ ಭವಾಟವಿಯೊಳಗಾಗಿರನು
ವಸವಾಗಿರುತಿರುವಾತ್ಮನೊಳತನು ||೪೨||

ಪರಮಾಣುಕತನದಿಂ ತನು ಮುನ್ನ
ಬೆರಸಿಹ ಕಥದಿಂದಲು ಕೇಳಿನ್ನ
ಹೊರೆಯುದಿರಲು ವಿಷಯುಗಳಿಂತೆನ್ನ
ವರ ಮುಕುತಿಯನೀವುದು ದಿಟ ಚೆನ್ನ ||೪೩||

ಇದರಿಂದೀ ತನುವನು ಲಾಲಸದಿಂ
ಸದೆಬಡೆಯುದೆ ಗುರುಮತಸಯ್ಯಮದಿಂ ||
ಪದುಳದಿ ಸಲಹದಿರಲು ಸಂತಸದಿಂ ।
ತುದಿಗೀವುದು ನಿನಗಾತ್ಮನ ಭರದಿಂ ||೪೪||

ತನು ತಾನ ತನುವಹುದು ಗುರುವಿಂದ
ಜನಿಮೃತಿಗಳು ಕೇಳ್ಪೋಗುವವನಿಂದ
ತನಗೆ ಚಿದದ್ವಯ ಸುಖವದರಿಂದ
ನೆನೆ ಗುರುಬಸವೇಶನನೆಲೆ ಕಂದ ||೪೫||

ತಲೆಗರಸಿಕ್ಷಿತಬಲು ಹೊರೆ ಬಂದು
ಗೆಲವಾವುದು ತಾಂ ಚರಿಸಲಿಕಿಂದು
ಸಲೆ ಕೃತ ದುಃಕೃತಚಿಂತೆಗೆ ಸಂದು
ಫಲವಾವುದು ನಿರ್ಗುಣ ನಿನಗೊಂದು ||೪೬||

ತ್ಯಾಗಾಂಗದ ಫಲದಿಂ ನಿರಯುವನು
ನೀಗಿ ನಿಜಾನ್ವಯಸಹಗುರುಪರನು
ಯೋಗಸಹಸ್ರೋತ್ತರ ಪದವಿಯನು
ಭೋಗಿಸಿ ತಾಂ ನಿಜಸುಖಿಯಾಗಿಹನು ॥೪೭॥

ಅವರವರಿಗೆ ತನು ತಕ್ಕಂತಾಗಿ
ವಿವರಿಸಿ ಕರ್ಮವದಕೆ ಸಮವಾಗಿ
ತವೆ ಸುಖದುಃಖ ತನಗೆ ನೆಲೆಯಾಗಿ
ಭವಬಿಡದಾತ್ಮವಿವೇಕವ ನೀಗಿ ॥೪೮॥

ಸದುಗುರುಪದಚಿಂತನದೊಳು ನಿರುತ
ಬೆದರುವನೆ ಕರಣಾಖ್ಯಕೆ ನಿರತ
ಪದುಳದಿ ಮದವದಿರದ ನಿಶ್ಚಲಿತ
ಮದಗಜದಂತಿರಬೇಕವಧೂತ ।೪೯॥

ಇಹಪರದೊಳಗಿಹದಿಂ ಪರವಧಿಕ
ಇಹ ತಾಂ ಪರಕೋಸುಗ ಸಂಗ್ರಹಿಕ
ವಿಹಿತವಿದಿಹ ಪರಗಳ ಮಾಮಸಕ
ಗ್ರಹಿಸದಿರಲು ಭವಭಯಕವ ನಿಲುಕ ॥೫೦॥

ಕಳನೊಳು ಮನೆಗಟ್ಟಿಹ ಪಟುಭಟನು
ಹೊಳಹಿಲ್ಲದ ಚಿತ್ತವನುಳ್ಳವನು
ನೆಲನೆಲ್ಲವ ಸಂಚರಿಸಿದನವನು
ಸುಲಭದಿ ಶಿವನೊಲವಿಂಗೊಳಗಹನು ॥೫೧॥

ತವೆ ತನುಸಿದ್ಧಿ ತನಗೆ ಬೇಕೆಂದು
ಹವಣಿಸಲೇಕೌಷಧಿಗಳನಿಂದು
ಶಿವಶಿವಯೆಂದುಚ್ಚರಿಸಲಿಕೆಂದು
ಭವಭವದೊಳು ತನುವಿರುತಿಹುದೊಂದು ॥೫೨॥

ಷಡರಿ ವಿಕಾರ ಗುಣಭ್ರಮೆಗಳನು
ಕೆಡಹುತ ದಿಗ್ವಿಜಯವ ಮಾಡಿದನು
ಕಡೆಗೆ ಮುಮುಕ್ಷುವೆನಿಸಿ ಮುಕುತಿಯನು
ಪಡೆದು ಪರಮಾತ್ಮನೊಳಗೆ ಸುಖಿಯಹನು ॥೫೩॥

ಶರಿರವಿದುಂ ಭವರುಜೆ ನೀನರಿಯೆ
ವರ ವೈದ್ಯವ ಬಯಸುವೆ ನರಗುರಿಯೆ
ಪರಮೌಷಧಿ ಭಸಿತವ ನೀ ಮರೆಯೆ
ಹರನೊಲವಿಲ್ಲದರಿಂ ನೀನುರಿಯೆ ||೫೪||

ವಿಧಿಕೃತ ದುಃಕೃತವೆಂಬಿವ ಸುಟ್ಟು
ಸದಸದ್ವಸ್ತುವಿವೇಕವ ತೊಟ್ಟು
ಸದಮಲಗುರುವಚನವ ಬೈಚಿಟ್ಟು
ಬೆದರನು ತಾಂ ಮನಸಿಗೆ ಕಂಗೆಟ್ಟು ||೫೫|

ಪ್ರಕಟಿಸಿ ವಿಧಿಲಿಖಿತವನೊಡೆದುಳಿದು
ಸಕುಟಿಲ ಸಂಸಾರವ ಸದೆಬಡಿದು
ಪ್ರಕೃತಿವಿಕಾರಂಗಳ ಕೊಡಹಿದುದು
ಸ್ವಕಳಿತವೆನಿಪವಧೂತತ್ವವಿದು ||೫೬||

ನಾನಾ ವಿಧವವಧೂತನ ಚಿನ್ಹ
ಏನೆಂದರಿಯಲುಬಾರದು ತನ್ನ
ಜ್ಞಾನೋತ್ತರ ವಿವರಣೆಯೊಳಭಿನ್ನ
ಸಾನಂದವೆ ತಾನಾಗಿಹ ಚಿನ್ನ ||೫೭||

ಅಧಿಕರೊಳತ್ಯಧಿಕನು ಅವಧೂತ
ಸದಸಿಕೊಳನು ಯಃಮಗಿಮ ನಿಂದಾತ
ಬೆದರನು ಹಸುತೃಷೆಗಳಿಗತಿನೀತಾ
ಮದಲಃಲಸಗತ ಶಿವಕರಜಾತ ||೫೮||

ಕಟಿಪಟಮಕ್ಷಕ ಟಂಕಟಿದೇಹ
ದಿಟಪುಟವಿಹಪರಸುಖ ನಿರ್ಮೋಹ
ಪಟುತರ ಗುರುಸಂಯಮಸಂದೋಹ
ಮಟಮಟಿಸದೆ ಮಾಸದ ಸನ್ನಾಹ ||೫೯||

ಜಡೆಮುಡಿಮುಂಡನಚಿನ್ಹಗಳಿಂದ
ಮೃಡ ತಾಂ ಗುರುರೂಪಾದುದರಿಂದ

ಒಡಲೂಟವನಳಿದಿಹನನುವಿಂದ
ಒಡವೆರದಿಹ ಪರಮನೊಳೊಲವಿಂದ ॥೬೦॥

ನಸುಭಸಿತೋಧ್ಧೂಳನವನು ಮಾಡಿ
ಕೃಸ ಗಾತ್ರವ ಸಂಯಮದೊಳು ಕೂಡಿ
ಶ್ವಸನನನಂಬರದೊಳಗಡೆಮಾಡಿ
ಹಸನಾಗಿಹನಮಲಾತ್ಮನ ಕೂಡಿ ॥೬೧॥

ಸ್ಥಾವರಜಂಗಮದೊಳಗೇನೊಂದ
ಜಿವಸಗೊಳಿಸನಲಾತಂ ನಿಂದ
ಜೀವೇಶ್ವರ ಸಂದಳಿದುದರಿಂದ
ಭಾವಾತೀತನೆನಿಪನದರಿಂದ ॥೬೨॥

ಅರುನೆಲೆ ಕರುವಾಡದೊಳಿಹನೊಲಿದು
ಗಿರಿಗುಹೆವನದೊಳಿಹ ಸುಖದಳಿದು
ಹರುಷವಿಷಾದಂಗಳನತಿಗಳೆದು
ಚರಿಸುವನಭವಂಘ್ರಿಯ ದೃಢವಿಡಿದು ॥೬೩॥

ಉರು ಬಿಮರುನ್ಮುಖದಿಂ ದಂಡವನು
ಕೊರೆದು ಪಿಳೀಮುಖದಿಂತಗ್ನಿಯನು
ತರುಬುತಲಾಕಾಶಕೆ ಪಾಯಿಸಿದನು
ತೆರಹುಗುಡುತ ಗುರುಶರಣೆನುತಿಹನು ॥೬೪॥

ಉಚ್ಚಳಿಸಿಯೆ ಮರುತನನಂಬರದ
ಮುಚ್ಚುಳವಂ ಸಡಿಲಿಸಿ ಮಣಿಸರದ
ನಿಚ್ಚಣಿಗೆಯನಡರಿಯೆ ಕಂಧರದ
ಚೆಚ್ಚರದಿಂ ಗುರುವಿಹ ವರಕರದ ॥೬೫॥

ಚತುರ್ದಳಕಾಂಚನಮಂ ನೆರೆ ಬಿಡದೆ
ಪಿತೃಪತಿಗೆ ನಿಜದೇಹವ ಕುಡದೆ
ಪ್ರತಿಬಿಂಬದ ಪರಿಯಂತುಸುರಿಡದೆ
ಕ್ಷಿತಿಯೊಳು ಚರಿಸುತ್ತಿಹನನುಗೆಡದೆ ॥೬೬॥

ಫಾಳದೊಳಮಳವಿಭೂತಿಯು ಭಾನ
ನಾಲಗೆಯೊಳು ನಾಮಾಮೃತಪಾನ
ಮೇಲುಶಿಖರದೊಳಗಭವನ ಧ್ಯಾನ
ಮೂಲಾಧಾರಚಲಾದ್ಭವಹೀನ ॥೬೭॥

ಅವರವರೊಳಗಿಹನವರವರಂತೆ
ವಿವರಿಸಿ ನೋಡಲು ತಾಂ ತನ್ನಂತೆ
ರವಿಗಗಣಾಂಗಣದೊಳು ನಡೆವಂತೆ
ಭವವಿರಹಿತನಾದನು ಓರಂತೆ ॥೬೮॥

ಭಸಿತಕರಂಡಕಮಂಡಲುದಂಡ
ಪಸರಿಸದಜಿನಹರಾಕ್ಷರತಂಡ
ಸ್ವಸನಮನೋಜಯನಾಗಿಹ ಕಂಡ
ಮುಸುಳಿಸದಿಹ ಸದ್ಗುರುಪಿಂಡ ॥೬೯॥

ಅತಿ ಪಟುಮತಿ ಹಟಮತಿ ದಿಟಮುದಿತ
ಕೃತಿಹಿತಮತಿಸಾತ್ವಿಕ ಗುಣನಿರುತ
ಮತಿಮಥನಾಗ್ನಿಕಳಾಪ್ರಭೆಭರಿತ
ಶೃತಿವಿಘಟನತಾಂತ್ರಿ ಜಗದ್ವಿನುತ ॥೭೦॥

ಅಕಪಟದಿಂದವಧೂತನೆ ಮುಖ್ಯ
ಅಕಪಟವೆನೆ ಸಾಕ್ಷಾನ್ನಿಜದಾಖ್ಯ
ಸಕಳತ ನಿಜವೆಂದೆನೆ ಪರಪೈಕ್ಯ
ವಿಕಸಿತದೈಕ್ಯಮೆನಲು ತತ್ಸೌಖ್ಯ ॥೭೧॥

ನಟಭಟರಂತೆ ವಿನೋದವ ಮಾಡಿ
ನಟಿಸುವ ತಾಂ ಲೌಕಿಕರೊಡಗೂಡಿ
ಪಟಿ ಜನವನು ಸೋಂಕಲು ನಡುವಾಡಿ
ಮಠದೊಳಗಿಹನಭವಾತ್ಮನ ಕೂಡಿ ॥೭೨॥

ಶಿರದೊಳಗಿರದಡಸಿದ ಶಿವಲಿಂಗ
ಉರದೊಳು ಬೆಳಗುವ ಮಂತ್ರದ ಸಂಗ

ಶರೀರದೊಳವಭಾಸಿತ ಭಸಿತಾಂಗ
ಗುರುಮತವಿದರಿಂದವೆ ಶುಭದಂಗ ॥೨೩॥

ಪ್ರಭೆ ಮುಸುಕಿದ ಮಸ್ತಕದಿಂ ಮೇಲೆ
ನಭಸಿ ವಿಯದ್ಗಂಗಾಜಲತಲೆ
ವಿಬುಧವಿಶಿಷ್ಟಕದಂಬಕಸೋಲೆ
ವಿಭವವದಂ ಶರಣಂಗದು ಲೀಲೆ ॥೨೪॥

ಹರನೊಲವಿನ ಕರುಣಾಮೃತಸಿಂಧು
ತೆರೆ ಮಸಗುತ ತನ್ನೊಳಗಿರಲಂದು
ಹೊರೆಯಿಲ್ಲದೆ ಸರ್ವರು ಜಯಯೆಂದು
ಭರವಸದಿಂ ಭಜಿಸುವರಿದಿರ್ವಂದು ॥೨೫॥

ಜಗಜಗಿಸುವ ತೇಜಸ್ತಂಭವನು
ಬಗೆಮಾಡುತ ನೆರೆ ಕಂಡ ವನಜನು
ಹಗಲಿರುಳಿನ ಹಂಗಳಿದುಳಿದಿಹನು
ಗಗನಾಂತರನಾಗಿಹ ಸುಖಕರನು ॥೨೬॥

ಶಿವಪೂಜೆಯನಾಗಳು ಮುದದಿಂದ
ಹವಣಿಸುತಿಹುದನುಭವದೊಲವಿಂದ
ನೆವವಿಲ್ಲದೆ ಪೇಳಿದೆನೆಲೆ ಕಂದ
ತವೆ ಸುಖಿಗಳು ಕೇಳ್ನಿವದರಿಂದ ॥೨೭॥

ಮಿಗೆ ಮಾನಸಪೂಜನದಿಂ ಮಗನೆ
ಜಗದೊಳಗಾವು ಬಾಳ್ವೆವು ಭಲಭಲನೆ
ಬೆಗಲಡದೆಂ ಶಿವಪೂಜೆಯ ಸಸಿನೆ
ಸೊಗಸಳಿಯದೆ ಮಾಡುವುದೊಡನೊಡನೆ ॥೨೮॥

ಮನದೊಳು ಶಿವಪೂಜನಮಂ ಬಿಟ್ಟು
ಮನುಜನ ಹೋ ತನ್ನಿಂ ತಾಂ ಕೆಟ್ಟು
ತನುಭವಿಯುವ ಜಗದೊಳು ಕರಕಟ್ಟು
ಜನಿಮೃತಿಗಳಿಗಂಗವಮುಂ ಕೊಟ್ಟು ॥೨೯॥

ಹರಿದುದ ಗಂಟಿಕ್ಕಿದಡದು ತಿರುಗಿ
ಕಿರಿದಲ್ಲದೆ ಹಿರಿದಾಗದು ನಲುಗಿ
ಮರಮರದರಿಯಲು ಬುದ್ಧತೆಯೊದಗಿ
ನೆರೆ ಸುಖವಿಲ್ಲ ವಿಮುರುಶನಕೊದಗಿ ||೮೦||

ಮಣಿಮಂತ್ರೌಷಧಿಗಳ ಬಲವಲ್ಲ
ವಣಿಜಕೆ ಕೃಷಿಯಾಚಕ ತನಗಿಲ್ಲ
ತೃಣಕೆಣೆಯುವಗೆ ವಿಭೂತಿಗಳಿಲ್ಲ
ತ್ರಿಣಯಘಖಂಡಿತನೆಂಬುದ ಬಲ್ಲ ||೮೧||

ಇವನವನೆಂದೆನ್ನದ ನಿಲುಕಡೆಯು
ಹವಣಿಸಿ ಸಮ್ಯಕ್ಖಂಡಿತ ಸಿರಿಯು
ಶಿವನೊಲವಿಂದನುಭವಿಸುವ ಶಶಿಯು
ಭವನದೊಳಹನಮೃತದ ಹರವರಿಯು ||೮೨||

ಭವಹರ ನಿನ್ನ ಸಮಾರಾಧಿಸುತ
ಭವಿಯಹನೆಂತದು ಹೋಗಲಿ ಪುರತ
ಶಿವಶಿವ ತಚ್ಚರಣದೊಳನವರತ
ವಿವಸನದಿಂ ಧನ್ಯನೊ ಗತದುರಿತ ||೮೩||

ಎನಿತೆಸೆಯಲು ಸರವದುಗುರಿ ನಡೆದು
ಜನಿಸುಗುದೆಂತು ಸುಖಂ ಕರ ಜಡಿದು
ನೆನಹಭವನ ಮುಟ್ಟದು ಹರಿಹರಿದು
ತನಗಮೃತಂ ಭವಿಸುವುದೆಂತೊಸೆದು ||೮೪||

ಗುರಿಗೈದದ ಸರವುಂ ಪಶುಪತಿಯು
ತರುಬದ ಮಾನಸವಂ ಭವವಿಧಿಯು
ಹರಿಯದ ಸಂಗತಿಯುಂ ನಿಜ ಸುಧೆಯು
ಸುರಿಯದ ನಾಲಗೆಯುಂ ಸುಡು ನಿಡಿಯು ||೮೫||

ಅರಿವೆನಲುಳುಮೆಯುದೆಂ ನಿರ್ಗುಣದ
ಕುರುಹೆನಿಸಿಹ ಕಥದಿಂ ಕೇಳ್ನಿಜದ

ಅರಿವುಳ್ಳವನನುಗೆಡಿಸಿಹ ಪರದ
ಸೆರೆಯಾಗಲು ಬಲುಹಿಂ ಗುರುಪದದ ||೮೬|

ಕಡನರಿವಿಂ ಕಲ್ಮಶದಿಭದೊಡಲು
ಸಿಡಿಯದೆ ಬಹು ವ್ಯಸನಕೆ ತನುಗೊಡಲು
ಒಡೆವುದೆ ಭವಲಿಖಿತಂ ರುಜೆ ಬರಲು
ತಡೆಯದೆ ಸುಖ ಬಹುದೇ ನಿಜಗೊಳಲು ||೮೭||

ಇತರೇತರ ಕುಳಕದಿ ಭವ ಸೃಷ್ಟಿ
ಸ್ಥಿತಿಲಯಗಳ ತೋರುವುದದು ಪುಷ್ಟಿ
ಮತಿಗೆಡದಭವನೊಳಗೆ ಮನವಟ್ಟಿ
ಪ್ರತಿ ವಿರಹಿತನಹನೇ ಜಗಜಟ್ಟಿ ||೮೮||

ನಿರುಪಾಧಿಕ ಸೇವಕರುಗಳಾಗಿ
ಕರಪದಗಾವಾಕ್ಯಗಳಿರಲಾಗಿ
ತರಹರ ವಿಮಳಕ್ಷಮರುಗಳಾಗಿ
ಶರಿರದೊಳಿರಬಹುದೇ ತನು ಬೀಗಿ ||೮೯||

ಹಲವಂಗದ ಕೋಟಲೆಯನು ಮಾಡಿ
ತೊಲಗದೆ ವಾಗಾದಿಗಳಿವೆ ನೋಡಿ
ಗೆಲಬಹುದಲ್ಲದಿವಂ ಹೋಗಾಡಿ
ನಿಲಬಹುದೇ ತನುವಂ ತಾ ಕೂಡಿ ||೯೦||

ಶಿವನೊಲವ ಹಂವಿಭೇದವನಿಗು
ನೆವವಂ ಬಿಡು ಚಿಂತೆಗೆ ಹೊರಗಾಗು
ತವಕಿಸದಿರು ಗುರುಮತದೊಳು ಬೀಗು
ಭವಹರಿದಿದರಿಂದವೆ ಸುಖಿಯಾಗು ||೯೧||

ತನಗಿಹದೊಳು ಫಲಪದವಿಯು ಕರ್ಮ
ತನುಗತವಹುದೀ ತೆರದೊಳದು ಗುಮ್ಮ
ವಿನಯವಿಮುಖಪರಿಚಾರಕ ಧರ್ಮ
ನಿನಗೊಲವಿಂ ಪೇಳಿದೆನಿದು ಮರ್ಮ ||೯೨||

ರೂಪದುಪೇಕ್ಷಿಸಿ ಮನದೊಳು ಸಲುವ
ಗೋಪಾಳಿಕೆಯಿಂ ನೋಡಲು ಜಗವ
ವ್ಯಾಪಕ ಶಿವನೊರ್ವನೆ ದಿಟ ಮಿಗುವ
ಸೋಪಾಯದಿ ತಿಳಿಯಲು ತಾನುಳಿವ ||೯೩||

ಶಮದಮಶಾಂತಿತಿತಿಕ್ಷೆಗಳಿಂದ
ಕ್ರಮವಿದು ನಾಂ ಚರಿಸುವ ನಲವಿಂದ
ವಿಮಳಾತ್ಮನ ಕೂಡಿಹನನುವಿಂದ
ಸಮವಿರಹಿತನಾಗಿಹುದದರಿಂದ ||೯೪||

ತಥತಿಥಿಸರವಾತಾಯುಸಮೇತ
ಪ್ರತಿಯುಹ ಚತುರ್ವಿಂಶಕ ಸಂಗಾತ
ಸ್ಥಿತಿಯದರಿಂ ತಾನಾತ್ಮನತೀತ
ಶೃತಿಸಾಕ್ಷಿಕನಾಗಿಹ ಶಿವಜಾತ ||೯೫||

ನರ್ತಿಸುತಿಹ ಮಣಿಮಯದೀಪಕದ
ಪುಥ್ಥಳಿಯನು ಕಂಡವನೊಳು ನುಡಿದ
ಮರ್ತ್ಯನಮರ್ತ್ಯನೆನಿಸಿ ನಿಜಸುಖದ
ತಥ್ಯವೆ ತಾನಾಗಿಹನನುಭವದ ||೯೬||

ನೀನಭವನ ಬಿಡದಿರು ಪರಿ ನಿನ್ನ
ತಾನಭವಂ ಬೆಂಬಿಡ ಕೇಳ್ಮನ್ನ
ಹಾನಿ ಹೊಗದು ತನಗಖಿಳವಭಿನ್ನ
ಜ್ಞಾನದ್ವಯವಾಗಿಹುದದು ಚಿನ್ನ ||೯೭||

ಜಗವಿದು ಶಿವನಾಜ್ಞಾಗುಣದಿಂದ
ಬಿಗಿದನು ವಶವಾಗಿಹುದದರಿಂದ
ಮಿಗೆ ಶಿವ ತನ್ನೊಳಗಿರೆ ನಲವಿಂದ
ಬೆಗಡದೆ ಜಗವರ್ತಿಪುದದರಿಂದ ||೯೮||

ಕರಣೇಂದ್ರಿಯ ಪದದಿಂದುಚ್ಚಳಿಸಿ
ತರಣಿಯ ಕಿರಣಂಗಳ ಗವಸಣಿಸಿ

ಪರಿಪೂರ್ಣಪ್ರಭೆಗಾಶ್ರಯವೆನಿಸಿ
ಸ್ಥಿರವಾಗಿಹುದನುಭವಸುಖವೆನಿಸಿ ||೯೯||

ಪ್ರೀತಿಯೊಳನುಕಂಪದಿನವಧೂತ
ಗೀತಿಯನನುನಯದಿಂ ಕೇಳ್ದಾತ
ರೀತದೊಳವತರಿಸದ ನಿಜಾರ್ತ
ಜ್ಯೋತಿಯೊಳವತರಿಸಿದ ಗತಭೀತ ||೧೦೦||

ಸ್ವಾನುಭವದ್ವಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹುವಿಧವ
ಸಾನಂದದಿ ಪೇಳ್ದನು ನಿಜಮತವ ||೧೦೧||